ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ ನಿದ್ರಾಹೀನತೆಗೆ ಕಾರಣವನ್ನು ಕಂಡುಹಿಡಿಯಬಲ್ಲ ಪೈಜಾಮವೊಂದು ಸಿದ್ಧವಾಗಿದೆ



ಆಳ-ಅಗಲ: ಚಿನ್ನ ಕಳ್ಳಸಾಗಣೆ: ಅನಿಯಂತ್ರಿತ ದಂಧೆ
ಮಹಾರಾಷ್ಟ್ರದಲ್ಲಿ ಈಗ ಮಾಂಸದ ರಾಜಕಾರಣ 9
ಸಮೀರ್ ವಿರುದ್ಧದ ಎಫ್‌ಐಆರ್‌ಗೆ ತಡೆ 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
74,102	22,497	₹90,270 (ಬೆಂಗಳೂರು)	₹1.01 ಲಕ್ಷ (ಬೆಂಗಳೂರು)	87.21

ಚಿನ್ನ: ಡಿಜಿಪಿಗೆ ತನಿಖೆಯ ಬಿಸಿ

ನಟಿ ರನ್ಯಾ ರಾವ್ ಪ್ರಕರಣ • ಪೊಲೀಸ್ ಸಿಬ್ಬಂದಿ ಲೋಪ: ಸಿಐಡಿ ತನಿಖೆ • ವಾರದಲ್ಲಿ ವರದಿಗೆ ಆದೇಶ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಚಿನ್ನ ಕಳ್ಳ ಸಾಗಣೆ: ನಾಲ್ಕು ಆಯಾಮದಲ್ಲಿ ತನಿಖೆ
- ಕಾನ್‌ಸ್ಟೆಬಲ್ ಸೇರಿದಂತೆ ಹಲವರ ವಿಚಾರಣೆಗೆ ಸಿದ್ಧತೆ
- ಪೊಲೀಸ್ ಕಮಿಷನರ್‌ಗೆ ವರದಿ ಸಲ್ಲಿಸಿದ ಡಿಸಿಪಿ

ಬೆಂಗಳೂರು: ಚಿತ್ರ ನಟಿ ರನ್ಯಾ ರಾವ್ ಭಾಗಿಯಾಗಿರುವ ಚಿನ್ನ ಕಳ್ಳಸಾಗಣೆ ಪ್ರಕರಣದ ತನಿಖೆಯನ್ನು ಡಿಆರ್‌ಐ ಮತ್ತು ಸಿಬಿಐ ಚುರುಕುಗೊಳಿಸಿ-ರುವ ಬೆನ್ನಲ್ಲೇ, ಈ ಪ್ರಕರಣದಲ್ಲಿ ಡಿಜಿಪಿ ಕೆ. ರಾಮಚಂದ್ರ ರಾವ್ ಮತ್ತು ಪೊಲೀಸ್ ಸಿಬ್ಬಂದಿಯ ಪಾತ್ರದ ಕುರಿತು ಎರಡು ಪ್ರತ್ಯೇಕ ತನಿಖೆಗಳಿಗೆ ರಾಜ್ಯ ಸರ್ಕಾರ ಮಂಗಳವಾರ ಆದೇಶ ಹೊರಡಿಸಿದೆ.



ದುಬೈನಿಂದ ಚಿನ್ನವನ್ನು ಕಳ್ಳ ಸಾಗಣೆ ಮಾಡಿದ್ದ ಪ್ರಕರಣದಲ್ಲಿ ರಾಜ್ಯ ಪೊಲೀಸ್ ಗೃಹ ನಿರ್ಮಾಣ ಮತ್ತು ಮೂಲಸೌಕರ್ಯ ನಿಗಮದ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರ ರಾವ್ ಪಾತ್ರದ ಕುರಿತು ತನಿಖೆ ನಡೆಸಿ, ವರದಿ ಸಲ್ಲಿಸಲು ಕೈಗಾರಿಕೆ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಅವರಿಗೆ ಜವಾಬ್ದಾರಿ ವಹಿಸಿದೆ.


ದುಬೈನಿಂದ ಚಿನ್ನವನ್ನು ಕಳ್ಳ ಸಾಗಣೆ ಮೂಲಕ ತರುತ್ತಿದ್ದ ರನ್ಯಾ ರಾವ್ ಅವರು ಮಲತಂದೆ ರಾಮಚಂದ್ರ ರಾವ್ ಅವರ ಹೆಸರು ಬಳಸಿಕೊಂಡು ವಿಮಾನ ನಿಲ್ದಾಣದಿಂದ ಹೊರಕ್ಕೆ ಬರುತ್ತಿದ್ದರು ಎಂಬ ಆರೋಪವಿದೆ.

‘ಶಿಷ್ಟಾಚಾರ ನಿಯಮಗಳಡಿ ಅಧಿಕಾರಿಗಳಿಗೆ ಸಿಗುವ ಸೌಲಭ್ಯ ಹಾಗೂ ವಿನಾಯಿತಿಗಳನ್ನು ರನ್ಯಾ ರಾವ್ ಪಡೆಯಲು ಕಾರಣವಾದ ಸಂಗತಿಗಳು, ಸಂದರ್ಭಗಳು ಹಾಗೂ ರಾಮಚಂದ್ರ ರಾವ್ ಅವರ ಪಾತ್ರದ ಬಗ್ಗೆ ತನಿಖೆ ನಡೆಸಿ ಒಂದು ವಾರದ ಒಳಗೆ ವರದಿ ಸಲ್ಲಿಸಬೇಕು’ ಎಂದು ಗೃಹ ಇಲಾಖೆ ಆದೇಶದಲ್ಲಿ ಸೂಚಿಸಿದೆ.

ತಮ್ಮ ಪುತ್ರಿಗೆ ರಾಮಚಂದ್ರರಾವ್ ಅವರು ಯಾವ ರೀತಿ ಸಹಾಯ ಮಾಡಿದ್ದರು? ಪ್ರಕರಣದಲ್ಲಿ ಅವರ ಪಾತ್ರ ಏನಾದರೂ ಇದೆಯೇ ಎಂಬುದರ ಕುರಿತು ತನಿಖೆ ನಡೆಸಲಾಗುವುದು ಎಂದು ತನಿಖಾ ತಂಡದ ಮೂಲಗಳು ತಿಳಿಸಿವೆ.

13ನೇ ಪುಟ ನೋಡಿ

ದುಬಾರಿ ನೆಕ್ಲೇಸ್ ಕೊಟ್ಟಿದ್ದ ಪ್ರಭಾವಿ?



ರನ್ಯಾ ರಾವ್ ಅವರಿಗೆ ‘ಪ್ರಭಾವಿ’ಯೊಬ್ಬರು ದುಬಾರಿ ಮೊತ್ತದ ವಜ್ರದ ನೆಕ್ಲೇಸ್ ಅನ್ನು ಕೊಡುಗೆಯಾಗಿ ಕೊಟ್ಟಿರುವುದನ್ನು ರೆವೆನ್ಯೂ ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ಅಧಿಕಾರಿಗಳು ಪತ್ತೆ ಹಚ್ಚಿದ್ದಾರೆ.

ನಟಿ ಮನೆಯಲ್ಲಿ ತನಿಖಾ ತಂಡ ಶೋಧ ನಡೆಸಿದಾಗ ಬೆಲೆ ಬಾಳುವ ವಿದೇಶಿ ವಾಚ್‌ಗಳು, ಆಭರಣಗಳು ಪತ್ತೆಯಾಗಿದ್ದವು. ಇದರಲ್ಲಿ ವಜ್ರದ ನೆಕ್ಲೇಸ್ ಸಹ ಒಂದು. ನೆಕ್ಲೇಸ್ ನೀಡಿರುವುದು ಪ್ರಭಾವಿ ರಾಜಕಾರಣಿ ಎಂಬುದನ್ನು ರನ್ಯಾ ವಿಚಾರಣೆ ವೇಳೆ ತಿಳಿಸಿದ್ದು, ಅಧಿಕಾರಿಗಳು ಅವರ ಹೇಳಿಕೆ ಪಡೆಯಲು ಸಿದ್ಧತೆ ನಡೆಸಿದ್ದಾರೆ. ಮೊಬೈಲ್ ಪರಿಶೀಲನೆ ನಡೆಸಲಾಗಿದ್ದು ಅದರಲ್ಲಿ ಕೆಲವು ಫೋಟೊಗಳು ಹಾಗೂ ವಿಡಿಯೊಗಳು ಸಿಕ್ಕಿವೆ ಎಂದು ಡಿಆರ್‌ಐ ಮೂಲಗಳು ತಿಳಿಸಿವೆ.

ರನ್ಯಾ ರಾವ್ ಚಿನ್ನ ಖರೀದಿಸಲು ಹಣ ನೀಡಿರುವುದು ಉದ್ಯಮಿ ಪುತ್ರ ತರುಣ್ ರಾಜು. ಇವರು ದುಬೈನಲ್ಲಿ ರಿಯಲ್ ಎಸ್ಟೇಟ್ ಮತ್ತು ಚಿನ್ನ ಖರೀದಿ- ಮಾರಾಟದ ವ್ಯವಹಾರ ನಡೆಸುತ್ತಿದ್ದು, ಹವಾಲಾ ಮೂಲಕ ಹಣ ತಲುಪಿಸುತ್ತಿದ್ದರು. ಚಿನ್ನ ಕಳ್ಳ ಸಾಗಣೆಯ ಜಾಲದ ಪ್ರಮುಖರಿಗೆ ನಟಿಯನ್ನು ಪರಿಚಯಿಸಿದ್ದೇ ತರುಣ್ ಎಂಬುದು ಡಿಆರ್‌ಐ ವಿಚಾರಣೆ ವೇಳೆ ಗೊತ್ತಾಗಿದೆ.

13ನೇ ಪುಟ ನೋಡಿ

ಡಿಕೆಶಿ, ಪರಮೇಶ್ವರ ಜತೆ ಸಿ.ಎಂ ಚರ್ಚೆ

ಚಿನ್ನ ಕಳ್ಳಸಾಗಣೆಯ ಪ್ರಕರಣ ಭಾರಿ ಸದ್ದು ಮಾಡುತ್ತಿರುವ ಬೆನ್ನಲ್ಲೇ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಗೃಹ ಸಚಿವ ಜಿ. ಪರಮೇಶ್ವರ ಅವರ ಜತೆ ಪ್ರತ್ಯೇಕವಾಗಿ ಸಮಾಲೋಚನೆ ನಡೆಸಿ, ಮಾಹಿತಿ ಪಡೆದುಕೊಂಡರು.

13ನೇ ಪುಟ ನೋಡಿ

ಶಿಷ್ಟಾಚಾರ ಸೌಲಭ್ಯ ದುರ್ಬಳಕೆ ಹೇಗೆ?

ರನ್ಯಾ ರಾವ್ ಅವರು ಐಪಿಎಸ್ ಅಧಿಕಾರಿಯೂ ಆಗಿರುವ ಮಲತಂದೆ ರಾಮಚಂದ್ರ ರಾವ್ ಅವರಿಗೆ ಶಿಷ್ಟಾಚಾರ ನಿಯಮಗಳಡಿ ಒದಗಿಸುತ್ತಿದ್ದ ಸೌಲಭ್ಯವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದರು ಎಂಬುದನ್ನು ಡಿಆರ್‌ಐ ಅಧಿಕಾರಿಗಳು ಪತ್ತೆ ಹಚ್ಚಿದ್ದಾರೆ. ‘ವಿಮಾನ ನಿಲ್ದಾಣದಲ್ಲಿ ಇತರೆ ಪ್ರಯಾಣಿಕರಿಗೆ ಇರುವಷ್ಟು ಬಿಗಿಯಾದ ನಿರ್ಬಂಧಗಳು, ರಾಜಕಾರಣಿಗಳು, ಐಎಎಸ್/ಐಪಿಎಸ್ ಅಧಿಕಾರಿಗಳಿಗೆ ಇರುವುದಿಲ್ಲ. ವಿಮಾನ ನಿಲ್ದಾಣದಿಂದ ಹೊರಗೆ ಬರುವಾಗಲೂ ಪ್ರತ್ಯೇಕ ದ್ವಾರ ಇರಲಿದೆ. ಇದನ್ನೇ ಬಂಡವಾಳ ಮಾಡಿಕೊಂಡಿದ್ದ ರನ್ಯಾ, ತಂದೆ ಹೆಸರು ಬಳಸಿಕೊಂಡು ಹೊರಕ್ಕೆ ಬರುತ್ತಿದ್ದರು. ಹೊರಕ್ಕೆ ಬಂದ ಕೂಡಲೇ ಪೊಲೀಸ್ ಇಲಾಖೆಯ ವಾಹನವೇ ಆಕೆಯನ್ನು ನಗರಕ್ಕೆ ಕರೆತರುತ್ತಿತ್ತು’ ಎಂದು ಮೂಲಗಳು ಹೇಳಿವೆ.

ಮುಂದಿನ ಹೊಸ ಸರ್ಕಾರಕ್ಕೆ ₹10 ಲಕ್ಷ ಕೋಟಿ ಹೊರೆ


2028ಕ್ಕೆ ₹9.2ಲಕ್ಷ ಕೋಟಿ ಸಾಲ


• ಜಯಸಿಂಹ ಆರ್.

ಬೆಂಗಳೂರು: ಹದಿನಾರನೇ ವಿಧಾನಸಭೆ ಅಂತ್ಯವಾಗುವ 2028ರ ವೇಳೆಗೆ ರಾಜ್ಯ ಸರ್ಕಾರದ ಒಟ್ಟು ಸಾಲ ₹9.25 ಲಕ್ಷ ಕೋಟಿಗೆ ಏರಿಕೆಯಾಗಲಿದೆ ಎಂದು ಆರ್ಥಿಕ ಇಲಾಖೆ ಮುನ್ನಂದಾಜು ಮಾಡಿದೆ. ಆ ಹೊತ್ತಿಗೆ ವಾರ್ಷಿಕ ಬಡ್ಡಿ ಪಾವತಿಯ ಮೊತ್ತ ₹60,306 ಕೋಟಿ ದಾಟಲಿದೆ ಎಂದೂ ಅಂದಾಜಿಸಲಾಗಿದೆ.

2025-26ನೇ ಸಾಲಿನ ಆರ್ಥಿಕ ವರ್ಷದ ಅಂತ್ಯದ ವೇಳೆಗೆ ವಿತ್ತೀಯ ಕೊರತೆಯು ₹90,428 ಕೋಟಿಗಳಷ್ಟಾಗಲಿದೆ ಎಂದು ಸಿದ್ದರಾಮಯ್ಯ ಅವರು ಬಜೆಟ್‌ನಲ್ಲಿ ಹೇಳಿದ್ದು, ಈ ಆರ್ಥಿಕ ವರ್ಷದಲ್ಲಿ ಗರಿಷ್ಠ ₹1.16 ಲಕ್ಷ ಕೋಟಿ ಸಾಲ ಎತ್ತಲು ಅವಕಾಶ ಮಾಡಿಕೊಳ್ಳಲಾಗಿದೆ.

7ನೇ ಪುಟ ನೋಡಿ





- ಈ ಬಜೆಟ್‌ನಲ್ಲಿ ಸರ್ಕಾರದ ಬದ್ಧ ವೆಚ್ಚ ಮತ್ತು ಗ್ಯಾರಂಟಿ ಯೋಜನೆಗಳ ಮೊತ್ತವು ಬಜೆಟ್‌ನ ಶೇ 80ರಷ್ಟಾಗುತ್ತದೆ. ಹೀಗಾಗಿ ಬಂಡವಾಳ ವೆಚ್ಚಕ್ಕೆ ದೊರೆಯಲಿರುವ ಅನುದಾನದ ಪ್ರಮಾಣ ಕಡಿಮೆ.
- ಸಾಲದ ಪ್ರಮಾಣ ಏರುವ ಕಾರಣಕ್ಕೆ ವಾರ್ಷಿಕ ಬಡ್ಡಿಯ ಮೊತ್ತವೂ ಹೆಚ್ಚುತ್ತದೆ. 2025-26ನೇ ಸಾಲಿನ ಅಂತ್ಯಕ್ಕೆ ರಾಜ್ಯ ಸರ್ಕಾರವು ₹45,600 ಕೋಟಿ ಬಡ್ಡಿ ಪಾವತಿಸಬೇಕಿದ್ದರೆ, 2027-28ಕ್ಕೆ ಈ ಮೊತ್ತ ₹60,306 ಕೋಟಿಯಾಗಲಿದೆ

ಸದನದಲ್ಲಿ ಕಿಡಿ ಹೊತ್ತಿಸಿದ ‘ಠೋಕೆಂಗೆ’

ಹೇಳಿಕೆಗಾಗಿ ಪೀಠದ ಕ್ಷಮೆಯಾಚಿಸಿದ ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ

ನವದೆಹಲಿ(ಪಿಟಿಐ): ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಕುರಿತ ಚರ್ಚೆ ವೇಳೆ, ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಬಳಸಿದ ‘ಠೋಕೆಂಗೆ’ ಎಂಬ ಪದ, ರಾಜ್ಯಸಭೆಯಲ್ಲಿ ಮಂಗಳವಾರ ಭಾರಿ ಕೋಲಾಹಲಕ್ಕೆ ಕಾರಣವಾಯಿತು.

ಸದನದ ನಾಯಕ ಜೆ.ಪಿ.ನಡ್ಡಾ ಹಾಗೂ ಆಡಳಿತ ಪಕ್ಷಗಳ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಬೆನ್ನಿಗೇ, ಖರ್ಗೆ ಅವರು ತಾವು ನೀಡಿದ ಹೇಳಿಕೆಗಾಗಿ ಉಪಸಭಾಪತಿಯವರ ಕ್ಷಮೆ ಕೋರಿದರು.

‘ನಾನು ನೀಡಿದ ಹೇಳಿಕೆ ಪೀಠ ಕುರಿತಾಗಿರದೇ ಕೇಂದ್ರ ಸರ್ಕಾರವನ್ನು ಕುರಿತದ್ದಾಗಿತ್ತು. ನಾನು ನಿಮ್ಮ ಬಗೆಗೆ ಮಾತನಾಡಿರಲಿಲ್ಲ. ನನ್ನ ಹೇಳಿಕೆಗಳಿಂದ ನಿಮ್ಮ ಮನಸ್ಸಿಗೆ ನೋವಾಗಿದ್ದರೆ ಕ್ಷಮೆ ಕೇಳುವೆ’ ಎಂದೂ ಖರ್ಗೆ ಸ್ಪಷ್ಟನೆ ನೀಡಿದ ನಂತರ, ಪರಿಸ್ಥಿತಿ ತಿಳಿಯಾಯಿತು.

ಆಗಿದ್ದೇನು?: ಪ್ರಶ್ನೋತ್ತರ ಅವಧಿ ನಂತರ, ರಾಜ್ಯಸಭೆಯು ಎನ್‌ಇಪಿ ಕುರಿತ ಚರ್ಚೆ ಕೈಗೆತ್ತಿಕೊಂಡಿತು. ತಮಿಳುನಾಡು ಸರ್ಕಾರದ ವಿರುದ್ಧ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಸದನದಲ್ಲಿ ಸೋಮವಾರ ನೀಡಿದ್ದ ಹೇಳಿಕೆ ಪ್ರಸ್ತಾಪಿಸಲು ತುದಿಗಾಲಲ್ಲಿ ನಿಂತಿದ್ದ ವಿಪಕ್ಷಗಳ ಸದಸ್ಯರು, ಸಚಿವ ಪ್ರಧಾನ್ ಕ್ಷಮೆಯಾಚಿಸಬೇಕು ಎಂಬ ಬೇಡಿಕೆ ಮಂಡಿಸಲು ಸಜ್ಜಾಗಿದ್ದವು.



ರಾಜ್ಯಸಭೆಯಲ್ಲಿ ಮಂಗಳವಾರ ಉಪಸಭಾಪತಿ ಹರಿವಂಶ್ ನಾರಾಯಣ ಸಿಂಗ್ ಅವರ ಕ್ಷಮೆ ಕೋರಿದ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ –ಪಿಟಿಐ ಚಿತ್ರ

ಶಿಕ್ಷಣ ಸಚಿವಾಲಯ ಕುರಿತು ಚರ್ಚೆ ಆರಂಭಿಸುವಂತೆ ಕಾಂಗ್ರೆಸ್‌ನ ದಿಗ್ವಿಜಯ ಸಿಂಗ್ ಅವರಿಗೆ ಉಪಸಭಾಪತಿ ಹರಿವಂಶ್ ನಾರಾಯಣ ಸಿಂಗ್ ಅವರು ಸೂಚಿಸಿದರು. ವಿಪಕ್ಷಗಳ ಸದಸ್ಯರು ಎನ್‌ಇಪಿ ಹಾಗೂ ಕ್ಷೇತ್ರಗಳ ಮರುವಿಂಗಡಣೆ ವಿರೋಧಿಸಿ, ಮಾತನಾಡಲು ಶುರು ಮಾಡಿದಾಗ ಸದನದಲ್ಲಿ ಗದ್ದಲ ಶುರುವಾಯಿತು. ಆಗ ಎದ್ದು ನಿಂತ ಖರ್ಗೆ ನೀಡಿದ ‘ಠೋಕೆಂಗೆ’ ಹೇಳಿಕೆ ಕೋಲಾಹಲಕ್ಕೆ ಕಾರಣವಾಯಿತು.

9ನೇ ಪುಟ ನೋಡಿ

ಖರ್ಗೆ ಹೇಳಿದ್ದೇನು?

ಗದ್ದಲದ ಮಧ್ಯೆಯೇ ಎದ್ದು ನಿಂತ ವಿರೋಧ ಪಕ್ಷದ ನಾಯಕ ಖರ್ಗೆ ಮಾತನಾಡಲು ಮುಂದಾದರು.

ಇದಕ್ಕೆ ಅವಕಾಶ ನೀಡದ ಹರಿವಂಶ್ ಸಿಂಗ್, ‘ಬೆಳಗಿನ ಅವಧಿಯಲ್ಲಿಯೇ ನಿಮಗೆ ಮಾತನಾಡಲು ಅವಕಾಶ ನೀಡಲಾಗಿತ್ತು’ ಎಂದರು. ‘ನಾನು ಬೆಳಿಗ್ಗೆ ಮಾತನಾಡುವ ವೇಳೆ ಶಿಕ್ಷಣ ಸಚಿವ ಪ್ರಧಾನ್ ಸದನದಲ್ಲಿ ಇರಲಿಲ್ಲ. ಈಗ ನನಗೆ ಮಾತನಾಡಲು ಅವಕಾಶ ನೀಡದಿರುವುದು ಸರ್ವಾಧಿಕಾರಿ ಧೋರಣೆ’ ಎಂದು ಖರ್ಗೆ ಹೇಳಿದರು.

ಈ ವೇಳೆ, ಮಾತಿನ ಭರದಲ್ಲಿ ಖರ್ಗೆ ಅವರು, ‘ನಿಮಗೆ ಎಲ್ಲೆಲ್ಲಿ ಗುದ್ದಬೇಕೋ ಅಲ್ಲಲ್ಲಿ ಸರಿಯಾಗಿ ಗುದ್ದಲಿದ್ದೇವೆ (ಆಪ್ಕೋ ಕ್ಯಾ ಕ್ಯಾ ಠೋಕನಾ ಹೈ, ಹಮ್ ಠೀಕ್ ಸೇ ಠೋಕೆಂಗೆ)’ ಎಂದು ಪೀಠದತ್ತ ಕೈತೋರಿ ಹೇಳಿದ್ದು, ಕೋಲಾಹಲಕ್ಕೆ ಕಾರಣವಾಯಿತು.

ಪ್ರಜ್ವಲ್, ಅಕ್ಷತಾ ಅತ್ಯುತ್ತಮ ನಟ–ನಟಿ

ಪ್ರಜಾವಾಣಿ ವಾರ್ತೆ



ಪ್ರಜ್ವಲ್ ದೇವರಾಜ್

ಬೆಂಗಳೂರು: 2020ನೇ ಸಾಲಿನ ರಾಜ್ಯ ವಾರ್ಷಿಕ ಚಲನಚಿತ್ರ ಪ್ರಶಸ್ತಿ ಮಂಗಳವಾರ ಪ್ರಕಟವಾಗಿದ್ದು, ‘ಜಂಟಲ್‌ಮನ್’ ಚಿತ್ರದಲ್ಲಿನ ನಟನೆಗಾಗಿ ಪ್ರಜ್ವಲ್ ದೇವರಾಜ್ ಅತ್ಯುತ್ತಮ ನಟ (ಸುಬ್ಬಯ್ಯ ನಾಯ್ಡು ಪ್ರಶಸ್ತಿ) ಹಾಗೂ ‘ಪಿಂಕಿ ಎಲ್ಲಿ’ ಚಿತ್ರದಲ್ಲಿನ ನಟನೆಗಾಗಿ ಅಕ್ಷತಾ ಪಾಂಡವಪುರ ಅತ್ಯುತ್ತಮ ನಟಿ ಪ್ರಶಸ್ತಿ ಪಡೆದಿದ್ದಾರೆ. ಪ್ರಶಸ್ತಿಯು ಇಪ್ಪತ್ತು ಸಾವಿರ ನಗದು ಹಾಗೂ 100 ಗ್ರಾಂ ಬೆಳ್ಳಿ ಪದಕವನ್ನು ಒಳಗೊಂಡಿದೆ. ಕೃಷ್ಣೇಗೌಡ ನಿರ್ಮಾಣದ, ಪೃಥ್ವಿ ಕೊಣನೂರು ನಿರ್ದೇಶನದ ‘ಪಿಂಕಿ ಎಲ್ಲಿ’ ಚಿತ್ರವು ಮೊದಲನೆ ಅತ್ಯುತ್ತಮ ಚಿತ್ರ ಪ್ರಶಸ್ತಿ ಪಡೆದಿದೆ. ಪ್ರಶಸ್ತಿಯು ತಲಾ ₹1 ಲಕ್ಷ ನಗದು ಹಾಗೂ 50 ಗ್ರಾಂ ಚಿನ್ನದ ಪದಕ ಒಳಗೊಂಡಿದೆ. ಸಂಗಮೇಶ ಎಸ್.ಸಜ್ಜನರ್ ನಿರ್ದೇಶನದ ‘ಫೋರ್‌ವಾಲ್ಸ್’ ಸಿನಿಮಾ ಅತ್ಯುತ್ತಮ ಜನಪ್ರಿಯ ಮನರಂಜನಾ ಚಿತ್ರ ಪ್ರಶಸ್ತಿ ಪಡೆದಿದೆ.

‘ಪಿಂಕಿ ಎಲ್ಲಿ’ಗೆ ಅತ್ಯುತ್ತಮ ಚಿತ್ರ ಪ್ರಶಸ್ತಿ




ಅಕ್ಷತಾ ಪಾಂಡವಪುರ

ಪ್ರಶಸ್ತಿ ಪಟ್ಟಿ 7

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಪಾಕ್: ನೂರಾರು ರೈಲು ಪ್ರಯಾಣಿಕರ ಒತ್ತೆಸೆರೆ

ಕರಾಚಿ (ಪಿಟಿಐ) (ಎಎಫ್‌ಪಿ): ಪಾಕಿಸ್ತಾನದ ಬಲೂಚಿಸ್ತಾನದಲ್ಲಿ ರೈಲಿನ ಮೇಲೆ ದಾಳಿ ನಡೆಸಿದ ಬಂದೂಕುಧಾರಿಗಳು ನೂರಾರು ಪ್ರಯಾಣಿಕರನ್ನು ಒತ್ತೆಯಾಳಾಗಿ ಇರಿಸಿದ್ದಾರೆ.

ಕ್ವೆಟ್ಟಾದಿಂದ ಪೆಶಾವರಕ್ಕೆ ತೆರಳುತ್ತಿದ್ದ ಜಾಫರ್ ಎಕ್ಸ್‌ಪ್ರೆಸ್ ರೈಲಿನ ಮೇಲೆ ಸ್ಥಳೀಯ ಕಾಲಮಾನ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಈ ದಾಳಿ ನಡೆದಿದೆ. ಘಟನೆಯಲ್ಲಿ ಹಲವು ಪ್ರಯಾಣಿಕರು ಗಾಯಗೊಂಡಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ. ದಾಳಿಯ ಹೊಣೆ ಹೊತ್ತಿರುವ ಬಲೂಚಿಸ್ತಾನ್ ಲಿಬರೇಶನ್ ಆರ್ಮಿ (ಬಿಎಲ್‌ಎ), ‘ಹಳಿ ತಪ್ಪಿಸಿ ರೈಲನ್ನು ವಶಕ್ಕೆತೆಗೆದುಕೊಳ್ಳಲಾಗಿದೆ. ರೈಲಿನ ಕರ್ತವ್ಯನಿರತ ಸಿಬ್ಬಂದಿ ಸೇರಿ ಪ್ರಯಾಣಿಕರನ್ನು ಒತ್ತೆ ಇರಿಸಿಕೊಳ್ಳಲಾಗಿದೆ’ ಎಂದು ಹೇಳಿಕೊಂಡಿದೆ.

13ನೇ ಪುಟ ನೋಡಿ

ಕನಕಲಕ್ಷ್ಮಿ ಬಂಧನ

ಪ್ರಜಾವಾಣಿ ವಾರ್ತೆ



ಬೆಂಗಳೂರು: ವಕೀಲೆ ಜೀವಾ ಆತ್ಮಹತ್ಯೆ ಪ್ರಕರಣದಲ್ಲಿ ಸಿಐಡಿ ಡಿವೈಎಸ್‌ಪಿ ಕನಕಲಕ್ಷ್ಮಿ ಅವರನ್ನು ಹೈಕೋರ್ಟ್ ರಚಿಸಿದ್ದ ವಿಶೇಷ ತನಿಖಾ ದಳದ (ಎಸ್‌ಐಟಿ) ಅಧಿಕಾರಿಗಳು ಮಂಗಳವಾರ ಬಂಧಿಸಿದ್ದಾರೆ.

ಬನಶಂಕರಿ ಠಾಣಾ ವ್ಯಾಪ್ತಿಯ ರಾಘವೇಂದ್ರ ಲೇಔಟ್‌ನ ಮನೆಯಲ್ಲಿ ನ.22ರಂದು ಜೀವಾ ಆತ್ಮಹತ್ಯೆ ಮಾಡಿ ಕೊಂಡಿದ್ದರು. ಆತ್ಮಹತ್ಯೆಗೂ ಮುನ್ನ ಜೀವಾ ಬರೆದಿಟ್ಟಿದ್ದ ಮರಣ ಪತ್ರ ಆಧರಿಸಿ, ಅವರ ಸಹೋದರಿ ಸಂಗೀತಾ ಅವರು ಬನಶಂಕರಿ ಠಾಣೆಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ತನಿಖೆ ಆರಂಭಿಸಿದ್ದರು. ಬಳಿಕ ಪ್ರಕರಣವನ್ನು ಸಿಸಿಬಿಗೆ ವರ್ಗಾವಣೆ ಮಾಡಲಾಗಿತ್ತು. ನಂತರ ಹೈಕೋರ್ಟ್, ಸಿಐಡಿ ಅಧಿಕಾರಿಗಳನ್ನೂ ಒಳಗೊಂಡಂತೆ ಎಸ್‌ಐಟಿ ರಚಿಸಿತ್ತು. ಅವರು ತನಿಖೆ ಮುಂದುವರಿಸಿದ್ದರು.

7ನೇ ಪುಟ ನೋಡಿ

ಗದ್ದಲದ ಮಧ್ಯೆಯೇ ಪ್ರಶ್ನೋತ್ತರ • ಇಡೀ ದಿನ ನಡೆಯದ ಕಲಾಪ

ಗ್ಯಾರಂಟಿ ಸಮಿತಿ ವಿರೋಧಿಸಿ ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗ್ಯಾರಂಟಿ’ ಯೋಜನೆಗಳ ಅನುಷ್ಠಾನಕ್ಕಾಗಿ ರಚಿಸಲಾಗಿರುವ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದ ಸಮಿತಿಗಳ ಅಧ್ಯಕ್ಷ ಹುದ್ದೆಗಳನ್ನು ರದ್ದುಗೊಳಿಸುವಂತೆ ಆಗ್ರಹಿಸಿ ಜೆಡಿಎಸ್ ಹಾಗೂ ಬಿಜೆಪಿ ಸದಸ್ಯರು ವಿಧಾನಸಭೆಯಲ್ಲಿ ಮಂಗಳವಾರ ಇಡೀ ದಿನ ಧರಣಿ ನಡೆಸಿದರು.

ಸಮಿತಿಗಳಿಗೆ ಅಧ್ಯಕ್ಷರು ಮತ್ತು ಸದಸ್ಯರನ್ನಾಗಿ ಕಾಂಗ್ರೆಸ್ ಕಾರ್ಯಕರ್ತರನ್ನು ನೇಮಕ ಮಾಡಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಪ್ರತಿಪಕ್ಷಗಳ ಸದಸ್ಯರು, ಹುದ್ದೆಗಳನ್ನು ರದ್ದು ಮಾಡುವುದಾಗಿ ತಕ್ಷಣವೇ ಘೋಷಿಸುವಂತೆ ಆಗ್ರಹಿಸಿ ಸಭಾಧ್ಯಕ್ಷರ ಪೀಠದ ಎದುರು ಧರಣಿ ನಡೆಸಿದರು. ಹಲವು ಬಾರಿ ಕಲಾಪ ಮುಂದೂಡಿದ ಸಭಾಧ್ಯಕ್ಷ ಯು.ಟಿ. ಖಾದರ್ ಅವರು ಸಂಧಾನಕ್ಕೆ ಯತ್ನಿಸಿ ದರೂ ಫಲ ದೊರೆಯಲಿಲ್ಲ.

ಪ್ರಶ್ನೋತ್ತರ ಅವಧಿಯಲ್ಲಿ ಜೆಡಿಎಸ್‌ನ ಎಂ.ಟಿ. ಕೃಷ್ಣಪ್ಪ ಅವರು ಗ್ಯಾರಂಟಿ ಅನುಷ್ಠಾನ ಸಮಿತಿಗಳ ರಚನೆ ಕುರಿತು ಪ್ರಶ್ನೆ ಕೇಳಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಪರವಾಗಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಉತ್ತರ ನೀಡಿದರು.

> ಜನರು ನಮಗೆ 138 ಸ್ಥಾನ ನೀಡಿದ್ದಾರೆ. ಪಕ್ಷವನ್ನು ಅಧಿಕಾರಕ್ಕೆ ತಂದ ಕಾರ್ಯಕರ್ತರಿಗೆ ಹುದ್ದೆ ನೀಡುವುದು ನಮ್ಮ ಇಚ್ಛಾಶಕ್ತಿ. ಅದರಂತೆ ಮಾಡಿದ್ದೇವೆ
>
> **ಡಿ.ಕೆ. ಶಿವಕುಮಾರ್,** ಉಪ ಮುಖ್ಯಮಂತ್ರಿ





> ಸರ್ಕಾರ ಮತ್ತು ಕಾಂಗ್ರೆಸ್ ಒಂದೇ ಎಂದು ಶಿವಕುಮಾರ್ ಭಾವಿಸಿದ್ದಾರೆ. ಕಾಂಗ್ರೆಸ್ ಕಾರ್ಯಕರ್ತರಿಗೆ ಹಣ ನೀಡಬೇಕಿದ್ದರೆ ರಸ್ತೆಯಲ್ಲಿ ಭಿಕ್ಷೆ ಬೇಡಿ ಕೊಡಲಿ
>
> **ಆರ್. ಅಶೋಕ,** ವಿರೋಧ ಪಕ್ಷದ ನಾಯಕ

ಉಪ ಪ್ರಶ್ನೆ ಕೇಳಿದ ಕೃಷ್ಣಪ್ಪ, ‘ಗ್ಯಾರಂಟಿ ಸಮಿತಿಗಳ ಅಧ್ಯಕ್ಷರು, ಸದಸ್ಯರಿಗೆ ವರ್ಷಕ್ಕೆ ₹15 ಕೋಟಿ ವೆಚ್ಚ ಮಾಡಲಾಗುತ್ತಿದೆ. ಸರ್ಕಾರದ ಬೊಕ್ಕಸದ ಹಣವನ್ನು ಕಾಂಗ್ರೆಸ್ ಕಾರ್ಯಕರ್ತರಿಗೆ ಹೇಗೆ ನೀಡುತ್ತಿದ್ದೀರಿ? ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸಾವಿರಾರು ಹುದ್ದೆಗಳು ಖಾಲಿ ಇವೆ. ಅವುಗಳಿಗೂ ಕಾಂಗ್ರೆಸ್ ಕಾರ್ಯಕರ್ತರನ್ನು ನೇಮಿಸಿ’ ಎಂದರು.

ಇದಕ್ಕೆ ದನಿಗೂಡಿಸಿದ ಬಿಜೆಪಿಯ ಸುನಿಲ್ ಕುಮಾರ್, ‘ಕಾಂಗ್ರೆಸ್‌ನವರಿಗಾಗಿ ಸರ್ಕಾರ ಇರುವುದಾ? ಅಂಗನವಾಡಿ, ಆಶಾ ಕಾರ್ಯಕರ್ತೆಯರಿಗೆ ನೀಡಲು ಸರ್ಕಾರದ ಬಳಿ ಹಣ ಇಲ್ಲ. ಕಾಂಗ್ರೆಸ್ ಕಾರ್ಯಕರ್ತರಿಗೆ ಕೊಡಲು ಇದೆಯೆ’ ಎಂದು ಕೇಳಿದರು. ಕಾರ್ಯಕರ್ತರಿಗೆ ಹುದ್ದೆ ನೀಡಿದ ಕ್ರಮವನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಮರ್ಥಿಸಿಕೊಂಡರು. ಈ ವಿಷಯ ಆಡಳಿತ ಮತ್ತು ಪ್ರತಿಪಕ್ಷ ಸದಸ್ಯರ ಮಧ್ಯೆ ವಾಗ್ವಾದಕ್ಕೆ ಕಾರಣವಾಯಿತು. ಆಗ ವಿರೋಧ ಪಕ್ಷದ ಸದಸ್ಯರು ಧರಣಿ ಆರಂಭಿಸಿದರು. ಅಲ್ಪ ಕಾಲ ಕಲಾಪ ಮುಂದೂಡಿದ ಸಭಾಧ್ಯಕ್ಷರು ಸಂಧಾನ ಸಭೆ ನಡೆಸಿದರು.

ಪುನಃ ಕಲಾಪ ಆರಂಭವಾದಾಗ ಹೇಳಿಕೆ ನೀಡಿದ ಶಿವಕುಮಾರ್, ‘ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷರ ಹುದ್ದೆಗಳನ್ನು ರದ್ದು ಮಾಡಬೇಕೆಂಬ ಬೇಡಿಕೆ ಕುರಿತು ಸಂಪುಟ ಸಭೆಯಲ್ಲಿ ಚರ್ಚಿಸಿ, ನಿರ್ಧಾರ ಕೈಗೊಳ್ಳುತ್ತೇವೆ’ ಎಂದರು. ಅದನ್ನು ಒಪ್ಪದ ವಿಪಕ್ಷ ಸದಸ್ಯರು ಸರ್ಕಾರಕ್ಕೆ ಧಿಕ್ಕಾರ ಕೂಗುತ್ತಾ ಧರಣಿ ಮುಂದುವರಿಸಿದರು. ಗದ್ದಲದ ಮಧ್ಯೆಯೇ ಪ್ರಶ್ನೋತ್ತರ ಕಲಾಪ ಮುಗಿಸಿದ ಸಭಾಧ್ಯಕ್ಷರು, ಭೋಜನ ವಿರಾಮಕ್ಕೆ ಕಲಾಪ ಮುಂದೂಡಿದರು. ಭೋಜನ ವಿರಾಮದ ಬಳಿಕ ಎರಡು ಬಾರಿ ಕಲಾಪ ಮುಂದೂಡಿ, ಆಡಳಿತ ಮತ್ತು ವಿರೋಧ ಪಕ್ಷಗಳ ಪ್ರಮುಖರ ಜತೆ ನಡೆಸಿದ ಮಾತುಕತೆ ಫಲ ನೀಡಲಿಲ್ಲ. ಪುನಃ ಧರಣಿ ಮುಂದುವರಿಸಿದಾಗ ಕಲಾಪವನ್ನು ಬುಧವಾರಕ್ಕೆ ಮುಂದೂಡಲಾಯಿತು.

14ರಿಂದ ಬೆಂಗಳೂರು ಸೀರೆ ಉತ್ಸವ

ಬೆಂಗಳೂರು: ನವದೆಹಲಿಯ ರಾಷ್ಟ್ರೀಯ ವಿನ್ಯಾಸ ಕೇಂದ್ರವು ಜವಳಿ ಸಚಿವಾಲಯದ ಕೈಮಗ್ಗ ಅಭಿವೃದ್ಧಿ ಆಯುಕ್ತಾಲಯದ ಸಹಯೋಗದಲ್ಲಿ ಇದೇ 14ರಿಂದ 20ರವರೆಗೆ ಜೆ.ಪಿ.ನಗರದ ಶುಭ್ ಕನ್ವೆನ್ಷನ್ ಸೆಂಟರ್‌ನಲ್ಲಿ 'ಬೆಂಗಳೂರು ಸೀರೆ ಉತ್ಸವ' ಏರ್ಪಡಿಸಿದೆ.

ಉತ್ಸವ ಪ್ರತಿದಿನ ಬೆಳಿಗ್ಗೆ 11ರಿಂದ ರಾತ್ರಿ 8 ಗಂಟೆಯವರೆಗೆ ನಡೆಯಲಿದೆ. ದೇಶದ ವಿವಿಧೆಡೆಯ 75ಕ್ಕೂ ಹೆಚ್ಚು ಕೈಮಗ್ಗ ಉದ್ಯಮಿಗಳು, ಸ್ವ-ಸಹಾಯ ಗುಂಪುಗಳು ಮತ್ತು ಸಹಕಾರಿ ಸಂಘಗಳ ಪ್ರತಿನಿಧಿಗಳು ಸೀರೆಗಳ ಸಂಗ್ರಹ ಪ್ರದರ್ಶಿಸಲಿದ್ದಾರೆ. ಕರ್ನಾಟಕ, ಕೇರಳ, ತಮಿಳುನಾಡು, ತೆಲಂಗಾಣ, ಆಂಧ್ರಪ್ರದೇಶ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಗುಜರಾತ್, ಉತ್ತರಪ್ರದೇಶ ಸೇರಿ ವಿವಿಧ ರಾಜ್ಯಗಳ ಸೀರೆಗಳು ಇರಲಿವೆ. ತಯಾರಿಕರಿಂದ ನೇರವಾಗಿ ಖರೀದಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಸವದತ್ತಿ ದೇಗುಲ ಅಭಿವೃದ್ಧಿ

ನವದೆಹಲಿ: 'ಪ್ರಸಾದ್' ಯೋಜನೆ ಅಡಿಯಲ್ಲಿ ಬೆಳಗಾವಿಯ ಸವದತ್ತಿ-ರೇಣುಕಾ ಯಲ್ಲಮ್ಮ ದೇವಸ್ಥಾನದ ಅಭಿವೃದ್ಧಿಗೆ ಕೇಂದ್ರ ಪ್ರವಾಸೋದ್ಯಮ ಸಚಿವಾಲಯ ಅನುಮೋದನೆ ನೀಡಿದೆ.

'₹18.37 ಕೋಟಿ ವೆಚ್ಚದಲ್ಲಿ ಯಾತ್ರಿಕರ ಕೇಂದ್ರ, ಕೆಫೆಟೇರಿಯಾ ಮತ್ತು ಇತರ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲಾಗುವುದು' ಎಂದು ಕೇಂದ್ರ ಸಚಿವ ಗಜೇಂದ್ರ ಸಿಂಗ್ ಶೇಖಾವತ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.





ಬೆಂಗಳೂರಿನ ಚರ್ಚ್ ಸ್ಟ್ರೀಟ್‌ನಲ್ಲಿ ಮಂಗಳವಾರ ಸುರಿದ ವರ್ಷದ ಮೊದಲ ಮಳೆಯಲ್ಲಿ ಜನರು ಸಾಗಿದ ದೃಶ್ಯ ಪ್ರಜಾವಾಣಿ ಚಿತ್ರ: ಎಂ. ಎಸ್ ಮಂಜುನಾಥ್

ಮೊದಲ ವರ್ಷಧಾರೆ

ನಗರದ ವಿವಿಧ ಬಡಾವಣೆಗಳಲ್ಲಿ ಮಳೆ: ಜನರ ಸಂಭ್ರಮ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬಿಸಿಲಿನ ತಾಪ ಹೆಚ್ಚಾಗುತ್ತಿದ್ದ ಸಂದರ್ಭದಲ್ಲಿ ನಗರದ ಕೆಲವು ಪ್ರದೇಶಗಳಲ್ಲಿ ಮಂಗಳವಾರ ವರ್ಷದ ಮೊದಲ ಮಳೆ ಸುರಿಯಿತು.

ಮೆಜೆಸ್ಟಿಕ್, ಕೆ.ಆರ್. ಮಾರುಕಟ್ಟೆ, ಶಾಂತಿನಗರ, ಮಹಾತ್ಮಗಾಂಧಿ ರಸ್ತೆ, ಬನಶಂಕರಿ, ಇಂದಿರಾನಗರ, ದೊಡ್ಡನೆಕ್ಕುಂದಿ, ಬಸವನಪುರ ಪ್ರದೇಶಗಳಲ್ಲಿ ತುಂತುರು ಮಳೆಯಾಯಿತು.

ಮಂಗಳವಾರ ಸಂಜೆ ದಿಢೀರ್ ಸುರಿದ ಮಳೆಯಿಂದ ನಾಗರಿಕರು ಹರ್ಷಗೊಂಡರು. ಕೆಲವರು ಮಳೆಯಲ್ಲಿ ನೆನೆದರೆ, ಹಲವರು ಮಳೆಯಿಂದ ತಪ್ಪಿಸಿಕೊಳ್ಳಲು ಸೂರು ಹುಡುಕಾಡಿದರು.

ಎಲ್ಲೆಲ್ಲಿ? ಎಷ್ಟು ಮಳೆ?

ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ 2 ಮಿ.ಮೀ., ದೊಡ್ಡನೆಕ್ಕುಂದಿಯಲ್ಲಿ 1.5 ಮಿ.ಮೀ., ವಿಜ್ಞಾನನಗರದಲ್ಲಿ 1 ಮಿ.ಮೀ., ಬಸವನಪುರ, ಪುಲಕೇಶಿನಗರ ಹಾಗೂ ಬನಶಂಕರಿಯ ವಿದ್ಯಾಪೀಠದಲ್ಲಿ ತಲಾ 0.5 ಮಿ.ಮೀ., ಮಳೆಯಾಗಿದೆ.

ನಿಧನ ವಾರ್ತೆ

ಎಂ.ಮಾಯಣ್ಣ



ಎಂ.ಮಾಯಣ್ಣ

ಕೆ.ಆರ್.ಪುರ: ಬಿಜೆಪಿ ಮುಖಂಡ, ಕೆ.ಆರ್.ಪುರದ ನಿವಾಸಿ ಎಂ.ಮಾಯಣ್ಣ (86) ಅವರು ಹೃದಯಾಘಾತದಿಂದ ಸೋಮವಾರ ನಿಧನರಾದರು. ಮೃತರಿಗೆ ಪತ್ನಿ, ಇಬ್ಬರು ಪುತ್ರಿಯರು ಒಬ್ಬರು ಪುತ್ರ ಇದ್ದಾರೆ.

ಮಾಯಣ್ಣ ಅವರು ಬೆಂಗಳೂರು ಪೂರ್ವ ತಾಲ್ಲೂಕಿನ ಶ್ರೀಭುವನೇಶ್ವರಿ ಒಕ್ಕಲಿಗರ ಸಂಘದ ಅಧ್ಯಕ್ಷರಾಗಿ, ಹಿರಿಯ ಮಾರ್ಗದರ್ಶಕರಾಗಿದ್ದರು. ಅಂತ್ಯಕ್ರಿಯೆ ಮಂಗಳವಾರ ಮಧ್ಯಾಹ್ನ ನಡೆಯಿತು ಎಂದು ಕುಟುಂಬದವರು ತಿಳಿಸಿದ್ದಾರೆ.

ಜಲಮೂಲಗಳ ರಕ್ಷಣೆ ಬಗ್ಗೆ ಸ್ಥಳೀಯ ನಿವಾಸಿಗಳು, ವಿದ್ಯಾರ್ಥಿಗಳಿಗೆ ಜವಾಬ್ದಾರಿ ತಿಳಿಸುವ ಉದ್ದೇಶ

ಕೆರೆ ರಕ್ಷಣೆ: ಜಾಗೃತಿಗಾಗಿ 'ಕೆರೆ ಕನೆಕ್ಟ್ ಹಬ್ಬ'

• ಆರ್. ಮಂಜುನಾಥ್

ಬೆಂಗಳೂರು: ನಗರದಲ್ಲಿರುವ ಕೆರೆಗಳ ಬಗ್ಗೆ ನಾಗರಿಕರು, ಮಕ್ಕಳಿಗೆ ಅರಿವು ಮೂಡಿಸುವುದು, ಅವುಗಳ ರಕ್ಷಣೆಯಲ್ಲಿ ಸಮುದಾಯಗಳ ಜವಾಬ್ದಾರಿಯನ್ನು ಸ್ಥಳೀಯರಿಗೆ ತಿಳಿಸುವ ಉದ್ದೇಶದಿಂದ 'ಕೆರೆ ಕನೆಕ್ಟ್ ಹಬ್ಬ– 2025' ಪ್ರಾರಂಭಗೊಂಡಿದೆ.

ಕೆರೆಗಳ ಪ್ರಾಮುಖ್ಯದ ಬಗ್ಗೆ ನಾಗರಿಕರಿಗೆ ಅರಿವು ಮೂಡಿಸ ಲಾಗುತ್ತದೆ. ನೀರಿನ ಭದ್ರತೆ, ಪ್ರವಾಹದಿಂದಾಗುವ ಸಮಸ್ಯೆ ಹಾಗೂ ಇತರೆ ಸವಾಲುಗಳನ್ನು ಎದುರಿಸುವ ಕುರಿತು ಜಾಗ್ರತೆ ಮೂಡಿಸುವ ಜೊತೆಗೆ ಪರಿಹಾರ ಒದಗಿಸುವ ಉದ್ದೇಶವನ್ನೂ 'ಕೆರೆ ಕನೆಕ್ಟ್ ಹಬ್ಬ' ಹೊಂದಿದೆ.

ಕ್ಷಿಪ್ರ ನಗರೀಕರಣದಿಂದ ಜಲಸಂಪನ್ಮೂಲಗಳೊಂದಿಗಿನ ಸುಸ್ಥಿರ ಜೀವನ ಕಡಿತವಾಗಿದೆ. ಅಂತಹ ಸಂಪರ್ಕವನ್ನು ಮರುಸೃಷ್ಟಿಸಲು 'ಕೆರೆ ಕನೆಕ್ಟ್ ಹಬ್ಬ' ಆಚರಿಸಲಾಗುತ್ತಿದೆ. ತಜ್ಞರು ಜೀವವೈವಿಧ್ಯದ ಬಗ್ಗೆ ಮಾಹಿತಿ ಒದಗಿಸಲಿದ್ದಾರೆ. ಕೆರೆಗಳ ಸುತ್ತಮುತ್ತಲಿನ ನಿವಾಸಿಗಳು, ಕೆರೆ ರಕ್ಷಣೆಯಲ್ಲಿ ತೊಡಗಿರುವ ಸಂಘಗಳನ್ನು ಒಟ್ಟುಗೂಡಿಸಿ, ಶಾಲಾ ಮಕ್ಕಳನ್ನು ಸೇರಿಸಿಕೊಂಡು ಜಲಮೂಲ ರಕ್ಷಣೆಯಲ್ಲಿ ಅವರವರ ಪಾತ್ರಗಳನ್ನು ವಿವರಿಸ ಲಾಗುತ್ತದೆ.


ಶ್ರೀಗಂಧದ ಕಾವಲ್ ಕೆರೆಯ ಸದ್ಯದ ಚಿತ್ರಣ

'ಕೆರೆ ಕನೆಕ್ಟ್ ಹಬ್ಬ'ವನ್ನು ನಗರದ ಹಲವು ಕೆರೆಗಳಲ್ಲಿ ಇಂಡಿಯಾ ಕೇರ್ ಫೌಂಡೇಷನ್ ಆಯೋಜಿಸುತ್ತಿದ್ದು, ಫ್ರೆಂಡ್ಸ್ ಆಫ್ ಲೇಕ್ ಜೊತೆಗೆ ಹಲವು ಕಾರ್ಪೊರೇಟ್ ಸಂಸ್ಥೆಗಳು, ಸ್ಥಳೀಯ ಸಂಸ್ಥೆಗಳು ಕೈಜೋಡಿಸಿವೆ. ಕೆರೆಗಳಲ್ಲಿ ಹಬ್ಬ ಆಚರಿಸಲು ಬಿಬಿಎಂಪಿಯಿಂದ ಅನುಮತಿ ಪಡೆದುಕೊಳ್ಳಲಾಗಿದೆ ಎಂದು ಆಯೋಜಕರು ತಿಳಿಸಿದ್ದಾರೆ.

ಅನುಮತಿ: ಕೆರೆಯ ಪರಿಸರಕ್ಕೆ ಧಕ್ಕೆ ಉಂಟಾಗದಂತೆ, ಜನಜಾಗೃತಿ ಮೂಡಿಸುವ ಕೆಲಸ ಮಾಡಲು 'ಕೆರೆ ಕನೆಕ್ಟ್ ಹಬ್ಬ'ಕ್ಕೆ ಅನುಮತಿ ನೀಡಲಾಗಿದೆ. ಪ್ರತಿಯೊಂದು ಕೆರೆಯಲ್ಲಿ ಹಬ್ಬ ಆಚರಿಸುವ ಸಂದರ್ಭದಲ್ಲಿ ಪ್ರತ್ಯೇಕ ಅನುಮತಿ ಪಡೆಯುತ್ತಿದ್ದಾರೆ ಎಂದು ಬಿಬಿಎಂಪಿ ಕೆರೆಗಳ ವಿಭಾಗದ ಮುಖ್ಯ ಎಂಜಿನಿಯರ್ ವಿಜಯಕುಮಾರ್ ಹರಿದಾಸ್ ತಿಳಿಸಿದರು.

ನೀರು ಹರಿಯದ ಕೆರೆಗೆ ಗಂಗಾ–ಕಾವೇರಿ ಆರತಿ!

ಮಾಗಡಿ ರಸ್ತೆ ಸಮೀಪವಿರುವ ಶ್ರೀಗಂಧದ ಕಾವಲ್ ಕೆರೆಯನ್ನು ಬಿಬಿಎಂಪಿ ವತಿಯಿಂದ ₹22.4 ಕೋಟಿ ವೆಚ್ಚದಲ್ಲಿ ಎರಡು ವರ್ಷಗಳ ಹಿಂದೆ ಅಭಿವೃದ್ಧಿ ಮಾಡಲಾಗಿದೆ. ಈ ಕೆರೆಯಲ್ಲಿ ಇಂದು ಒಂದು ಹನಿ ನೀರೂ ಇಲ್ಲ. ಇಂತಹ ಕೆರೆಯಲ್ಲಿ 'ಕೆರೆ ಕನೆಕ್ಟ್ ಹಬ್ಬ'ದಲ್ಲಿ ಗಂಗಾ–ಕಾವೇರಿ ಆರತಿ ಏರ್ಪಡಿಸಲಾಗಿದೆ.

'ಶುಭ್ರ ಬೆಂಗಳೂರು' ಯೋಜನೆಯಡಿ ಬಿಬಿಎಂಪಿ ವತಿಯಿಂದ ಶ್ರೀಗಂಧದ ಕಾವಲ್ ಕೆರೆಯನ್ನು ಅಭಿವೃದ್ಧಿಪಡಿಸಲಾಗಿದ್ದು, ಹಿಂದಿದ್ದ ಕಾಲುವೆ ಮಾರ್ಗವನ್ನು ಬದಲಿಸಲಾಗಿದೆ. ಈಗಿರುವ ಒಂದು ಒಳಹರಿವಿನಿಂದ ನೀರು ಬರುವುದಿಲ್ಲ. ಹೀಗಾಗಿ, ಕಳೆದ ಎರಡು ವರ್ಷಗಳಿಂದ ಉತ್ತಮ ಮಳೆಯಾಗಿದ್ದರೂ ಈ ಕೆರೆಯಲ್ಲಿ ಒಂದೆರಡು ಅಡಿ ನೀರೂ ತುಂಬುತ್ತಿಲ್ಲ.

ಅವೈಜ್ಞಾನಿಕವಾಗಿ ಅಭಿವೃದ್ಧಿಯಾಗಿರುವ ಶ್ರೀಗಂಧದ ಕಾವಲ್ ಕೆರೆ 'ಹೈಟೆಕ್ ಪಾರ್ಕ್'ನಂತಾಗಿದ್ದು, ಒಳ ಹರಿವಿಲ್ಲದ್ದರಿಂದ ಕೆರೆ ಅಸ್ತಿತ್ವ ಕಳೆದುಕೊಂಡಿದೆ.

'ತಮ್ಮದೆನ್ನುವ ಭಾವನೆ ಬರಲಿ'

'ಶ್ರೀಗಂಧದ ಕಾವಲ್ ಕೆರೆ' ಇಲ್ಲಿದೆ ಎಂಬುದೇ ಸುತ್ತಮುತ್ತಲಿನ ನಿವಾಸಿಗಳಿಗೇ ಗೊತ್ತಿಲ್ಲ. ಸುತ್ತಮುತ್ತಲಿರುವ ಶಾಲೆಗಳ ಮಕ್ಕಳಿಗೂ ಕೆರೆಯ ಬಗ್ಗೆ ಮಾಹಿತಿ ಇಲ್ಲ. ಹೀಗಾಗಿ, ಸ್ಥಳೀಯರು, ಮಕ್ಕಳಿಗೆ ಕೆರೆ ತಮ್ಮದೆಂಬ ಭಾವನೆ ಬರಬೇಕು. ಅದನ್ನು ರಕ್ಷಿಸಿಕೊಳ್ಳಬೇಕು, ಸ್ವಚ್ಛವಾಗಿಟ್ಟುಕೊಳ್ಳಬೇಕು ಎಂಬ ಜವಾಬ್ದಾರಿ ಮೂಡಬೇಕು. ಆದ್ದರಿಂದ 'ಕೆರೆ ಕನೆಕ್ಟ್ ಹಬ್ಬ'ವನ್ನು ಶ್ರೀಗಂಧದ ಕಾವಲ್ ಕೆರೆಯಲ್ಲಿ ಮಾರ್ಚ್ 15ರ ಶನಿವಾರದಂದು ಆಯೋಜಿಸಲಾಗಿದೆ. ಬೆಳಿಗ್ಗೆ 7ರಿಂದ ರಾತ್ರಿಯವರೆಗೂ ವಿವಿಧ ಕಾರ್ಯಕ್ರಮಗಳು ನಡೆಯಲಿವೆ. ಮುಂದಿನ ಮಳೆಗಾಲದಲ್ಲಾದರೂ ಕೆರೆ ಪೂರ್ಣ ತುಂಬಲಿ ಎಂದು ಆರತಿ ಮಾಡಲಿದ್ದೇವೆ. ಉಸಿರು ಹಾಗೂ ಟೀಮ್ ಸ್ಪಾಟ್‌ಲೈಟ್ ಸಂಸ್ಥೆಗಳು ಕಾರ್ಯಕ್ರಮ ನಿರ್ವಹಣೆ ಮಾಡ ಲಿವೆ' ಎಂದು ಉಸಿರು ಸಂಸ್ಥೆಯ ಶೋಭಾ ಭಟ್ ತಿಳಿಸಿದರು.

ಹಬ್ಬದಲ್ಲಿ ಏನೇನಿದೆ?

- ಕೆರೆ ಜೀವವೈವಿಧ್ಯ ನಡಿಗೆ
- ಮಕ್ಕಳ ಚಿತ್ರಕಲಾ ಸ್ಪರ್ಧೆ
- ಸಭಾ ಕಾರ್ಯಕ್ರಮ
- ತಜ್ಞರಿಂದ ಮಾಹಿತಿ, ಚರ್ಚೆ
- ತೋಟದಿಂದ ಊಟ ಕಾರ್ಯಾಗಾರ
- ಗ್ರಾಮೀಣ ಆಟಗಳು
- ಸಾಂಸ್ಕೃತಿಕ ಕಾರ್ಯಕ್ರಮ
- ದೀಪೋತ್ಸವ, ಗಂಗಾ–ಕಾವೇರಿ ಆರತಿ
- ಹಳೆ ಬಟ್ಟೆ, ಹಳೆ ಪಾದರಕ್ಷೆಗಳ ಸಂಗ್ರಹ
- ಹಳೆ ಬಟ್ಟೆ ತಂದರೆ, ಉಚಿತವಾಗಿ ಚೀಲ ಹೊಲಿಸಿಕೊಳ್ಳುವ ಕೊಡುಗೆ
- ಸುಸ್ಥಿರತೆಯ ಅರಿವಿನ ಬಗ್ಗೆ ಪ್ರದರ್ಶನಾ ಮಳಿಗೆಗಳು

* (ಮಾರ್ಚ್ 15ರ ಶನಿವಾರ)

ಬಿಜೆಪಿ ಕಾರ್ಯಕರ್ತೆ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿಯ ಮಲ್ಲೇಶ್ವರ ಮಂಡಲದ ಪ್ರಧಾನ ಕಾರ್ಯದರ್ಶಿ ಮಂಜುಳಾ ಅವರು ಮಂಗಳವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮತ್ತಿಕೆರೆಯ ನಿವಾಸದಲ್ಲಿ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಆತ್ಮಹತ್ಯೆ ಮಾಡಿಕೊಂರುವ ಕೋಣೆಯಲ್ಲಿ ಮರಣಪತ್ರ ಸಿಕ್ಕಿದೆ. ನನ್ನ ಸಾವಿಗೆ ನಾನೇ ಕಾರಣ. ಜೀವನದಲ್ಲಿ ಹೆಸರು ಮಾಡಬಹುದು, ಹಣ ಗಳಿಸಬಹುದು. ಆದರೆ, ನೆಮ್ಮದಿ ಇರಬೇಕು. ನನಗೆ ನೆಮ್ಮದಿ ಇರಲಿಲ್ಲ' ಎಂಬುದಾಗಿ ಮರಣ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಕೆಲವು ತಿಂಗಳಿಂದ ಮಂಜುಳಾ ಅವರು ಮಂಡಲದ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದರು. ಇನ್ನೂ ಕೆಲವೇ ದಿನಗಳಲ್ಲಿ ಅವರಿಗೆ ಬೇರೆ ಹುದ್ದೆಗೆ ನೇಮಿಸಲು ತೀರ್ಮಾನ ಮಾಡಲಾಗಿತ್ತು. ಅಷ್ಟರಲ್ಲಿ ಈ ಘಟನೆ ನಡೆದಿದೆ' ಎಂದು ಮೂಲಗಳು ತಿಳಿಸಿವೆ.

ಎಂ.ಎಸ್.ರಾಮಯ್ಯ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ಬಳಿಕ ಮೃತದೇಹವನ್ನು ಕುಟುಂಬಸ್ಥರಿಗೆ ಒಪ್ಪಿಸಲಾಯಿತು. ಯಶವಂತಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರೈಲಿಗೆ ಸಿಲುಕಿ ಚಿರತೆ ಸಾವು

ಪ್ರಜಾವಾಣಿ ವಾರ್ತೆ

ಬಿಡದಿ (ರಾಮನಗರ): ಪಟ್ಟಣದ ಹೊರವಲಯದ ದಾಸಪ್ಪನದೊಡ್ಡಿಯ ಜನವಸತಿ ಪ್ರದೇಶಕ್ಕೆ ಹೊಂದಿಕೊಂಡಂತಿರುವ ರೈಲು ಹಳಿಗೆ ಸಿಲುಕಿ ಮೃತಪಟ್ಟಿರುವ ಚಿರತೆಯೊಂದರ ಕಳೇಬರ ಮಂಗಳವಾರ ಪತ್ತೆಯಾಗಿದೆ. ಅಂದಾಜು 4 ವರ್ಷದ ಚಿರತೆಯ ಕಾಲುಗಳು, ರುಂಡ ಹಾಗೂ ಮುಂಡ ಬೇರೆ ಬೇರೆಯಾಗಿವೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ರೈಲ್ವೆ ಇಲಾಖೆಯ ಹಳಿ ನಿರ್ವಹಣಾ ಸಿಬ್ಬಂದಿ ಬೆಳಿಗ್ಗೆ 10.30ರ ಸುಮಾರಿಗೆ ಕಾರ್ಯನಿಮಿತ್ತ ಈ ಮಾರ್ಗದಲ್ಲಿ ಸಾಗುತ್ತಿದ್ದಾಗ ಚಿರತೆ ಕಳೇಬರ ಗಮನಿಸಿ, ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದರು. ಸ್ಥಳಕ್ಕೆ ತೆರಳಿ ಪರಿಶೀಲಿಸಿದಾಗ ಚಿರತೆಯ ರುಂಡ ಮತ್ತು ಮುಂಡ ಬೇರೆ ಬೇರೆಯಾಗಿ ಹಳಿಯ ಬದಿಯಲ್ಲಿ ಬಿದ್ದಿರುವುದು ಕಂಡುಬಂತು ಎಂದು ರಾಮನಗರ ವಲಯ ಅರಣ್ಯಾಧಿಕಾರಿ ಮಹಮ್ಮದ್ ಮನ್ಸೂರ್ 'ಪ್ರಜಾವಾಣಿ'ಗೆ ತಿಳಿಸಿದರು.

ಆಹಾರ ಹುಡುಕಿಕೊಂಡು ಗ್ರಾಮದ ಕಡೆಗೆ ಬಂದಿರುವ ಚಿರತೆಯು ನಸುಕಿನಲ್ಲಿ ಈ ಭಾಗದಲ್ಲಿ ಸಂಚರಿಸಿರುವ ರೈಲೊಂದಕ್ಕೆ ಸಿಲುಕಿ ಮೃತಪಟ್ಟಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ ಎಂದು ಹೇಳಿದರು. ಸ್ಥಳಕ್ಕೆ ರೈಲ್ವೆ ಪೊಲೀಸರು ಸಹ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕಾನೂನು ಬಾಹಿರ ಚಟುವಟಿಕೆ: 386 ಮಂದಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದ ಆರೋಪದ ಮೇಲೆ ಫೆಬ್ರುವರಿಯಲ್ಲಿ 386 ಮಂದಿಯನ್ನು ನಗರದ ವಿವಿಧ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

'ಮಟ್ಕಾ, ಬೆಟ್ಟಿಂಗ್, ಎನ್‌ಡಿಪಿಎಸ್ ಸೇರಿದಂತೆ ವಿವಿಧ ಅಪರಾಧ ಕೃತ್ಯ ಎಸಗಿದ್ದ ಆರೋಪಿಗಳ ವಿರುದ್ಧ 257 ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಕಮಿಷನರ್ ಬಿ.ದಯಾನಂದ ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾಹಿತಿ ನೀಡಿದರು.

ಫೆಬ್ರುವರಿಯಲ್ಲಿ 40 ಎನ್‌ಡಿಪಿಎಸ್ ಪ್ರಕರಣ ದಾಖಲಿಸಲಾಗಿತ್ತು. ಐವರು ವಿದೇಶಿ ಪ್ರಜೆಗಳೂ ಸೇರಿದಂತೆ 55 ಮಂದಿಯನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ. ಗಾಂಜಾ 130 ಕೆ.ಜಿ, ಒಪಿಯಮ್ 2 ಕೆ.ಜಿ, ಆಶಿಷ್ ಆಯಿಲ್ 429 ಗ್ರಾಂ ಹಾಗೂ ಒಂದು ಕೆ.ಜಿ ಎಂಡಿಎಂಎ ಅನ್ನು ಜಪ್ತಿ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಕೋರ್ಟ್‌ಗೆ ಹಾಜರಾಗದೇ ತಲೆಮರೆಸಿಕೊಂಡಿದ್ದ 8 ಮಂದಿಯನ್ನು ಬಂಧಿಸಲಾಗಿದೆ. ಇವರು ಕೊಲೆ, ಸುಲಿಗೆ ಹಾಗೂ ಕಳ್ಳತನ ಪ್ರಕರಣಗಳಲ್ಲಿ ಭಾಗಿ ಆಗಿದ್ದರು ಎಂದು ಹೇಳಿದರು.

ಮೊಬೈಲ್, ಆಭರಣ ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊಬೈಲ್ ಕಳವು ಹಾಗೂ ಮನೆಗಳಲ್ಲಿ ಕಳ್ಳತನ ಮಾಡುತ್ತಿದ್ದ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ರಸ್ತೆಯಲ್ಲಿ ನಡೆದು ಹೋಗುತ್ತಿದ್ದ ಸಾರ್ವಜನಿಕರ ಮೊಬೈಲ್ ಕಳವು ಮಾಡಿ ಪರಾರಿ ಆಗುತ್ತಿದ್ದ ಇಬ್ಬರನ್ನು ರಾಜಗೋಪಾಲನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಹೆಗ್ಗನಹಳ್ಳಿ ನಿವಾಸಿ ಪವನ್ ಕುಮಾರ್(28) ಮತ್ತು ಬನ್ನೇರುಘಟ್ಟ ನಿವಾಸಿ ಕಿರಣ್ (24) ಬಂಧಿತರು.

ಆರೋಪಿಗಳಿಂದ ₹5 ಲಕ್ಷ ಮೌಲ್ಯದ 18 ಮೊಬೈಲ್‌ಗಳು, ಎರಡು ಬೈಕ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಬಂಧಿತರು ರಾಜಗೋಪಾಲನಗರದ 9ನೇ ಕ್ರಾಸ್‌ನಲ್ಲಿ ಪಾದಚಾರಯಿಂದ ಮೊಬೈಲ್ ಕಸಿದು ಪರಾರಿ ಆಗಿದ್ದರು. ಬೈಕ್‌ಗಳನ್ನು ಕಳವು ಮಾಡುತ್ತಿದ್ದ ಆರೋಪಿಗಳು, ಅದೇ ಬೈಕ್‌ನಲ್ಲಿ ಸುತ್ತಾಟ ನಡೆಸಿ ಕೃತ್ಯ ಎಸಗುತ್ತಿದ್ದರು ಎಂದು ಮೂಲಗಳು ತಿಳಿಸಿವೆ.

ಆರೋಪಿಗಳ ಬಂಧನದಿಂದ ನಾಲ್ಕು ಠಾಣೆಗಳಲ್ಲಿ ದಾಖಲಾಗಿದ್ದ ಐದು ಮೊಬೈಲ್ ಕಳವು ಮತ್ತು ಬೈಕ್‌ಗಳ ಕಳವು ಪ್ರಕರಣಗಳು ಪತ್ತೆಯಾಗಿವೆ ಎಂದು ಪೊಲೀಸರು ಹೇಳಿದರು.

ಮತ್ತೊಂದು ಪ್ರಕರಣದಲ್ಲಿ ಬೀಗ ಹಾಕಿದ್ದ ಮನೆಗಳ ಬಾಗಿಲು ಮುರಿದು ಚಿನ್ನಾಭರಣ, ನಗದು ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ವರ್ತೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕಾಟನ್‌ಪೇಟೆ ನಿವಾಸಿ ಮೊಹಮ್ಮದ್ ಮುದಾಸೀರ್(40) ಬಂಧಿತರು. ಆರೋಪಿಯಿಂದ ₹8 ಲಕ್ಷ ಮೌಲ್ಯದ 106 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ.

'ಇರಾನಿ ಗ್ಯಾಂಗ್'ನ ಇಬ್ಬರ ಬಂಧನ


ಹುಸೈನ್ ಫಯಾಜ್


ತಬ್ರೇಜ್ ಅಹಮದ್

ಅಪರಾಧ ಸುದ್ದಿ

ಬೆಂಗಳೂರು: ರಸ್ತೆಯಲ್ಲಿ ನಡೆದುಹೋಗುತ್ತಿದ್ದ ಮಹಿಳೆಯರನ್ನು ಗುರಿಯಾಗಿಸಿ ಚಿನ್ನದ ಸರಗಳನ್ನು ಕಸಿದು ಪರಾರಿಯಾಗುತ್ತಿದ್ದ 'ಇರಾನಿ ಗ್ಯಾಂಗ್'ನ ಇಬ್ಬರನ್ನು ಬೈಯಪ್ಪನಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಮಹಾರಾಷ್ಟ್ರದ ಹುಸೈನ್ ಫಯಾಜ್ ಸೈಯದ್ (45) ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕಿನ ರಾಮಸ್ವಾಮಿ ಪಲ್ಲಿ ಗ್ರಾಮದ ತಬ್ರೇಜ್ ಅಹಮದ್ (32) ಬಂಧಿತರು.

ಬಂಧಿತರಿಂದ ₹3 ಲಕ್ಷ ಮೌಲ್ಯದ 30 ಗ್ರಾಂ ತೂಕದ ಚಿನ್ನಾಭರಣ ಹಾಗೂ ಒಂದು ದ್ವಿಚಕ್ರ ವಾಹನವನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಸದಾನಂದನಗರದ ಐದನೇ ಮುಖ್ಯರಸ್ತೆಯಲ್ಲಿ ನಡೆದುಹೋಗುತ್ತಿದ್ದ ಮಹಿಳೆಯಿಂದ ಚಿನ್ನದ ಸರ ಕಸಿಯಲು ಬೈಕ್‌ನಲ್ಲಿ ಬಂದಿದ್ದ ಆರೋಪಿಗಳು ಯತ್ನಿಸಿದ್ದರು. ಆಗ ಸರ ತುಂಡಾಗಿದ್ದು, ಒಂದು ಭಾಗವನ್ನು ಆರೋಪಿಗಳನ್ನು ಒಯ್ದಿದ್ದರು. ಸರ ಕಳೆದುಕೊಂಡ ಮಹಿಳೆ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

'ಆರೋಪಿಗಳು ಇರಾನಿ ಗ್ಯಾಂಗ್‌ನಲ್ಲಿ ಗುರುತಿಸಿಕೊಂಡಿದ್ದರು. ಸುಲಿಗೆ ಮಾಡಿದ ಚಿನ್ನವನ್ನು ಮಹಾರಾಷ್ಟ್ರಕ್ಕೆ ಕೊಂಡೊಯ್ದು ಮಾರಾಟ ಮಾಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

ನಾಲ್ಕು ತಿಂಗಳ ಹಿಂದೆ ಕೃತ್ಯ • ಶವ ಬಿಸಾಡಿ ಪರಾರಿಯಾಗಿದ್ದ ಆಟೊ ಚಾಲಕ

ಚಿನ್ನಾಭರಣಕ್ಕಾಗಿ ಮಹಿಳೆ ಕೊಲೆ: ಸೆರೆ

ಪ್ರಜಾವಾಣಿ ವಾರ್ತೆ


ಲಕ್ಷ್ಮಣ್

ಬೆಂಗಳೂರು: ನಾಲ್ಕು ತಿಂಗಳ ಹಿಂದೆ ನಡೆದಿದ್ದ ಒಂಟಿ ಮಹಿಳೆ ಕೊಲೆ ಕೃತ್ಯದ ಆರೋಪಿಯನ್ನು ಕೊತ್ತನೂರು ಠಾಣೆ ಪೊಲೀಸರು ಬಂಧಿಸಿದ್ದಾರೆ. ಚಿನ್ನಾಭರಣಕ್ಕಾಗಿ ಕೊಲೆ ಮಾಡಿರುವುದು ತನಿಖೆ ವೇಳೆ ಗೊತ್ತಾಗಿದೆ.

2024ರ ನವೆಂಬರ್ 26ರಂದು ನಾಗೇನಹಳ್ಳಿಯ ಸ್ಲಂ ಬೋರ್ಡ್ ವಸತಿ ಪ್ರದೇಶದಿಂದ ಕಾಣೆಯಾಗಿದ್ದ ಮೇರಿ (59) ಅವರ ಮೃತದೇಹ ಮಾರ್ಚ್ 9ರಂದು ಬಾಗಲೂರಿನ ಹೊಸೂರು ಬಂಡೆ ಬಳಿ ಪತ್ತೆಯಾಗಿತ್ತು. ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ವಿವಿಧ ಆಯಾಮಗಳಲ್ಲಿ ತನಿಖೆ ನಡೆಸಿ, ಆರೋಪಿ ಲಕ್ಷ್ಮಣ್ ಅವರನ್ನು ಬಂಧಿಸಿದ್ದಾರೆ.

'ಮೇರಿ ಮತ್ತು ಲಕ್ಷ್ಮಣ್ ಒಂದೇ ಪ್ರದೇಶದಲ್ಲಿ ವಾಸವಿದ್ದರು. ವಾಟರ್ ಮೆನ್ ಹಾಗೂ ಆಟೊ ಚಾಲಕನಾಗಿದ್ದ ಲಕ್ಷ್ಮಣ್, ಮೇರಿ ಮನೆಯಲ್ಲಿಯೂ ಕೆಲಸ ಮಾಡಿದ್ದರಿಂದ ಸಹಜವಾಗಿಯೇ ಪರಿಚಯವಿತ್ತು. ₹2 ಲಕ್ಷ ಸಾಲ ಮಾಡಿಕೊಂಡಿದ್ದ ಆರೋಪಿ, ಮೇರಿ ಧರಿಸಿದ್ದ 50 ಗ್ರಾಂ ಚಿನ್ನಾಭರಣಗಳ ಆಸೆಗೆ ನವೆಂಬರ್ 26ರಂದು ಕೊಲೆ ಮಾಡಿ, ಆಟೊದಲ್ಲಿ ಮೃತದೇಹ ಕೊಂಡೊಯ್ದು ಬಾಗಲೂರು ಸಮೀಪದ ಹೊಸೂರು ಬಂಡೆಯ ಕಸ ಡಂಪಿಂಗ್ ಯಾರ್ಡ್‌ನಲ್ಲಿ ಎಸೆದು ಬಂದಿದ್ದ. ಬಳಿಕ ನಾಪತ್ತೆಯಾಗಿದ್ದ' ಎಂದು ಪೊಲೀಸರು ಹೇಳಿದರು.

'ಬಳಿಕ ಮೇರಿಯ ಮೊಬೈಲ್ ಆನ್ ಮಾಡಿ ಕಸ ಸಂಗ್ರಹಿಸುವ ಆಟೊವೊಂದರಲ್ಲಿ ಎಸೆದಿದ್ದ. ತಾನು ಬಳಸುತ್ತಿದ್ದ ನಾಲ್ಕು ಸಿಮ್ ಕಾರ್ಡ್‌ಗಳ ಪೈಕಿ ಮೂರು ಸಿಮ್ ಕಾರ್ಡ್‌ಗಳಿದ್ದ ಫೋನ್‌ಗಳನ್ನು ಡಿ.ಜೆ ಹಳ್ಳಿಯ ತನ್ನ ಪತ್ನಿಯ ಮನೆಯಲ್ಲಿಟ್ಟಿದ್ದ. ತನಿಖೆ ಆರಂಭಿಸಿದ್ದ ಪೊಲೀಸರು, ಮಹಿಳೆಗೆ ಪರಿಚಯದಲ್ಲಿದ್ದ ಲಕ್ಷ್ಮಣ್‌ನ ಫೋನ್ ಕರೆ ವಿವರಗಳು, ಟವರ್ ಲೊಕೇಷನ್ ಪರಿಶೀಲಿಸಿದ್ದಾಗ ಶಂಕೆ ಮೂಡಿರಲಿಲ್ಲ. ಇತ್ತೀಚೆಗೆ ಸ್ನೇಹಿತೆ ಜೊತೆಗೆ ಮಾತನಾಡಲು ಕರೆ ಮಾಡಿದಾಗ ಲಕ್ಷ್ಮಣ್‌ನ ಮತ್ತೊಂದು ಸಿಮ್ ಕಾರ್ಡ್ ಸಕ್ರಿಯವಾಗಿತ್ತು. ಆತನ ಪತ್ತೆ ಹಚ್ಚಿ, ವಿಚಾರಿಸಿದಾಗ ಕೊಲೆಯ ವಿಚಾರ ಗೊತ್ತಾಗಿದೆ' ಎಂದು ತಿಳಿಸಿದರು.

'ಚಿನ್ನದ ಆಭರಣಕ್ಕಾಗಿ ಕೊಲೆ ಮಾಡಿರುವುದಾಗಿ ಆರೋಪಿ ತಪ್ಪೊಪ್ಪಿ ಕೊಂಡಿದ್ದಾನೆ' ಎಂದು ಬೆಂಗಳೂರು ಪೂರ್ವ ವಲಯದ ಜಂಟಿ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಹೇಳಿದರು.

ವೈದ್ಯಕೀಯ ಚಿಕಿತ್ಸೆಗೆ ಚಿನ್ನಾಭರಣ ಕಳವು

ಬೆಂಗಳೂರು: ವೈದ್ಯಕೀಯ ಚಿಕಿತ್ಸೆಗಾಗಿ ಗ್ರಾಹಕರ ಸೋಗಿನಲ್ಲಿ ಆಭರಣ ಪ್ರದರ್ಶನ ಮೇಳದಲ್ಲಿ ಚಿನ್ನಾಭರಣಗಳನ್ನು ಕಳವು ಮಾಡುತ್ತಿದ್ದ ನಿವೃತ್ತ ಶಿಕ್ಷಕಿಯನ್ನು ಸುಬ್ರಹ್ಮಣ್ಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮೈಸೂರಿನ ಉದಯಗಿರಿ ನಿವಾಸಿ ಜಹೀರಾ ಫಾತೀಮಾ (64) ಅವರನ್ನು ಬಂಧಿಸಿ, ₹ 8 ಲಕ್ಷ ಮೌಲ್ಯದ 78 ಗ್ರಾಂ ಚಿನ್ನಾಭರಣ ಮತ್ತು 12 ಗ್ರಾಂನ ವಜ್ರದ ಬ್ರೇಸ್‌ಲೆಟ್ ವಶಕ್ಕೆ ಪಡೆಯಲಾಗಿದೆ. ಜನವರಿ 17 ರಂದು ರಾಜಾಜಿನಗರದ ರಾಜ್‌ಕುಮಾರ್ ರಸ್ತೆಯಲ್ಲಿರುವ ಹೋಟೆಲ್‌ನಲ್ಲಿ ನಡೆದಿದ್ದ ಆಭರಣ ಪ್ರದರ್ಶನದಲ್ಲಿ ₹4.75 ಲಕ್ಷ ಮೌಲ್ಯದ ವಜ್ರದ ಬ್ರೇಸ್‌ಲೆಟ್ ಮತ್ತು 59 ಗ್ರಾಂ ತೂಕದ ಚಿನ್ನದ ಬಳೆಗಳನ್ನು ಕಳವು ಮಾಡಿದ್ದರು ಎಂದು ನಗರ ಪೊಲೀಸ್ ಕಮಿಷನರ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಜಹೀರಾ ಸ್ನಾತಕೋತ್ತರ ಪದವೀಧರೆ. ಮದುವೆಯಾದ ಎರಡನೇ ವರ್ಷಕ್ಕೆ ಪತಿ ಮೃತ ಪಟ್ಟಿದ್ದರು. ಹಾಗಾಗಿ ಮಾನಸಿಕ ಖಿನ್ನತೆಗೊಳಗಾಗಿದ್ದರು. ಬಳಿಕ ಚೇತರಿಸಿಕೊಂಡು ದುಬೈ ಹಾಗೂ ಇತರೆ ದೇಶಗಳಲ್ಲಿ ಶಿಕ್ಷಕಿಯಾಗಿ ಕೆಲಸ ಆರಂಭಿಸಿದ್ದರು. ಕೋವಿಡ್ ವೇಳೆ ತವರಿಗೆ ಮರಳಿದ್ದರು. ಈ ಮಧ್ಯೆ ಹೃದಯ ಸಂಬಂಧಿ ಕಾಯಿಲೆಯಿಂದಾಗಿ ಚಿಕಿತ್ಸೆಗೆ ಒಳಗಾಗಿದ್ದು, ಮೂರ್ನಾಲ್ಕು ಬಾರಿ ಸ್ಟಂಟ್ ಅಳವಡಿಸಿಕೊಂಡಿದ್ದರು. ಆರ್ಥಿಕ ಸಮಸ್ಯೆ ಇದ್ದು, ಆಭರಣ ಕಳವು ಮಾಡಿ ಚಿಕಿತ್ಸಾ ವೆಚ್ಚ ಭರಿಸಿಕೊಳ್ಳುತ್ತಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

'ಆಭರಣ ಪ್ರದರ್ಶನಗಳ ಬಗ್ಗೆ ಫೇಸ್‌ಬುಕ್‌ನಲ್ಲಿ ಜಾಹೀರಾತು ನೋಡಿದ್ದ ಜಹೀರಾ, ಅದರಲ್ಲಿದ್ದ ಅರ್ಜಿ ತುಂಬಿ, ತಮ್ಮ ವಾಟ್ಸ್‌ಆ್ಯಪ್ ನಂಬರ್ ನೋಂದಾಯಿಸುತ್ತಿದ್ದರು. ಬೆಂಗಳೂರು, ಮೈಸೂರು ಸೇರಿ ಎಲ್ಲೆ ಆಭರಣ ಪ್ರದರ್ಶನ ನಡೆದರೂ ವಾಟ್ಸ್‌ಆ್ಯಪ್‌ಗೆ ಸಂದೇಶ ಬರುತ್ತಿತ್ತು. ನಗರದ ಆಭರಣ ಅಂಗಡಿಗಳಿಂದ ರಾಜಾಜಿನಗರದ ಹೋಟೆಲ್‌ವೊಂದರಲ್ಲಿ ಆಯೋಜಿಸಿದ್ದ ಆಭರಣ ಪ್ರದರ್ಶನದಲ್ಲಿ ಗ್ರಾಹಕರ ಸೋಗಿನಲ್ಲಿ ಬಂದಿದ್ದ ಜಹೀರಾ, ಚಿನ್ನಾಭರಣ ಕಳವು ಮಾಡಿ ಪರಾರಿಯಾಗಿದ್ದಳು' ಎಂದು ಪೊಲೀಸರು ತಿಳಿಸಿದರು.


ಟೌನ್‌ಹಾಲ್‌ನಿಂದ ಮೈಸೂರು ರಸ್ತೆಯ ಸಿರ್ಸಿ ವೃತ್ತಕ್ಕೆ ಸಂಪರ್ಕ ಕಲ್ಪಿಸುವ ಮೇಲ್ಸೇತುವೆಯಲ್ಲಿ ಕೆ.ಆರ್.ಮಾರುಕಟ್ಟೆ ಸಮೀಪ ಮೂರ್ನಾಲ್ಕು ದಿನದಿಂದ ತ್ಯಾಜ್ಯ ತುಂಬಿಕೊಂಡಿದೆ. ಕಸ ಗುಡಿಸುವ ಯಂತ್ರ ಕಾರ್ಯಾಚರಣೆ ಮಾಡುತ್ತಿದೆ ಎಂದು ಬಿಬಿಎಂಪಿ ಹೇಳುತ್ತಿದ್ದರೂ, ಮೇಲ್ಸೇತುವೆ ಬದಿಯಲ್ಲಿ ತ್ಯಾಜ್ಯ ತುಂಬಿರುವುದು ಮಂಗಳವಾರ ಮಧ್ಯಾಹ್ನ ಕಂಡುಬಂದಿತು

ಮಕ್ಕಳೊಂದಿಗೆ ಮಹಿಳೆ ಆತ್ಮಹತ್ಯೆ

ವಡಗೇರಾ: ಕೌಟುಂಬಿಕ ಕಲಹದಿಂದ ನೊಂದ ಮಹಿಳೆ ತಾಲ್ಲೂಕಿನ ಕಂಠಿ ತಾಂಡಾದಲ್ಲಿ ಮಂಗಳವಾರ ಇಬ್ಬರು ಮಕ್ಕಳೊಂದಿಗೆ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ನೀಲಾಬಾಯಿ ಶಂಕರ್ (35), ಪುತ್ರಿಯರಾದ ರಾಜೇಶ್ವರಿ ಶಂಕರ್ (10), ನಿಶಾ ಶಂಕರ್ (4) ಮೃತಪಟ್ಟಿದ್ದಾರೆ ಎಂದು ಮೂಲಗಳು ತಿಳಿಸಿವೆ.

ನೀಲಾಬಾಯಿಗೆ ನಾಲ್ವರು ಪುತ್ರಿಯರು ಸೇರಿ ಐವರು ಮಕ್ಕಳಿ ದ್ದರು. ಬೇಬಿ (12 ವರ್ಷ) ಹಾಗೂ 11 ತಿಂಗಳ ಗಂಡು ಮಗು ಶೇವಾನನ್ನು ಮನೆಯಲ್ಲಿ ಬಿಟ್ಟುಹೋಗಿದ್ದಾರೆ. ಮೊದಲು ಇಬ್ಬರು ಹೆಣ್ಣು ಮಕ್ಕಳನ್ನು ಬಾವಿಗೆ ನೂಕಿದ್ದಾರೆ. ಮತ್ತೊಬ್ಬ ಮಗಳು ಸಂಜು (6) ತಪ್ಪಿಸಿಕೊಂಡು ಬಂದು ತಾಂಡಾದಲ್ಲಿ ವಿಷಯ ತಿಳಿಸಿದ್ದಾಳೆ. ನಿವಾಸಿಗಳು ಬಾವಿ ಬಳಿ ಬರುವಷ್ಟ ರಲ್ಲಿ ಮೂವರು ಮೃತಪಟ್ಟಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಗುತ್ತಿಗೆದಾರರ ₹32 ಸಾವಿರ ಕೋಟಿ ಬಾಕಿ

ಸರ್ಕಾರದ ವಿರುದ್ಧ ರಾಜ್ಯ ಗುತ್ತಿಗೆದಾರರ ಸಂಘ ಆರೋಪ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಕಾಮಗಾರಿ ನಿರ್ವಹಿಸಿದ ಗುತ್ತಿಗೆದಾರರಿಗೆ ರಾಜ್ಯ ಸರ್ಕಾರ ಒಟ್ಟು ₹32 ಸಾವಿರ ಕೋಟಿ ಬಾಕಿ ಉಳಿಸಿಕೊಂಡಿದೆ ಎಂದು ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘದ ರಾಜ್ಯ ಅಧ್ಯಕ್ಷ ಆರ್. ಮಂಜುನಾಥ ತಿಳಿಸಿದ್ದಾರೆ.

ಪಟ್ಟಣದಲ್ಲಿ ಮಂಗಳವಾರ ನಡೆದ ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲಾ ಗುತ್ತಿಗೆದಾರರ ಕುಂದುಕೊರತೆ ಸಭೆಯಲ್ಲಿ ಅವರು ಈ ವಿಷಯ ತಿಳಿಸಿದರು.

ಈಗಾಗಲೇ ಸರ್ಕಾರ ಹಂತ, ಹಂತವಾಗಿ ಹಣ ಬಿಡುಗಡೆ ಮಾಡುವ ಭರವಸೆ ನೀಡಿದೆ. ಆದರೂ, ಗುತ್ತಿಗೆ ದಾರರಿಗೆ ಬರಬೇಕಿರುವ ಬಾಕಿ ಹಣವನ್ನು ಬೇಗ ಬಿಡುಗಡೆ ಮಾಡುವಂತೆ ಮುಖ್ಯಮಂತ್ರಿಯನ್ನು ಖುದ್ದಾಗಿ ಭೇಟಿ ಮಾಡಿ ಮನವಿ ಮಾಡುತ್ತೇವೆ ಎಂದು ಹೇಳಿದರು.



ದೇವನಹಳ್ಳಿಯಲ್ಲಿ ನಡೆದ ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲಾ ಗುತ್ತಿಗೆದಾರರ ಸಂಘದ ಸಭೆಯಲ್ಲಿ ರಾಜ್ಯ ಘಟಕದ ಅಧ್ಯಕ್ಷ ಆರ್. ಮಂಜುನಾಥ್ ಮಾತನಾಡಿದರು

ಗುತ್ತಿಗೆದಾರರು ರಾಜಕೀಯ ಮೇಲಾಟಕ್ಕೆ ಬಲಿಯಾಗಬಾರದು. ಜಾತಿ, ಧರ್ಮ, ರಾಜಕೀಯ ಪಕ್ಷ ಎಂಬ ಭೇದಭಾವದಲ್ಲಿ ಗುತ್ತಿಗೆದಾರರು ಹರಿದು ಹಂಚಿ ಹೋಗಬಾರದು. ಹೊಸದಾಗಿ ಗುತ್ತಿಗೆ ಪರವಾನಗಿ ಪಡೆದು ಬರುವ ಯುವ ಗುತ್ತಿಗೆದಾರರು ತೊಂದರೆ ಅನುಭವಿಸುತ್ತಿದ್ದಾರೆ. ಒಡಕು ಇಲ್ಲದಂತೆ ಎಲ್ಲರೂ ಒಟ್ಟಾಗಿ ಹೋಗೋಣ ಎಂದು ಮಂಜುನಾಥ ಕೋರಿದರು.

ಗುತ್ತಿಗೆದಾರರ ಸಂಘದ ರಾಜ್ಯ ಸಮಿತಿ ಸದಸ್ಯ ಲಕ್ಷ್ಮಿಪತಿ, ಉಮೇಶ್, ಹನುಮಂತಪ್ಪ, ತಾಲ್ಲೂಕು ಅಧ್ಯಕ್ಷ ಸುಬ್ರಮಣಿ, ಸಿದ್ದಪ್ಪ, ಶಿಡ್ಲಘಟ್ಟದ ಮಂಜುನಾಥ್, ಯಲಿಯೂರು ಚಿಕ್ಕಣ್ಣ ಇದ್ದರು.

ಎರಡು ಬೈಕ್‌ಗಳಿಗೆ ಬಸ್ ಡಿಕ್ಕಿ: ಐವರ ಸಾವು

ಪ್ರಜಾವಾಣಿ ವಾರ್ತೆ

ರಾಯಚೂರು: ಆಂಧ್ರ ಪ್ರದೇಶದ ಕರ್ನೂಲ್ ಜಿಲ್ಲೆಯ ಆದೋನಿ ತಾಲ್ಲೂಕಿನ ಪಾಂಡವಗಲ್ ಗ್ರಾಮದ ಬಳಿ ಮಂಗಳವಾರ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಬಸ್ ಎರಡು ಬೈಕ್‌ಗಳಿಗೆ ಡಿಕ್ಕಿ ಹೊಡೆದ ಪರಿಣಾಮ ರಾಯಚೂರು ಜಿಲ್ಲೆಯ ಐವರು ಮೃತಪಟ್ಟಿದ್ದಾರೆ.

ಗಂಗಾವತಿಯಿಂದ ಮಂತ್ರಾಲಯಕ್ಕೆ ಹೊರಟಿದ್ದ ಬಸ್ ಹಿಂದಿನಿಂದ ಎರಡು ಬೈಕ್ ಗಳಿಗೆ ಡಿಕ್ಕಿ ಹೊಡೆದಿದೆ. ನಾಲ್ವರು ಸ್ಥಳದಲ್ಲೇ, ಒಬ್ಬರು ಆಸ್ಪತ್ರೆಯಲ್ಲಿ ಮೃತಪಟ್ಟರು.

ಮಾನ್ವಿ ಪೊಲೀಸ್ ಠಾಣೆಯ ಗೃಹರಕ್ಷಕ ದಳದ ಸಿಬ್ಬಂದಿ ಹೇಮಾದ್ರಿ (55), ಪತ್ನಿ ನಾಗರತ್ನಮ್ಮ(48), ಪುತ್ರ ದೇವರಾಜು (25) ಮೃತಪಟ್ಟಿದ್ದಾರೆ.

ಇನ್ನೊಂದು ಬೈಕ್‌ನಲ್ಲಿದ್ದ ಆದೋನಿ ಮಂಡಲದ ಕುಪ್ಪಗಲು ಗ್ರಾಮದ ಈರಣ್ಣ, ಪತ್ನಿ ಆದಿಲಕ್ಷ್ಮಿ ಮೃತಪಟ್ಟವರು.

ಹೆಜ್ಜೇನು ದಾಳಿ


ದೊಡ್ಡಬಳ್ಳಾಪುರ: ನಗರದ ಚಿಕ್ಕಬಳ್ಳಾ ಪುರ ರಸ್ತೆಯಲ್ಲಿನ ಸರ್ಕಾರಿ ಆಸ್ಪತ್ರೆ ಸಮೀಪ ಜನರ ಮೇಲೆ ಮಂಗಳವಾರ ಹೆಜ್ಜೇನು ನೊಣಗಳು ದಾಳಿ ನಡೆಸಿವೆ.

ಗಾಯಗೊಂಡ ಮೂವರನ್ನು ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಪೈಕಿ ಒಬ್ಬರ ಸ್ಥಿತಿ ಗಂಭೀರವಾಗಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಆಸ್ಪತ್ರೆಗೆ ಕಳುಹಿಸಲಾಗಿದೆ.

ಹೆಜ್ಜೇನು ದಾಳಿಯಿಂದಾಗಿ ರಸ್ತೆಯಲ್ಲಿ ಸಂಚರಿಸುತ್ತಿದ್ದ ಜನರು ದಿಕ್ಕಾಪಾಲಾಗಿ ಓಡಿದರು.

ಬೆಂಗಳೂರಿಗೆ ವಕ್ಕರಿಸಿದ ಘಜ್ನಿ–ಘೋರಿ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ


ಕುಮಾರಸ್ವಾಮಿ

ಬೆಂಗಳೂರು: 'ಸಂಪದ್ಭರಿತ ಭಾರತವನ್ನು ಮೊಹಮದ್ ಘಜ್ನಿ ಮತ್ತು ಮೊಹಮದ್ ಘೋರಿ ಲೂಟಿ ಮಾಡಿದರು. ಬೆಂಗಳೂರಿಗೆ ಈಗೊಬ್ಬ ಘಜ್ನಿ–ಘೋರಿ ವಕ್ಕರಿಸಿದ್ದು, ನಗರದ ಸಂಪತ್ತಿನ ಲೂಟಿಗೆ 7 ದಾರಿ ಹುಡುಕುತ್ತಿ ದ್ದಾನೆ' ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಕಿಡಿಕಾರಿದ್ದಾರೆ.

ಬಿಬಿಎಂಪಿಯನ್ನು ಏಳು ಭಾಗಗಳಾಗಿ ವಿಂಗಡಿಸುವ ರಾಜ್ಯ ಸರ್ಕಾರದ ಪ್ರಸ್ತಾವದ ಬಗ್ಗೆ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಅವರು, 'ಒಡೆದಾಳುವುದರಲ್ಲಿ ಕಾಂಗ್ರೆಸ್ಸಿಗೆ ಕಾಂಗ್ರೆಸ್ಸೇ ಸಾಟಿ. 75 ವರ್ಷದಿಂದ ಇದನ್ನೇ ಮಾಡಿದ್ದು, ಈಗಲೂ ಮುಂದುವರಿಸಿದೆ. ಒಡೆದು ಆಳುವುದೇ ಕಾಂಗ್ರೆಸ್‌ನ ನೀತಿ. ಅಂದು ಅಖಂಡ ಭಾರತವನ್ನು ಹೋಳು ಮಾಡಿತು. ಇಂದು ಬಿಬಿಎಂಪಿಯನ್ನು ಹೋಳು ಮಾಡುತ್ತಿದೆ' ಎಂದಿದ್ದಾರೆ.

'ಬಿಬಿಎಂಪಿ ವಿಭಜನೆಯು ಅಧಿಕಾರ ಮತ್ತು ಅಭಿವೃದ್ಧಿಯ ವಿಕೇಂದ್ರೀಕರಣವಲ್ಲ. ಬದಲಿಗೆ ಇದು ಲೂಟಿಯ ವಿಕೇಂದ್ರೀಕರಣ' ಎಂದಿದ್ದಾರೆ.

'ಕಪ್ಪಡಿ ಜಾತ್ರೆ; ಪ್ರಾಣಿ ಬಲಿ ಬೇಡ'

ಪ್ರಜಾವಾಣಿ ವಾರ್ತೆ

ಮೈಸೂರು: ಕೆ.ಆರ್.ನಗರ ತಾಲ್ಲೂಕಿನ ಕಪ್ಪಡಿಯಲ್ಲಿ ಯುಗಾದಿ ಹಬ್ಬದವರೆಗೆ ನಡೆಯುವ ರಾಚಪ್ಪಾಜಿ ಜಾತ್ರೆಯಲ್ಲಿ ದೇವರು, ಧರ್ಮದ ಹೆಸರಿನಲ್ಲಿ ಆಡು, ಕುರಿ, ಕೋಳಿ ಬಲಿ ನೀಡುವುದನ್ನು ಜಿಲ್ಲಾಡಳಿತ, ಪೊಲೀಸ್ ಇಲಾಖೆ ತಡೆಯಬೇಕು' ಎಂದು ವಿಶ್ವಪ್ರಾಣಿ ಕಲ್ಯಾಣ ಮಂಡಳಿ ಅಧ್ಯಕ್ಷ ದಯಾನಂದ ಸ್ವಾಮೀಜಿ ಮನವಿ ಮಾಡಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಭಕ್ತಾದಿಗಳು ಪ್ರಾಣಿ ಬಲಿ ತ್ಯಜಿಸಿ ಅಹಿಂಸಾತ್ಮಕವಾಗಿ ಸಾತ್ವಿಕ ಪೂಜೆ ಸಲ್ಲಿಸಬೇಕು' ಎಂದರು.

ಪ್ರಾಣಿ ಬಲಿ ನಿಷೇಧ: ರಾಚಪ್ಪಾಜಿ ಜಾತ್ರಾ ಮಹೋತ್ಸವದಲ್ಲಿ ಪ್ರಾಣಿ ಬಲಿ ನೀಡುವುದು ಕಾನೂನಿಗೆ ವಿರುದ್ಧವಾಗಿದೆ. ಮಾರ್ಚ್ 25ರವರೆಗೆ ದೇವಸ್ಥಾನದ ಸುತ್ತಮುತ್ತ ಪ್ರಾಣಿ, ಪಕ್ಷಿ ಬಲಿ ನೀಡುವುದನ್ನು ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಆದೇಶಿಸಿದ್ದಾರೆ.

ಬಿಬಿಎಂಪಿ: ಶಾಲೆಯಿಂದ ಹೊರಗುಳಿದ 6,936 ಮಕ್ಕಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಶಾಲೆಯಿಂದ ಹೊರಗುಳಿದವರನ್ನು ಗುರುತಿಸಲು ಸಮೀಕ್ಷೆ ನಡೆದಿದ್ದು, 6,936 ಮಕ್ಕಳು ಶಾಲೆಯಿಂದ ಹೊರಗಿದ್ದಾರೆ ಎಂದು ಗುರುತಿಸಲಾಗಿದೆ.

‘ಈವರೆಗೆ 1,08,203 ಮಕ್ಕಳ ಸರ್ವೆ ನಡೆದಿದೆ. ಈ ಪೈಕಿ 6,936 ಮಕ್ಕಳು ಶಾಲೆಯಿಂದ ಹೊರಗುಳಿದಿರುವುದು ಗೊತ್ತಾಗಿದೆ’ ಎಂದು ಶಿಕ್ಷಣ ವಿಭಾಗದ ವಿಶೇಷ ಆಯುಕ್ತೆ ಪ್ರೀತಿ ಗೆಹ್ಲೋಟ್ ತಿಳಿಸಿದರು.

ಸಮೀಕ್ಷಾ ಕಾರ್ಯಕ್ಕೆ ಬಿಬಿಎಂಪಿಯ ಎಂಟು ವಲಯಗಳ ಜಂಟಿ ಆಯುಕ್ತರನ್ನು ನೋಡಲ್ ಅಧಿಕಾರಿಗಳಾಗಿ ನಿಯೋಜಿಸಲಾಗಿದೆ. ಜೊತೆಗೆ, ವಾರ್ಡ್‌ವಾರು ಸಿಬ್ಬಂದಿ ನಿಯೋಜಿಸಿ ಸಮೀಕ್ಷೆ ನಡೆಸಲಾಗುತ್ತಿದೆ ಎಂದರು.

ಸಂವಿಧಾನದ ಕಲಂ 21(ಎ) ಪ್ರಕಾರ, 6 ವರ್ಷದಿಂದ 14 ವರ್ಷದೊಳಗಿನ ಪ್ರತಿ ಮಗು, ಎಂಟು ವರ್ಷ ಶಾಲಾ ಶಿಕ್ಷಣವನ್ನು ಪಡೆಯುವುದು ಮೂಲಭೂತ ಹಕ್ಕಾಗಿರುತ್ತದೆ. ‘ಕರ್ನಾಟಕ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ನಿಯಮಗಳು, 2012’ರಂತೆ ಸ್ಥಳೀಯ ಸಂಸ್ಥೆಗಳು ಶಾಲೆಯಿಂದ ಹೊರಗುಳಿದ ಮಕ್ಕಳ ಶೈಕ್ಷಣಿಕ ದಾಖಲಾತಿ ನಿರ್ವಹಿಸಬೇಕಾಗಿದೆ. ಅಲ್ಲದೆ, ಕರ್ನಾಟಕ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು (ತಿದ್ದುಪಡಿ) ನಿಯಮಗಳು– 2014ರ ಅನ್ವಯ ಮಕ್ಕಳ ಹಾಜರಾತಿಗೆ ಸಂಬಂಧಿಸಿದಂತೆ ಸ್ಥಳೀಯ ಸಂಸ್ಥೆಗಳು ನಿರ್ವಹಿಸಬೇಕಾದ ಜವಾಬ್ದಾರಿಗಳ ಬಗ್ಗೆ ತಿಳಿಸಲಾಗಿದೆ.

6 ವರ್ಷದಿಂದ 18 ವರ್ಷದ ಮಕ್ಕಳ ಸಮೀಕ್ಷೆ (2025ರ ಮಾರ್ಚ್ 10ರವರೆಗೆ)

ವಲಯ	ಗುರುತಿಸಿರುವ ಮಕ್ಕಳು	ಶಾಲೆಯಿಂದ ಹೊರಗುಳಿದಿರುವ ಮಕ್ಕಳು
ಬೊಮ್ಮನಹಳ್ಳಿ	41,604	3,355
ದಾಸರಹಳ್ಳಿ	4,941	358
ಪೂರ್ವ	6,665	526
ಮಹದೇವಪುರ	3,362	568
ರಾಜರಾಜೇಶ್ವರಿನಗರ	5,630	511
ದಕ್ಷಿಣ	32,319	1,054
ಪಶ್ಚಿಮ	9,333	293
ಯಲಹಂಕ	4,349	271
ಒಟ್ಟು	1,08,203	6,936

ಅದರಂತೆ ಸಮೀಕ್ಷಾ ಕಾರ್ಯ ನಡೆಯುತ್ತಿದೆ ಎಂದು ಮಾಹಿತಿ ನೀಡಿದರು. ಹೈಕೋರ್ಟ್ ನಿರ್ದೇಶನದಂತೆ, ಫೆ. 24ರಿಂದ ಶಿಕ್ಷಣ ವಿಭಾಗದ ಹೊಲಿಗೆ ಶಿಕ್ಷಕರು, ಆಶಾ ಕಾರ್ಯಕರ್ತೆಯರು, ಲಿಂಕ್ ವರ್ಕರ್‌ಗಳ ಮೂಲಕ ಮನೆ ಮನೆ ಸಮೀಕ್ಷೆ ನಡೆಸಲಾಗುತ್ತಿದೆ. ಪ್ರತಿ ವಾರ್ಡ್‌ಗೆ ಸುಮಾರು 10 ಗಣತಿದಾರರನ್ನು ನೇಮಿಸಿದೆ. ಸಮೀಕ್ಷೆ ವಿವರ ಆ್ಯಪ್‌ನಲ್ಲಿ ದಾಖಲಿಸಲಾಗುತ್ತಿದೆ ಎಂದರು.

‘ವಾರದಲ್ಲಿ ನೇಮಕಾತಿ ಆದೇಶ ಪತ್ರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಸಿಎಲ್ ನಡೆಸಿದ ಸಹಾಯಕ ಎಂಜಿನಿಯರ್, ಕಿರಿಯ ಎಂಜಿನಿಯರ್ ಕೆಮಿಸ್ಟ್ ಕೆಮಿಕಲ್ ಸೂಪರ್ ವೈಸರ್ ಹುದ್ದೆಗಳ ನೇಮಕಾತಿ ಪರೀಕ್ಷೆಯಲ್ಲಿ ಉತ್ತೀರ್ಣದರಾವರಿಗೆ ವಾರದಲ್ಲಿ ನೇಮಕಾತಿ ಆದೇಶ ಪತ್ರ ನೀಡಲಾಗುವುದೆಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿದ್ದಾರೆ ಎಂದು ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಸಂಘ ತಿಳಿಸಿದೆ.

'ಅಧಿವೇಶನದಲ್ಲಿ ಶಾಸಕ ಶರಣು ಸಲಗರ ಅವರ ಪ್ರಶ್ನೆಗೆ ಉತ್ತರಿಸಿರುವ ಸಚಿವರು, ನೇಮಕಾತಿ ಆದೇಶ ಪತ್ರ ನೀಡುವಂತೆ ಅಗ್ರಹಿಸಿ ಅಭ್ಯರ್ಥಿಗಳು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿರುವುದು ಗಮನಕ್ಕೆ ಬಂದಿದೆ. 2024ರ ಫೆಬ್ರವರಿಯಲ್ಲಿ ಮರು ಪರೀಕ್ಷೆ ನಡೆಸಿ, ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲಾಗಿದೆ. ವಾರದಲ್ಲಿ ಆದೇಶ ಪತ್ರ ನೀಡಲಾಗುವುದು ಎಂದಿದ್ದಾರೆ’ ಎಂದು ಸಂಘದ ಅಧ್ಯಕ್ಷ ಕಾಂತಕುಮಾರ್ ಹೇಳಿದ್ದಾರೆ.

ನಾಲ್ಕು ದಿನಗಳ ಆನೆ ಮರಿ ಸಾವು

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಇಲ್ಲಿನ ಸಕ್ರೆಬೈಲು ಆನೆ ಶಿಬಿರದಲ್ಲಿ ನಾಲ್ಕು ದಿನಗಳ ಹಿಂದಷ್ಟೇ ಜನಿಸಿದ್ದ ಮರಿ ಆನೆಯೊಂದು ತಾಯಿ ಹಾಲುಣಿಸದ ಕಾರಣ ಸೋಮವಾರ ಸಂಜೆ ಮೃತಪಟ್ಟಿದೆ.

11 ವರ್ಷದ ಹೆಣ್ಣಾನೆ ಹೇಮಾವತಿ ಕಳೆದ ಶುಕ್ರವಾರ ಗಂಡು ಮರಿಗೆ ಜನ್ಮ ನೀಡಿತ್ತು. ಆದರೆ ಮರಿಗೆ ಹಾಲುಣಿಸಲು ಮುಂದಾಗಲಿಲ್ಲ. ಸಿಬ್ಬಂದಿ ಬಾಟಲಿಯಲ್ಲಿ ಹಾಲು ಹಾಕಿ ಕುಡಿಸಿದರೂ ಪ್ರಯೋಜನವಾಗಲಿಲ್ಲ. ಬಿಸಿಲ ಝಳದಿಂದಲೂ ಬಸವಳಿದಿದ್ದ ಮರಿ ಸಾವಿಗೀಡಾಗಿದೆ ಎಂದು ಶಿವಮೊಗ್ಗ ವನ್ಯಜೀವಿ ವಿಭಾಗದ ಡಿಸಿಎಫ್ ಪ್ರಸನ್ನ ಪಟಗಾರ ‘ಪ್ರಜಾವಾಣಿ’ಗೆ ತಿಳಿಸಿದರು.

‘ಮರಣೋತ್ತರ ಪರೀಕ್ಷೆ ನಂತರ ದೇಹದ ಕೆಲವು ಸ್ಯಾಂಪಲ್ ಸಂಗ್ರಹಿಸಿ ಪರೀಕ್ಷೆಗೆ ಕಳುಹಿಸಿದ್ದೇವೆ. ವರದಿ ನಂತರ ಸಾವಿಗೆ ನಿಖರ ಕಾರಣ ತಿಳಿಯಲಿದೆ ಎಂದರು.

ಹೆಣ್ಣಾನೆಗಳು 15 ವರ್ಷದ ನಂತರ ಮರಿ ಹಾಕುತ್ತವೆ. ಹೇಮಾವತಿ 11ನೇ ವರ್ಷಕ್ಕೆ ಮರಿ ಹಾಕಿದೆ. ಹೀಗಾಗಿ ಮರಿಗೆ ಹಾಲುಣಿಸುವ ವಿಚಾರದಲ್ಲಿ ತಾಯ್ತನ ಮೆರೆಯಲು ಅದಕ್ಕೆ ಸಾಧ್ಯವಾಗದಿರಬಹುದು ಎಂದು ಸಿಬ್ಬಂದಿ ಹೇಳಿದರು.

ನಗರದಲ್ಲಿ ಇಂದು

‘ದೃಶ್ಯೋತ್ಸವ’ ರಾಜ್ಯಮಟ್ಟದ ಕಿರುಚಿತ್ರ ಸ್ಪರ್ಧೆ: ಅತಿಥಿಗಳು: ಜಯತೀರ್ಥ, ಪ್ರಭು ಮುಂಡ್ಕೂರು, ಸುಧಾಕರ್ ಗೌಡ, ಕೀರ್ತನ್ ಕುಮಾರ್ ಮಂಜಪ್ಪ, ಆಯೋಜನೆ ಮತ್ತು ಸ್ಥಳ: ಸೌಂದರ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಆ್ಯಂಡ್ ಸೈನ್ಸಸ್, ಸೌಂದರ್ಯನಗರ, ಸಿಡೇದಹಳ್ಳಿ, ಬೆಳಿಗ್ಗೆ 9.30

ಹರಿದಾಸವಾಣಿ: ಉದ್ಘಾಟನೆ: ಎಲ್.ಕೃಷ್ಣಮೂರ್ತಿ, ಅತಿಥಿಗಳು: ಹೇಮಲತಾ, ಬಿ.ಸಿ. ಸುಭಾಷ್‌ಚಂದ್ರ, ಬಿ.ವಿ. ತೇಜಮೂರ್ತಿ, ಆರ್. ರವಿ, ಆಯೋಜನೆ: ಗಾಯತ್ರಿ ಸೊಶಿಯಲ್ ಟ್ರಸ್ಟ್, ಸ್ಥಳ: ಸೋಮೇಶ್ವರಪುರ ವೆಲ್ಫೇರ್ ಅಸೋಸಿಯೇಷನ್, ಹಲಸೂರು, ಬೆಳಿಗ್ಗೆ 10

‘ಭಾರತೀಯ ಆರ್ಥಿಕತೆಗೆ ಮಹಿಳೆಯರ ಕೊಡುಗೆ’ ಸಂವಾದ: ಅತಿಥಿ: ಜಯಕರ ಶೆಟ್ಟಿ ಎಂ., ಭಾಗವಹಿಸುವವರು: ಸುದೇಶನಾ ಮುಖರ್ಜಿ, ಸ್ವಾತಿ ಕಾಮತ್ ಪಾಂಡುರಂಗ, ರಮಾದೇವಿ, ಸಂಜ್ಯೋತಿ, ನಿರ್ವಹಣೆ ಮಾಡುವವರು: ಗೀತಾ ಎಂ.ರಾಜಾರಾಮ್, ಆಯೋಜನೆ ಮತ್ತು ಸ್ಥಳ: ಗ್ಲೋಬಲ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸಸ್, ರಾಜರಾಜೇಶ್ವರಿನಗರ, ಬೆಳಿಗ್ಗೆ 10.30

ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ: ಉದ್ಘಾಟನೆ: ಸಿದ್ದರಾಮಯ್ಯ, ಸಾನ್ನಿಧ್ಯ: ರೇಣುಕಾ ಶಿವಾಚಾರ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶಿವರಾಜ ತಂಗಡಗಿ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 11ರಿಂದ

‘ಶಾಂತವೇರಿ ಗೋಪಾಲಗೌಡ’ ಪ್ರಶಸ್ತಿ ಪ್ರದಾನ: ಬಸವರಾಜ ಹೊರಟ್ಟಿ, ಪ್ರಶಸ್ತಿ ಸ್ವೀಕರಿಸುವವರು: ಕಾಳೇಗೌಡ ನಾಗವಾರ, ಅಧ್ಯಕ್ಷತೆ: ಎಲ್.ಎನ್. ಮುಕುಂದರಾಜ್, ಅತಿಥಿ: ಬಿ. ಕೃಷ್ಣಪ್ಪ, ಉಪಸ್ಥಿತಿ: ಪಿ. ಮಲ್ಲಿಕಾರ್ಜುನಪ್ಪ, ಪ್ರಾಸ್ತಾವಿಕ ನುಡಿ: ಸಿ.ಕೆ. ರಾಮೇಗೌಡ, ಅಯೋಜನೆ: ಕನ್ನಡ ಜನಶಕ್ತಿ ಕೇಂದ್ರ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5



ಕಾಳೇಗೌಡ ನಾಗವಾರ

ಸಂಸ್ಥಾಪನಾ ದಿನ ನಿಮಿತ್ತ ‘ನವದೆಹಲಿಯ ರಾಷ್ಟ್ರೀಯ ವಸ್ತು ಸಂಗ್ರಹಾಲಯದಲ್ಲಿರುವ ಭೂವರ್ಣ ಚಿತ್ರಗಳು’ ಕುರಿತು ಉಪನ್ಯಾಸ: ನೊಬುಯೊಶಿ ಯಮಬೆ, ಆಯೋಜನೆ ಮತ್ತು ಸ್ಥಳ: ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಾದೇಶಿಕ ಕೇಂದ್ರ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5

‘ರಾಜಲಕ್ಷ್ಮಿ ಬರಗೂರು’ ಪ್ರಶಸ್ತಿ ಪ್ರದಾನ: ಸಬಿಹಾ ಭೂಮಿಗೌಡ, ಪ್ರಶಸ್ತಿ ಸ್ವೀಕರಿಸುವವರು: ಗಿರಿಜಾ ಲೋಕೇಶ್, ಎನ್. ಗಾಯತ್ರಿ, ಉಪಸ್ಥಿತಿ: ಶ್ರೀನಿವಾಸ್, ಅಧ್ಯಕ್ಷತೆ: ಸುಂದರರಾಜ್, ಆಯೋಜನೆ: ನಾಡೋಜ ಡಾ. ಬರಗೂರು ಪ್ರತಿಷ್ಠಾನ, ಸ್ಥಳ: ಬಾಪೂಜಿ ಸಭಾಂಗಣ, ಸರ್ಕಾರಿ ಕಲಾ ಕಾಲೇಜು, ಸಂಜೆ 5



ಗಿರಿಜಾ ಲೋಕೇಶ್

ರಂಗ ಯುಗಾದಿ: ಉದ್ಘಾಟನೆ: ಕೆ.ವಿ. ನಾಗರಾಜಮೂರ್ತಿ, ಅತಿಥಿಗಳು: ಶ್ರೀನಿವಾಸ, ಕೆ.ವೈ. ನಾರಾಯಣಸ್ವಾಮಿ, ‘ಧರ್ಮ ನಟಿ’ ನಾಟಕ ಪ್ರದರ್ಶನ: ನಿರ್ದೇಶನ: ಆಸಿಫ್ ಕ್ಷತ್ರಿಯ, ಶ್ವೇತಾ ಶ್ರೀನಿವಾಸ್, ತಂಡ: ರಂಗರಥ, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಸಂಜೆ 6.30

‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Wanted

SURIE POLEX
URGENT REQUIREMENT
OFFICE ASSISTANCE (Female)
Good Communication Skill & Basic Computer Knowledge
M/s SURIE POLEX INDUSTRIES Pvt. Ltd
17/40, 6th Cross, B.G. Road, B'lore-30
Mob: 93419 69809

Engg/ Production Technical

WE REQUIRE below candidates For our special pumps & Motor Manufacturing Unit at Devarachikkanahalli, Bannergatta Road, Bangalore. Email: flowoilpumps@hotmail.com
1.Purchase Executive with experience,
2.Marketing Executive,
3.ITI/Diploma Engineers.

Teachers/ Professors

CAMLIN HIGH SCHOOL State Board. Nursery to X, 6th 'C' Main, 4th Cross, Near 7th Main Bus Stop Hampinagar Bangalore-560104. Phone: 080-23301363 REQUIRED for TRAINED TEACHERS to Teach English, Kannada, Maths, Hindi, Science, Social Science, Drawing, Physical Education. Apply/ WALK-IN-INTERVIEW 10.a.m. to 2.p.m. with Resume and Latest Passport Size Photo OR send it to our e-mail: camlinschool84@gmail.com

GREEN COUNTRY PUBLIC SCHOOL (ICSE), requires TEACHERS for ENGLISH, HINDI, SOCIAL STUDIES & GEOGRAPHY. Walk in Interview 10.00am to 3.00pm / Apply thro. email : gcps2000@yahoo.co.in, Ph: 9535487053, 9482480397. Add.: KIA Road, Kodigehalli gate, Hebbal, Bangalore-560092.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ST. JOHN'S HIGH SCHOOL
132, St. John's Church Road, Cleveland Town, Bangalore – 560 005
Email : contactus@csistjohnshighschool.edu.in
Website : www.johnshighedu.com :
Phone : 9739116007

REQUIRES

1) ECONOMICS TEACHER	-	HIGH SCHOOL & ISC, M.A., (Economics) B.Ed.
2) ACCOUNTS & COMMERCE TEACHER	-	HIGH SCHOOL & ISC, M.Com., (Accounts & Commerce), B.Ed.,
3) HISTORY TEACHER	-	HIGH SCHOOL, M.A., (History) B.Ed.
4) GEOGRAPHY TEACHER	-	HIGH SCHOOL, M.A./M.Sc. (Geography) B.Ed.,
5) PHYSICS TEACHER	-	HIGH SCHOOL, M.Sc.,(Physics) B.Ed.
6) CHEMISTRY TEACHER	-	HIGH & MIDDLE SCHOOL, M.Sc., (Chemistry) B.Ed.,
7) BIOLOGY TEACHER	-	HIGH SCHOOL, M.Sc., (Biology) B.Ed.,
8) KANNADA TEACHER	-	JUNIOR SCHOOL, B.A., (Kannada) B.Ed.,
9) ART & CRAFT TEACHER	-	JUNIOR SCHOOL, Bachelor of Fine Arts/ Bachelor of Visual Arts
10) P.A. TO PRINCIPAL	-	Graduate with knowledge of computer. Diploma in Secretarial Course
11) OFFICE ASSISTANT	-	ADMIN & CANTEEN, Graduate with knowledge of Computer.
12) NURSE	-	B.Sc., in Nursing/GNM
13) COOK	-	Diploma in Hotel Management

EXPERIENCE : Minimum experience of 5 years. Teachers must have worked in ISC/ICSE/CBSE Institution for a minimum period of five years. The candidates should have studied in an English Medium School. All degrees must be obtained from recognized universities.
The application forms are available in the School Office from 10.03.25 to 25.03.25 from 9.30 a.m to 1.00 p.m. The last date for submission of filled in application forms with relevant documents is 27th March 2025 by 3.00 p.m.

KARNATAKA REDDYJANA SANGHA
Koramangala, Bangalore - 34.
REQUIRES

VEMANA INSTITUTE OF TECHNOLOGY
I) PROFESSORS: CSE -1, ECE -2, ISE-5, AI&ML -1, CIVIL- 1, CSE - Data Science - 1, Physics -1.
II) ASSOCIATE PROFESSORS: Civil - 2.
III) ASSISTANT PROFESSOR: CSE- 3, ISE- 4, ECE-4, Civil-1, AI & ML- 2, DSc-3, Cyber Security-1, Maths - 1, Physics - 1, Chemistry -2.
IV) SYSTEM ANALYST: CSE - 1.
V) LAB INSTRUCTOR : CSE -1, ISE -1, ECE - 1, D.Sc - 1, Chemistry - 1.
VI) PA to Principal - 1.
VII) Assistant Librarian: 2, Library Assistant : 1.
VIII) HOD - Incubation Center - 1.

RJS Institute of Management Studies
I) PRINCIPAL - 1 : Ph.D. with 10+ years of experience.
II) ASST. PROFESSORS - 4 Post (HR-Marketing, Statistics, Business Analytics, English, Kannada)

RJS First Grade College
I) Computer Science Lecturer - 1
II) FDC- University Clerk (Male) -1.
III) Computer Lab Instructor -1
IV) Office Attender - Male -1.

RJS EVENING COLLEGE - Principal -1

RJS PU College, Koramangala
1) Commerce Lecturer -1,
2) Physical Education Director - Female -1.
3) Office Superintendent - 1
4) Librarian - 1, 5) Computer Lab Assistant -1

DBM & RJS Schools
Teachers: English, Hindi, Kannada, Maths, Science/EVS, Social Studies and Physical Education, Art & Craft, Computer Science.
Non-Teaching: Data Entry Operators, Tele Callers

RJS School, Rupenaagarahara.
Teachers : Nursery Teacher, Primary Teacher, Social Science Teacher, Physical Science teacher and Office Superintendent.

KRJS Head Office: Sr. Accountant - 1, Asst. Manager-1.

*** Note: Age limit is below 60 years.
Salary as per KRJS/AICTE norms.
Apply within 07 days to: The General Secretary, KRJS for more details: E-Mail : krjsest1925@gmail.com
website: www.reddyjanasangha.org.
Contact : 9945450345 or 080-25534194

WANTED TEACHERS ICSE CURRICULUM BA MA ENGLISH HINDI, CHEMISTRY BIOLOGY MSc BEd, BCA MCA COMPUTER DATA ASSISTANT. Salary 15,000 to 30,000 Contact- OXFORD PUBLIC SCHOOL Srikantapura, Anchepalya Near Jindal Public School Tumakur Road, Bangalore Mobile: 9620075574, 9945622240

VIDYA SOUDHA GROUP OF INSTITUTIONS
No.9/1, 1st Main Peenya, 1st Stage, Near Basaveshwara Bus Station, Bangalore – 560 058.

WE ARE HIRING

BANGALORE CAMPUS

VIDYA SOUDHA PUBLIC SCHOOL, BANGALORE (ICSE)

Primary Teachers
Subjects: Mathematics, Science, English, Hindi
Qualification: Master / Bachelor's degree in relevant subject with M.Ed/ B.Ed
Experience: Minimum 3 years

Co-Curricular Teachers
Subjects: Yoga/ Meditation, Dance, Music & Counsellor
Qualification: Degree / Diploma in relevant subject
Experience: Minimum 3 Years

Non-Teaching
Position: HR Executive (Female) & Accounts Executive (Male)
Qualification: MSW / MBA / M.Com / B.com
Experience: Minimum 3 Years

VIDYA SOUDHA PU COLLEGE, BANGALORE

Required Lectures As Below
Subjects: Physics-Experience in teaching IIT-JEE, NEET, CET.
Economics, Accountancy / Business Studies, Physical Education Director (Female)
Qualification: Master Degree in relevant subject with B.Ed
Experience: Minimum 5 years
lakshmiprasanna@vidyasoudha.edu.in

VIDYA SOUDHA EVENING DEGREE COLLEGE, BANGALORE

Position: Admin / Marketing Executive
Qualification: Any Degree
Experience: Minimum 3 Years

HASSAN CAMPUS

VIDYA SOUDHA PUBLIC SCHOOL, KIADB (CBSE)

Position: Chief Co-ordinator
Qualification: Master's degree with M.Ed / B.Ed
Experience: Min. 10 years in CBSE Schools & Min. 5 years as Co-ordinator

Primary / High School Teachers
Subjects: Mathematics, Physics, Science, Social Science, English, Kannada, Hindi
Qualification: Master / Bachelor's degree in relevant subject with M.Ed/ B.Ed
Experience: Minimum 3 years

Non-Teaching
Position: Front Office Assistant
Qualification: Any Degree
Experience: Minimum 3 years

VIDYA SOUDHA PUBLIC SCHOOL, VIJAYNAGAR (ICSE)

Primary / High School Teachers
Subjects: Mathematics, Science, Social Science, History Civics, English, Art & Craft
Qualification: Master / Bachelor's degree in relevant subject with M.Ed/ B.Ed
Experience: Minimum 2 Years

VIDYA SOUDHA PU COLLEGE, KIADB

REQUIRED LECTURERS AS BELOW
Subjects: Physics, Mathematics, Biology, Computer Science, Economics, Accountancy / Business Studies
Qualification:
- Master's Degree in relevant subject with B.Ed
- Experience in teaching IIT-JEE, NEET, CET
Experience: Minimum 5 Years

www.vidyasoudha.edu.in 89715 66659 hr@vidyasoudha.edu.in
Please Apply on or before 25th March 2025

ARVIND Residential School & PU College, Kunigal
Ph: 08132-210000/ 01. Mob: 9945210041/ 9483683002. Website: www.arvindinternationalschool.com, www.arvindpucollege.com
REQUIRES DEDICATED & PASSIONATE PROFESSIONALS WITH GOOD COMMUNICATION SKILLS
- PUC LECTURERS (Science & Commerce Stream) Well Experienced NEET & JEE faculties
- CO-ORDINATOR (ICSE/ CBSE)
- Nursery/ Primary/ Middle School/ High school Teachers (ICSE/ CBSE)
- Warden (M/F), Nurse (F), Cooks, PE Teachers

Experienced in all streams with desired qualification
Send your resume with recent passport size photo to airsjobs@gmail.com within 7 days

REQUIRED FEMALE Nursery/Primary Co-ordinator with 5 years Experience and also N.T.T./B.A., M.A./B.Ed/B.Sc., M.Sc./B.Ed. for English, Maths, Science, Hindi & Social Science. Contact Max Muller Public School, Mahalakshmi Layout, B'lore-96. Ph:23376049/50. E.mail- maxmullerpublicschool.mlayout@gmail.com

ORCHIDS The International School
TEACHERS WANTED
Freshers and Experienced Female candidates can only apply
English, Mathematics, Chess, Dance, Music, Theatre, Drawing, Physical Education & Other Subject Teachers
For Walk In, visit Sarjapur Branch & other branches during weekends
Kindly drop your CV to: careers@orchids.edu.in 8888-060-888

WANTED M.SC Nursing, B.Sc`Nursing Teaching Faculties. Contact:`MGP Institutions, Bangalore. Phone: 9886236341, mgp_nc2001@yahoo.com

General

'**LIFE GUARD** Required for Swimming Pool. Please Contact Mobile 8970050795, Jp nagar phase 2

TOURS & TRAVEL

Travel

VISIT BHUTAN, the most Wonderful Country with Expert Guide and Best Arrangements. GANESH SHENOY 8310028157

PUBLIC NOTICE

PUBLIC NOTICE

This is to inform the general public that my client **Mr.B. RAMACHANDRACHAR.** is intending to purchase the below mentioned property from **Mr. GIRIDHAR KATTI.** and others, **(Mr. Srinivas Katti., Mrs. Sharada Kulkarni, Mr. GIRIDHAR KATTI and their children)** the below mentioned property have acquired through a Release deed dated 23.09.2017, registered as Doc No. 05748/2017-18, Stored in CD No.JAYD306, in the office of The Sub-Registrar Jayanagar, Bengaluru, Karnataka.

SCHEDULE PROPERTY

All that piece and parcel of the immovable property being Vacant **Site No. 2144,** formed By BDA, Situated at **3rd Block, Sir M.VISHVESHARAIAH LAYOUT, Bengaluru,** presently Comes under BDA limits, as per tax paid Receipt BDA.Katha PID No. 4312030368, Bengaluru, Measuring East to West 18.00 meters and North to South 12.00 Meters in all measuring **216.00 Sq Meters,** together with all rights, appurtenances whatsoever underneath or above the surface and bounded on the:
East by : B.D.A Property, West by : Road, North by : Site No.2144/1, South by : Site No.2143,
Any person/s having objections or claims, shall with documentary evidence lodge their objection/claim within **Fifteen (15) days** from the date of this Notice with the undersigned failing which my client shall proceed with the above mentioned transaction.

Mr. Dayananda.G.M,
Advocates and Legal consultants,
No. 49, 1st Floor, Opp 12th Cross, Cubbonpet Main Road, Cubbonpet,Bangalore – 560 002.
Call : 99005 77458, 6363532115

PERSONAL

Change of Name

I, MAHESH Mohanam R/o 1045, 19th Main, Btm Layout, 2nd Stage, 1st Phase, Bangalore 560076 have changed my minor son's name from Medhaansh to Medhaansh Mahesh for all purposes.

CHANGE OF NAME
I, **Aditi Mungurwadi,** residing at No.559, Royal Park Residency, Avalahalli, Opp Nandi Garden Apartment, J.P. Nagar, 9th Phase, Anjanapura P.O, Bengaluru-560108, have changed my name to **ADITI V MUNGURWADI** vide affidavit dated 11-03-2025, sworn before Notary Bhagya Kumari N, Bengaluru.

I, ZAINULABEDEEN ABDUL BASHEER, residing at Sira, Tumakuru-572137 have changed my name as ZAINULABEDEEN, vide affidavit dated 10/03/2025 before Notary K.S. Bammappanavar, Bengaluru

CHANGE OF NAME
I, **PRASHANTH RAJ** Residing at # 15, 1st Floor, Sathyamurthy Road, R.S. Palya, Kammanahalli, Bengaluru-33 have changed my name to **B. PRASHANTH RAJ** vide affidavit dated 11.03.2025 before Notary A.C. Subbu Swamy, Bengaluru. Henceforth I shall be known as **B. PRASHANTH RAJ** only.

CHANGE OF NAME
I, **GURUPRASAD NAGARAJARAO,** S/o. Nagarajarao, residing at Flat No. 3.2.6, Shriram Sameeksha, New Gangamma Gudi Police Station Road, Naidu Layout, Singapura, Bangalore North, Jalahalli West, Bengaluru - 560015, have changed my name from **GURUPRASAD PATHIKI** to **GURUPRASAD NAGARAJARAO** vide affidavit dated: 10.03.2025 before Advocate and Notary Deepa .M, Bengaluru.

BUSINESS

Business to Business

Business

LOOKING FOR investor to create Posh Co-working space @ prime location Ulsoor, Opp. to Conrad Hotel Interested person contact - 9343180333

Business Offers

Finance

NRI'S INVESTMENTS and finance NOW available (HIGH VALUE FUNDS) on low interest against LANDs & PROPERTIES call -7204995189

PUBLIC NOTICE

THE MUSLIM ORPHANAGE
43, DICKENSON ROAD, BANGALORE-560 042

NOTICE INVITING TENDER

Ref.MO/School Building cum Administrative Block and Staff Quarters/Const/Tender/ 2025-26 Date:- 12/03/2025

Sealed Tenders are invited from well experienced individuals, reputed & licensed firms who have executed a single work of 5 Crores in the field of Civil Construction for the proposed Construction of School Building cum Administrative Block and Staff Quarters Building at The Muslim Orphanage Campus No. # 43, Dickenson Road, Bangalore-560042

PART-“A” : Proposed Civil Work of School Building cum Administrative Block.
PART-“B”: Proposed Civil Work for Staff Quarters.

PART-A	Proposed Civil Work of School Building cum Administrative Block.	₹ 3.5 Crores Approximately
PART-B	Proposed Civil Work for Staff Quarters.	₹ 2.5 Crores Approximately

Sale of tender forms PART-A, PART-B, from 13-03-2025 to 21-03-2025
Cost of tender document- ₹ 2000/- for PART-A PLUS (₹ 500/- extra for postage for outstation requests)
Cost of tender document- ₹ 2000/- for PART-B PLUS (₹ 500/- extra for postage for outstation requests)
EMD 1% of the tender amount of the individual tender to be attached in the form of DD/Pay Order

Last Date & Time of Receipt of Tender forms	27-03-2025 @ 3.00 PM
Date of Opening of Tender Forms	27-03-2025 @ 3.30 PM
Proposed Period of Completion of Contract PART-A and PART-B	10 Months from the date of award of Contract

Terms & Conditions shall be as per the tender document Selection criteria will be based on pre-qualification of tenderers
- Reputed company in the construction Registered under PWD / BBMP Authority.
- Minimum number of projects completed of area higher than 50000 Sq. Ft. each in last three years not less than 10 projects.
- Having minimum staff strength of atleast 30 members including Engineers/Supervisors
- Having self-owned inventory of plants and equipment's for construction

For Further Details Contact
The Muslim Orphanage, # 43, Dickenson Road, Bangalore-560042
Phone: 080-41264030, E-mail:themuslimorphanage1892@gmail.com
Sd/- Hon. Secretary

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology-9880916988

ನಗರದ ವಿವಿಧೆಡೆ ವಾಯು ಗುಣಮಟ್ಟ ಕುಸಿತ ● ಮಾರ್ಚ್ ತಿಂಗಳಲ್ಲಿ ಏರಿಕೆ ಕಂಡ ತಾಪಮಾನ

ಉಷ್ಣಾಂಶ ಏರಿಕೆ, ದೂಳಿನ ಕಣ ಹೆಚ್ಚಳ

● ವರುಣ ಹೆಗಡೆ

ಬೆಂಗಳೂರು: ಹೆಚ್ಚಿದ ಉಷ್ಣಾಂಶ, ರಸ್ತೆ ಹಾಗೂ ಕಟ್ಟಡಗಳ ನಿರ್ಮಾಣ ಕಾಮಗಾರಿಯಿಂದಾಗಿ ಹೊಮ್ಮುವ ದೂಳಿನ ಕಣಗಳಿಂದ ನಗರದಲ್ಲಿ ವಾಯು ಗುಣಮಟ್ಟ ದಿನೇ ದಿನೇ ಕುಸಿಯುತ್ತಿದೆ.

ಎರಡು ವಾರಗಳಿಂದ ಧಗೆ ಹೆಚ್ಚಳವಾಗಿದೆ. ಗರಿಷ್ಠ ಉಷ್ಣಾಂಶ 35 ಡಿಗ್ರಿ ಸೆಲ್ಸಿಯಸ್ ಸಮೀಪಿಸಿದೆ. ಒಂದು ವಾರದಿಂದ ಬಹುತೇಕ ನಿತ್ಯ ಉಷ್ಣಾಂಶವು 34 ಡಿಗ್ರಿ ಸೆಲ್ಸಿಯಸ್ ತಲುಪಿದೆ. ಉಷ್ಣಾಂಶ ಹೆಚ್ಚಳದಿಂದ ಗಾಳಿಯ ಗುಣಮಟ್ಟ ಸೂಚ್ಯಂಕ (ಎಕ್ಯುಐ) ಏರುಗತಿ ಪಡೆದಿದೆ. ಬಿಸಿ ಗಾಳಿಯು ಜನರನ್ನು ಹೈರಾಣ ಆಗಿಸುತ್ತಿದೆ. ದೂಳಿನ ಕಣಗಳು ಗಾಳಿಯಲ್ಲಿ ಅಧಿಕ ಪ್ರಮಾಣದಲ್ಲಿ ಸೇರಿ ಚರ್ಮ, ಉಸಿರಾಟ ಸಂಬಂಧಿ ಸಮಸ್ಯೆಗಳೂ ಹೆಚ್ಚುತ್ತಿವೆ.

'ನಮ್ಮ ಮೆಟ್ರೊ' ಪ್ರಯಾಣ ದರ ಹೆಚ್ಚಳದ ಬಳಿಕ, ತುಮಕೂರು ರಸ್ತೆ, ಮೈಸೂರು ರಸ್ತೆ ಸೇರಿ ಪ್ರಮುಖ ರಸ್ತೆಗಳಲ್ಲಿ ಬೆಳಿಗ್ಗೆ ಮತ್ತು ಸಂಜೆಯ ಅವಧಿ ವಾಹನ ದಟ್ಟಣೆ ಹೆಚ್ಚುತ್ತಿದೆ. ಇದರಿಂದ ವಾತಾವರಣದಲ್ಲಿ ಮಲಿನಕಾರಕ ಕಣಗಳೂ ಹೆಚ್ಚುತ್ತಿವೆ.

ಜೆ.ಸಿ.ರಸ್ತೆ ಸೇರಿ ನಗರದ ಕೆಲ ರಸ್ತೆಗಳ ವೈಟ್ ಟಾಪಿಂಗ್ ಕಾಮಗಾರಿ ಪ್ರಗತಿಯಲ್ಲಿದೆ. ಸೆಂಟ್ರಲ್ ಸಿಲ್ಕ್ ಬೋರ್ಡ್‌ನಿಂದ ಕೆಂಪೇಗೌಡ ಅಂತ-ರರಾಷ್ಟ್ರೀಯ ವಿಮಾನ ನಿಲ್ದಾಣದ-ವರೆಗೆ ಸೇರಿದಂತೆ ವಿವಿಧೆಡೆ ಮೆಟ್ರೊ ಮಾರ್ಗಗಳ ಕಾಮಗಾರಿ ನಡೆಯುತ್ತಿದೆ. ಇದರಿಂದಲೂ ವಾಹನ ದಟ್ಟಣೆ ಉಂಟಾಗುತ್ತಿದೆ.



ಸಾಂದರ್ಭಿಕ ಚಿತ್ರ

ಅನಾರೋಗ್ಯ ಸಮಸ್ಯೆ ಸಾಧ್ಯತೆ

'ಗಾಳಿಯ ಗುಣಮಟ್ಟದ ಸೂಚ್ಯಂಕವು 50ರ ಒಳಗಿದ್ದಲ್ಲಿ ಆರೋಗ್ಯದ ಮೇಲೆ ನಕಾರಾತ್ಮಕ ಪರಿಣಾಮ ಅಷ್ಟಾಗಿ ಕಾಣಿಸಿಕೊಳ್ಳುವುದಿಲ್ಲ. ಎಕ್ಯುಐ 51ರಿಂದ 100ರ ಒಳಗಡೆ ಇದ್ದಲ್ಲಿ ಉಸಿರಾಟದ ಸಮಸ್ಯೆಗಳು ಕಾಣಿಸುವ ಸಾಧ್ಯತೆಗಳಿವೆ. 101ರಿಂದ 200ರ ಗಡಿಯಲ್ಲಿದ್ದಲ್ಲಿ ಶ್ವಾಸಕೋಶ, ಹೃದಯ ಕಾಯಿಲೆಗಳು ಕೂಡಾ ಬರಬಹುದು' ಎಂದು ಮಂಡಳಿಯ ಪರಿಸರ ಅಧಿಕಾರಿ ತಿಳಿಸಿದರು.

ಎಕ್ಯುಐ ಹೆಚ್ಚಳ: ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಪ್ರಕಾರ, ಸಿಲ್ಕ್ ಬೋರ್ಡ್, ನಗರ ರೈಲು ನಿಲ್ದಾಣ, ಬಿಟಿಎಂ ಲೇಔಟ್, ಜಯನಗರ, ಬಾಪೂಜಿ ನಗರ ಸೇರಿ ಮಾಪನಾ ಕೇಂದ್ರವಿರುವ ಸ್ಥಳಗಳ ಸುತ್ತಮುತ್ತಲಿನ ಪ್ರದೇಶದಲ್ಲಿ ಜನವರಿಯಲ್ಲಿ ಬಹುತೇಕ ದಿನ 'ಸಮಾಧಾನಕರ' ಹಂತದಲ್ಲಿದ್ದ ಗಾಳಿಯ ಗುಣಮಟ್ಟದ ಸೂಚ್ಯಂಕ, ಈಗ 'ಮಧ್ಯಮ' ಹಂತ ತಲುಪಿದೆ. ಈ ತಿಂಗಳ ಕೆಲ ದಿನ ಮಾಲಿನ್ಯಕಾರಕ ಪಿಎಂ-10 (ಸೂಕ್ಷ್ಮ) ಹಾಗೂ ಪಿಎಂ-2.5 (ಅತಿ ಸೂಕ್ಷ್ಮ) ದೂಳಿನ ಕಣಗಳು ಕಾಣಿಸಿಕೊಂಡಿವೆ.

ಗಾಳಿಯಲ್ಲಿ ಪಿಎಂ-10 ಪ್ರಮಾಣ 100 ಮೈಕ್ರೊ ಗ್ರಾಂ ಹಾಗೂ ಪಿಎಂ-2.5 ಪ್ರಮಾಣ 60 ಮೈಕ್ರೊ ಗ್ರಾಂ ಮೀರಬಾರದು. ಕೆಲ ಸಂದರ್ಭದಲ್ಲಿ ಈ ಕಣಗಳ ಪ್ರಮಾಣ ನಿಗದಿತ ಮಿತಿಗಿಂತ ಹೆಚ್ಚು ಇರುವುದು ಮಂಡಳಿಯ ವಿಶ್ಲೇಷಣೆಯಿಂದ ತಿಳಿದುಬಂದಿದೆ.

'ಅಧಿಕ ಉಷ್ಣಾಂಶದಿಂದ ಹುಲ್ಲಿನಂತಹ ಗಿಡಗಳು ಒಣಗುವುದರಿಂದ ದೂಳು ನೆಲದಲ್ಲಿ ಇರುವುದಿಲ್ಲ. ದೂಳಿನ ಕಣಗಳು ಗಾಳಿಯನ್ನು ಸೇರಲಿದ್ದು, ಗುಣಮಟ್ಟ ಕುಸಿಯಲಿದೆ. ಮಳೆ ಬಂದಲ್ಲಿ ದೂಳು ನೀರಿನಲ್ಲಿ ತೊಳೆದು ಹೋಗುತ್ತದೆ' ಎಂದು ಕೆಎಸ್‌ಪಿಸಿಬಿ ಪರಿಸರ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಧಗೆಗೆ ಬೆವರುಗುಳ್ಳೆ, ಮೊಡವೆ ಸೇರಿದಂತೆ ಚರ್ಮಕ್ಕೆ ಸಂಬಂಧಿಸಿದ ವಿವಿಧ ಸಮಸ್ಯೆಗಳು ಕೆಲವರಲ್ಲಿ ಕಾಣಿಸಿಕೊಳ್ಳುತ್ತಿವೆ. ಚಿಕಿತ್ಸೆಗೆ ಬರುವವರ ಸಂಖ್ಯೆ ಹೆಚ್ಚುತ್ತಿದೆ

ಡಾ. ಗಿರೀಶ್ ಎಂ.ಎಸ್., ಚರ್ಮರೋಗ ತಜ್ಞ, ಇಎಸ್‌ಐ ಆಸ್ಪತ್ರೆ, ರಾಜಾಜಿನಗರ

ವಾರದ ತಾಪಮಾನ (ಡಿಗ್ರಿ ಸೆಲ್ಸಿಯಸ್‌ನಲ್ಲಿ)

ದಿನಾಂಕ	ಗರಿಷ್ಠ	ಕನಿಷ್ಠ
ಮಾರ್ಚ್ 5	34.1	20.3
ಮಾರ್ಚ್ 6	33.5	21.8
ಮಾರ್ಚ್ 7	34.6	20
ಮಾರ್ಚ್ 8	34.4	20.4
ಮಾರ್ಚ್ 9	34.5	19.7
ಮಾರ್ಚ್ 10	34.5	18.1
ಮಾರ್ಚ್ 11	33.2	19.1

ಮಾರ್ಚ್‌ನಲ್ಲಿ ಗಾಳಿ ಗುಣಮಟ್ಟದ ಸೂಚ್ಯಂಕ

ಮಾಪನಾ ಕೇಂದ್ರವಿರುವ ಪ್ರದೇಶ	ಎಕ್ಯುಐ
ಬಿಟಿಎಂ ಬಡಾವಣೆ	98-158
ಬಾಪುಜಿನಗರ	59-122
ನಗರದ ರೈಲು ನಿಲ್ದಾಣ	89-101
ಹೆಬ್ಬಾಳ	62-129
ಹೊಂಬೇಗೌಡನಗರ	59-115
ಜಯನಗರ	49-200
ಜಿಗಣಿ ಕೈಗಾರಿಕಾ ಪ್ರದೇಶ	59 -109
ಕಸ್ತೂರಿನಗರ	101-200
ಪೀಣ್ಯ ಕೈಗಾರಿಕಾ ಪ್ರದೇಶ	66-105
ಸಾಣೆಗುರುವಹಳ್ಳಿ	36-41
ಸಿಲ್ಕ್ ಬೋರ್ಡ್	101-200

ಗಾಳಿಯ ಗುಣಮಟ್ಟದ ಸೂಚ್ಯಂಕ (ಎಕ್ಯುಐ)

00-50	ಉತ್ತಮ
51-100	ಸಮಾಧಾನಕರ
101-200	ಮಧ್ಯಮ
201-300	ಕಳಪೆ
301-400	ತುಂಬಾ ಕಳಪೆ
401 ಮೇಲ್ಪಟ್ಟು	ತೀವ್ರ



ಪುಷ್ಪಸಿರಿ

ಬೆಂಗಳೂರಿನ ವಿಧಾನಸೌಧದ ಆವರಣವು ಟಬೆಬೂಯಾ ಔರಿಯಾ ಹೂವುಗಳಿಂದ ಶೃಂಗಾರಗೊಂಡಿದ್ದು ಮಂಗಳವಾರ ಕಂಡುಬಂತು.

ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

ಮನುಷ್ಯನಿಗೆ ಎ.ಐ ಪರ್ಯಾಯವಲ್ಲ: ವೂಡೇ ಪಿ. ಕೃಷ್ಣ

ಪ್ರಜಾವಾಣಿ ವಾರ್ತೆ

ಯಲಹಂಕ: 'ಎ.ಐ ತಂತ್ರಜ್ಞಾನ ಎಷ್ಟೇ ಬೆಳೆದರೂ ಮಾನವನಲ್ಲಿರುವ ಮೌಲ್ಯಗಳು ಹಾಗೂ ಸಂಸ್ಕೃತಿಯಿಂದ ಬರುವ ಸಂಸ್ಕಾರವನ್ನು ಅಳವಡಿಸಿಕೊಳ್ಳಲು ಅದಕ್ಕೆ ಸಾಧ್ಯವಿಲ್ಲ' ಎಂದು ಶಿಕ್ಷಣತಜ್ಞ ವೂಡೇ ಪಿ. ಕೃಷ್ಣ ಅಭಿಪ್ರಾಯಪಟ್ಟರು.

ಶೇಷಾದ್ರಿಪುರ ಪ್ರಥಮದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಮಾನವ ಸಂಪನ್ಮೂಲ ಕುರಿತ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕೃತಕ ಬುದ್ಧಿಮತ್ತೆಯನ್ನು ಮಾನವ ಸಂಪನ್ಮೂಲಕ್ಕೆ ಪರ್ಯಾಯವಾಗಿಸಲು ಸಾಧ್ಯವಿಲ್ಲ ಎಂದರು.

ಟಿವಿಎಸ್ ಮೋಟಾರ್ಸ್‌ನ ಹಿರಿಯ ಉಪಾಧ್ಯಕ್ಷ ಡಾ.ದೇವರಾಜನ್ ಮಾತನಾಡಿ, ಭಾರತದ ಆರ್ಥಿಕ ಅಭಿ-ವೃದ್ಧಿಯಲ್ಲಿ ಉತ್ಪಾದನಾ ಕ್ಷೇತ್ರವು ಪ್ರಮುಖಪಾತ್ರ ವಹಿಸಲಿದೆ ಎಂದರು.

ಜೆಪಿ ಮೋರ್ಗನ್ ಸಂಸ್ಥೆಯ ಸಹಾಯಕ ಉಪಾಧ್ಯಕ್ಷ ವಿನೋದ್‌ರಾಜ್, ಐಐಎಂನ ನಿವೃತ್ತ ಪ್ರಾಧ್ಯಾಪಕ ಪ್ರೊ. ಆರ್.ರವಿಕುಮಾರ್, ಶೇಷಾದ್ರಿಪುರ ಶಿಕ್ಷಣದತ್ತಿಯ ಜಂಟಿ ಕಾರ್ಯದರ್ಶಿ ಎಸ್.ಶೇಷನಾರಾಯಣ, ಶೇಷಾದ್ರಿಪುರ ಪ್ರಥಮದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಎನ್.ವೆಂಕಟೇಶ್ ಉಪಸ್ಥಿತರಿ-ದ್ದರು.

ಎಂ.ಎಸ್. ರಾಮಯ್ಯ ರಸ್ತೆ ದೂಳುಮಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಶವಂತಪುರದಿಂದ ಮತ್ತಿಕೆರೆಗೆ ತೆರಳುವ 'ಎಂ.ಎಸ್. ರಾಮಯ್ಯ ರಸ್ತೆ'ಯಲ್ಲಿ ನಡೆಯುತ್ತಿರುವ ಕೊಳವೆ ಅಳವಡಿಕೆ ಕಾಮಗಾರಿಯಿಂದ ರಸ್ತೆ ಹಾಳಾಗಿದ್ದು, ಇದರಿಂದ ವಾಹನ ಸಂಚಾರಕ್ಕೆ ತೊಂದರೆಯಾಗಿದೆ ಎಂದು ಸ್ಥಳೀಯರು ದೂರಿದ್ದಾರೆ.

ಕೊಳವೆಗಳನ್ನು ಅಳವಡಿಸಲು ಅಲ್ಲಲ್ಲೇ ರಸ್ತೆಯನ್ನು ಅಗೆದು ಮುಚ್ಚಲಾಗಿದೆ. ಅಲ್ಲಲ್ಲೇ ತಗ್ಗುಗಳು ಗುಂಡಿಗಳಂತಾಗಿವೆ. ಇಂಥ ಸ್ಥಳಗಳಲ್ಲಿ ದ್ವಿಚಕ್ರವಾಹನ ಸವಾರರು ಬಿದ್ದಿರುವ ಘಟನೆಗಳು ನಡೆದಿವೆ.



ಎಂ.ಎಸ್. ರಾಮಯ್ಯ ರಸ್ತೆಯಲ್ಲಿ ನಡೆಯುತ್ತಿರುವ ಕಾಮಗಾರಿ ವಿಳಂಬವಾಗಿರುವ ಕಾರಣ ವಾಹನ ಸವಾರರು ಪರದಾಡುವಂತಾಗಿದೆ. ಪ್ರಜಾವಾಣಿ ಚಿತ್ರ

ಇದು ರಾಮಯ್ಯ ಆಸ್ಪತ್ರೆಯ ಹಿಂಬದಿಯ ರಸ್ತೆಯಾಗಿದ್ದು, ಯಶವಂತಪುರದ ಮೂಲಕ ಈ ಆಸ್ಪತ್ರೆಗೆ ಬರುವ ಎಲ್ಲ ಆಂಬುಲೆನ್ಸ್‌ಗಳು ಇದೇ ದಾರಿಯನ್ನು ಬಳಸುತ್ತವೆ. ರಸ್ತೆ ಸರಿಯಾಗಿಲ್ಲದ ಕಾರಣ ಹಲವು ಬಾರಿ ವಾಹನ ದಟ್ಟಣೆಯಲ್ಲಿ ಆಂಬುಲೆನ್ಸ್‌ಗಳು ಸಿಲುಕಿಕೊಳ್ಳುತ್ತವೆ.

ಮತ್ತಿಕೆರೆಯಿಂದ ಯಶವಂತಪುರ, ಜಾಲಹಳ್ಳಿ, ಪಶ್ಚಿಮ ಕಾರ್ಡ್ ರಸ್ತೆ, ಮಲ್ಲೇಶ್ವರಕ್ಕೆ ಹೋಗುವವರು ಇದೇ ರಸ್ತೆ ಬಳಸುತ್ತಾರೆ. ಈ ರಸ್ತೆಯ ಒಂದು ಬದಿಯಲ್ಲಿ ಕೇಂದ್ರೀಯ ವಿದ್ಯಾಲಯವಿದೆ. ಹೀಗಾಗಿ ಶಾಲಾ-ಕಾಲೇಜು, ಕಚೇರಿಗಳಿಗೆ ತೆರಳುವವರು ಹೈರಾಣಾಗುತ್ತಾರೆ.

'ದೂಳು ಅದೆಷ್ಟು ಜನರ ಶ್ವಾಸಕೋಶದ ಸಮಸ್ಯೆಗೆ ಕಾರಣವಾಗಿದೆಯೋ' ಎಂದು ಈ ರಸ್ತೆಯಲ್ಲಿ ನಿತ್ಯ ಸಂಚರಿಸುವ ಸ್ಥಳೀಯ ನಿವಾಸಿ ಡಾ. ಮುರುಳೀಧರ ರಾಮರಾವ್ ಆತಂಕ ವ್ಯಕ್ತಪಡಿಸುತ್ತಾರೆ.

ಕಾಮಗಾರಿ ನಡೆಯುತ್ತಿರುವು-ದನ್ನು ಗಮನಿಸಿದರೆ, ತಕ್ಷಣದಲ್ಲಿ ರಸ್ತೆ ದುರಸ್ತಿಯಾಗುವ ಲಕ್ಷಣಗಳು ಕಾಣುತ್ತಿಲ್ಲ. ಜನರ ಆರೋಗ್ಯ ಹಾಗೂ ವಾಹನ ಸವಾರರ ದೃಷ್ಟಿಯಿಂದ ಸಂಬಂಧಿಸಿದ ಇಲಾಖೆ ರಸ್ತೆ ದುರಸ್ತಿ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೊಳ್ಳುವಂತೆ ಅವರು ಆಗ್ರಹಿಸಿದ್ದಾರೆ.

ವಿವಾದಿತ ಮಸೀದಿ ಬಾಗಿಲು ತೆಗೆಸಲು ಯತ್ನ: ಪ್ರತಾಪ ಸಿಂಹ ಆರೋಪ

ಪ್ರಜಾವಾಣಿ ವಾರ್ತೆ

ಮೈಸೂರು: 'ಕ್ಯಾತಮಾರನಹಳ್ಳಿಯ ವಿವಾದಿತ ಮಸೀದಿಯ ಬಾಗಿಲನ್ನು ಮತ್ತೆ ತೆಗೆಸಲು ರಾಜ್ಯ ಸರ್ಕಾರ ಪ್ರಯತ್ನ ನಡೆಸಿದೆ. ಆದರೆ, ನಾವು ಅವಕಾಶ ನೀಡುವುದಿಲ್ಲ' ಎಂದು ಬಿಜೆಪಿ ಮುಖಂಡ ಪ್ರತಾಪ ಸಿಂಹ ಹೇಳಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಅನಧಿಕೃತ ಮಸೀದಿಯನ್ನು ಮತ್ತೆ ತೆರೆಯಲು ಮುಸ್ಲಿಂ ಮುಖಂಡರು ಸಿದ್ಧತೆ ನಡೆಸಿದ್ದಾರೆ. ರಾಜ್ಯದಲ್ಲಿ ತಾಲಿಬಾನಿ ಸರ್ಕಾರ ಇರುವುದರಿಂದ ಇಂತಹ ಪ್ರಯತ್ನ ನಡೆದಿದೆ' ಎಂದು ದೂರಿದರು.

'ರಾಜ್ಯದಲ್ಲಿ ಧರ್ಮದ ಆಧಾರದಲ್ಲಿ ತೆರಿಗೆ ಸಂಗ್ರಹದ ವರದಿ ಸಿದ್ಧಪಡಿಸಿ. ಹಿಂದೂಗಳು, ಮುಸ್ಲಿಮರು, ಕ್ರಿಶ್ಚಿಯನ್ನರು ಎಷ್ಟು ತೆರಿಗೆ ಕಟ್ಟುತ್ತಿದ್ದಾರೆ ಎಂಬ ವರದಿ ತಯಾರಿಸಿ ಬಿಡುಗಡೆ ಮಾಡಿ. ರಾಜ್ಯ ಬಜೆಟ್‌ಗೆ ಮುಸ್ಲಿಮರ ಕೊಡುಗೆ ಎಷ್ಟೆಂಬುದು ಗೊತ್ತಾಗಲಿ' ಎಂದರು.



ಪ್ರತಾಪ ಸಿಂಹ

'ಮಸೀದಿ, ಚರ್ಚ್‌ನಿಂದ ಸರ್ಕಾರಕ್ಕೆ ₹5 ತೆರಿಗೆ ಬರ್ತಿದೆಯಾ? ಇದು ಹಲಾಲ್ ಬಜೆಟ್ ಎನ್ನುವುದರಲ್ಲಿ ತಪ್ಪಿಲ್ಲ. ಒಕ್ಕಲಿಗರು, ಲಿಂಗಾಯತರು, ಬ್ರಾಹ್ಮಣ, ಮಡಿವಾಳರು ಹೀಗೆ ನಾನಾ ಜಾತಿಗಳ ಅಭಿವೃದ್ಧಿ ನಿಗಮಕ್ಕೆ ಎಷ್ಟು ಹಣ ಕೊಟ್ಟಿದ್ದಿರಾ' ಎಂದು ಪ್ರಶ್ನಿಸಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಟ್ಟು–ಬೋಲ್ಟ್ ಹೇಳಿಕೆಗೆ ಪ್ರತಿಕ್ರಿಯಿಸಿ, 'ಸಿ.ಎಂ. ತಾಲಿಬಾನ್ ಸರ್ಕಾರ ನಡೆಸುತ್ತಿದ್ದರೆ, ಡಿಸಿಎಂ ಗೂಂಡಾ ಸರ್ಕಾರ ನಡೆಸು-ತ್ತಿದ್ದಾರೆ' ಎಂದು ದೂರಿದರು.

'ಕಾಂಗ್ರೆಸ್ ಜಾತ್ರೆಗೆ ಬರಲು ಹಾಗೂ ಕಾಂಗ್ರೆಸ್ ನಾಯಕರ ಫೋಟೊವುಳ್ಳ ಯಾತ್ರೆಯಲ್ಲಿ ಭಾಗವಹಿಸಲು ನಟರೇನು ನಿಮ್ಮ ಪಾರ್ಟಿಯ ಕಾರ್ಡ್ ಹೋಲ್ಡರ್‌ಗಳಾ' ಎಂದು ಪ್ರಶ್ನಿಸಿದರು.

ದೋಷಾರೋಪ ಪಟ್ಟಿ ರದ್ದತಿಗೆ ಹೈಕೋರ್ಟ್ ನಕಾರ

ಪತ್ನಿಯನ್ನು ಮಹಡಿಯಿಂದ ತಳ್ಳಿ ಕೊಲೆ ಮಾಡಿದ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ನಿಯನ್ನು ಮನೆಯ ಮಹಡಿ ಮೇಲಿಂದ ತಳ್ಳಿ ಕೊಲೆ ಮಾಡಿದ ಆರೋಪದಡಿ ಪತಿ ವಿರುದ್ಧ ಸಲ್ಲಿಸಲಾಗಿರುವ ಪ್ರಕರಣವೊಂದರಲ್ಲಿ ಪತಿಯ ವಿರುದ್ಧದ ದೋಷಾರೋಪ ಪಟ್ಟಿ ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದೆ.

'ನನ್ನ ವಿರುದ್ಧ ಆರ್‌ಎಂಸಿ ಯಾರ್ಡ್ ಠಾಣೆಯ ಪೊಲೀಸರು ಸಲ್ಲಿಸಿರುವ ದೋಷಾರೋಪ ಪಟ್ಟಿ ರದ್ದುಪಡಿಸಬೇಕು' ಎಂದು ಯಶವಂತಪುರ ನಿವಾಸಿ ದೇವೇಂದ್ರ ಭಾಟಿಯಾ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿ ಅರ್ಜಿಯನ್ನು ವಜಾಗೊಳಿಸಿದೆ.

'ಅರ್ಜಿದಾರರ ವಿರುದ್ಧದ ಆರೋಪಗಳು ಮೇಲ್ನೋಟಕ್ಕೆ ಸತ್ಯ ಎಂದು ಕಾಣಬರುತ್ತದೆ. ಆರೋಪಿಗೆ ರಕ್ಷಣೆ ನೀಡುವ ಪ್ರಮೇಯ ಉದ್ಭವಿಸುವುದಿಲ್ಲ' ಎಂಬ ಪೀಠ ಅಭಿಪ್ರಾಯ ಪಟ್ಟಿತು.

ಪ್ರಕರಣವೇನು?: 'ದೇವೇಂದ್ರ ಭಾಟಿಯಾ 2018ರಲ್ಲಿ ಪತ್ನಿಯನ್ನು ಮನೆಯ 16ನೇ ಮಹಡಿಯಿಂದ ಕೆಳಗೆ ತಳ್ಳಿ ಕೊಲೆ ಮಾಡಿದ್ದಾರೆ' ಎಂದು ದೇವೇಂದ್ರ ಅವರ ಪುತ್ರ ಪೊಲೀಸರಿಗೆ ದೂರು ನೀಡಿದ್ದರು. ತನಿಖೆ ನಡೆಸಿದ್ದ ಆರ್‌ಎಂಸಿ ಯಾರ್ಡ್ ಠಾಣೆ ಪೊಲೀಸರು; ಸೆಷನ್ಸ್ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ರನ್ಯಾ ಪತಿ: ಬಲವಂತದ ಕ್ರಮ ಬೇಡ

ಬೆಂಗಳೂರು: 'ಭಾರಿ ಮೊತ್ತದ ಚಿನ್ನ ಕಳ್ಳಸಾಗಣೆ ಆರೋಪದಡಿ ನ್ಯಾಯಾಂಗ ಬಂಧನದಲ್ಲಿರುವ ನಟಿ ರನ್ಯಾ ಅವರ ಪತಿ ಜತಿನ್ ವಿಜಯಕುಮಾರ್ ಹುಕ್ಕೇರಿ ಅವರನ್ನು ಕಾನೂನು ಪ್ರಕ್ರಿಯೆ ಪಾಲಿಸದೆ ಬಂಧಿಸುವಂತಿಲ್ಲ' ಎಂದು ಹೈಕೋರ್ಟ್ ನಿರ್ದೇಶಿಸಿದೆ. ಈ ಕುರಿತು ಡಿಆರ್‌ಐಗೆ (ಕಂದಾಯ ಗುಪ್ತಚರ ಜಾರಿ ನಿರ್ದೇಶನಾಲಯ) ಮಂಗಳವಾರ ಸೂಚನೆ ನೀಡಿದೆ.

ಬಂಧನ ಭೀತಿ ಹಿನ್ನೆಲೆಯಲ್ಲಿ ರನ್ಯಾ ಪತಿ ಜತಿನ್ ವಿಜಯಕುಮಾರ್ ಹುಕ್ಕೇರಿ (39) ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ ಚಂದನಗೌಡರ ಅವರಿದ್ದ ಏಕಸದಸ್ಯ ಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಪ್ರಭುಲಿಂಗ ಕೆ.ನಾವದಗಿ, 'ರನ್ಯಾ ವಿರುದ್ಧದ ಆರೋಪಕ್ಕೂ ಜತಿನ್ ಅವರಿಗೂ ಯಾವುದೇ ರೀತಿಯ ಸಂಬಂಧವಿಲ್ಲ. ಅರ್ಜಿದಾರರಿಗೆ ಡಿಆರ್‌ಐ ಅಧಿಕಾರಿಗಳು ಸಮನ್ಸ್ ನೀಡಿದಾಗ ತನಿಖೆಗೆ ಸಹಕರಿಸಿದ್ದಾರೆ. ಆದ್ದರಿಂದ, ಅವರ ವಿರುದ್ಧ ಪೊಲೀಸರು ಯಾವುದೇ ಬಲವಂತದ ಕ್ರಮ ಕೈಗೊಳ್ಳಬಾರದು ಮತ್ತು ಸೂಕ್ತ ರೀತಿಯಲ್ಲಿ ಕಾನೂನು ಪಾಲಿಸಲು ನಿರ್ದೇಶಿಸಬೇಕು' ಎಂದು ಕೋರಿದರು.

ಇದನ್ನು ಪುರಸ್ಕರಿಸಿದ ಪೀಠ, 'ಅರ್ಜಿದಾರರನ್ನು ಸೂಕ್ತ ಕಾನೂನು ಪ್ರಕ್ರಿಯೆ ಪಾಲಿಸದೇ ಬಂಧಿಸಬಾರದು' ಎಂದು ಆದೇಶಿಸಿ ವಿಚಾರಣೆ ಮುಂದೂಡಿತು.

ಒಂದೇ ದಿನ 452 ಪ್ರಕರಣ ವಿಚಾರಣೆ

ಬೆಂಗಳೂರು: ಇದೇ ಮೊದಲ ಬಾರಿಗೆ ಸಾಮಾನ್ಯ ವಿಭಾಗದ ವಿವಿಧ ವರ್ಗದಲ್ಲಿನ (ಜಿ.ಎಂ ಕೆಟಗರಿ) ಪಟ್ಟಿಯಲ್ಲಿ 452 ಪ್ರಕರಣಗಳನ್ನು ಒಂದೇ ದಿನದಲ್ಲಿ (ಮಾ.10) ವಿಚಾರಣೆ ನಡೆಸಿರುವ ಹೈಕೋರ್ಟ್ ಅವುಗಳಲ್ಲಿ 62 ಪ್ರಕರಣಗಳನ್ನು ವಿಲೇವಾರಿ ಮಾಡಿದೆ.

ಹೈಕೋರ್ಟ್‌ನ ಇತಿಹಾಸದಲ್ಲಿಯೇ ಜಿ.ಎಂ. ವರ್ಗದ ಇಷ್ಟೊಂದು ಪ್ರಕರಣ-ಗಳನ್ನು ಒಂದೇ ದಿನ ಕಾಸ್ ಲಿಸ್ಟ್‌ನಲ್ಲಿ ನಮೂದಿಸಿ ವಿಚಾರಣೆ ನಡೆಸಿರುವುದು ವಿಶೇಷ. ಸದ್ಯ ಜಿ.ಎಂ.ವಿಭಾಗದಲ್ಲಿನ ಪ್ರಕರಣಗಳನ್ನು ವಿಚಾರಣೆ ನಡೆಸುತ್ತಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಕರ್ನಾಟಕ ಹೈಕೋರ್ಟ್‌ನಲ್ಲಿ ಪ್ರಕರಣಗಳ ಕ್ಷಿಪ್ರ ವಿಲೇವಾರಿಗೆ ಹೆಸರಾಗಿದ್ದಾರೆ.

ಕನಕಲಕ್ಷ್ಮಿ ಬಂಧನ, ಕೋರ್ಟ್‌ಗೆ ಮಾಹಿತಿ

'ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಲ್ಲಿನ ಕೋಟ್ಯಂತರ ರೂಪಾಯಿಗಳ ಅವ್ಯವಹಾರ ಹಗರಣಕ್ಕೆ ಸಂಬಂಧ ತನಿಖೆ ನೆಪದಲ್ಲಿ ಸಿಐಡಿ ಪೊಲೀಸರು ನೀಡಿದ ಕಿರುಕುಳದಿಂದ ನೊಂದು ವಕೀಲೆ ಎಸ್.ಜೀವಾ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾದ ಪ್ರಕರಣದಲ್ಲಿ ಡಿವೈಎಸ್‌ಪಿ, ಬಿ.ಎಂ.ಕನಕಲಕ್ಷ್ಮಿ ಅವರನ್ನು ವಿಶೇಷ ತನಿಖಾ ದಳ (ಎಸ್‌ಐಟಿ) ಮಂಗಳವಾರ (ಮಾರ್ಚ್ 11) ಬಂಧಿಸಿದೆ' ಎಂದು ಸರ್ಕಾರ ಹೈಕೋರ್ಟ್‌ಗೆ ಅರುಹಿದೆ.

'ಜೀವಾ ಆತ್ಮಹತ್ಯೆಗೆ ಕಾರಣವಾಗಿರುವ ಪ್ರಕರಣವನ್ನು ಸಿಬಿಐ ಅಥವಾ ಸ್ವತಂತ್ರ ತನಿಖಾ ಸಂಸ್ಥೆಗೆ ವಹಿಸಬೇಕು' ಎಂದು ಕೋರಿ 'ಬೆಂಗಳೂರು ವಕೀಲರ ಸಂಘ' (ಎಎಬಿ) ಸಲ್ಲಿಸಿರುವ ಮಧ್ಯಂತರ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, 'ಇಂದು ಬೆಳಿಗ್ಗೆ ಕನಕಲಕ್ಷ್ಮಿ ಅವರನ್ನು ಕಸ್ಟಡಿಗೆ ಪಡೆಯಲಾಗಿದೆ. ತನಿಖೆ ಪ್ರಗತಿಯಲ್ಲಿ-ದೆ' ಎಂದು ಮುಚ್ಚಿದ ಲಕೋಟೆಯಲ್ಲಿ ತನಿಖಾ ವರದಿಯನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು.

ಸಂಘದ ಪರ ಪದಾಂಕಿತ ಹಿರಿಯ ವಕೀಲ ಡಿ.ಆರ್.ರವಿಶಂಕರ್, 'ಜಗದೀಶ್ ಅವರ ಹೇಳಿಕೆಯನ್ನು ದಾಖಲಿಸಿಕೊಳ್ಳಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು. ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, ಇದೇ 18ಕ್ಕೆ ವಿಚಾರಣೆ ಮುಂದೂಡಿ ಆದೇಶಿಸಿತು.

ಕನಕಲಕ್ಷ್ಮಿ ವಿರುದ್ಧ ಬೆಂಗಳೂರಿನ ಬನಶಂಕರಿ ಪೊಲೀಸ್ ಠಾಣೆಯಲ್ಲಿ, ಭಾರತೀಯ ನ್ಯಾಯ ಸಂಹಿತೆ–2023ರ ಕಲಂ 108 ಮತ್ತು ಭ್ರಷ್ಟಾಚಾರ ಪ್ರತಿಬಂಧ ಕಾಯ್ದೆ–1988ರ ಕಲಂ 7(ಎ)ರ ಅಡಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ.

ಮಸೂದೆ ವಿರೋಧಿಸಿ 16ಕ್ಕೆ ಪ್ರತಿಭಟನೆ

ಬೆಂಗಳೂರು: 'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ–2025' ವಿರೋಧಿಸಿ ಮಾರ್ಚ್ 16ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಉಪವಾಸ ಸತ್ಯಾಗ್ರಹ ಮತ್ತು ಜಾಗೃತಿ ರ‍್ಯಾಲಿ ಹಮ್ಮಿಕೊಳ್ಳಲಾಗಿದೆ ಎಂದು ಬೆಂಗಳೂರು ನವ ನಿರ್ಮಾಣ ಪಕ್ಷ (ಬೆನಪ) ತಿಳಿಸಿದೆ.

'ಈ ಮಸೂದೆಯು ಬೆಂಗಳೂರಿನ ಸ್ವ-ಆಡಳಿತದ ಹಕ್ಕಿನ ಮೇಲೆ ಹಲ್ಲೆಯಾಗಿದ್ದು, ನಗರದ ಸ್ವಾಯತ್ತತೆ ದುರ್ಬಲಗೊಳಿಸುತ್ತದೆ. ಮೇಯರ್ ಮತ್ತು ಪಾಲಿಕೆಗೆ ಅಧಿಕಾರ ನೀಡುವ ಬದಲು, ಬೆಂಗಳೂರಿನ ಆಡಳಿತದಲ್ಲಿ ಶಾಸಕರು ಮತ್ತು ರಾಜ್ಯ ಸರ್ಕಾರದ ಹಸ್ತಕ್ಷೇಪವನ್ನು ಬಲಪಡಿಸುತ್ತದೆ' ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್ ನರಸಿಂಹನ್ ತಿಳಿಸಿದ್ದಾರೆ. 'ಮಸೂದೆಯನ್ನು ತಕ್ಷಣ ತಿದ್ದುಪಡಿ ಮಾಡಬೇಕು ಎಂಬ ಆಗ್ರಹದೊಂದಿಗೆ ಆನ್‌ಲೈನ್ ಮನವಿ ಆರಂಭಿಸಲಾಗಿದೆ' ಎಂದಿದ್ದಾರೆ.

ನಿವಾಸಿಗಳಿಂದಲೇ ರಸ್ತೆ ನಿರ್ಮಾಣ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಹೆದ್ದಾರಿಗೆ ಸಮೀಪ ಇರುವ ಬಡಾವಣೆ
- 200ಕ್ಕೂ ಹೆಚ್ಚು ಮನೆಗಳ ನಿರ್ಮಾಣ

ಶೃಂಗೇರಿ (ಚಿಕ್ಕಮಗಳೂರು): ಪಟ್ಟಣ ಸಮೀಪದ ಭಾರತಿನಗರ ಮತ್ತು ಬನಶಂಕರಿ ಬಡಾವಣೆ ನಿವಾಸಿಗಳು ಹಣ ಕ್ರೋಡೀಕರಿಸಿ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆ ಡಾಂಬರೀಕರಣಗೊಳಿಸಿ-ದ್ದಾರೆ.

ರಾಷ್ಟ್ರೀಯ ಹೆದ್ದಾರಿಗೆ ಸಮೀಪವಿರುವ ಬಡಾವಣೆ ಇದಾಗಿದೆ. ಮುಖ್ಯ ರಸ್ತೆ ಸಹಿತ ಮನೆಗಳಿಗೆ ಸಂಪರ್ಕಿಸುವ ರಸ್ತೆ ಗುಂಡಿಯಿಂದ ಕೂಡಿದ್ದು, ಮಳೆಗಾಲದಲ್ಲಿ ಕೆಸರು ಹಾಗೂ ಬೇಸಿಗೆಯಲ್ಲಿ ದೂಳಿನಿಂದ ವಾಹನ ಸವಾರರು ಪರದಾಡುವಂತಾಗಿತ್ತು.

ವಿದ್ಯಾರಣ್ಯಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಈ ಬಡಾವಣೆಯಲ್ಲಿ 350ಕ್ಕೂ ಹೆಚ್ಚು ನಿವೇಶನಗಳಿದ್ದು, 200ಕ್ಕೂ ಹೆಚ್ಚು ಮನೆಗಳು ನಿರ್ಮಾಣವಾಗಿವೆ.

ಮೂಲ ಸೌಕರ್ಯಗಳಿಂದ ವಂಚಿತವಾಗಿರುವ ಬಡಾವಣೆಗೆ ಗ್ರಾಮ ಪಂಚಾಯಿತಿಯಿಂದ ಬೀದಿ ದೀಪ ಮಾತ್ರ ಕಲ್ಪಿಸಲಾಗಿದೆ. ಕುಡಿಯುವ ನೀರಿನ ವ್ಯವಸ್ಥೆ ಇನ್ನೂ ಲಭ್ಯವಾಗಿಲ್ಲ. ಗ್ರಾಮ ಪಂಚಾಯಿತಿ ಈ ವರ್ಷ ಚರಂಡಿ ನಿರ್ಮಾಣಕ್ಕಾಗಿ ₹2 ಲಕ್ಷ ಮೀಸಲಿಟ್ಟಿದ್ದು ಹೊರತು ಪಡಿಸಿದರೆ ಬೇರೆ ಅನುದಾನ ನೀಡಿಲ್ಲ ಎಂಬುದು ಬಡಾವಣೆ ನಿವಾಸಿಗಳ ಆರೋಪ.

ಮುಖ್ಯ ರಸ್ತೆಯನ್ನು ಸುಸಜ್ಜಿತವಾಗಿ ನಿರ್ಮಿಸಲು ಪಣತೊಟ್ಟ ನಿವಾಸಿಗಳು ₹15.75 ಲಕ್ಷ ದೇಣಿಗೆ ಸಂಗ್ರಹ ಮಾಡಿದ್ದು, 286 ಮೀಟರ್ ರಸ್ತೆ ನಿರ್ಮಾಣವಾಗಿದೆ. ಇನ್ನೂ 330 ಮೀಟರ್ ರಸ್ತೆ ನಿರ್ಮಿಸಲು ಸಿದ್ಧತೆ ನಡೆಸಲಾಗಿದೆ. ಇದಕ್ಕಾಗಿ ನಿವಾಸಿಗಳು ಸಂಘ ರಚಿಸಿಕೊಂಡಿದ್ದಾರೆ.

ರಸ್ತೆಯನ್ನು ಸೇವೆಗೆ ಮುಕ್ತಗೊಳಿಸಿದ ಸಂದರ್ಭದಲ್ಲಿ ವಿದ್ಯಾರಣ್ಯಪುರ ಗ್ರಾಮ ಪಂಚಾಯಿತಿ ಸದಸ್ಯ ನಾಗರಾಜ ಶೆಟ್ಟಿ ಹಾಗೂ ಸ್ಥಳೀಯ ಮುಖಂಡರು ಭಾಗ-ವಹಿಸಿದ್ದರು.

ಚಿತ್ರಾವಳಿ



ಕೆ.ಆರ್‌.ಪುರ ಸಮೀಪದ ಥಣಿಸಂದ್ರದ ಎಸ್‌.ವಿ.ಎನ್‌.ಶಾಲೆಯ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ವಿವಿಧ ವಿಭಾಗಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಐಪಿಎಸ್ ಅಧಿಕಾರಿ ರವಿ ಡಿ. ಚನ್ನಣ್ಣನವರ್ ನೆನಪಿನ ಕಾಣಿಕೆ ನೀಡಿ ಗೌರವಿಸಿದರು.



ರಾಮಮೂರ್ತಿ ನಗರದ ಅಂಬೇಡ್ಕರ್ ನಗರ ಸರ್ಕಾರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಶಾಲಾ ವಾರ್ಷಿಕೋತ್ಸವ (ಸಿರಿ ಸಂಭ್ರಮ) ಕಾರ್ಯಕ್ರಮದಲ್ಲಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಮುಖ್ಯಸ್ಥ ಹಿಟಾಚಿ ಮಂಜುನಾಥ್ ಅವರು ವಿವಿಧ ವಿಭಾಗಗಳಲ್ಲಿ ಸಾಧನೆ ಮಾಡಿರುವ ವಿದ್ಯಾರ್ಥಿಗಳನ್ನು ಸನ್ಮಾನಿಸಿದರು. ಮುಖ್ಯೋಪಾಧ್ಯಾಯರಾದ ಬಿ.ವಿ.ಭಾರತಿ, ವಿಜಯಲಕ್ಷ್ಮಿ ಹಾಜರಿದ್ದರು.



ಚಿಕ್ಕಬಾಣಾವರ ಗಣಪತಿನಗರದಲ್ಲಿ ಅಂಗನವಾಡಿಗಳ ಮಕ್ಕಳಿಗೆ ಹ್ಯೂಮನ್ ರೈಟ್ಸ್ ಪ್ರೊಟೆಕ್ಷನ್ ಕಮಿಟಿ ಆಯೋಜಿಸಿದ್ದ ಕ್ರೀಡಾಕೂಟದಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಕಮಿಟಿ ರಾಜ್ಯಾಧ್ಯಕ್ಷ ಬಿ.ಎಂ. ಚಿಕ್ಕಣ್ಣ, ಬೆಂಗಳೂರು ನಗರ ಉಪಾಧ್ಯಕ್ಷ ಚಾಂದ್ ಪಾಷ, ಆನೇಕಲ್ ಪುರಸಭೆ ಮುಖ್ಯ ಅಧಿಕಾರಿ ಎಚ್.ಎ. ಕುಮಾರ್, ಸಹಾಯಕ ಪೊಲೀಸ್ ಕಮಿಷನರ್ ಮೇರಿ ಶೈಲಜಾ, ಸಿಡಿಪಿಒ ಶಕುಂತಲಾ, ಉಪ ತಹಶಿಲ್ದಾರ್ ವೆಂಕಟೇಶಲು ಉಪಸ್ಥಿತರಿದ್ದರು

ನಗರದ ಪೂರ್ವ ಭಾಗದಲ್ಲಿ ಟ್ಯಾಂಕರ್‌ಗಳ ಓಡಾಟ ಆರಂಭ ● ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸುವ ಆತಂಕ

ಬೇಸಿಗೆ ಆರಂಭ, ನೀರಿನ ಸಮಸ್ಯೆಯೂ ಶುರು

● ಗಾಣಧಾಳು ಶ್ರೀಕಂಠ

55	₹90	287
ಕಾವೇರಿ ಸಂಪರ್ಕ ಕೇಂದ್ರಗಳು	1000 ಲೀಟರ್ ನೀರಿಗೆ ದರ	ನೀರು ಪೂರೈಸುವ ಟ್ಯಾಂಕರ್‌ಗಳು

ಬೆಂಗಳೂರು: ನಗರದಲ್ಲಿ ಉಷ್ಣಾಂಶ 30 ಡಿಗ್ರಿ ಸೆಲ್ಸಿಯಸ್‌ಗೆ ತಲುಪುತ್ತಿರುವಂತೆಯೇ ವಿವಿಧ ಭಾಗಗಳಲ್ಲಿ ಅಂತರ್ಜಲ ಮಟ್ಟ ಇಳಿಯುತ್ತಿದ್ದು, ಅಲ್ಲಲ್ಲಿ ನೀರಿನ ಸಮಸ್ಯೆ ಕಾಣಿಸಿಕೊಳ್ಳಲು ಆರಂಭವಾಗಿದೆ. ಬೆಂಗಳೂರು ಪೂರ್ವಭಾಗದ ಕೆಲವು ಬಡಾವಣೆಗಳಲ್ಲಿ ನೀರಿನ ಟ್ಯಾಂಕರ್‌ಗಳ ಓಡಾಟ ಶುರುವಾಗಿದೆ.

ತಿಂಗಳ ಹಿಂದೆ ಭಾರತೀಯ ವಿಜ್ಞಾನ ಸಂಸ್ಥೆಯ(ಐಐಎಸ್‌ಸಿ) ವಿಜ್ಞಾನಿಗಳು ನಗರದ 80 ವಾರ್ಡ್‌ಗಳಲ್ಲಿ ಫೆಬ್ರುವರಿ–ಏಪ್ರಿಲ್ ನಡುವೆ ಅಂತರ್ಜಲ ಕುಸಿಯುವ ಸಾಧ್ಯತೆ ಇದೆ ಎಂಬ ವರದಿ ನೀಡಿ, ಎಚ್ಚರಿಸಿದ್ದರು. ಅದರಂತೆ, ವಿಜ್ಞಾನಿಗಳು ಉಲ್ಲೇಖಿಸಿದ್ದ ಕೆಲವು ಬಡಾವಣೆಗಳಲ್ಲಿ ಅಂತರ್ಜಲ ಕುಸಿತದ ‘ಪರಿಣಾಮ’ ಗೋಚರಿಸುತ್ತಿದ್ದು, ನೀರಿನ ಕೊರತೆಯ ಸಮಸ್ಯೆಯೂ ಆರಂಭವಾಗಿದೆ.

ಟ್ಯಾಂಕರ್ ಓಡಾಟ ಶುರು: ಬೆಂಗಳೂರು ಪೂರ್ವ ವ್ಯಾಪ್ತಿಯ ಕೆ.ಆರ್. ಪುರ ವ್ಯಾಪ್ತಿಯ ಕನಕನಗರ, ಚನ್ನಸಂದ್ರ, ಕಲ್ಕೆರೆ ಭಾಗದಲ್ಲಿ ನೀರಿನ ಸಮಸ್ಯೆ ಹೆಚ್ಚಿದೆ. ಇಲ್ಲೆಲ್ಲ ಟ್ಯಾಂಕರ್‌ಗಳ ಓಡಾಟ ಶುರುವಾಗಿದೆ. ರಾಮಮೂರ್ತಿ ನಗರ, ಮುನ್ನೇಕೊಳಾಲು ಸುತ್ತಮುತ್ತಲ ಪ್ರದೇಶಗಳಲ್ಲಿ ಹೊಸದಾಗಿ ಕಾವೇರಿ ನೀರಿನ ಸಂಪರ್ಕ ಪಡೆದವರಿಗೂ ಸಮರ್ಪಕವಾಗಿ ನೀರು ಪೂರೈಕೆಯಾಗುತ್ತಿಲ್ಲ ಎಂಬ ದೂರುಗಳಿವೆ. ಜಲಮಂಡಳಿಗೆ ಕರೆ ಮಾಡಿದರೂ ಸರಿಯಾಗಿ ಪ್ರತಿಕ್ರಿಯಿಸುತ್ತಿಲ್ಲ. ಟ್ಯಾಂಕರ್‌ಗಳಿಗೆ ಇವತ್ತು ಕರೆ ಮಾಡಿದರೆ, ನಾಳೆ ಬರುತ್ತದೆ ಎಂದು ನಾಗರಿಕರು ದೂರುತ್ತಾರೆ. ಕಳೆದ ವರ್ಷ, ಜಲಮಂಡಳಿಯು ವಿವಿಧ ಬಡಾವಣೆಗಳಲ್ಲಿ ಅಲ್ಲಲ್ಲಿ ಸಿಂಟೆಕ್ಸ್ ಟ್ಯಾಂಕ್‌ಗಳನ್ನು ಇಟ್ಟು, ಟ್ಯಾಂಕರ್ ಮೂಲಕ ನೀರು ಪೂರೈಸುತ್ತಿತ್ತು. ಈ ವರ್ಷ ಈ ರೀತಿಯ ವ್ಯವಸ್ಥೆಗೆ ಇನ್ನೂ ಚಾಲನೆ ನೀಡಿಲ್ಲ. ದಿನ ಕಳೆದಂತೆ ನೀರಿನ ಸಮಸ್ಯೆ ಇನ್ನೂ ಹೆಚ್ಚು ಬಿಗಡಾಯಿಸುವ ಸಾಧ್ಯತೆ ಇದ್ದು, ಟ್ಯಾಂಕರ್ ಮೂಲಕ ನೀರಿನ ಪೂರೈಕೆಗೆ ವ್ಯವಸ್ಥೆ ಮಾಡಬೇಕು ಎಂದು ಕಲ್ಕೆರೆ ನಿವಾಸಿ ಚಂದ್ರಕಲಾ ಒತ್ತಾಯಿಸಿದರು.


ಕೆ.ಆರ್.ಪುರ ಭಾಗದ ಕನಕನಗರದಲ್ಲಿ ಟ್ಯಾಂಕರ್ ನೀರು ಪೂರೈಕೆಯಾಗುತ್ತಿದೆ

ಕೆರೆ ಬರಿದು, ಅಂತರ್ಜಲ ಕುಸಿತ: ಬೇಗೂರು, ಹುಳಿಮಾವು ಕೆರೆಗಳು ಬತ್ತಿ ಹೋಗಿರುವ ಕಾರಣ, ಸುತ್ತಮುತ್ತಲ ಪ್ರದೇಶಗಳಲ್ಲಿರುವ ಕೊಳವೆಬಾವಿಗಳಲ್ಲಿ ನೀರಿನ ಮಟ್ಟ ಕುಸಿದಿದೆ. ಇನ್ನೊಂದೆಡೆ, ಸಂಪರ್ಕ ಶುಲ್ಕ ದುಬಾರಿ ಹಾಗೂ ಅಗತ್ಯವಿರುವಷ್ಟು ನೀರು ಪೂರೈಸುವ ಖಾತರಿ ಇಲ್ಲದ ಕಾರಣಕ್ಕಾಗಿ ಹಲವು ವಸತಿ ಸಮುಚ್ಚಯಗಳು ಕಾವೇರಿ ನೀರಿನ ಸಂಪರ್ಕ ಪಡೆದಿಲ್ಲ. ಬಹುತೇಕರು ಖಾಸಗಿ ಟ್ಯಾಂಕರ್ ಮತ್ತು ಅಂತರ್ಜಲವನ್ನೇ ಅವಲಂಬಿಸಿದ್ದಾರೆ. ಇದು ಅಂತರ್ಜಲ ಕುಸಿತಕ್ಕೆ, ನೀರಿನ ಕೊರತೆ ಎದುರಾಗಲು ಪರೋಕ್ಷವಾಗಿ ಕಾರಣ ಎನ್ನುವುದು ಸ್ಥಳೀಯರ ಅಭಿಪ್ರಾಯ.

ರಾಜರಾಜೇಶ್ವರಿ ನಗರ ವ್ಯಾಪ್ತಿಯ ಅಂದ್ರಹಳ್ಳಿ, ವಿದ್ಯಮಾನ್ಯನಗರ, ವೀರಭದ್ರನಗರ ಸುತ್ತಮುತ್ತಲಿನ ಪ್ರದೇಶಗಳಲ್ಲೂ ಬಿಬಿಎಂಪಿಯ ಕೊಳವೆ ಬಾವಿಗಳಲ್ಲಿ ನೀರಿನ ಮಟ್ಟ ಕಡಿಮೆಯಾಗಿದೆ. ಇಲ್ಲಿ ಕಾವೇರಿ ನೀರಿನ ಸಂಪರ್ಕ ಪಡೆದ ಹಲವು ಮನೆಗಳಿಗೆ ಇನ್ನೂ ನೀರು ಪೂರೈಕೆಯಾಗುತ್ತಿಲ್ಲ. ಸಮಸ್ಯೆ ಇನ್ನಷ್ಟು ಬಿಗಡಾಯಿಸುವ ಮುನ್ನ ಜಲಮಂಡಳಿ ಈ ಬಗ್ಗೆ ಗಮನ ಹರಿಸಿ ಪರಿಹಾರ ನೀಡಬೇಕೆಂಬುದು ನಾಗರಿಕರ ಆಗ್ರಹ.


ನೀರಿನ ಬವಣೆ ಹೆಚ್ಚುತ್ತಿದೆ. ಶುದ್ಧ ನೀರಿನ ಘಟಕಗಳಲ್ಲಿ 20 ಲೀಟರ್ ಕ್ಯಾನ್‌ಗೆ ₹15 ರಿಂದ ₹20 ಕೊಡುತ್ತಿದ್ದೇವೆ. ಜಲಮಂಡಳಿ ಸಮರ್ಪಕವಾಗಿ ನೀರು ಪೂರೈಸುತ್ತಿಲ್ಲ
ಜ್ಯೋತಿ, ಕಲ್ಕೆರೆ ನಿವಾಸಿ

‘ಕಾವೇರಿ ಕೇಂದ್ರ’ ಮುಂದಿನ ವಾರ


ವಿ. ರಾಮ್ ಪ್ರಸಾತ್ ಮನೋಹರ್

‘ನಗರದಲ್ಲಿನ ನೀರಿನ ಕೊರತೆ ನೀಗಿಸಲು ಜಲಮಂಡಳಿ ಸನ್ನದ್ಧವಾಗಿದೆ. ಸಮಸ್ಯೆ ಉಂಟಾಗಬಹುದಾದ 55 ಕಡೆಗಳಲ್ಲಿ ‘ಕಾವೇರಿ ಸಂಪರ್ಕ ಕೇಂದ್ರ’ ಗಳನ್ನು ತೆರೆಯುತ್ತಿದ್ದು, ಮುಂದಿನ ವಾರದಿಂದ ಕಾರ್ಯಾರಂಭ ಮಾಡಲಿವೆ. ಕೇಂದ್ರದ ಮೂಲಕ ನೀರು ಪಡೆಯಬಹುದು’ ಎಂದು ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಅಂತರ್ಜಲ ಮಟ್ಟ ಕುಸಿಯಬಹುದಾದ ಪ್ರದೇಶಗಳನ್ನು ಗುರುತಿಸಿ, ಅಲ್ಲಿ ಈ ಕೇಂದ್ರಗಳನ್ನು ತೆರೆಯಲಾಗುತ್ತಿದೆ. ಈ ಕೇಂದ್ರಗಳಲ್ಲಿ 1,000 ಲೀಟರ್ ಕಾವೇರಿ ನೀರಿಗೆ ₹90 ದರ ನಿಗದಿ ಮಾಡಿದೆ. ಗ್ರಾಹಕರಿಗೆ ಆದ್ಯತೆ ನೀಡಲಾಗುತ್ತಿದೆ. ನಾಗರಿಕರು ಆನ್‌ಲೈನ್‌ನಲ್ಲಿ ಬೇಡಿಕೆ ಸಲ್ಲಿಸಿ, ಈ ಕೇಂದ್ರಗಳ ಮೂಲಕ ನೀರು ಪಡೆಯಬಹುದು’ ಎಂದು ಅವರು ವಿವರಿಸಿದರು.

ಕಾವೇರಿ ಕೇಂದ್ರದಿಂದ ನೀರು ಖರೀದಿಗೆ ‘ನಗದು ರಹಿತ ಪಾವತಿ’ ವ್ಯವಸ್ಥೆ ಮಾಡಲಾಗಿದೆ. ಈ ಕೇಂದ್ರಗಳಿಗೆ ನೀರು ಪೂರೈಸಲು 287 ಖಾಸಗಿ ಟ್ಯಾಂಕರ್‌ಗಳನ್ನು ಒಪ್ಪಂದದ ಮೇಲೆ ಬಾಡಿಗೆ ಪಡೆಯಲಾಗುತ್ತಿದೆ ಎಂದರು.

‘ಕಾವೇರಿ’ ಸಂಪರ್ಕಕ್ಕೆ ನಿರಾಸಕ್ತಿ

ಕಾವೇರಿ ಐದನೇ ಹಂತದ ಯೋಜನೆಯಡಿ ಹೊಸದಾಗಿ ನೀರಿನ ಸಂಪರ್ಕ ನೀಡಲು ಜಲಮಂಡಳಿ 110 ಹಳ್ಳಿಗಳಲ್ಲಿ ಅಭಿಯಾನ ನಡೆಸುತ್ತಿದೆ. ಜಲಮಂಡಳಿಯ ಮಾಹಿತಿ ಪ್ರಕಾರ, ಐದನೇ ಹಂತದಲ್ಲಿ 775 ದಶಲಕ್ಷ ಲೀಟರ್ ನೀರು ಲಭ್ಯವಿದೆ. ಸದ್ಯ ಸುಮಾರು 150 ಎಂಎಲ್‌ಡಿಯಷ್ಟೇ ನೀರು ಬಳಕೆಯಾಗುತ್ತಿದೆ. ಈವರೆಗೆ 17 ಸಾವಿರ ಮಂದಿಯಷ್ಟೇ ಹೊಸದಾಗಿ ಸಂಪರ್ಕ ಪಡೆದಿದ್ದಾರೆ. ಈ ವರ್ಷವೂ ಇಂಥ ಸ್ಥಳಗಳಿಗೆ ಸಿಂಟೆಕ್ಸ್ ಟ್ಯಾಂಕ್ ಅಳವಡಿಸಿ, ಟ್ಯಾಂಕರ್ ಮೂಲಕ ನೀರು ಪೂರೈಸಲು ಜಲಮಂಡಳಿ ಸಿದ್ಧತೆ ಮಾಡಿಕೊಳ್ಳುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಪುಷ್ಪ ಕೃಷಿಗಿಲ್ಲ ಫಸಲ್ ಬಿಮಾ: ಕೇಂದ್ರ ಕೃಷಿ ಸಚಿವ ಠಾಕೂರ್

ನವದೆಹಲಿ: ಫಸಲ್ ಬಿಮಾ ಯೋಜನೆಯ ವ್ಯಾಪ್ತಿಗೆ ಪುಷ್ಪ ಕೃಷಿ ಹಾಗೂ ಹೈನುಗಾರಿಕೆಯನ್ನು ಸೇರಿಸಿಲ್ಲ ಎಂದು ಕೇಂದ್ರ ಕೃಷಿ ಖಾತೆ ರಾಜ್ಯ ಸಚಿವ ರಾಮನಾಥ ಠಾಕೂರ್ ತಿಳಿಸಿದರು.

ಲೋಕಸಭೆಯಲ್ಲಿ ಮಂಗಳವಾರ ಪ್ರಶ್ನೋತ್ತರ ಅವಧಿಯಲ್ಲಿ ಚಿಕ್ಕಬಳ್ಳಾಪುರ ಸಂಸದ ಡಾ.ಕೆ.ಸುಧಾಕರ್ ಕೇಳಿದ ಪ್ರಶ್ನೆಗೆ ಉತ್ತರ ನೀಡಿದ ಸಚಿವರು, ‘ಪ್ರಸ್ತುತ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಪುಷ್ಪ ಕೃಷಿಗೆ ಯಾವುದೇ ವಿಮೆ ಯೋಜನೆ ಇಲ್ಲ’ ಎಂದರು.

‘ಫಸಲ್ ಬಿಮಾ ಯೋಜನೆಯನ್ನು 2016–17ರಲ್ಲಿ ಜಾರಿಗೆ ತರಲಾಗಿತ್ತು. ಅಂದಿನಿಂದ ಇಲ್ಲಿಯವರೆಗೆ ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳ 19.68 ಕೋಟಿ ರೈತರಿಗೆ ₹1.73 ಲಕ್ಷ ಕೋಟಿ ವಿಮೆ ಪಾವತಿ ಮಾಡಲಾಗಿದೆ’ ಎಂದು ಮಾಹಿತಿ ನೀಡಿದರು.

‘ಹೆಚ್ಚಿನ ವಿಮಾ ಕ್ಲೇಮುಗಳನ್ನು ವಿಮಾ ಕಂಪನಿಗಳು ನಿಗದಿತ ಸಮಯದಲ್ಲಿ ಇತ್ಯರ್ಥಪಡಿಸುತ್ತವೆ. ಆದರೆ, ಕ್ಲೇಮುಗಳ ಪಾವತಿ ವಿಳಂಬ, ರಾಜ್ಯ ಸರ್ಕಾರ ಹಾಗೂ ವಿಮಾ ಕಂಪನಿಗಳ ನಡುವೆ ವಿವಾದ, ನಿಧಿಯ ಪಾಲು ಪಾವತಿಯಲ್ಲಿ ರಾಜ್ಯ ಸರ್ಕಾರದಿಂದ ವಿಳಂಬ, ಸಾಕಷ್ಟು ಸಿಬ್ಬಂದಿಯನ್ನು ವಿಮಾ ಕಂಪನಿ ನಿಯೋಜನೆ ಮಾಡದಿರುವುದು ಸೇರಿದಂತೆ ಹಲವು ಕಾರಣಗಳಿಂದ ಸಮಸ್ಯೆ ಸೃಷ್ಟಿಯಾಗಿತ್ತು. ಈಗ ಎಲ್ಲ ಸಮಸ್ಯೆ ಬಗೆಹರಿಸಲಾಗಿದೆ’ ಎದು ತಿಳಿಸಿದರು.

ಚುನಾವಣೆ ಪ್ರಕ್ರಿಯೆ ಸುಧಾರಣೆ: ಪಕ್ಷಗಳ ಜೊತೆ ಸಭೆ- ಆಯೋಗ



ನವದೆಹಲಿ(ಪಿಟಿಐ): ಮತದಾರರ ಪಟ್ಟಿಯಲ್ಲಿ ದೋಷಗಳ ಬಗ್ಗೆ ದೂರು ಸೇರಿದಂತೆ ಚುನಾವಣಾ ಪ್ರಕ್ರಿಯೆ ಕುರಿತು ವ್ಯಾಪಕ ಆರೋಪಗಳು ಕೇಳಿಬರುತ್ತಿರುವ ಕಾರಣ, ಎಲ್ಲ ರಾಜಕೀಯ ಪಕ್ಷಗಳೊಂದಿಗೆ ಸಭೆ ನಡೆಸುವುದಾಗಿ ಚುನಾವಣಾ ಆಯೋಗ ಮಂಗಳವಾರ ಹೇಳಿದೆ.

ಈ ಸಂಬಂಧ ಎಲ್ಲ ರಾಜಕೀಯ ಪಕ್ಷಗಳಿಗೆ ಪತ್ರ ಬರೆದಿರುವ ಆಯೋಗವು, ‘ಸ್ಥಾಪಿತ ಕಾನೂನುಗಳ ಪ್ರಕಾರ, ಚುನಾವಣಾ ಪ್ರಕ್ರಿಯೆಯನ್ನು ಮತ್ತಷ್ಟು ಬಲಪಡಿಸುವ ಕುರಿತು ಚರ್ಚಿಸಬೇಕಿದೆ. ಎರಡೂ ಕಡೆಯವರಿಗೆ ಒಪ್ಪಿತವಾಗುವ ದಿನಾಂಕದಂದು ಈ ಸಭೆ ನಡೆಸುವುದಾಗಿ’ ತಿಳಿಸಿದೆ.

ಪಕ್ಷಗಳ ಅಧ್ಯಕ್ಷರು ಹಾಗೂ ಹಿರಿಯ ಸದಸ್ಯರೊಂದಿಗೆ ಚರ್ಚಿಸುವುದಾಗಿಯೂ ಆಯೋಗ ಪ್ರಕಟಣೆಯಲ್ಲಿ ತಿಳಿಸಿದೆ.

ಅಲ್ಲದೇ, ಮತದಾರರ ನೋಂದಣಿ ಅಧಿಕಾರಿಗಳು(ಇಆರ್‌ಒ), ಜಿಲ್ಲಾ ಚುನಾವಣಾ ಅಧಿಕಾರಿಗಳು(ಡಿಇಒ) ಹಾಗೂ ಮುಖ್ಯ ಚುನಾವಣಾ ಅಧಿಕಾರಿಗಳ (ಸಿಇಒ) ಮಟ್ಟದಲ್ಲಿ ‘ಬಗೆಹರಿಯದ ಯಾವುದೇ ಸಮಸ್ಯೆ’ ಕುರಿತು ಏಪ್ರಿಲ್ 30ರ ಒಳಗಾಗಿ ಸಲಹೆಗಳನ್ನು ನೀಡುವಂತೆ ಎಲ್ಲ ರಾಷ್ಟ್ರೀಯ ಮತ್ತು ಪ್ರಾದೇಶಿಕ ಪಕ್ಷಗಳನ್ನು ಆಯೋಗ ಕೋರಿದೆ.

‘ರಾಜಕೀಯ ಪಕ್ಷಗಳೊಂದಿಗೆ ನಿಯಮಿತವಾಗಿ ಸಭೆ ನಡೆಸಬೇಕು, ಅಲ್ಲಿ ವ್ಯಕ್ತವಾಗು ಸಲಹೆಗಳಿಗೆ ಪರಿಹಾರ ಕಂಡುಕೊಳ್ಳಬೇಕು ಹಾಗೂ ಈ ಕುರಿತು ಮಾರ್ಚ್ 31ರ ಒಳಗಾಗಿ ವರದಿ ಸಲ್ಲಿಸಬೇಕು’ ಎಂದು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ ಕುಮಾರ್ ಅವರು ಕಳೆದ ವಾರ ನಡೆದಿದ್ದ ಆಯೋಗದ ಸಮಾವೇಶದಲ್ಲಿ ಎಲ್ಲ ಸಿಇಒ, ಡಿಇಒ ಹಾಗೂ ಇಆರ್‌ಒಗಳಿಗೆ ಸೂಚಿಸಿದ್ದರು.

ರಫ್ತುದಾರರಿಗೆ ನೆರವು: ಕೇಂದ್ರ ಚಿಂತನೆ

ಪ್ರಜಾವಾಣಿ ವಾರ್ತೆ


ಪೀಯೂಷ್ ಗೋಯೆಲ್

ನವದೆಹಲಿ: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಆಕ್ರಮಣಕಾರಿ ವ್ಯಾಪಾರ ನೀತಿಗಳಿಂದಾಗಿ ಸಂಕಷ್ಟ ಎದುರಿಸಲಿರುವ ದೇಶದ ರಫ್ತುದಾರರಿಗೆ ನೆರವಿಗೆ ಧಾವಿಸಲು ಕೇಂದ್ರ ಸರ್ಕಾರ ಚಿಂತನೆ ನಡೆಸುತ್ತಿದೆ.

ತಿಂಗಳ ಒಳಗಾಗಿ ರಫ್ತುದಾರರಿಗೆ ಹಣಕಾಸು ನೆರವು ಹಾಗೂ ಹಲವು ಪ್ರೋತ್ಸಾಹಕ ಕ್ರಮಗಳನ್ನು ಕೇಂದ್ರ ಸರ್ಕಾರ ಘೋಷಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಇದರ ಭಾಗವಾಗಿ, ವಾಣಿಜ್ಯ ಮತ್ತು ಕೈಗಾರಿಕೆ ಸಚಿವ ಪೀಯೂಷ್ ಗೋಯೆಲ್ ಅವರು ಮಾರ್ಚ್ 13ರಂದು ರಫ್ತುದಾರರು ಹಾಗೂ ರಫ್ತು ಉತ್ತೇಜನಾ ಮಂಡಳಿಯ ಪ್ರತಿನಿಧಿಗಳ ಜೊತೆ ಸಭೆ ನಡೆಸಲಿದ್ದಾರೆ. ಜಾಗತಿಕವಾಗಿ ವ್ಯಾಪಾರ ವಲಯದಲ್ಲಿ ಅನಿಶ್ಚಿತತೆ ಹೆಚ್ಚುತ್ತಿರುವ ಕಾರಣ, ಹಲವು ಪ್ರೋತ್ಸಾಹಕ ಯೋಜನೆಗಳನ್ನು ಘೋಷಿಸುವಂತೆ ರಫ್ತುದಾರರು ಈ ಸಭೆಯಲ್ಲಿ ಬೇಡಿಕೆ ಮಂಡಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಟ್ರಂಪ್ ಅವರು ಘೋಷಿಸಿರುವ ಸುಂಕ ನೀತಿಯು, ಫೆಬ್ರುವರಿಗೆ ಸಂಬಂಧಿಸಿದ ದೇಶದ ರಫ್ತು ವ್ಯವಹಾರದ ಮೇಲೆ ಪರಿಣಾಮ ಬೀರಿರುವ ಸಾಧ್ಯತೆ ಇದೆ. ಫೆಬ್ರುವರಿಯಲ್ಲಿ ರಫ್ತಿಗೆ ಸಂಬಂಧಿಸಿದ ದತ್ತಾಂಶಗಳನ್ನು ವಾಣಿಜ್ಯ ಸಚಿವಾಲಯ ಮಾರ್ಚ್ 17ರಂದು ಬಿಡುಗಡೆ ಮಾಡಲಿದ್ದು, ಆಗ, ಈ ಕುರಿತ ಸ್ಪಷ್ಟ ಚಿತ್ರಣ ಸಿಗಲಿದೆ ಎಂದು ಮತ್ತೊಂದು ಹೇಳಿವೆ.

ಜನವರಿಯಲ್ಲಿ ಭಾರತವು ₹ 3.17 ಲಕ್ಷ ಕೋಟಿ ಮೌಲ್ಯದ (36.43 ಶತಕೋಟಿ ಡಾಲರ್) ಸರಕುಗಳನ್ನು ರಫ್ತು ಮಾಡಿದೆ. ಕಳೆದ ವರ್ಷ ಜನವರಿ ಹಾಗೂ ಡಿಸೆಂಬರ್‌ನಲ್ಲಿನ ರಫ್ತಿಗೆ ಹೋಲಿಸಿದರೆ, ರಫ್ತು ಪ್ರಮಾಣದಲ್ಲಿ ಇಳಿಕೆ ಕಂಡುಬಂದಿದೆ.

2024ರ ಜನವರಿಯಲ್ಲಿ ₹3.25 ಲಕ್ಷ ಕೋಟಿ (37.32 ಶತಕೋಟಿ ಡಾಲರ್) ಹಾಗೂ ಡಿಸೆಂಬರ್‌ನಲ್ಲಿ ₹3.31 ಲಕ್ಷ ಕೋಟಿ (38.01 ಶತಕೋಟಿ ಡಾಲರ್) ಮೌಲ್ಯದಷ್ಟು ಸರಕುಗಳನ್ನು ರಫ್ತು ಮಾಡಲಾಗಿತ್ತು ಎಂದು ಮೂಲಗಳು ಹೇಳಿವೆ.

ಗ್ರೇಟರ್ ಬೆಂಗಳೂರು: ಭೂಸ್ವಾಧೀನಕ್ಕೆ ವಿರೋಧ

ಟೌನ್‌ಶಿಪ್ ಯೋಜನೆಗೆ ವಿರೋಧ; ಭೂ ಸ್ವಾಧೀನದ ವಿರುದ್ಧ ಪಾದಯಾತ್ರೆಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಬಿಡದಿ (ರಾಮನಗರ): ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಜಿಬಿಡಿಎ) ಟೌನ್‌ಶಿಪ್ ನಿರ್ಮಾಣಕ್ಕೆ ತಾಲ್ಲೂಕಿನ ಬಿಡದಿ ಹೋಬಳಿ ಸುತ್ತಮುತ್ತ 9,600 ಎಕರೆ ಭೂ ಸ್ವಾಧೀನಕ್ಕೆ ವಿರೋಧ ವ್ಯಕ್ತಪಡಿಸಿರುವ ಕೆಲ ಗ್ರಾಮಸ್ಥರು ಭೂ ಸ್ವಾಧೀನದ ವಿರುದ್ಧ ಜಿಲ್ಲಾಧಿಕಾರಿ ಕಚೇರಿವರೆಗೆ ಪಾದಯಾತ್ರೆ ನಡೆಸಲು ನಿರ್ಧರಿಸಿದ್ದಾರೆ.


ಯೋಜನೆ ವಿರೋಧಿಸಿ ಭೈರಮಂಗಲ ಮತ್ತು ಕಂಚುಗಾರನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಸ್ಥರು ಇಲ್ಲಿನ ಹೊಸೂರು ಗ್ರಾಮದ ಮದ್ದೂರಮ್ಮ ದೇವಸ್ಥಾನದ ಆವರಣದಲ್ಲಿ ಮಂಗಳವಾರ ಸಭೆ ಸೇರಿ ಮುಂದಿನ ಹೋರಾಟದ ರೂಪುರೇಷೆಗಳ ಕುರಿತು ಚರ್ಚಿಸಿದರು. ಹೊಸೂರು ಅಥವಾ ಭೈರಮಂಗಲದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಶೀಘ್ರದಲ್ಲೇ ಪಾದಯಾತ್ರೆ ನಡೆಸಿ ಜಿಲ್ಲಾಧಿಕಾರಿಗೆ ಮನವಿ ಕೊಡಲು ನಿರ್ಣಯ ಕೈಗೊಂಡರು.


ಸಭೆಯಲ್ಲಿ ಜಿಬಿಡಿಎ ಭೂ ಸ್ವಾಧೀನ ವಿರುದ್ಧದ ಹೋರಾಟಕ್ಕೆ ಕೈ ಎತ್ತಿ ಬೆಂಬಲ ಸೂಚಿಸಿದ ಗ್ರಾಮಸ್ಥರು

ಸಭೆಯಲ್ಲಿ ಕೆಲ ಮುಖಂಡರ ಮಾತುಗಳಲ್ಲಿ ರಾಜಕೀಯ ಇಣುಕಿದ್ದರಿಂದ ಮಾತಿನ ಚಕಮಕಿ ನಡೆದು, ಕೈ–ಕೈ ಮಿಲಾಯಿಸುವ ಹಂತಕ್ಕೂ ಹೋಯಿತು.

ಸಮಿತಿ ರಚನೆ: ಹೋರಾಟವನ್ನು ಪಕ್ಷಾತೀತ ಹಾಗೂ ರಾಜಕೀಯ ರಹಿತವಾಗಿ ಮುನ್ನಡೆಸಲು ಜಿಬಿಡಿಎ ವ್ಯಾಪ್ತಿಗೆ ಸೇರಿಸಿರುವ ಪ್ರತಿ ಗ್ರಾಮಗಳಿಂದ ತಲಾ ಮೂವರಿರುವ ಹೋರಾಟ ಸಮಿತಿ ರಚಿಸಲು ಮುಖಂಡರು ನಿರ್ಧರಿಸಿದರು. ಸಮಿತಿಯಲ್ಲಿ ಹೋರಾಟದ ಸ್ವರೂಪವನ್ನು ಸಮಿತಿಯಲ್ಲಿ ಚರ್ಚಿಸಿ ಅಂಗೀಕರಿಸಿ ಮುಂದುವರಿಯಲು ತೀರ್ಮಾನಿಸಿದರು.

ಒಪ್ಪಿಗೆ ಪಡೆಯದೆ ನಿರ್ಧಾರ: ‘ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಟೌನ್‌ಶಿಪ್ ನಿರ್ಮಾಣ ಯೋಜನೆಗೆ ಸ್ಥಳೀಯರ ಒಪ್ಪಿಗೆ ಮತ್ತು ವಿಶ್ವಾಸ ಪಡೆಯದೆ ಗ್ರಾಮಗಳನ್ನು ಜಿಬಿಡಿಎ ವ್ಯಾಪ್ತಿಗೆ ಸೇರಿಸಲಾಗಿದೆ. ಯಾರಿಗೋ ಅನುಕೂಲ ಮಾಡಿಕೊಡಲು ಮನಸ್ಸಿಗೆ ಬಂದಂತೆ ಸರ್ಕಾರ ನಿರ್ಧಾರ ಕೈಗೊಂಡಿದೆ. ಇದರ ವಿರುದ್ಧ ನಾವು ಸುಮ್ಮನೆ ಕೂರುವುದಿಲ್ಲ. ದುಡ್ಡಿನ ಆಸೆಗೆ ಭೂಮಿ ಕೊಟ್ಟರೆ ಮುಂದೊಂದು ದಿನ ನಾವೆಲ್ಲರೂ ಬೀದಿ ಪಾಲಾಗುವುದು ಖಚಿತ’ ಎಂದು ಹೊಸೂರು ಗ್ರಾಮಸ್ಥರು ಆತಂಕ ವ್ಯಕ್ತಪಡಿಸಿದರು.



ಹೊಸ ಚಿಗುರ ನಿರೀಕ್ಷೆಯಲ್ಲಿ....

ವಸಂತಾಗಮನದ ನಿರೀಕ್ಷೆಯಲ್ಲಿರುವ ಮರದಿಂದ ಹಾರುತ್ತಿದ್ದ ಹಕ್ಕಿಯೊಂದು ಕ್ಯಾಮೆರಾ ಕಣ್ಣಿಗೆ ವಿಧಾನಸೌದದ ಬಳಿ ಮಂಗಳವಾರ ಸೆರೆಯಾಗಿದ್ದು ಹೀಗೆ
ಪ್ರಜಾವಾಣಿ ಚಿತ್ರ: ಎಂ. ಎಸ್. ಮಂಜುನಾಥ್

ಬಿಬಿಎಂಪಿಯನ್ನು ಏಳು ಭಾಗವಾಗಿ ವಿಭಜಿಸಿದರೆ ಅಸಮತೋಲನ: ವಿರೋಧ ಪಕ್ಷಗಳ ಆತಂಕ

‘ಗ್ರೇಟರ್ ಬೆಂಗಳೂರು’ ರಚನೆ ಕನ್ನಡಿಗರಿಗೆ ಕಂಟಕ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ ಕಾಯ್ದೆಯಾಗಿ ಜಾರಿಯಾದರೆ ಬೆಂಗಳೂರು ಛಿದ್ರವಾಗುತ್ತದೆ. ಕನ್ನಡಿಗರ ಅಸ್ತಿತ್ವಕ್ಕೆ ಧಕ್ಕೆ ಉಂಟಾಗುತ್ತದೆ. ಪಾಲಿಕೆಗಳಲ್ಲಿ ಅನ್ಯ ಭಾಷಿಕರ ಕೈ ಮೇಲಾಗುತ್ತದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಆತಂಕ ವ್ಯಕ್ತಪಡಿಸಿದರು.


ರಿಜ್ವಾನ್ ಅರ್ಷದ್

ಗ್ರೇಟರ್ ಬೆಂಗಳೂರು ಆಡಳಿತ ಮಸೂದೆಯ ಮೇಲಿನ ಚರ್ಚೆಯಲ್ಲಿ ಸೋಮವಾರ ಭಾಗವಹಿಸಿ ಮಾತನಾಡಿದ ಅವರು, ‘ಭವಿಷ್ಯದಲ್ಲಿ ಅನ್ಯ ಭಾಷಿಕ ಜನರು ಬೆಂಗಳೂರನ್ನು ಕೇಂದ್ರಾಡಳಿತ ಪ್ರದೇಶವಾಗಿ ಮಾರ್ಪಡಿಸುವುದರಲ್ಲಿ ಸಂದೇಹವೇ ಇಲ್ಲ. ಮೇಯರ್ ಪಟ್ಟವೂ ಕನ್ನಡಿಗರಿಗೆ ಸಿಗುವುದೂ ಕಷ್ಟ’ ಎಂದು ಅಭಿಪ್ರಾಯಪಟ್ಟರು.

ಡಿ.ಕೆ.ಶಿವಕುಮಾರ್ ಅವರು ತಾವು ಕೆಂಪೇಗೌಡರ ವಂಶದವರು ಎಂದು ಹೇಳಿಕೊಳ್ಳುತ್ತಾರೆ. ಕೆಂಪೇಗೌಡರು ಬೆಂಗಳೂರು ನಾಲ್ಕು ಗೋಪುರಗಳ ಮಧ್ಯೆಯೇ ಬೆಳೆಯಬೇಕು ಎಂದು ಕನಸು ಕಂಡಿದ್ದರು. ಎಲ್ಲರೂ ಒಟ್ಟಾಗಿ ಬಾಳಬೇಕು ಎಂದು 21 ಪೇಟೆಗಳ ನಿರ್ಮಾಣ ಮಾಡಿದ್ದರು. ಆದರೆ, ಶಿವಕುಮಾರ್ ಅವರು ಬೆಂಗಳೂರನ್ನು ಛಿದ್ರ ಮಾಡಲು ಹೊರಟಿದ್ದಾರೆ ಎಂದರು.

‘ಬೆಂಗಳೂರಿನಲ್ಲಿ ಕನ್ನಡಿಗರ ಸಂಖ್ಯೆ ಕಡಿಮೆ ಆಗಿ, ಅನ್ಯ ಭಾಷಿಕರ ಸಂಖ್ಯೆ ಹೆಚ್ಚಾದಾಗ, ನಮ್ಮ ಅವಧಿಯಲ್ಲಿ ಹೊರಗಿನ 110 ಹಳ್ಳಿಗಳನ್ನು ಸೇರಿಸಿ ಬಿಬಿಎಂಪಿ ಮಾಡಿದೆವು. ಇದರಿಂದ ಬೆಂಗಳೂರು ಕನ್ನಡಿಗರ ಕೈಯಿಂದ ತಪ್ಪಿ ಹೋಗುವುದಕ್ಕೆ ಕಡಿವಾಣ ಹಾಕಲಾಯಿತು’ ಎಂದು ಹೇಳಿದರು.


‘ಮಸೂದೆಯನ್ನು ಯಾರೂ ವಿರೋಧಿಸಿಲ್ಲ’



ಸಂವಿಧಾನದ 73 ಮತ್ತು 74ನೇ ತಿದ್ದುಪಡಿಗಳು ಬಿಬಿಎಂಪಿ ವಿಭಜನೆಗೆ ಅಡ್ಡಿಯಾಗುವುದಿಲ್ಲ ಎಂದು ಅಡ್ವೊಕೇಟ್ ಜನರಲ್ ಅಭಿಪ್ರಾಯ ನೀಡಿದ್ದಾರೆ. ಸಾರ್ವಜನಿಕ ಅಭಿಪ್ರಾಯವನ್ನೂ ಸಂಗ್ರಹಿಸಿದ್ದೇವೆ. ಮಸೂದೆಯನ್ನು ಯಾರೂ ವಿರೋಧಿಸಿಲ್ಲ. ತಮಿಳು ಮತ್ತು ತೆಲುಗು ಭಾಷಿಕರು ಹೆಚ್ಚಿನ ಸಂಖ್ಯೆ ಇರುವ ಪ್ರದೇಶಗಳಲ್ಲಿ ಅವರೇ ಮೇಯರ್ ಆಗುತ್ತಾರೆ ಎನ್ನುವ ಆತಂಕ ಸರಿಯಲ್ಲ? ಮೇಯರ್ ಹುದ್ದೆಯ ವಿಷಯದಲ್ಲಿ ಅದಕ್ಕೆ ಜಾತಿ, ಧರ್ಮ, ಭಾಷೆ ನೋಡಬೇಕೆ? ಕುರಿ ಕಾಯುತ್ತಿದ್ದ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದಾರೆ, ಚಹಾ ಮಾರುತ್ತಿದ್ದ ಮೋದಿ ಪ್ರಧಾನಿ ಆಗಿದ್ದಾರೆ. ಕೆಂಪೇಗೌಡರು ಕಟ್ಟಿದ ಗಡಿ ಗೋಪುರಗಳನ್ನು ದಾಟಿ ಬೆಂಗಳೂರು ಬೆಳೆಯದಂತೆ ಅಂದೇ ತಡೆಯಬೇಕಿತ್ತು. ಈ ಮಸೂದೆಯಲ್ಲಿ ಯಾವುದೇ ರಾಜಕೀಯವಿಲ್ಲ.

ಎಸ್.ಟಿ. ಸೋಮಶೇಖರ್, ಬಿಜೆಪಿ ಸದಸ್ಯ

‘ಬೆಂಗಳೂರಿಗೆ ಹೊಸ ದಿಕ್ಕು ನೀಡುವ ಪ್ರಯತ್ನ’


ಡಿ.ಕೆ. ಶಿವಕುಮಾರ್

‘ಬೆಂಗಳೂರಿನ ಬೆಳವಣಿಗೆಗೆ ಹೊಸ ದಿಕ್ಕು ನೀಡುವ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಮೂಲಸೌಕರ್ಯ ಅಭಿವೃದ್ಧಿ, ಕುಡಿಯುವ ನೀರು ಪೂರೈಕೆ, ತ್ಯಾಜ್ಯ ವಿಲೇವಾರಿ ಸೇರಿದಂತೆ ನಗರದ ದೊಡ್ಡ ಸವಾಲುಗಳನ್ನು ಎದುರಿಸಲು ಗ್ರೇಟರ್ ಬೆಂಗಳೂರ ಪ್ರಾಧಿಕಾರ ರಚಿಸುವುದು ಅನಿವಾರ್ಯ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ವಿರೋಧ ಪಕ್ಷಗಳ ಸದಸ್ಯರ ಆಕ್ಷೇಪಗಳಿಗೆ ಉತ್ತರಿಸಿದ ಅವರು, ‘ಪಾಲಿಕೆಯ ವ್ಯಾಪ್ತಿಯಲ್ಲಿನ ನಾಮನಿರ್ದೇಶಿತ ಸದಸ್ಯರಿಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಆಡಳಿತ ಮಂಡಳಿಯಲ್ಲಿ ಅಧಿಕಾರ ನೀಡುವುದಿಲ್ಲ. ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಪಾಲಿಕೆಗಳು ಮತ್ತು ಅಧಿಕಾರಿಗಳು ನಿಯಮಿತವಾಗಿ ಸಭೆ ನಡೆಸುವುದನ್ನು ಕಡ್ಡಾಯಗೊಳಿಸಲಾಗುವುದು’ ಎಂದರು.

‘ಬ್ರಿಟಿಷರಂತೆ ವಿಭಜಿಸುವುದು ಬೇಡ’



ಬ್ರಿಟಿಷರ ಕಾಲದಲ್ಲಿ ಬೆಂಗಳೂರು ದಂಡು ಮತ್ತು ನಗರ ಪ್ರದೇಶ ಎಂದು ವಿಭಜನೆಯಾಗಿತ್ತು. ಆಗ ಬ್ರಿಟಿಷರು ನೆಲಸಿದ್ದ ದಂಡು ಪ್ರದೇಶದಲ್ಲಿ ಐಷಾರಾಮಿ ಸೌಲಭ್ಯಗಳಿದ್ದರೆ, ಬಡವರು ನೆಲಸಿದ್ದ ನಗರ ಪ್ರದೇಶಗಳಲ್ಲಿ ಬಿನ್ನಿ ಮಿಲ್, ರಾಜಾ ಮಿಲ್, ಮಿನರ್ವ ಮಿಲ್ ಇದ್ದವು. ಆಗಿನಂತೆ ಈಗಲೂ ಬಡವರು ಮತ್ತು ಶ್ರೀಮಂತರು ವಾಸಿಸುವ ಪ್ರದೇಶಗಳನ್ನು ಪ್ರತ್ಯೇಕ ಪಾಲಿಕೆಗಳನ್ನಾಗಿ ವಿಭಜಿಸಬೇಡಿ. ಅದರಿಂದ ಕಡಿಮೆ ವರಮಾನ ಇರುವ ಪ್ರದೇಶಗಳ ಜನರು ಸಂಕಷ್ಟಕ್ಕೆ ಸಿಲುಕುತ್ತಾರೆ.

ಗ್ರೇಟ್ ಬ್ರಿಟನ್, ಗ್ರೇಟ್ ಅಲೆಕ್ಸಾಂಡರ್ ಎಂಬುದನ್ನು ಕೇಳಿದ್ದೆ. ಈಗ ನಮ್ಮ ಗ್ರೇಟ್ ಡಿ.ಕೆ. ಶಿವಕುಮಾರ್ ಅವರು ಗ್ರೇಟರ್ ಬೆಂಗಳೂರು ಮಸೂದೆ ತಂದಿದ್ದಾರೆ. ಬೆಂಗಳೂರಿಗೆ ₹ 1 ಲಕ್ಷ ಕೋಟಿ ಅನುದಾನ ತಂದಿದ್ದಾರೆ ಅದಕ್ಕಾಗಿ ಧನ್ಯವಾದ. ಅಧಿಕಾರ ಇಲ್ಲದಿದ್ದರೂ ಬಫರ್ ವಲಯದಲ್ಲಿ ರಸ್ತೆ ನಿರ್ಮಿಸಲು ಹೊರಟಿದ್ದಾರೆ.

ಮುನಿರತ್ನ, ಬಿಜೆಪಿ ಸದಸ್ಯ

ಮೋದಿ ಮಣಿಪುರ ಭೇಟಿಗೆ ವೀಸಾ ಬೇಕಿಲ್ಲ: ‘ಕೈ’ ವ್ಯಂಗ್ಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರವು ಮಣಿಪುರದ ಪರಿಸ್ಥಿತಿಯನ್ನು ನಿಭಾಯಿಸುತ್ತಿರುವ ರೀತಿಗೆ ವಿರೋಧ ಪಕ್ಷ ಕಾಂಗ್ರೆಸ್ ಮಂಗಳವಾರ ತೀವ್ರ ಕಿಡಿಕಾರಿದೆ.

ಜನಾಂಗೀಯ ಹಿಂಸಾಚಾರದಿಂದ ನಲುಗುತ್ತಿರುವ ಈಶಾನ್ಯ ರಾಜ್ಯಕ್ಕೆ ಭೇಟಿ ನೀಡಲು ಪ್ರಧಾನಿ ಮೋದಿ ಅವರಿಗೆ ವೀಸಾ ಅಗತ್ಯವಿಲ್ಲ ಎಂದು ವ್ಯಂಗ್ಯವಾಡಿರುವ ಕಾಂಗ್ರೆಸ್, ಬಂದೂಕಿನ ನಳಿಕೆಯಿಂದ ಶಾಂತಿ ಸ್ಥಾಪಿಸಲು ಸಾಧ್ಯವಿಲ್ಲ ಎಂದು ಆಕ್ರೋಶ ಹೊರಹಾಕಿದೆ.

ಮಣಿಪುರದ ಬಜೆಟ್ ಮತ್ತು ಪೂರಕ ಅನುದಾನದ ಬೇಡಿಕೆಗಳ ಮೇಲಿನ ಜಂಟಿ ಚರ್ಚೆಯಲ್ಲಿ ಭಾಗವಹಿಸಿದ ಕಾಂಗ್ರೆಸ್ ಸಂಸದರು, ರಾಜ್ಯ ಬಜೆಟ್‌ನ ಅನುದಾನ ಹಂಚಿಕೆಯಲ್ಲಿ ದೋಷವಿದೆ. ಇದು ನೂರಾರು ಜನರು ಹತರಾದ ಮತ್ತು ಸುಮಾರು 60,000 ಜನರು ನಿರಾಶ್ರಿತರಾದ ಪರಿಸ್ಥಿತಿಯನ್ನು ಪ್ರತಿಬಿಂಬಿಸುವುದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಾಷ್ಟ್ರಪತಿ ಆಡಳಿತ ಜಾರಿಯಲ್ಲಿರುವುದರಿಂದ ಮಣಿಪುರದ ಬಜೆಟ್ ಅನ್ನು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೋಮವಾರ ಸಂಸತ್ತಿನಲ್ಲಿ ಮಂಡಿಸಿದರು. ‘ಈಶಾನ್ಯ ರಾಜ್ಯದಲ್ಲಿ ಕೆಲವು ವಿರಳ ಘಟನೆಗಳನ್ನು ಹೊರತುಪಡಿಸಿ ಒಟ್ಟಾರೆ ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿ ಸುಧಾರಿಸಿದೆ. ಮಣಿಪುರದ ತ್ವರಿತ ಆರ್ಥಿಕ ಅಭಿವೃದ್ಧಿಗೆ ಹಣಕಾಸು ನೆರವು ನೀಡಲಾಗುವುದು’ ಎಂದು ಅವರು ಭರವಸೆ ನೀಡಿದರು.

ಇನ್ನರ್ ಮಣಿಪುರದ ಕಾಂಗ್ರೆಸ್ ಸಂಸದ ಎ.ಬಿಮಲ್ ಅಕೋಯಿಜಮ್ ಅವರು, ‘ಪ್ರಧಾನಿಯವರು ರಾಜ್ಯಕ್ಕೆ ಭೇಟಿ ನೀಡದೇ ಮಣಿಪುರದ ಜನತೆಗೆ ನೋವುಂಟು ಮಾಡಿದ್ದಾರೆ. ಅವರು ಭೇಟಿ ನೀಡುತ್ತಾರೊ ಇಲ್ಲವೊ ನಮಗೆ ಆ ವಿಷಯ ಬೇಡ. ಅದು ಇನ್ನು ಮುಂದೆ ಅಪ್ರಸ್ತುತ. ಆದರೆ, ಮಣಿಪುರಕ್ಕೆ ಭೇಟಿ ನೀಡಲು ಪ್ರಧಾನಿಯವರಿಗೆ ವೀಸಾ ಅಗತ್ಯವಿಲ್ಲವೆನ್ನುವುದು ದೇಶದ ಇತರ ಭಾಗದವರಿಗೂ ಗೊತ್ತಾಗಲಿ. ಮೋದಿ ಅವರು ಉಕ್ರೇನ್‌ಗೆ ಹೋಗಿ ಅಲ್ಲಿ ಶಾಂತಿ ಸ್ಥಾಪನೆ ಬಗ್ಗೆ ಮಾತನಾಡಿ ಬರುತ್ತಾರೆ. ಆದರೆ, ಅವರು ತಮ್ಮದೇ ಸ್ವಂತ ದೇಶದಲ್ಲಿ ನಾಗರಿಕರ ಹತ್ಯೆ ನಡೆಯುತ್ತಿದ್ದರೂ ಮತ್ತು 60 ಸಾವಿರಕ್ಕೂ ಹೆಚ್ಚು ಜನರು ನಿರಾಶ್ರಿತರಾಗಿದ್ದರೂ ಅತ್ತ ಸುಳಿಯುತ್ತಿಲ್ಲ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಾಷ್ಟ್ರ ನಿರ್ಮಾಣದಲ್ಲಿ ಮಣಿಪುರ ನಿರ್ಮಾಣವೂ ಸೇರಿದೆ. ನೀವು ಮಣಿಪುರವನ್ನು ನಿರ್ಮಿಸಲು ಬಯಸದಿದ್ದರೆ, ನಿಮಗೆ ಮಣಿಪುರವನ್ನು ಆಳುವ ಹಕ್ಕಿಲ್ಲ
ಆಲ್ಫ್ರೆಡ್ ಕೆ. ಎಸ್. ಆರ್ಥರ್
ಔಟರ್ ಮಣಿಪುರದ ಸಂಸದ

ಮಣಿಪುರದಲ್ಲಿ ಬಂದೂಕಿನ ನಳಿಕೆಯಿಂದ ಶಾಂತಿ ಪುನಃ ಸ್ಥಾಪಿಸಲು ಸಾಧ್ಯವಿಲ್ಲ. ರಾಜಕೀಯ ಪರಿಹಾರ ಮಾತ್ರ ಉತ್ತಮ ಮಾರ್ಗವಾಗಿದೆ
ಗೌರವ್ ಗೊಗೊಯ್
ಕಾಂಗ್ರೆಸ್ ಉಪನಾಯಕ

ಪ್ರಧಾನಿ ಮಾರಿಷಸ್‌ಗೆ ಹೋಗಿದ್ದಾರೆ. ಅವರು ಮಣಿಪುರಕ್ಕೂ ಭೇಟಿ ನೀಡಬೇಕು
ನೀರಜ್ ಮೌರ್ಯ
ಸಮಾಜವಾದಿ ಪಕ್ಷದ ಸಂಸದ

ಬಂಗಾರ ಪಲಿಕೆಯಲ್ಲಿ ಬೆಂಕಿ


ಮಲವಂತಿಗೆ ಗ್ರಾಮದಲ್ಲಿರುವ ಬಂಗಾರಪಲಿಕೆ ಪರಿಸರದಲ್ಲಿ ಬೆಂಕಿ ಕಾಣಿಸಿಕೊಂಡಿದೆ

ಪ್ರಜಾವಾಣಿ ವಾರ್ತೆ

ಉಜಿರೆ (ದಕ್ಷಿಣ ಕನ್ನಡ): ಕುದುರೆಮುಖ ರಾಷ್ಟ್ರೀಯ ಉದ್ಯಾನ ವನ್ಯಜೀವಿ ವಿಭಾಗದ ಮಲವಂತಿಗೆ ಗ್ರಾಮದಲ್ಲಿರುವ ಬಂಗಾರಪಲಿಕೆ ಪರಿಸರದಲ್ಲಿ ಬೆಂಕಿ ಕಾಣಿಸಿಕೊಂಡಿದೆ.

ಇಲ್ಲಿನ ಕಲ್ಲು ಮತ್ತು ತಡೆಗೋಡೆ ಪ್ರದೇಶದ ಹುಲ್ಲುಗಾವಲಿಗೆ ಬೆಂಕಿ ಹತ್ತಿಕೊಂಡಿದ್ದು, ದುರ್ಗಮ ಪ್ರದೇಶವಾಗಿರುವುದರಿಂದ ಬೆಂಕಿ ನಿಯಂತ್ರಿಸುವುದು ಸವಾಲಾಗಿದೆ. ಬೆಂಕಿಯ ಕೆನ್ನಾಲಿಗೆ ಹಲವು ಕಿ.ಮೀ ದೂರದವರೆಗೂ ಕಾಣಿಸುತ್ತಿದೆ.

ಬೆಳ್ತಂಗಡಿ ವನ್ಯಜೀವಿ ವಿಭಾಗದ ಆರ್‌ಎಫ್‌ಒ ಶರ್ಮಿಷ್ಠಾ ಮತ್ತು ಸಿಬ್ಬಂದಿ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದು, ಬೆಂಕಿಯು ಹುಲ್ಲುಗಾವಲು ಪ್ರದೇಶದಲ್ಲಿ ಹರಡಿದ್ದು, ಹೆಚ್ಚಿನ ಹಾನಿಯಾಗುವ ಸಂಭವವಿಲ್ಲ ಎಂದು ತಿಳಿಸಿದ್ದಾರೆ.

ಕಳಚಿ ಬಿದ್ದ ಶಾಲಾ ಚಾವಣಿ ಸಿಮೆಂಟ್


ಪ್ರಜಾವಾಣಿ ವಾರ್ತೆ

ಚೇಳೂರು (ಚಿಕ್ಕಬಳ್ಳಾಪುರ): ಇಲ್ಲಿನ ಕರ್ನಾಟಕ ಪಬ್ಲಿಕ್ ಶಾಲೆಯ ಕೊಠಡಿ ಚಾವಣಿಯ ಸಿಮೆಂಟ್ ಮಂಗಳವಾರ ಕಳಚಿ ಬಿದ್ದಿದೆ. ತರಗತಿಯಲ್ಲಿದ್ದ ಎಲ್ಲ 40 ವಿದ್ಯಾರ್ಥಿಗಳು ಕೂಡಲೇ ಜಾಗೃತರಾಗಿ ಹೊರಗೆ ಓಡಿ ಅಪಾಯದಿಂದ ಪಾರಾಗಿದ್ದಾರೆ.

ಬೆಳಿಗ್ಗೆ ತರಗತಿ ನಡೆಯುವಾಗ ಏಕಾಏಕಿ ಚಾವಣಿಯ ಸಿಮೆಂಟ್ ಭಾಗಶಃ ಕಿತ್ತು ಬಂದಿದೆ. ಹಿಂದೆಯೇ ಸಿಮೆಂಟ್ ಗಾರೆಯು ಕುಸಿದು ಬಿದ್ದಿದೆ. ಗಾಬರಿಗೊಂಡ ಮಕ್ಕಳನ್ನು ಶಿಕ್ಷಕರು ಸಮಾಧಾನಪಡಿಸಿ ಶಾಲಾ ಆವರಣದಲ್ಲಿ ಕೂರಿಸಿ, ನಂತರ ತರಗತಿ ಮುಂದುವರಿಸಿದರು.

ಶಾಲೆಯ ಕಟ್ಟಡ ನಿರ್ಮಾಣವಾಗಿ 15 ರಿಂದ 16 ವರ್ಷ ಕಳೆದಿದೆ. ಕಟ್ಟಡ ತೀರಾ ಹಳೆಯದಲ್ಲ. ಗುಣಮಟ್ಟ ಇಲ್ಲದ ಕಾಮಗಾರಿ ಇದಕ್ಕೆ ಕಾರಣ ಎಂದು ಶಿಕ್ಷಕರು ದೂರಿದರು. ಆರು ಕೊಠಡಿಗಳಲ್ಲಿ ಅಲ್ಲಲ್ಲಿ ಬಿರುಕು ಬಿಟ್ಟಿವೆ. ಎಲ್‌ಕೆಜಿ ತರಗತಿಯಿಂದ 7ನೇ ತರಗತಿವರೆಗಿನ 9 ತರಗತಿಗಳಲ್ಲಿ 137 ವಿದ್ಯಾರ್ಥಿಗಳಿದ್ದಾರೆ. ಐವರು ಶಿಕ್ಷಕರಿದ್ದಾರೆ.

‘ಚಾವಣಿಯ ಸಿಮೆಂಟ್ ಪದರು ಯಾವಾಗ ಬೀಳುವುದೋ ಎಂಬ ಆತಂಕದಲ್ಲೇ ವಿದ್ಯಾರ್ಥಿಗಳು ತರಗತಿಯಲ್ಲಿ ಇರುವಂತಾಗಿದೆ’ ಎಂದು ಶಿಕ್ಷಕರು ಪ್ರತಿಕ್ರಿಯಿಸಿದರು.


ಚೇಳೂರು ಪಬ್ಲಿಕ್ ಶಾಲೆಯ ಕೊಠಡಿಯ ಚಾವಣಿ ಸಿಮೆಂಟ್ ಕಿತ್ತು ಬಿದ್ದಿರುವುದು

ಮಕ್ಕಳ ‘ಚಿನ್ನ’ದ ಸಾಧನೆಗೆ ಪೋಷಕರು ಸಾಕ್ಷಿ

ಕಲಬುರಗಿ: ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ 8ನೇ ಘಟಿಕೋತ್ಸವ

ಪ್ರಜಾವಾಣಿ ವಾರ್ತೆ



ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕಿನ ಕಡಗಂಚಿಯಲ್ಲಿರುವ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಮಂಗಳವಾರ ನಡೆದ ಘಟಿಕೋತ್ಸವದಲ್ಲಿ ಚಿನ್ನದ ಪದಕಗಳನ್ನು ಪಡೆದ ವಿದ್ಯಾರ್ಥಿಗಳೊಂದಿಗೆ ಇಸ್ರೊ ಅಧ್ಯಕ್ಷ ವಿ.ನಾರಾಯಣನ್, ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ, ಕುಲಸಚಿವ ಪ್ರೊ. ಆರ್‌ಆರ್ ಬಿರಾದಾರ, ಪರೀಕ್ಷಾ ನಿಯಂತ್ರಣಾಧಿಕಾರಿ ಕೋಟಾ ಸಾಯಿಕೃಷ್ಣ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಕಲಬುರಗಿ: ಜಿಲ್ಲೆಯ ಆಳಂದ ತಾಲ್ಲೂಕಿನ ಕಡಗಂಚಿಯಲ್ಲಿರುವ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಎಂಟನೇ ಘಟಿಕೋತ್ಸವದಲ್ಲಿ ಇಸ್ರೊ ಅಧ್ಯಕ್ಷ ವಿ. ನಾರಾಯಣನ್ ಅವರು ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಚಿನ್ನದ ಪದಕಗಳನ್ನು ಪ್ರದಾನ ಮಾಡಿದರು.

ಪದಕಗಳನ್ನು ಕೊರಳಿಗೇರಿಸಿ ಕೊಂಡ ವಿದ್ಯಾರ್ಥಿನಿಯರು ಇಸ್ರೊ ಅಧ್ಯಕ್ಷ ವಿ. ನಾರಾಯಣನ್, ಕುಲಪತಿ ಬಟ್ಟು ಸತ್ಯನಾರಾಯಣ, ಕುಲಸಚಿವ ಪ್ರೊ.ಆರ್.ಆರ್.ಬಿರಾದಾರ ಸೇರಿದಂತೆ ವೇದಿಕೆಯಲ್ಲಿದ್ದವರ ಕಾಲಿಗೆರಗಿ ನಮಸ್ಕರಿಸಿದರು. ಮಕ್ಕಳ ಸಾಧನೆಯನ್ನು ಕಣ್ಣಾರೆ ಕಾಣಲು ಬಂದಿದ್ದ ಪೋಷಕರು ತಮ್ಮ ಮಕ್ಕಳು ಪದಕ ಹಾಗೂ ಪ್ರಮಾಣಪತ್ರ ಪಡೆಯುತ್ತಿದ್ದಂತೆಯೇ ಕಣ್ಣಾಲಿಗಳನ್ನು ತೇವ ಮಾಡಿಕೊಂಡರು.

ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಯಲ್ಲಿ ಅತಿ ಹೆಚ್ಚು ಅಂಕಗಳನ್ನು ಗಳಿಸಿದ್ದಕ್ಕಾಗಿ ಚಿನ್ನದ ಪದಕಗಳನ್ನು ಪಡೆಯಲು ವಿದ್ಯಾರ್ಥಿಗಳು ಕರ್ನಾಟಕ ಅಷ್ಟೇ ಅಲ್ಲದೇ ಆಂಧ್ರಪ್ರದೇಶ, ತೆಲಂಗಾಣ, ಕೇರಳ, ಮಹಾರಾಷ್ಟ್ರ, ತಮಿಳುನಾಡು, ಉತ್ತರ ಪ್ರದೇಶ, ಬಿಹಾರ, ಒಡಿಶಾ ಹಾಗೂ ಈಶಾನ್ಯ ರಾಜ್ಯಗಳಿಂದ ಬಂದಿದ್ದರು.

ಮಂಗಳಯಾನದ ಪ್ರತಿ ಕಿ.ಮೀ. ವೆಚ್ಚವು ಆಟೊ ದರಕ್ಕಿಂತ ಕಡಿಮೆ ಎಂದು ಪ್ರಧಾನಿ ಬಣ್ಣಿಸಿದ್ದಾರೆ. ಯೋಜನೆಯನ್ನು ಮೊದಲ ಪ್ರಯತ್ನದಲ್ಲೇ ಸಾಧಿಸಿದ ಹೆಗ್ಗಳಿಕೆ ಭಾರತದ್ದು

ವಿ.ನಾರಾಯಣನ್, ಇಸ್ರೊ ಅಧ್ಯಕ್ಷ

ಕಲಾ ಮತ್ತು ಮಾನವಿಕ ನಿಕಾಯ, ವಿಜ್ಞಾನ, ಶಿಕ್ಷಣ, ಎಂಜಿನಿಯರಿಂಗ್, ಜೀವ ವಿಜ್ಞಾನಗಳು, ಭೂ ವಿಜ್ಞಾನ, ಕಾನೂನು ಸೇರಿದಂತೆ ವಿವಿಧ ವಿಷಯಗಳಲ್ಲಿ ಒಟ್ಟು 35 ಚಿನ್ನದ ಪದಕಗಳನ್ನು ಪ್ರದಾನ ಮಾಡಲಾಯಿತು.

ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ಚಬ್ರೋಲು ಗ್ರಾಮದ ವಿದ್ಯಾರ್ಥಿ ಬುರ್ರಾ ಮಸ್ತಾನ್ ವೇದಸಾಯಿ ಸಾಹಿತ್ಯ ನಿತಿನ್ ಎಲೆಕ್ಟ್ರಿಕಲ್ ಎಂಜಿನಿಯರಿಂಗ್‌ನಲ್ಲಿ ಅತಿ ಹೆಚ್ಚು ಅಂಕ ಗಳಿಸುವ ಮೂಲಕ ವಿಶ್ವವಿದ್ಯಾಲಯಕ್ಕೆ ಚಿನ್ನದ ಹುಡುಗನಾಗಿ ಮಿಂಚಿದರು. ಅವರಿಗೆ ವಿಭಾಗದಿಂದ ನೀಡುವ ಚಿನ್ನದ ಪದಕದ ಜೊತೆಗೆ ವಿ.ವಿ.ಯ ವಿಶ್ರಾಂತ ಕುಲಪತಿ ಪ್ರೊ.ಎ.ಎಂ. ಪಠಾಣ್ ಅವರ ಹೆಸರಿನಲ್ಲಿ ಸ್ಥಾಪಿಸಲಾದ ಚಿನ್ನದ ಪದಕವನ್ನೂ ಇಸ್ರೊ ಅಧ್ಯಕ್ಷ ನಾರಾಯಣನ್ ಅವರು ಪ್ರದಾನ ಮಾಡಿದರು.

ಎಂಎಸ್ಸಿ ಲೈಫ್ ಸೈನ್ಸ್ ವಿಭಾಗದಲ್ಲಿ ಚಿನ್ನದ ಪದಕ ಪಡೆದ ಎಸ್.ಅರವಿಂದ್ ಪರವಾಗಿ ಅವರ ತಂದೆ, ತಾಯಿ ಪದಕ ಸ್ವೀಕರಿಸಿದರು. ಸಾರ್ವಜನಿಕ ಆಡಳಿತ ವಿಷಯದಲ್ಲಿ ಚಿನ್ನದ ಪದಕ ಪಡೆಯುವುದನ್ನು ಕಾಣಲು ತಮಿಳುನಾಡಿನ ಕೃಷ್ಣಗಿರಿ ಮೂಲದ ಅನುಶ್ರೀ ಎ. ಅವರ ತಂದೆ–ತಾಯಿಯೂ ಬಂದಿದ್ದರು.

ಕುಕ್ಕೆ: ಸರ್ಪಸಂಸ್ಕಾರ ಸೇವೆಯಲ್ಲಿ ಕತ್ರಿನಾ ಭಾಗಿ

ಪ್ರಜಾವಾಣಿ ವಾರ್ತೆ



ಸುಬ್ರಹ್ಮಣ್ಯ (ದಕ್ಷಿಣ ಕನ್ನಡ): ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರಕ್ಕೆ ಭೇಟಿ ನೀಡಿರುವ ಬಾಲಿವುಡ್ ನಟಿ ಕತ್ರಿನಾ ಕೈಫ್ ಅವರು ಮಂಗಳವಾರ ಸರ್ಪ ಸಂಸ್ಕಾರ, ನಾಗಪ್ರತಿಷ್ಠೆ ಪೂಜೆಗಳಲ್ಲಿ ಭಾಗಿಯಾದರು. ಬುಧವಾರವೂ ಅವರು ವಿವಿಧ ಧಾರ್ಮಿಕ ವಿಧಿವಿಧಾನಗಳನ್ನು ನೆರವೇರಿಸಲಿದ್ದಾರೆ.

ಕುಕ್ಕೆ ಸುಬ್ರಹ್ಮಣ್ಯದ ಖಾಸಗಿ ವಸತಿ ಗೃಹದಲ್ಲಿ ವಾಸ್ತವ್ಯ ಮಾಡಿರುವ ಅವರು, ಬುಧವಾರ ಮುಂಜಾನೆ 6 ಗಂಟೆಗೆ ಎರಡನೇ ದಿನದ ಪೂಜೆಯನ್ನು ನೆರವೇರಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

‘ಸರ್ಪಸಂಸ್ಕಾರ ಮೊದಲ ದಿನದ ಪೂಜೆಯ ಮೊದಲು ಕತ್ರಿನಾ ಅವರು ವೃತ್ತಿ ಜೀವನದ ಅಭಿವೃದ್ಧಿ ಸೇರಿದಂತೆ ಕುಟುಂಬಕ್ಕೆ ಒಳ್ಳೆಯದಾಗಲಿ ಎಂದು ಅರ್ಚಕರ ಮೂಲಕ ಸಂಕಲ್ಪ ನೆರವೇರಿಸಿ ದ್ದಾರೆ. ಸರ್ಪಸಂಸ್ಕಾರದ ಪ್ರಧಾನ ಅರ್ಚಕ ನಂದಕಿಶೋರ್, ಕ್ರಿಯಾಕರ್ತೃ ಸುಧೀರ್ ಭಟ್ ವಿಧಿ–ವಿಧಾನಗಳನ್ನು ನೆರವೇರಿಸಿದ್ದಾರೆ. ಅವರು, ತಮಿಳು ಸಿನಿಮಾ ನಿರ್ದೇಶಕರೊಬ್ಬರ ಸಲಹೆಯಂತೆ ಕುಕ್ಕೆಗೆ ಬಂದು ಸರ್ಪಸಂಸ್ಕಾರ ಸೇವೆ ಸಲ್ಲಿಸುತ್ತಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ಮಾಸ್ಕ್, ತಲೆಗೆ ದುಪಟ್ಟ ಹಾಕಿಕೊಂಡಿದ್ದ ಕತ್ರಿನಾ ಪೂಜೆಯಲ್ಲಿ ಭಾಗವಹಿಸಿದ್ದಾಗಲೂ ಅವನ್ನು ತೆಗೆದಿರಲಿಲ್ಲ. ಪ್ರಸಾದ ಸ್ವೀಕರಿಸುವ ಸಂದರ್ಭದಲ್ಲೂ ಕೆಲ ಹೊತ್ತು ಕಾದು ಮಾಧ್ಯಮದವರ ಕಣ್ಣು ತಪ್ಪಿಸಿಯೇ ತೆರಳಿದರು. ಅವರೊಂದಿಗೆ ಮಹಿಳಾ ಪೊಲೀಸ್ ಇದ್ದರು. ಕತ್ರಿನಾ ಅವರ ಓಡಾಟದ ವಿಡಿಯೊ, ಚಿತ್ರ ಸೆರೆ ಹಿಡಿಯಲು ಮುಂದಾಗುತ್ತಿದ್ದಂತೆ ಅವರೊಂದಿಗಿದ್ದವರು ಆಕ್ಷೇಪಿಸಿ ಮಾಧ್ಯಮದವರ ಜತೆಗೆ ವಾಗ್ವಾದ ನಡೆಸಿದರು. ವಿಡಿಯೊ ಮಾಡಿದ ಪತ್ರಕರ್ತರೊಬ್ಬರ ಮೊಬೈಲ್ ಫೋನನ್ನು ಕತ್ರಿನಾ ಜತೆಗಿದ್ದ ಮಹಿಳೆ ಕಸಿದುಕೊಂಡರು.

ಗೋಹಂತಕರ ಪತ್ತೆ ಮಾಡಲು 11 ಸಾವಿರ ಕಿ.ಮೀ. ಸಂಚಾರ

ಪ್ರಜಾವಾಣಿ ವಾರ್ತೆ



ಎಂ.ನಾರಾಯಣ



ವಾಸೀಂ ಮಿರ್ಜಾನಕರ



ಮುಜಮ್ಮಿಲ್

ಕಾರವಾರ: ‘ಹೊನ್ನಾವರ ತಾಲ್ಲೂಕಿನ ಕೊಂಡಾಕುಳಿ ಗ್ರಾಮದಲ್ಲಿ ಜನವರಿ 18ರಂದು ಗೋವು ಹತ್ಯೆ ಮಾಡಿದ್ದ ಪ್ರಕರಣದಡಿ ಪರಾರಿಯಾಗಿದ್ದ ಭಟ್ಕಳದ ವಾಸೀಂ ಮಿರ್ಜಾನಕರ್ ಮತ್ತು ಮುಜಮ್ಮಿಲ್ ಎಂಬ ಆರೋಪಿಗಳನ್ನು 45 ದಿನಗಳವರೆಗೆ ಸತತ ಕಾರ್ಯಾಚರಣೆ ನಡೆಸಿ, ಬಂಧಿಸಲಾಗಿದೆ. ಇಬ್ಬರ ಬಂಧನಕ್ಕೆ ರಚಿಸಲಾಗಿದ್ದ ವಿಶೇಷ ಪೊಲೀಸ್ ತಂಡವು 5 ರಾಜ್ಯಗಳಲ್ಲಿ 11 ಸಾವಿರ ಕಿ.ಮೀ ಕ್ರಮಿಸಿತ್ತು’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ನಾರಾಯಣ ತಿಳಿಸಿದರು.

‘ಗೋವು ಹತ್ಯೆ ಪ್ರಕರಣವನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿ, ಆರೋಪಿಗಳ ಬಂಧಕ್ಕೆ ಸೂಚಿಸಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ಮೊದಲು ಇಬ್ಬರು ಆರೋಪಿಗಳನ್ನು ಜನವರಿ 25ರಂದು ಬಂಧಿಸಲಾಗಿತ್ತು. ತಲೆಮರೆಸಿಕೊಂಡಿದ್ದ ವಾಸೀಂ ಮತ್ತು ಮುಜಮ್ಮಿಲ್ ಪತ್ತೆಗೆ ಪೊಲೀಸ್ ಇಲಾಖೆ ₹50 ಸಾವಿರ ಮತ್ತು ಹೊನ್ನಾವರದ ವಲ್ಕಿಯ ಉದ್ಯಮಿ ಖಲೀಲ್ ಶೇಖ್ ಅವರು ₹1 ಲಕ್ಷ ಬಹುಮಾನ ಘೋಷಿಸಿದ್ದರು’ ಎಂದು ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.


‘ಮುಂಬೈನ ಮಾಹಿತಿದಾರರೊಬ್ಬರ ಮಾಹಿತಿ ಆಧರಿಸಿ ವಾಸೀಂನನ್ನು ಮುಂಬೈನಲ್ಲಿ ಮತ್ತು ಮುಜಮ್ಮಿಲ್‌ನನ್ನು ಭಟ್ಕಳದಲ್ಲಿ ಬಂಧಿಸಲಾಯಿತು. ಇಬ್ಬರ ಬಗ್ಗೆ ಮಾಹಿತಿ ನೀಡಿದವರಿಗೆ ತಲಾ ₹1.50 ಲಕ್ಷ ಬಹುಮಾನ ನೀಡಲಾಗುವುದು’ ಎಂದರು.


ಪುಸ್ತಕ ಸೊಗಸು ಪ್ರಶಸ್ತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರವು ‘ಕನ್ನಡ ಪುಸ್ತಕ ಸೊಗಸು ಬಹುಮಾನ’ಕ್ಕೆ ಪ್ರಕಾಶಕರು, ಮುದ್ರಕರು, ಕಲಾವಿದರು ಮತ್ತು ಲೇಖಕರಿಂದ ಅರ್ಜಿ ಆಹ್ವಾನಿಸಿದೆ.

2022, 2023 ಮತ್ತು 2024ರಲ್ಲಿ (ಜನವರಿಯಿಂದ ಡಿಸೆಂಬರ್) ಕನ್ನಡದಲ್ಲಿ ಪ್ರಕಟವಾದ ಪುಸ್ತಕಗಳನ್ನು ಪರಿಗಣಿಸಲಾಗುತ್ತದೆ. ಪುಸ್ತಕದ ಹೆಸರು, ಲೇಖಕರ ಹೆಸರು, ಪ್ರಕಟವಾದ ವರ್ಷ ಸೇರಿದಂತೆ ಪೂರ್ಣ ವಿವರ ಹಾಗೂ ವಿಳಾಸದ ಮಾಹಿತಿಯೊಂದಿಗೆ ಪುಸ್ತಕದ ಎರಡು ಪ್ರತಿಗಳನ್ನು ಇದೇ 29ರೊಳಗೆ ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-560002 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ. ಸಂಪರ್ಕಕ್ಕೆ ದೂ.ಸಂಖ್ಯೆ: 080 22484516

ತಂತ್ರಜ್ಞಾನ





ಆ್ಯಂಬಿಯೆಂಟ್ ಕಂಪ್ಯೂಟಿಂಗ್ ಎಂಬ ಆಪ್ತಮಿತ್ರ

ಕೃಷ್ಣ ಭಟ್

ಮನೆಗೆ ಸ್ನೇಹಿತರು ಬಂದಿದ್ದಾರೆ. 'ನಾಳೆ ಎಲ್ಲೋ ಹೋಗೋಣ ಬಾ' ಎಂದು ನಿಮ್ಮ ಸ್ನೇಹಿತರು ಕರೆಯುತ್ತಾರೆ. ಆಗ ನಿಮಗೆ ನಾಳೆ 10 ಗಂಟೆಗೆ ಒಂದು ಮೀಟಿಂಗ್ ಇರುವುದು ನೆನಪಾಗುತ್ತದೆ. 'ಇಲ್ಲ ಮಾರಾಯ... ನಾಳೆ 10 ಗಂಟೆಗೆ ಒಂದು ಮೀಟಿಂಗ್ ಇದೆ. ನಾನು ಬರೋಕಾಗಲ್ಲ' ಎಂದು ಹೇಳುತ್ತೀರಿ. ಅಷ್ಟೇ... ನಾಳೆ 9.30ಕ್ಕೆ ಸರಿಯಾಗಿ ನಿಮಗೆ ನಿಮ್ಮ ಮನೆಯಲ್ಲಿರುವ ಯಾವುದೋ ಒಂದು ಡಿಜಿಟಲ್ ಸಾಧನ 'ಮನುಷ್ಯನೇ... ಇನ್ನರ್ಧ ಗಂಟೆಗೆ ಒಂದು ಮೀಟಿಂಗ್ ಇದೆ. ರೆಡಿಯಾಗಿರು!' ಎಂದು ಹೇಳುತ್ತದೆ! ನೀವು ಆ ಡಿಜಿಟಲ್ ಸಾಧನಕ್ಕೆ 'ನಾಳೆ ಮೀಟಿಂಗ್ ಇದೆ. ನೆನಪಿಸು' ಎಂದು ಹೇಳಿರುವುದಿಲ್ಲ. ಆದರೆ, ಅದು ನಿಮ್ಮ ಮೇಲೆ ಒಂದು ಕಣ್ಣು ಮತ್ತು ಕಿವಿ ಇಟ್ಟಿರುತ್ತದೆ. ನಿಮ್ಮ ಮಾತನ್ನು ಕೇಳಿಸಿಕೊಂಡು ಸೈಲೆಂಟ್ ಆಗಿಯೇ ಒಂದು ಅಲರ್ಟ್ ಕ್ರಿಯೇಟ್ ಮಾಡಿರುತ್ತದೆ. ಅದನ್ನು ಕ್ಯಾಲೆಂಡರ್‌ನಲ್ಲೂ ಹಾಕಿಟ್ಟಿರುತ್ತದೆ. ಒಂದು ರೀತಿಯಲ್ಲಿ, ನಿಮ್ಮ ಜೀವಂತ ಪರ್ಸನಲ್ ಅಸಿಸ್ಟೆಂಟ್ ಇದ್ದ ಹಾಗೆ. ಆತ ಹೇಗೆ ನೀವು ಫೋನ್‌ನಲ್ಲಿದ್ದಾಗ ಮೀಟಿಂಗ್‌ಗೆ ಒಪ್ಪಿಕೊಂಡಿದ್ದರೂ, ಡೈರಿಯಲ್ಲಿ ಬರೆದುಕೊಂಡು ನಿಮ್ಮನ್ನು ಆ ಕ್ಯಾಲೆಂಡರ್‌ಗೆ ತಕ್ಕಂತೆ ಮುಂದಡಿ ಇಡುವ ಹಾಗೆ ಮಾಡುವ ರೀತಿ ಇದು!

ಇಂಥದ್ದೊಂದು ಸನ್ನಿವೇಶವನ್ನು ಕಲ್ಪಿಸಿಕೊಳ್ಳುವುದೇ ರೋಮಾಂಚನಕಾರಿ ಅನ್ನಿಸುತ್ತದೆ. ಇದನ್ನು ಆ್ಯಂಬಿಯೆಂಟ್ ಕಂಪ್ಯೂಟಿಂಗ್ ಎಂದು ಕರೆಯಲಾಗುತ್ತದೆ. ತಂತ್ರಜ್ಞಾನ ಈ ಹಂತಕ್ಕೆ ಕಾಲಿಡುವ ಸನಿಹದಲ್ಲಿ ನಾವಿದ್ದೇವೆ. ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಮತ್ತು ಆಗ್ಮೆಂಟೆಡ್ ರಿಯಾಲಿಟಿ ಸಾಧನಗಳು ಈ ತಂತ್ರಜ್ಞಾನಕ್ಕೆ ಇನ್ನಷ್ಟು ನೂಕುಬಲವನ್ನು ನೀಡಿವೆ. ಈಗಾಗಲೇ ಇಂಥ ಕೆಲಸ ಮಾಡುವ ಸಾಮರ್ಥ್ಯ ಇರುವ ಸಾಧನಗಳು ನಮ್ಮ ಸುತ್ತಮುತ್ತ ಇವೆ. ಉದಾಹರಣೆಗೆ, ಅಲೆಕ್ಸಾ ಬಹುತೇಕ ಇದೇ ಕೆಲಸವನ್ನು ಮಾಡುತ್ತದೆ. ಆದರೆ, ಅದಕ್ಕೆ ನಾವು ಸ್ಪಷ್ಟವಾಗಿ ಕಮಾಂಡ್ ಕೊಡಬೇಕು. ಅಲೆಕ್ಸಾ ಎಂದು ಕರೆದು ಅದಕ್ಕೆ ನಾವು ಆದೇಶ ಕೊಡದಿದ್ದರೆ ನಮ್ಮ ಮಾತನ್ನು ಅದು ಕೇಳಿಸಿಕೊಳ್ಳುವುದಿಲ್ಲ. 'ನೀ ಯಾರೋ ನಾ ಯಾರೋ' ಎಂಬಂತಿರುತ್ತದೆ. ಈಗ ಅಲೆಕ್ಸಾದ ಹೊಸ ಆವೃತ್ತಿ ಬಿಡುಗಡೆಯಾಗಿದ್ದು, ಅದು ಆ್ಯಂಬಿಯೆಂಟ್ ಕಂಪ್ಯೂಟಿಂಗ್ ಅನ್ನು ಇನ್ನಷ್ಟು ಹತ್ತಿರಕ್ಕೆ ತರುತ್ತಿದೆ.

ಆ್ಯಂಬಿಯೆಂಟ್ ಕಂಪ್ಯೂಟಿಂಗ್ ಅಂದರೆ...

ಈ ಕಲ್ಪನೆ ಹೊಸದೇನೂ ಅಲ್ಲ. ಕಳೆದ ಆರೇಳು ವರ್ಷಗಳಿಂದಲೂ ಚಾಲ್ತಿಯಲ್ಲಿದೆ. ಅಮೆಜಾನ್‌ನ ಅಲೆಕ್ಸಾ ಹಾಗೂ ಗೂಗಲ್ ಅಸಿಸ್ಟೆಂಟ್ ಬಂದಾಗಲಂತೂ 'ಇನ್ನೇನು ಆ್ಯಂಬಿಯೆಂಟ್ ಕಂಪ್ಯೂಟಿಂಗ್ ಸದ್ಯದಲ್ಲೇ ನಮ್ಮ ಅನುಭವಕ್ಕೆ ಬರಲಿದೆ' ಎಂದು ಎಲ್ಲರೂ ಅಂದುಕೊಂಡಿದ್ದರು. ಆದರೆ, ಅದರ ನಂತರ ಆ ನಿಟ್ಟಿನಲ್ಲಿ ಮಹತ್ವದ ಸಾಧನೆಯೇನೂ ಆದಂತೆ ಕಾಣಲಿಲ್ಲ. ಆದರೆ, ಈಗ ಜೆನರೇಟಿವ್ ಎ.ಐ. ಬಂದ ಮೇಲೆ ಮತ್ತೆ ಈ ಕಲ್ಪನೆ ಹೊಸ ಚಿಗುರೊಡೆದು ನಿಂತಿದೆ. ಅದಕ್ಕೆ ಪೂರಕವಾಗಿ ಅಮೆಜಾನ್ ಕೂಡ ತನ್ನ ಅಲೆಕ್ಸಾ ಪ್ಲಸ್ ಅನ್ನು ಬಿಡುಗಡೆ ಮಾಡುವುದಾಗಿ ಹೇಳಿಕೊಂಡಿದೆ. ಆ್ಯಂಬಿಯೆಂಟ್ ಕಂಪ್ಯೂಟಿಂಗ್ ಎಂಬುದು ನಮ್ಮ ಮನೆಯಲ್ಲಿರುವ ಅಥವಾ ಒಂದಕ್ಕೊಂದು ಕನೆಕ್ಟ್ ಆಗಿರುವ ಎಲ್ಲ ಡಿಜಿಟಲ್ ಸಾಧನಗಳೂ ಸ್ವಯಂಚಾಲಿತವಾಗಿ ನಮ್ಮ ಸ್ಪಷ್ಟ ಆದೇಶ ಇಲ್ಲದೆಯೂ ನಮ್ಮ ಚಲನವಲನಗಳಿಗೆ ಅನುಗುಣವಾಗಿ ಕೆಲಸ ಮಾಡುವುದು!

ಲೇಖನದ ಆರಂಭದಲ್ಲಿ ನೀಡಿದ ಉದಾಹರಣೆಯ ಹಾಗೆ, ನಾವು ಸ್ಪಷ್ಟವಾಗಿ ಡಿಜಿಟಲ್ ಸಾಧನಕ್ಕೆ ಕ್ಯಾಲೆಂಡರ್‌ನಲ್ಲಿ ಏನನ್ನೋ ಗುರುತು ಮಾಡುವುದಕ್ಕೆ ಹೇಳದೇ ಇದ್ದರೂ ಅದು ನಮ್ಮ ಮಾತನ್ನು ಸ್ವತಃ ಕೇಳಿಸಿಕೊಂಡು ಮಾಡಿಬಿಡುತ್ತದೆ. ನಾಳೆ ತರಕಾರಿ ಹಾಗೂ ದಿನಸಿ ಖಾಲಿಯಾಗುತ್ತದೆ ಎಂದು ಗಂಡನಿಗೆ ಹೆಂಡತಿ ಹೇಳಿದರೆ, ಅದನ್ನು ಕೇಳಿಸಿಕೊಂಡು, ಈ ಹಿಂದೆ ಯಾವ ಯಾವ ರೀತಿಯ ದಿನಸಿ ಹಾಗೂ ತರಕಾರಿಯನ್ನು ಈ ವ್ಯಕ್ತಿ ಆರ್ಡರ್ ಮಾಡುತ್ತಿದ್ದರು ಎಂಬುದನ್ನು ಆಧರಿಸಿ ಅಂತಹ ಎಲ್ಲ ತರಕಾರಿ ಹಾಗೂ ದಿನಸಿಯನ್ನು ಇ–ಕಾಮರ್ಸ್‌ನಿಂದ ಆರ್ಡರ್ ಮಾಡುತ್ತದೆ!

ಒಂದು ಕಾರ್ಯಕ್ರಮ ಅಥವಾ ಸಭೆ ನಡೆಯುತ್ತಿರುವಾಗ ಈ ಆ್ಯಂಬಿಯೆಂಟ್ ಕಂಪ್ಯೂಟಿಂಗ್ ಸಾಧನವು ಸುಮ್ಮನೆ ಕುಳಿತು ಸಭೆಯ ಟಿಪ್ಪಣಿಗಳನ್ನು ಮಾಡಿಕೊಳ್ಳುತ್ತದೆ. ಇದನ್ನು ಕ್ಯಾಮೆರಾ ಮತ್ತು ಮೈಕ್‌ಗೂ ಕನೆಕ್ಟ್ ಮಾಡಿದ್ದರೆ, ಮಾತನಾಡುವವರ ಮೇಲೆ ಕ್ಯಾಮೆರಾ ಫೋಕಸ್ ಆಗುತ್ತದೆ ಜೊತೆಗೆ, ಮೈಕ್ ಕೂಡ ಮಾತನಾಡುವವರ ಫ್ರೀಕ್ವೆನ್ಸಿಯನ್ನು ಸರಿಯಾಗಿ ಗ್ರಹಿಸಿ, ಆಚೆ ಈಚೆಯಿಂದ ಕೇಳಿಬರುವ ಧ್ವನಿಗಳನ್ನು ಕಡಿಮೆ ಮಾಡಿ, ಮಾತನಾಡುವವರ ಧ್ವನಿ ಮಾತ್ರ ಹೆಚ್ಚು ಸ್ಪಷ್ಟವಾಗಿ ಕೇಳಿಸುವಂತೆ ಮಾಡುತ್ತದೆ.

ಈ ಆ್ಯಂಬಿಯೆಂಟ್ ಕಂಪ್ಯೂಟಿಂಗ್‌ನ ಅತ್ಯಂತ ಮುಖ್ಯ ಅನುಕೂಲವೆಂದರೆ, ನಾವು ಕಂಪ್ಯೂಟಿಂಗ್ ಸಾಧನಕ್ಕೆ ಗಿಣಿಗೆ ಹೇಳಿದ ಹಾಗೆ ತಿದ್ದಿ ತೀಡಿ ಸೂಚನೆ ಕೊಡಬೇಕಿಲ್ಲ. ಅಷ್ಟಕ್ಕೂ, ಅದಕ್ಕೆ ನಾವು ಸೂಚನೆಯನ್ನೇ ಕೊಡಬೇಕಿಲ್ಲ! ನಮ್ಮ ದೈನಂದಿನ ಸಂವಹನವನ್ನೇ ಅರ್ಥ ಮಾಡಿಕೊಂಡು ಅದಕ್ಕೆ ತಕ್ಕ ಹಾಗೆ ಕೆಲಸ ಮಾಡುತ್ತದೆ.

ಸಂವಹನದ ವಿಧಾನವೇ ಬದಲು?: ಡಿಜಿಟಲ್ ಜಗತ್ತಿನಲ್ಲಿ ಆದ ಒಂದೊಂದು ಬದಲಾವಣೆಯೂ ನಮ್ಮ ಜೀವನದ ಮೇಲೆ ಮಹತ್ವದ ಬದಲಾವಣೆಗಳನ್ನು ಉಂಟುಮಾಡಿದೆ. ಟಿ.ವಿ. ಬಂದ ಕಾಲಕ್ಕೆ ನಮ್ಮ ಮನರಂಜನೆಯ ವಿಧಾನವೇ ಬದಲಾಯಿತು. ಮೊಬೈಲ್ ಬಂದಾಗ ನಮ್ಮ ಸಂವಹನದ ವಿಧಾನ ಬದಲಾಯಿತು. ಸ್ಮಾರ್ಟ್‌ಫೋನ್ ಬಂದಾಗ ಇಡೀ ಜಗತ್ತಿಗೇ ನಮಗೆ ಸುಲಭದಲ್ಲಿ ಆಕ್ಸೆಸ್ ಸಿಕ್ಕ ಹಾಗಾಯಿತು. 5gbps ಡೇಟಾವನ್ನು ಸಾಗಿಸುವ ಸಾಮರ್ಥ್ಯವಿರುವ ವೈಫೈ 7 ಬಳಕೆಗೆ ಬರುತ್ತಿರುವುದರಿಂದ ಹಲವು ಡಿಜಿಟಲ್ ಸಾಧನಗಳನ್ನು ಕನೆಕ್ಟ್ ಮಾಡುವುದು ಮತ್ತು ಅದರ ಜೊತೆಗೆ ಸಂವಹನ ನಡೆಸುವುದು ತುಂಬಾ ಸುಲಭವಾಗುತ್ತದೆ. ಕಳೆದ ಕೆಲವು ವರ್ಷಗಳಿಂದ ನಾವು 'ಐಒಟಿ'ಅಂದರೆ 'ಇಂಟರ್‌ನೆಟ್ ಆಫ್ ಥಿಂಗ್ಸ್' ಬಗ್ಗೆ ಮಾತನಾಡುತ್ತಿದ್ದೇವೆ. ಆದರೆ ಆ್ಯಂಬಿಯೆಂಟ್ ಕಂಪ್ಯೂಟಿಂಗ್ ಇನ್ನೂ ಒಂದು ಹೆಜ್ಜೆ ಮುಂದಿಟ್ಟಿದೆ. ಇಂಟರ್‌ನೆಟ್ ಆಫ್ ಥಿಂಗ್ಸ್ ಯಾವ ಯಾವ ಸಾಧನಗಳನ್ನು ನಾವು ಕನೆಕ್ಟ್ ಮಾಡಬಹುದು ಎಂಬುದನ್ನು ಯೋಚಿಸಿದರೆ, ಹೀಗೆ ಕನೆಕ್ಟ್ ಆದ ಸಾಧನಗಳು ಮುಂದೇನು ಮಾಡುತ್ತವೆ ಎಂಬುದನ್ನು ಆ್ಯಂಬಿಯೆಂಟ್ ಕಂಪ್ಯೂಟಿಂಗ್ ನಿರ್ಧರಿಸುತ್ತದೆ. ಈ ಹಿನ್ನೆಲೆಯಲ್ಲಿ ಯೋಚಿಸಿದರೆ, ಐಒಟಿಗಿಂತ ಒಂದು ಹೆಜ್ಜೆಯನ್ನು ನಾವು ಅದಾಗಲೇ ಮುಂದಿಟ್ಟಾಗಿದೆ. ಆ ಹೆಜ್ಜೆ ಇನ್ನು ಜೆನ್ ಎ.ಐ. ಮತ್ತು ಆಗ್ಮೆಂಟೆಡ್ ರಿಯಾಲಿಟಿಯಿಂದ ಇನ್ನಷ್ಟು ಗಟ್ಟಿಯಾಗಬೇಕಿದೆ. ❖

ನಿದ್ರೆಯ ಇತಿಹಾಸ ಹೇಳುವ ಪೈಜಾಮಾ

ಕೊಳ್ಳೇಗಾಲ ಶರ್ಮ

> ರಾತ್ರಿಯೆಲ್ಲ ನಿದ್ರೆ ಬಾರದೆ ಹೊರಳಾಡಿದ್ದು ಏಕೆ ಎನ್ನುವುದನ್ನು ಪತ್ತೆ ಮಾಡುವ ಪೈಜಾಮಾ ಸಿದ್ಧವಾಗಿದೆ.

ನಿದ್ರೆ ಸರಿಯಾಗಿ ಬರುತ್ತಿಲ್ಲವೇ? ರಾತ್ರಿಯೆಲ್ಲ ಹಾಸಿಗೆಯ ಮೇಲೆ ಅಡ್ಡಾಗಿದ್ದರೂ ಬೆಳಿಗ್ಗೆ ಏಳುವಾಗ ಯಾಕೋ ಶಿವರಾತ್ರಿಯ ಜಾಗರಣೆ ಮಾಡಿದಂತೆ ಅನಿಸುತ್ತಿದೆಯೇ? ಹಾಗಿದ್ದರೆ ಒಂದು ಕೆಲಸ ಮಾಡಿ. ನೀವು ಉಟ್ಟ ಲುಂಗಿಯನ್ನೋ ನೈಟಿಯನ್ನೋ ಪೈಜಾಮಾವನ್ನೋ ಬದಲಿಸಿ, ಹೊಸ ಪೈಜಾಮಾ ಧರಿಸಿ. ಅಂತಿಂಥ ಪೈಜಾಮಾ ಅಲ್ಲ. ಇಂಗ್ಲೆಂಡಿನ ಕೇಂಬ್ರಿಜ್ ವಿಶ್ವವಿದ್ಯಾಲಯದ ಲೂಇಜಿ ಓಕಿಪಿಂಟಿ ಮತ್ತು ಸಂಗಡಿಗರು ಸಿದ್ಧಪಡಿಸಿರುವ ವಿಶೇಷ ಪೈಜಾಮಾವನ್ನು ಧರಿಸಿ. ನಿಮ್ಮ ನಿದ್ರೆ ಸರಿ ಹೋಗದಿದ್ದರೂ, ಕನಿಷ್ಠ ನಿಮ್ಮ ನಿದ್ರಾಹೀನತೆಗೆ ಕಾರಣವಾದರೂ ಗೊತ್ತಾಗುತ್ತದೆ! ಏಕೆಂದರೆ ಈ ಪೈಜಾಮಾ, ನಿಮ್ಮನ್ನು ಬೆಚ್ಚಗಾಗಿಡುವುದರ ಜತೆಗೇ ನಿಮ್ಮ ನಿದ್ರೆಯ ಸ್ಥಿತಿ, ಲಕ್ಷಣಗಳು ಹೇಗಿದ್ದವು ಎಂದು ಪತ್ತೆ ಮಾಡುತ್ತದಂತೆ.

ನಿದ್ರಾಹೀನತೆ ಎನ್ನುವುದು ಲಕ್ಷಾಂತರ ಜನರನ್ನು ಕಾಡುವ, ವೈದ್ಯರು ಇದೇಕೆ ಎಂದು ಅರ್ಥವಾಗದೆ ತಲೆ ಕೆಡಿಸಿಕೊಳ್ಳುವ ವೈದ್ಯಕೀಯ ಸಮಸ್ಯೆ. ಇಡೀ ರಾತ್ರಿ ಮಲಗಿದ್ದರೂ, ನಿದ್ರೆ ಮಾಡಿದಂತೆ ಇರುವುದಿಲ್ಲ. ಇಂಥ ಅವಸ್ಥೆಗೆ ಕಾರಣವೇನೆಂಬುದು ಇನ್ನೂ ಸ್ಪಷ್ಟವಾಗಿಲ್ಲ. ಇವರು ನಿದ್ರಾಹೀನರಲ್ಲ. ಆದರೆ ಇವರ ನಿದ್ರೆ ನಿದ್ರೆಯಂತಿರುವುದಿಲ್ಲ. ಈ ನಿದ್ರಾಹೀನತೆಯಿಂದಾಗಿ ಪ್ರತಿವರ್ಷ ಏನಿಲ್ಲವೆಂದರೂ ನಲವತ್ತರಿಂದ ಐವತ್ತು ದಿನಗಳು ಅವರು ಕೆಲಸ ಸರಿಯಾಗಿ ಮಾಡುವುದಿಲ್ಲ ಎಂದೂ ವಿಜ್ಞಾನಿಗಳಿಗೆ ಆತಂಕವಿದೆ. ಬಾಯಿಯ ಮೂಲಕ ಉಸಿರಾಡುವುದು, ಗೊರಕೆ, ಉಸಿರುಗಟ್ಟುವುದು ಮೊದಲಾದ ತೊಂದರೆಗಳು ನಿದ್ರೆಗೇಡಿತನಕ್ಕೆ ಕಾರಣ ಎನ್ನುತ್ತದೆ, ವೈದ್ಯವಿಜ್ಞಾನ. ನಿದ್ರೆಯ ಮೇಲೆ ಕಣ್ಣಿಡುವ ಸಾಧನಗಳು ಹಲವು ಇವೆ. ಇತ್ತೀಚೆಗೆ ಸರ್ವೇ ಸಾಮಾನ್ಯ ಎನ್ನಿಸಿರುವ ಸ್ಮಾರ್ಟ್ ಗಡಿಯಾರಗಳೂ ಕೂಡ ನೀವು ಎಷ್ಟು ಹೊತ್ತು ಮಲಗಿದ್ದಿರಿ, ಎಷ್ಟು ಹೊತ್ತು ಚಟುವಟಿಕೆಯಿಂದ ಇದ್ದಿರಿ ಎನ್ನುವುದನ್ನು ತಿಳಿಸುತ್ತವೆ. ಆದರೆ ನೀವು ಮಲಗಿದ್ದಾಗ ನಿದ್ರೆ ಮಾಡಿದ್ದಿರೋ, ಹೊರಳಾಡುತ್ತಲೇ ಇದ್ದಿರೋ, ಗೊರಕೆ ಹೊಡೆದಿದ್ದಿರೋ ಎನ್ನುವುದು ಮಾತ್ರ ಗೊತ್ತಾಗುವುದಿಲ್ಲ. ಬೆಂಗಳೂರಿನಲ್ಲಿ ನಿದ್ರೆಯ ಅಧ್ಯಯನವನ್ನು ಮಾಡುವ ಸ್ಟಾರ್ಟ್ ಅಪ್ ಒಂದು ಸುದ್ದಿ ಮಾಡಿತ್ತು. ಅಲ್ಲಿನ ಉದ್ಯೋಗಿಗಳಿಗೆ ನಿದ್ರಿಸುವುದಷ್ಟೆ ಕೆಲಸ. ನಿದ್ರೆಯ ವೇಳೆ ಒದ್ದಾಟ ಹೇಗಿತ್ತು, ಹಾಸಿಗೆಯ ಪ್ರಭಾವ ಎಷ್ಟು, ಸುತ್ತಲಿನ ಸದ್ದು, ಉಷ್ಣತೆಯ ಪ್ರಭಾವ ಎಷ್ಟು ಎನ್ನುವುದನ್ನೆಲ್ಲ ಅದು ಅಧ್ಯಯನ ಮಾಡುತ್ತಿತ್ತು. ನಿದ್ರೆ ಮಾಡಿ ಕಾಸು ಸಂಪಾದಿಸಬಹುದಿತ್ತು.

ಓಕಿಪಿಂಟಿ ತಂಡದವರು ನಿರ್ಮಿಸಿರುವ ಪೈಜಾಮಾ ಈ ಅಧ್ಯಯನಗಳನ್ನು ಇನ್ನಷ್ಟು ಸುಲಭವಾಗಿಸುತ್ತದೆಯಂತೆ. ಇವರು ಸೃಷ್ಟಿಸಿರುವ ವೇರೆಬಲ್ ಎಲೆಕ್ಟ್ರಾನಿಕ್ ಇರುವ ಬಟ್ಟೆಯಿಂದ ಪೈಜಾಮಾವನ್ನೋ ಶರಟನ್ನೋ ಹೊಲಿದು, ಮಲಗುವಾಗ ಧರಿಸಿದರೆ ಸಾಕಂತೆ. ಅದು ನಿದ್ರೆಯ ವೇಳೆ ನಮಗೆ ಗೊತ್ತಿಲ್ಲದಂತೆಯೇ ಅಗುವ ಗೊರಕೆ, ಬಾಯಿಯಿಂದ ಉಸಿರಾಡುತ್ತಿದ್ದೀರೋ, ಮೂಗಿನಿಂದಲೋ, ಹಲ್ಲು ಕಡಿಯುವುದು, ಉಸಿರುಗಟ್ಟುವಿಕೆ, ಮಿದುಳಿನಲ್ಲಿ ಆಗುವ ವ್ಯತ್ಯಾಸದಿಂದ ಉಸಿರುಗಟ್ಟುವುದೇ ಮೊದಲಾದ ನಿದ್ರೆಗೇಡಿತನದ ಲಕ್ಷಣಗಳನ್ನು ಪತ್ತೆ ಮಾಡಿ ಅವುಗಳ ಮೇಲೆ ನಿಗಾ ಇಡುತ್ತದೆಯಂತೆ. ನಿದ್ರೆಯ ವೇಳೆ ದೇಹದ ಚಟುವಟಿಕೆಗಳ ಮೇಲೆ ಕಣ್ಗಾವಲಿಡುವ ವೇರೆಬಲ್ ಎನ್ನುವ ಎಲೆಕ್ಟ್ರಾನಿಕ್ಸ್‌ಗಳನ್ನು ಈ ಹಿಂದೆಯೂ ಹಲವರು ರೂಪಿಸಿದ್ದರು. ಆದರೆ ಇವನ್ನು ಹಚ್ಚೆಯಂತೆ ಇಲ್ಲವೇ ಬ್ಯಾಂಡೇಜುಗಳಂತೆ ದೇಹಕ್ಕೆ ಅಂಟಿಸಿಕೊಳ್ಳಬೇಕಿತ್ತು. ಓಕಿಪಿಂಟಿ ಪೈಜಾಮಾದ ಎಲೆಕ್ಟ್ರಾನಿಕ್ಸ್ ಹಾಗಲ್ಲ. ಇದು ಚರ್ಮವನ್ನು ತಾಕದಿದ್ದರೂ ಚರ್ಮದ ಬಿಸುಪು, ರಕ್ತದ ಹರಿವು ಮೊದಲಾದವನ್ನು ಅಳೆಯಬಲ್ಲುದು. ಗೊರಕೆ ಹೊಡೆಯುವಾಗ ಅಥವಾ ಹಲ್ಲು ಕಡಿಯುವಾಗ ಗಂಟಲಿನ ಸ್ನಾಯುಗಳಲ್ಲಿ ಆಗುವ ಕಂಪನಗಳನ್ನು ಗುರುತಿಸಬಲ್ಲದು. ಇದಕ್ಕಾಗಿ ಪೈಜಾಮಾದ ಕಾಲರಿನೊಳಗೇ ಇವರು ಎಲೆಕ್ಟ್ರಾನಿಕ್ಸನ್ನು ಹುದುಗಿಸಿದ್ದಾರೆ. ಗ್ರಾಫೀನಿನ ಅತಿ ಸೂಕ್ಷ್ಮ ಎಳೆಗಳನ್ನು ಬಟ್ಟೆಯ ಮೇಲೆ ಲಗ್ನಪತ್ರಿಕೆ ಮುದ್ರಿಸಲು ಬಳಸುವ ಸ್ಕ್ರೀನ್ ಪ್ರಿಂಟಿಂಗ್ ತಂತ್ರವನ್ನು ಬಳಸಿ ಮುದ್ರಿಸಿದ್ದಾರೆ. ಇವು ಗಂಟಲಿನ ಸ್ನಾಯುಗಳಲ್ಲಾಗುವ ಸೂಕ್ಷ್ಮ ಬದಲಾವಣೆಗಳನ್ನು ನಿದ್ರಿಸುವವರಿಗೆ ಅರಿವೇ ಇಲ್ಲದಂತೆ ಪತ್ತೆ ಮಾಡಬಲ್ಲಂತಹ ಸೆನ್ಸಾರುಗಳು. ಅತ್ತಿತ್ತ ಹೊರಳಾಡಿದಾಗಲೂ ಈ ಎಲೆಕ್ಟ್ರಾನಿಕ್ಸ್ ಸರ್ಕೀಟು ಮುರಿಯುವುದಿಲ್ಲ. ಇದಕ್ಕಾಗಿ ಬಟ್ಟೆಯ ಮೇಲೆ ಗ್ರಾಫೀನು ಸೆನ್ಸಾರುಗಳನ್ನು, ಬೆಳ್ಳಿಯ ಸೂಕ್ಷ್ಮತಂತುಗಳಿಂದ ಕೂಡಿಸಿದ್ದಾರೆ.

ಓಕಿಪಿಂಟಿ ವೇರೆಬಲ್ ಎಲೆಕ್ಟ್ರಾನಿಕ್ಸ್ ಬಟ್ಟೆಗೆ ಹಾಕಿರುವ ಇಸ್ತ್ರಿಯೂ ವಿಶೇಷವೇ. ಎರಡು ಬಗೆಯ ಪಾಲಿಮರುಗಳಿಂದ ಮಾಡಿದ ವಿಶೇಷ ಗಂಜಿಯನ್ನು ಹಚ್ಚಿ, ಅಲ್ಟ್ರಾವಯಲೆಟ್ ಕಿರಣಗಳಿಂದ ಬೆಳಗಿದರೆ ಸಾಕು. ಹೀಗೆ ಸರ್ಕೀಟನ್ನು ಬಾಧಿಸದೆಯೇ ಸುತ್ತಲೂ ಗಟ್ಟಿಯಾದ ಇಸ್ತ್ರಿಯನ್ನು ಹಾಕಿದ್ದಾರೆ. ಇಸ್ತ್ರಿ ಇರುವುದರಿಂದ ಎಷ್ಟೇ ಹೊರಳಾಡಿದರೂ ಎಲೆಕ್ಟ್ರಾನಿಕ್ಸಿಗೆ ಬಾಧೆ ಆಗುವುದಿಲ್ಲ. ಜೊತೆಗೆ ಸರ್ಕೀಟನ್ನು ಮುದ್ರಿಸಲು ಬಳಸುವ ಗ್ರಾಫೀನು ಶಾಯಿ ಬಟ್ಟೆಯಲ್ಲಿರುವ ನೂಲಿನ ಆಳಕ್ಕೆ ಇಳಿದು ಗಟ್ಟಿಯಾಗಿ ಕೂರುತ್ತದೆ. ಒಗೆದರೂ ನಾಶವಾಗದಂತಾಗುತ್ತದೆ.

ಇನ್ನು ಈ ಎಲೆಕ್ಟ್ರಾನಿಕ್ಸ್ ಪತ್ತೆ ಮಾಡುವ ಸಂಕೇತಗಳನ್ನು ಅರ್ಥೈಸಲು ಓಕಿಪಿಂಟಿ ಬಳಗವು ಯಾಂತ್ರಿಕ ಬುದ್ಧಿಮತ್ತೆಯನ್ನು ಬಳಸಿದೆ. ಡೀಪ್ ಲರ್ನಿಂಗ್ ತಂತ್ರವನ್ನು ಅಳವಡಿಸಿಕೊಂಡು ಸ್ಲೀಪ್‌ನೆಟ್ ಎನ್ನುವ ತಂತ್ರಾಂಶವನ್ನು ಇವರು ರೂಪಿಸಿದ್ದಾರೆ. ಒಮ್ಮೆ ಈ ಬಟ್ಟೆಯನ್ನು ಧರಿಸಿ ಮಲಗಿ ತೋರಿಸಿದರೆ ಸಾಕು. ಈ ತಂತ್ರಾಂಶ ಮಲಗಿದವರ ಉಸಿರಾಟವೇ ಮೊದಲಾದ ನಿದ್ರಾಸ್ಥಿತಿಯಲ್ಲಿನ ಚಲನವಲನಗಳನ್ನು ಅರ್ಥ ಮಾಡಿಕೊಳ್ಳಬಲ್ಲುದು. ಹೀಗೆ ತರಬೇತಿ ಪಡೆದ ನಂತರ ಮಲಗಿದಾಗ ಆಗುವ ಬದಲಾವಣೆಗಳನ್ನು ಗುರುತಿಸಿ, ಅದು ಉಸಿರುಗಟ್ಟಿದ್ದರಿಂದ ಆಗಿದ್ದೋ ಗೊರಕೆಯಿಂದಲೋ, ಬಾಯಿಯ ಉಸಿರಾಟದಿಂದಲೋ ಎಂದು ವಿಂಗಡಿಸಬಲ್ಲುದು.

ಈ ರೀತಿಯ ಪಟ್ಟಿ ಇರುವ ಪೈಜಾಮಾವನ್ನು ಧರಿಸಿ ಮಲಗಿದರೆ ಸಾಕು. ವೈದ್ಯರಿಗೆ ನೀವು ಮಲಗಿದ್ದಾಗ ಎಷ್ಟು ಹೊತ್ತು ಬಾಯಿಯಿಂದ ಹಾಗೂ ಎಷ್ಟು ಹೊತ್ತು ಮೂಗಿನಿಂದ ಉಸಿರಾಡಿದಿರಿ, ಎಷ್ಟು ಗೊರಕೆ ಹೊಡೆದಿರಿ, ಎಷ್ಟು ಬಾರಿ ಉಸಿರುಗಟ್ಟಿತ್ತು, ಅದರಲ್ಲಿ ಮೂಗಿನಲ್ಲಿನ ತೊಂದರೆಯಿಂದ ಆಗಿದ್ದು ಎಷ್ಟು, ನರಮಂಡಲದಲ್ಲಿನ ಏರುಪೇರುಗಳಿಂದಾಗಿದ್ದು ಎಷ್ಟು ಎಂದು ಈ ಪೈಜಾಮಾ ವಿಂಗಡಿಸಿ, ನಿಮ್ಮ ನಿದ್ರೆ ಸಾಧಾರಣದ್ದಾಗಿತ್ತೋ, ತೊಂದರೆಯಿಂದ ಕೂಡಿತ್ತೋ ಅಥವಾ ಅಪಾಯಕಾರಿ ಹೃದಯದ ಅಥವಾ ನರಮಂಡಲದ ತೊಂದರೆಯಿಂದಾಗಿ ಬಾಧಿತವಾಗಿತ್ತೋ ಎಂದು ತಿಳಿಸಬಲ್ಲುದು. ಅಷ್ಟೇ. ಸುಖನಿದ್ರೆಗೆ ಇದು ಸುಲಭ ಸೂತ್ರವಲ್ಲ ಎನ್ನುವುದು ನೆನಪಿರಲಿ.

ಈ ಹೊಸ ದಿರಿಸಿನ ತಯಾರಿಕೆಯ ವಿಧಾನ, ಅದರ ಪರೀಕ್ಷೆ ಮೊದಲಾದ ವಿವರಗಳ ಜೊತೆಗೆ ಸ್ಲೀಪ್‌ನೆಟ್ ತಂತ್ರಜ್ಞಾನದ ಕೋಡಿಂಗ್ ವಿವರಗಳನ್ನೂ 'ಪಿಎನ್‌ಎಎಸ್' ಪತ್ರಿಕೆ ವರದಿ ಮಾಡಿದೆ. ❖



ಎಸ್ಸೆಸ್ಸೆಲ್ಸಿ- ಸಿಇಟಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೋತ್ತರ

61) ಸೂರ್ಯೋದಯದ ಕಾಲದಲ್ಲಿ ಸೂರ್ಯನು ಕೆಂಪಾಗಿ ಆದರೆ ಮಧ್ಯಾಹ್ನದಲ್ಲಿ ಬೆಳ್ಳಗೆ ಕಾಣಲು ಕಾರಣಗಳನ್ನು ತಿಳಿಸಿ.

ಉತ್ತರ:– ಸೂರ್ಯನ ಬೆಳಕು ನಮ್ಮ ಕಣ್ಣನ್ನು ತಲುಪುವ ಮೊದಲು ದಿಗಂತದ ಸಮತಲದಲ್ಲಿ ಸಮೀಪದಲ್ಲಿನ ಗಾಳಿಯ ದಪ್ಪ ಪದರದಲ್ಲಿ ಹಾಗೂ ಹೆಚ್ಚು ದೂರ ವಾಯುಮಂಡಲದಲ್ಲಿ ಹಾದು ಹೋಗುತ್ತದೆ

ದಿಗಂತದ ಬಳಿ ಕಣಗಳಿಂದ ಹೆಚ್ಚಿನ ನೀಲಿ ಬೆಳಕು ಮತ್ತು ಕಡಿಮೆ ತರಂಗ ದೂರದ ಬೆಳಕು ಚದುರಿ ಹೋಗುತ್ತದೆ. ಇದರಿಂದಾಗಿ ನಮ್ಮ ಕಣ್ಣನ್ನು ತಲುಪುವ ಬೆಳಕು ಹೆಚ್ಚು ತರಂಗದೂರವುಳ್ಳದ್ದಾಗಿದೆ ಇದರಿಂದ ಸೂರ್ಯ ಕೆಂಪು ಬಣ್ಣದಿಂದ ಕಾಣ ಸಿಗುತ್ತದೆ.

ಮಧ್ಯಾಹ್ನದಲ್ಲಿ ನೆತ್ತಿಯ ಮೇಲಿನ ಸೂರ್ಯನ ಬೆಳಕು ನಮ್ಮ ಕಣ್ಣನ್ನು ತಲುಪಲು ಕಡಿಮೆ ದೂರವನ್ನು ಪ್ರಯಾಣಿಸುತ್ತದೆ, ಮಧ್ಯಾಹ್ನದ ಸಮಯ ಸೂರ್ಯನು ಬೆಳ್ಳಗೆ ಕಾಣುತ್ತಾನೆ ಏಕೆಂದರೆ ಸ್ವಲ್ಪವೇ ನೀಲಿ ಮತ್ತು ನೇರಳೆ ಬಣ್ಣಗಳು ಚದುರುತ್ತದೆ.

62) ಭಿನ್ನತೆಯ ಮಹತ್ವದ ಕುರಿತು ಬರೆಯಿರಿ

ಉತ್ತರ:– ಭಿನ್ನತೆಯ ಮಹತ್ವ ಪರಿಸರದಲ್ಲಿನ ಜೀವಿ ಸಮುದಾಯಗಳು ಸಂತಾನೋತ್ಪತ್ತಿ ನಡೆಸುವ ತಮ್ಮ ಸಾಮರ್ಥ್ಯವನ್ನು ಬಳಸಿಕೊಂಡು ಸೂಕ್ತವಾದ ಸ್ಥಾನಗಳಲ್ಲಿ ಅಥವಾ ಆವಾಸಗಳಲ್ಲಿ ಸೇರಿಕೊಂಡಿವೆ. ಸಂತಾನೋತ್ಪತ್ತಿ ಸಮಯದಲ್ಲಿ ಡಿಎನ್‌ಎ ಸ್ವಪ್ರತೀಕರಣದಲ್ಲಿನ ಸ್ಥಿರತೆಯು ಜೀವಿಯ ದೇಹ ವಿನ್ಯಾಸದ ಲಕ್ಷಣಗಳನ್ನು ನಿರ್ವಹಿಸಲು ಮುಖ್ಯವಾಗುತ್ತದೆ. ಅದು ಜೀವಿಯು ನಿರ್ದಿಷ್ಟ ಆವಾಸವನ್ನು ಬಳಸಿಕೊಳ್ಳಲು ಅನುವು ಮಾಡಿಕೊಡುತ್ತದೆ. ಆದ್ದರಿಂದ, ಸಂತಾನೋತ್ಪತ್ತಿಯು ಜೀವಿಪ್ರಭೇದಗಳ ಸಂಖ್ಯೆಯ ಸ್ಥಿರತೆಯೊಂದಿಗೆ ಜೋಡಣೆಗೊಂಡಿದೆ. ಆದಾಗ್ಯೂ, ಜೀವಿಗಳ ನಿಯಂತ್ರಣಕ್ಕೆ ಸಿಗದ ಕಾರಣಗಳಿಂದಾಗಿ ಆವಾಸಗಳು ಬದಲಾಗಬಹುದು. ಭೂಮಿಯ ಮೇಲಿನ ತಾಪ ಏರಬಹುದು ಅಥವಾ ಇಳಿಯಬಹುದು, ನೀರಿನ ಮಟ್ಟ ಬದಲಾಗಬಹುದು ಅಥವಾ ಅಲ್ಲಿ ಉಲ್ಕಾಘಾತ ಉಂಟಾಗಬಹುದು. ಇವು ಯೋಚಿಸಬಹುದಾದ ಕೆಲವು ಉದಾಹರಣೆಗಳು. ಒಂದುವೇಳೆ ಸಂತಾನೋತ್ಪತ್ತಿ ನಡೆಸುವ ಜೀವಿಗಳ ಸಮುದಾಯ ಒಂದು ನಿರ್ದಿಷ್ಟ ಆವಾಸಕ್ಕೆ ಹೊಂದಿಕೊಂಡಿದ್ದರೆ ಮತ್ತು ಒಂದು ವೇಳೆ ಆ ಆವಾಸವು ತೀವ್ರವಾದ ಬದಲಾವಣೆಗಳಿಗೆ ಗುರಿಯಾದರೆ ಆ ಜೀವಿ ಸಮುದಾಯವು ನಶಿಸಿಹೋಗಬಹುದು. ಆದಾಗ್ಯೂ, ಈ ಸಮುದಾಯದ ಕೆಲವು ಜೀವಿಗಳಲ್ಲಿ ಕೆಲವು ಭಿನ್ನತೆಗಳು ಕಂಡುಬಂದರೆ ಅವುಗಳಿಗೆ ಬದುಕುಳಿಯುವ ಕೆಲವು ಅವಕಾಶಗಳಿವೆ. ಒಂದು ವೇಳೆ ಸಮಶೀತೋಷ್ಣ ನೀರಿನಲ್ಲಿ ಬ್ಯಾಕ್ಟೀರಿಯಾ ಸಮುದಾಯವೊಂದು ವಾಸಿಸುತ್ತಿದ್ದು ಮತ್ತು ಜಾಗತಿಕ ತಾಪದ ಏರಿಕೆಯಿಂದಾಗಿ ನೀರಿನ ತಾಪ ಏರಿಕೆಯಾದರೆ ಇವುಗಳಲ್ಲಿ ಬಹುತೇಕ ಬ್ಯಾಕ್ಟೀರಿಯಾಗಳು ಸಾಯಬಹುದು. ಆದರೆ, ಶಾಖವನ್ನು ನಿರೋಧಿಸುವ ಕೆಲವು ರೂಪಾಂತರಗಳು ಉಳಿದುಕೊಳ್ಳಬಹುದು ಮತ್ತು ಸಂತಾನೋತ್ಪತ್ತಿ ನಡೆಸಬಹುದು. ಹೀಗೆ ಕೆಲವು ವೇಳೆ ಭಿನ್ನತೆಯು ಪ್ರಭೇದಗಳು ಬದುಕುಳಿಯಲು ಉಪಯುಕ್ತವಾಗಿವೆ.


63) ವಿಭವಾಂತರದ ಅಂತಾರಾಷ್ಟ್ರೀಯ ಏಕಮಾನ ಯಾವುದು? ವಿಭವಾಂತರವನ್ನು ಅಳೆಯಲು ಬಳಸುವ ಸಾಧನವನ್ನು ಹೆಸರಿಸಿ. (ಜೂನ್ 2019)

ಉತ್ತರ:– * ವಿಭವಾಂತರದ ಅಂತಾರಾಷ್ಟ್ರೀಯ ಏಕಮಾನ :– ವೋಲ್ಟ್
* ವಿಭವಾಂತರವನ್ನು ಅಳೆಯಲು ಬಳಸುವ ಸಾಧನ:– ವೋಲ್ಟ್ ಮೀಟರ್

64) ಪುನರುತ್ಪಾದನೆ (regeneration) ಮೂಲಕ ನಡೆಯುವ ಸಂತಾನೋತ್ಪತ್ತಿಯ ಬಗ್ಗೆ ಬರೆಯಿರಿ.

ಉತ್ತರ:– ಸಂಪೂರ್ಣವಾಗಿ ವಿಭೇದೀಕರಿಸಿದ ಅನೇಕ ಜೀವಿಗಳು ತಮ್ಮ ದೇಹದ ಭಾಗಗಳಿಂದ ಹೊಸ ಜೀವಿಗಳನ್ನು ಉಂಟುಮಾಡುವ ಸಾಮರ್ಥ್ಯವನ್ನು ಹೊಂದಿವೆ. ಅಂದರೆ, ಒಂದು ವೇಳೆ ಜೀವಿಯು ಯಾವುದೋ ಕಾರಣದಿಂದ ತುಂಡಾದರೆ ಅಥವಾ ಅನೇಕ ಚೂರುಗಳಾಗಿ ಮುರಿದು ಹೋದರೆ ಇಂತಹ ಅನೇಕ ಚೂರುಗಳು ಪ್ರತ್ಯೇಕ ಜೀವಿಗಳಾಗಿ ಬೆಳೆಯುತ್ತವೆ. ಉದಾಹರಣೆಗೆ ಹೈಡ್ರಾ ಮತ್ತು ಪ್ಲನೇರಿಯಗಳಂಥ ಸರಳ ಜೀವಿಗಳನ್ನು ಅನೇಕ ಚೂರುಗಳಾಗಿ ತುಂಡರಿಸಬಹುದು ಮತ್ತು ಪ್ರತಿ ಚೂರೂ ಒಂದು ಸಂಪೂರ್ಣ ಜೀವಿಯಾಗಿ ಬೆಳೆಯುತ್ತದೆ. ಇದನ್ನು ಪುನರುತ್ಪಾದನೆ (regeneration) ಎಂದು ಕರೆಯುವರು ವಿಶಿಷ್ಟ ಜೀವಕೋಶಗಳು ಪುನರುತ್ಪಾದನೆಯನ್ನು ನಡೆಸುತ್ತವೆ. ಈ ಜೀವಕೋಶಗಳು ವೃದ್ಧಿಯಾಗುತ್ತವೆ ಮತ್ತು ಅಸಂಖ್ಯ ಜೀವಕೋಶಗಳನ್ನು ಉಂಟುಮಾಡುತ್ತವೆ. ಈ ಜೀವಕೋಶಗಳ ಸಮೂಹದಿಂದ ವಿಭಿನ್ನ ಜೀವಕೋಶಗಳು ಬದಲಾವಣೆಗಳಿಗೆ ಒಳಗಾಗಿ ಅನೇಕ ವಿಧದ ಜೀವಕೋಶ ಮತ್ತು ಅಂಗಾಂಶಗಳಾಗುತ್ತವೆ. ಈ ಬದಲಾವಣೆಗಳು ಒಂದು ಸಂಘಟಿತವಾದ ಅನುಕ್ರಮದಲ್ಲಿ ನಡೆಯುತ್ತವೆ. ಇದನ್ನು ಅಭಿವರ್ಧನೆ (development) ಎನ್ನುವರು.

65) ಮಾನವನ ಮಿದುಳಿನ ಚಿತ್ರ ಬರೆದು ವಿವಿಧ ಭಾಗಗಳನ್ನು ಗುರುತಿಸಿ



66) ಸೋಡಿಯಂ ಮತ್ತು ಪೊಟ್ಯಾಸಿಯಂನಂಥ ಲೋಹಗಳನ್ನು ಸೀಮೆ ಎಣ್ಣೆಯಲ್ಲಿ ಯಾಕೆ ಸಂಗ್ರಹಿಸಿಡುತ್ತಾರೆ.

ಉತ್ತರ:– ಸೋಡಿಯಂ ಮತ್ತು ಪೊಟ್ಯಾಸಿಯಂನಂಥ ಲೋಹಗಳು ಗಾಳಿಗೆ ತೆರೆದಿಟ್ಟಾಗ ಕ್ಷಿಪ್ರವಾಗಿ ವರ್ತಿಸಿ ಬೆಂಕಿ ಹೊತ್ತಿಕೊಳ್ಳುತ್ತದೆ. ಆದ್ದರಿಂದ ಅವುಗಳನ್ನು ಸಂರಕ್ಷಿಸಲು ಮತ್ತು ಆಕಸ್ಮಿಕವಾಗಿ ಬೆಂಕಿ ಹೊತ್ತಿಕೊಳ್ಳುವುದನ್ನು ತಪ್ಪಿಸಲು ಸೀಮೆಎಣ್ಣೆಯಲ್ಲಿ ಸಂಗ್ರಹಿಸಿಡುತ್ತಾರೆ.

67) ಕಾರಣ ಕೊಡಿ

ಎ) ಆಮ್ಲವನ್ನು ಸಾರಯುಕ್ತಗೊಳಿಸುವಾಗ ಆಮ್ಲವನ್ನು ನೀರಿಗೆ ಸೇರಿಸಬೇಕು.

ಉತ್ತರ: ನೀರನ್ನು ಸಾರೀಕೃತ ಆಮ್ಲಕ್ಕೆ ಸೇರಿಸಿದರೆ ಉತ್ಪತ್ತಿಯಾಗುವ ಉಷ್ಣದಿಂದ ಮಿಶ್ರಣ ಹೊರ ಸಿಡಿದು ಸುಟ್ಟ ಗಾಯಗಳಗುವ ಅಪಾಯವಿದೆ, ಹಾಗೂ ಅತಿಯಾದ ತಾಪದಿಂದ ಗಾಜಿನ ಸಂಗ್ರಾಹಕ ಒಡೆಯುವ ಸಾಧ್ಯತೆ ಇದೆ, ಆದ್ದರಿಂದ ಆಮ್ಲವನ್ನು ಸಾರಯುಕ್ತಗೊಳಿಸುವಾಗ ಆಮ್ಲವನ್ನು ನೀರಿಗೆ ಸೇರಿಸಬೇಕು.

ಬಿ) ಪ್ಲಾಸ್ಟಿಕ್ ಉತ್ಪನ್ನಗಳ ಮರುಬಳಕೆಯು ಮರುಚಕ್ರೀಕರಣ ವಿಧಾನಕ್ಕಿಂತಲೂ ಉತ್ತಮ

ಉತ್ತರ:– ಮರುಚಕ್ರೀಕರಣದಲ್ಲಿ ಶಕ್ತಿಯ ಬಳಕೆಯಾಗುತ್ತದೆ, ಮರು ಬಳಕೆಯಲ್ಲಿ ಶಕ್ತಿಯ ಉಪಯೋಗವಾಗುವುದಿಲ್ಲ.

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ...

PUC - CET CHEMISTRY

MULTIPLE CHOICE QUESTIONS

11) For the reversible reaction $A_{(g)} + B_{(g)} \rightleftharpoons C_{(g)} + D_{(g)};\ \Delta G^0 = -350\,kJ$

Which of the following statements is true?

a) Equilibrium constant is greater than 1
b) The entropy change is negative
c) The reaction is thermodynamically not feasible
d) The reaction should be instantaneous

Ans:- a

12) Copper is extracted from copper pyrites by heating in a Bessemer converter. The method is based on the principle that

a) Iron has less affinity for oxygen than sulphur at high temperature.
b) Sulphur has less affinity for oxygen at high temperature.
c) Copper has more affinity for oxygen than sulphur at high temperature.
d) Copper has less affinity for oxygen than sulphur at high temperature.

Ans: (C) Copper has more affinity for oxygen than sulphur at high temperature.

13)

α – D – (+) – glucose and β – D – (–) – glucose

(A) Enantiomers (B) Conformers
(C) Epimers (D) Anomers

Ans. D

Expln:-

α – D – (+) – glucose and β – D – (–) – glucose are anomeric at first carbon so called anomers

14) Sucrose is NOT a reducing sugar since

a) it is chemically stable
b) it contains no free aldehydes or keto group adjacent to a CH-OH group
c) it is built up of a fructose unit
d) it is optically active

Ans:- b

15) Which of the following is the strongest base?

a) OH^- b) CH_3O^-
c) CH_3COO^- d) Cl^-

Ans : (a)

Expln:- To check the basicity of an ion, the conjugate acid must be weak. The conjugate acids are given below: H_2O, CH_3OH, CH_3COOH and HCl.


We know that methanol is a stronger acid than water. Weaker the acid, stronger is the conjugate base, by that logic, OH^- is the strongest base among the given options.

16) Which one of the following is NOT true regarding electromeric effect?

a) It results in the appearance of partial charges on the carbon atoms
b) It is a temporary effect
c) It operates on multiple bonds
d) It requires an attacking reagent

Ans:- a

17) below two compounds the vapour pressure of (B) at a particular temperature is ......



(A) (B)

a) lower than that of (A)
b) higher than that of (A)
c) same as that of (A)
d) higher or lower than (A), depending on the size of the vessel

Ans:- b

18) Adenosine is an example of.........

a) Purine base b) Nucleoside
c) Nucleotide d) Pyrimidine base

Ans: b

Expl:- When adenine (purine base) combines with ribose sugar, adenosine is formed. It is a nucleoside.

19) Graphite is a soft solid lubricant extremely difficult to melt. The reason for this anomalous behavior is that graphite -

a) has molecules of variable molecular masses like polymers
b) has carbon atoms arranged in large plates of rings of strongly bound carbon atoms with weak interpolate bonds
c) is a non-crystalline substance
d) is an allotropic form of carbon

Ans:- b


20) Propanone and Propanal are

(A) Position isomers (B) Functional isomers
(C) Chain isomers (D) Geometrical isomers

Ans. B

Expln:- Propanone and Propanal are functional isomers

21) But-1-yne on reaction with dil.H_2SO_4 in presence of Hg^{2+} ions at 333K gives



Ans. A


Expln:

$$CH_3-CH_2-C\equiv CH + H_2O \xrightarrow[H_2SO_4]{Hg^{+2}} CH_3-CH_2-\underset{\displaystyle OH}{\underset{|}{C}}=CH_2$$

Tautamerises

$$CH_3-CH_2-\overset{\displaystyle O}{\overset{\|}{C}}-CH_3$$

(or)



ಅತ್ಯಾಚಾರದ ಘಟನೆ ಬಳಿಕ ಕುಸಿದ ಪ್ರವಾಸಿಗರ ಸಂಖ್ಯೆ • ಮುಂಗಡ ಬುಕ್ಕಿಂಗ್ ರದ್ದು • ಬಣ್ಣದ ಹಬ್ಬಕ್ಕೆ ಈ ಸಲ ಗರ

ಹೋಳಿಗೂ ಮುನ್ನವೇ ಸಾಣಾಪುರ ಖಾಲಿ

• ಎನ್.ವಿಜಯ

ಗಂಗಾವತಿ (ಕೊಪ್ಪಳ ಜಿಲ್ಲೆ): ಹೋಳಿ ಹುಣ್ಣಿಮೆ ಬಂತೆಂದರೆ ಸಾಕು; ತಾಲ್ಲೂಕಿನ ಪ್ರಸಿದ್ಧ ರಮಣೀಯ ತಾಣ ಸಾಣಾಪುರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದೇಶಿ ಪ್ರವಾಸಿಗರಿಂದ ದೊಡ್ಡಮಟ್ಟದಲ್ಲಿ ಸಂಭ್ರಮ ಮನೆ ಮಾಡಿರುತ್ತಿತ್ತು. ಈಗ ಖಾಲಿ ಖಾಲಿಯಾಗಿದೆ.

ವಿದೇಶಿಗರು ವರ್ಷಪೂರ್ತಿ ಹಂಪಿ, ಕಮಲಾಪುರ, ಆನೆಗೊಂದಿ, ಪಂಪಾ ಸರೋವರ ಹೀಗೆ ಅನೇಕ ಐಸಿಹಾಸಿಕ ಪ್ರದೇಶಗಳಲ್ಲಿ ಓಡಾಡಿ ಹೋಳಿ ಹಬ್ಬದ ವೇಳೆಗೆ ಸಾಣಾಪುರ ಕೆರೆ ಬಳಿ ಬಂದು ಬಣ್ಣದ ಹಬ್ಬದ ಖುಷಿಯಲ್ಲಿ ಭಾಗಿಯಾಗುತ್ತಿದ್ದರು. ಈ ಬಾರಿ ಇದೇ ಸಾಣಾಪುರದಲ್ಲಿ ಇಬ್ಬರು ಯುವತಿಯರ ಮೇಲೆ ಅತ್ಯಾಚಾರ ಮತ್ತು ಯುವಕನ ಕೊಲೆ ನಡೆದ ಘಟನೆ ವಿದೇಶಿಯರಲ್ಲಿ ಆತಂಕ ಮೂಡಿಸಿದೆ.

ವಿದೇಶಿಗರಿಗೆ ಬಣ್ಣದ ಹಬ್ಬ ಅಚ್ಚುಮೆಚ್ಚಾಗಿದ್ದು, ಪ್ರತಿವರ್ಷ ಸ್ಥಳೀಯರ ಜೊತೆ ಸೇರಿ ಓಕುಳಿ ಆಟದಲ್ಲಿ ಪಾಲ್ಗೊಳ್ಳುತ್ತಿದ್ದರು. ಪರಸ್ಪರ ಬಣ್ಣ ಎರಚುತ್ತ, ಡಿಜೆ ಸದ್ದಿಗೆ ಕುಣಿದು ಓಕುಳಿಯ ಸಂಭ್ರಮದಲ್ಲಿ ಮಿಂದೇಳುತ್ತಿದ್ದರು. ಪ್ರತಿ ವರ್ಷ ಇಷ್ಟೊಂದು ಸಂಭ್ರಮ ತುಂಬಿರುತ್ತಿದ್ದ ಸಾಣಾಪುರದಲ್ಲಿ ಈಗ ಆತಂಕದ ಛಾಯೆ ಮನೆಮಾಡಿದೆ. ರೆಸಾರ್ಟ್‌ಗಳಲ್ಲಿ ಬಣ್ಣಬಣ್ಣದ ವಿದ್ಯುತ್ ದೀಪಗಳ ಅಲಂಕಾರವಿದ್ದರೂ ಪ್ರವಾಸಿಗರಿಲ್ಲದೆ ಬಣಗುಡುತ್ತಿವೆ.

ವಿದೇಶಿಗರು ಭಯದಿಂದ ಸಾಣಾಪುರ ತೊರೆಯುತ್ತಿದ್ದಾರೆ; ಯಾರೇ ಬಂದರೂ ಅನುಮಾನದಿಂದ ನೋಡುವಂತಾಗಿದೆ. ಘಟನೆ ಬಗ್ಗೆ ಬೇಸರ ವ್ಯಕ್ತಪಡಿಸುತ್ತಿರುವ ಪ್ರವಾಸಿಗರು ಹೊಸಪೇಟೆ, ಬೆಂಗಳೂರು ಭಾಗಕ್ಕೆ ಹೋಗುತ್ತಿದ್ದಾರೆ. ಸ್ಥಳೀಯರು ಹಾಗೂ ರೆಸಾರ್ಟ್‌ಗಳ ಮಾಲೀಕರು ಭದ್ರತೆಯ ಭರವಸೆ ನೀಡಿ ಮನವೊಲಿಸಿದರೂ ಒಪ್ಪದೆ ಕೊಠಡಿ ಖಾಲಿ ಮಾಡುತ್ತಿದ್ದಾರೆ. ಬೆರಳೆಣಿಕೆಯಷ್ಟೇ ಪ್ರಮಾಣದಲ್ಲಿ ಉಳಿದ ಕೆಲ ಇಸ್ರೇಲ್ ಪ್ರವಾಸಿಗರು 'ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು' ಎಂದು ಆಗ್ರಹಿಸುತ್ತಿದ್ದಾರೆ. ಹೋಳಿ ಆಚರಣೆಗಾಗಿ ದೇಶಿ ಹಾಗೂ ವಿದೇಶದ 400ಕ್ಕೂ ಹೆಚ್ಚು ಪ್ರವಾಸಿಗರು ಸಾಣಾಪುರ, ಹನುಮನಹಳ್ಳಿ, ಆನೆಗೊಂದಿ ಭಾಗದ ರೆಸಾರ್ಟ್ ಮತ್ತು ಹೋಂ ಸ್ಟೇಗಳಲ್ಲಿ ಮಾಡಿದ್ದ ಮುಂಗಡ ಬುಕ್ಕಿಂಗ್ ರದ್ದು ಮಾಡಿದ್ದಾರೆ.

'ಪ್ರತಿ ವರ್ಷ ಹೋಳಿ ಹಬ್ಬ ಬಂತೆಂದರೆ ವ್ಯಾಪಾರ ದೃಷ್ಟಿಯಿಂದ ನಮಗೆ ಸುಗ್ಗಿಕಾಲ. ಈ ಬಾರಿ ನಮ್ಮ ಭಾಗದಲ್ಲಿ ನಡೆದ ದುರ್ಘಟನೆಯಿಂದಾಗಿ ಯಾವ ಪ್ರವಾಸಿಗರೂ ಬರುತ್ತಿಲ್ಲ. ಶೇ 70ರಷ್ಟು ಜನ ಮುಂಗಡವಾಗಿ ಮಾಡಿದ್ದನ್ನು ಬುಕ್ಕಿಂಗ್ ರದ್ದುಪಡಿಸಿದ್ದಾರೆ' ಎಂದು ಸಾಣಾಪುರದ ರೆಸಾರ್ಟ್ ಮಾಲೀಕ ಸುನೀಲ್ ಬಾಬು ಬೇಸರ ವ್ಯಕ್ತಪಡಿಸಿದರು.



ಗಂಗಾವತಿ ತಾಲ್ಲೂಕಿನ ಸಾಣಾಪುರ ಕೆರೆ ರಸ್ತೆಯಲ್ಲಿರುವ ರೆಸಾರ್ಟ್ ಖಾಲಿಯಾಗಿದೆ

ಸಾಣಾಪುರ ಭಾಗದಲ್ಲಿ ದುರ್ಘಟನೆ ನಡೆದಿದ್ದರಿಂದ ಪ್ರವಾಸಿಗರು ಹೋಳಿಹಬ್ಬಕ್ಕೂ ಮೊದಲು ಊರು ತೊರೆಯುತ್ತಿದ್ದಾರೆ. ಆದಾಯಕ್ಕೆ ದೊಡ್ಡ ಪೆಟ್ಟು ಬೀಳುತ್ತಿದೆ

ರವಿಚಂದ್ರ
ಸಾಣಾಪುರದ ರೆಸಾರ್ಟ್ ಮಾಲೀಕ

ಹಂಪಿ, ಸಾಣಾಪುರ ಸುಂದರವಾದ ಪ್ರದೇಶ. ಇಂಥಲ್ಲಿ ಅತ್ಯಾಚಾರ, ಕೊಲೆ ನಡೆಯಬಾರದಿತ್ತು. ಪೊಲೀಸರು ಎಚ್ಚರಿಕೆ ವಹಿಸಬೇಕು

ಆದಿ
ಇಸ್ರೇಲ್ ಪ್ರವಾಸಿಗ

ಮುಖ್ಯಾಂಶಗಳು

- ಪ್ರತಿ ವರ್ಷ ಹೋಳಿ ವೇಳೆ ಸಂಭ್ರಮ: ಈಗ ವಿಷಾದ
- ಅಭದ್ರತೆಯಿಂದ ರೆಸಾರ್ಟ್ ತೊರೆಯುತ್ತಿರುವ ಪ್ರವಾಸಿಗರು
- ಪ್ರವಾಸೋದ್ಯಮಕ್ಕೆ ಹೊಡೆತ ಬೀಳುವ ಆತಂಕ

ಮದ್ಯ ಮಾರಾಟ ಪೊಲೀಸರ ಚಾಟಿ

ಗಂಗಾವತಿ: ಸಾಣಾಪುರ ಹಾಗೂ ತುಂಗಭದ್ರಾ ನದಿಪಾತ್ರದ ಸುತ್ತಲು ಇರುವ ರೆಸಾರ್ಟ್‌ಗಳಲ್ಲಿ ಕೈಗೊಂಡಿರುವ ಸುರಕ್ಷತಾ ಕ್ರಮದ ಬಗ್ಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್ ಎಲ್. ಅರಸಿದ್ಧಿ ಸೋಮವಾರ ರಾತ್ರಿ ಪರಿಶೀಲನೆ ನಡೆಸಿದರು.

'ಬರುವ ಪ್ರವಾಸಿಗರ ಕುರಿತು ಸ್ಪಷ್ಟವಾಗಿ ಮಾಹಿತಿ ಸಂಗ್ರಹಿಸಿ ದಾಖಲಿಸಬೇಕು. ಬರುವ ಹಾಗೂ ಹೋಗುವ ವಿವರ ಪಡೆದುಕೊಳ್ಳಬೇಕು' ಎಂದು ಸೂಚಿಸಿದರು.

ಇದೇ ವೇಳೆ ತಂಡಗಳಾಗಿ ಪೊಲೀಸರು ಪರಿಶೀಲನೆ ನಡೆಸುವಾಗ ಸಾಣಾಪುರ ಸಮೀಪದ ಬಸಾಪುರ ಭಾಗದ ರೆಸಾರ್ಟ್‌ನಲ್ಲಿ ಮದ್ಯ ಸೇವನೆ ಮಾಡುತ್ತಿದ್ದ ತಂಡವನ್ನು ಕಂಡು ಪೊಲೀಸರು ರೆಸಾರ್ಟ್ ಮಾಲೀಕರಿಗೆ ಚಾಟಿ ಬೀಸಿದರು. ಊಟಕ್ಕೆಂದು ಪ್ರವಾಸಿಗರು ಕುಟುಂಬ ಸಮೇತ ಬರುತ್ತಾರೆ. ಇಂಥ ಸ್ಥಳದಲ್ಲಿ ಮದ್ಯ ಮಾರಾಟಕ್ಕೆ ಅವಕಾಶ ಸಿಕ್ಕಿದ್ದು ಹೇಗೆ? ಎಂದು ಪ್ರಶ್ನಿಸಿದರು.

ಪ್ರವಾಸಿಗರ ರಕ್ಷಣೆಗೆ ಮಾಲೀಕರೇ ಹೊಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಂಗಾವತಿ ತಾಲ್ಲೂಕಿನ ಆನೆಗೊಂದಿ ಬಳಿ ಪ್ರವಾಸಿಗರ ಮೇಲೆ ಹಲ್ಲೆ ಮತ್ತು ಅತ್ಯಾಚಾರ ಎಸಗಿದ ಪ್ರಕರಣದ ಬೆನ್ನಲ್ಲೇ ರೆಸಾರ್ಟ್ ಮತ್ತು ಹೋಂಸ್ಟೇಗಳಲ್ಲಿ ಪ್ರವಾಸಿಗರ ಸುರಕ್ಷತಾ ಕ್ರಮಗಳನ್ನು ಬಿಗಿಗೊಳಿಸಲು ಸರ್ಕಾರ ಮುಂದಾಗಿದೆ.

ಗೃಹ ಇಲಾಖೆಯು ಈ ಸಂಬಂಧ ಕೆಲವು ನಿರ್ದೇಶನಗಳನ್ನು ಹೊರಡಿಸಿದೆ. ಅವುಗಳನ್ನು ಉಲ್ಲಂಘಿಸಿದರೆ ರೆಸಾರ್ಟ್ ಮತ್ತು ಹೋಂಸ್ಟೇ ಮಾಲೀಕರನ್ನೇ ಹೊಣೆ ಮಾಡಲಾಗುವುದು. ಪ್ರವಾಸಿಗರಿಗೆ ಅಪಾಯವಾದಲ್ಲಿ ಶಿಕ್ಷೆ ಅನುಭವಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದೆ.

ಈ ಸಂಬಂಧ ಪೊಲೀಸ್ ಮಹಾ ನಿರ್ದೇಶಕ, ಎಲ್ಲ ಜಿಲ್ಲಾಧಿಕಾರಿಗಳು, ಎಲ್ಲ ಜಿಲ್ಲಾ ಎಸ್‌ಪಿ ಮತ್ತು ಕಾನೂನು ಮತ್ತು ಸುವ್ಯವಸ್ಥೆ ಎಡಿಜಿಪಿಗೆ ಗೃಹ ಇಲಾಖೆ ನಿರ್ದೇಶನ ನೀಡಿದೆ.

'ಇದರಲ್ಲಿ ಉಲ್ಲೇಖಿಸಿರುವ ನಿರ್ದೇಶನಗಳ ಪಾಲನೆ ಬಗ್ಗೆ ಎಲ್ಲ ರೆಸಾರ್ಟ್ ಮತ್ತು ಹೋಂಸ್ಟೇಗಳ ಮಾಲೀಕರಿಂದ ಮುಚ್ಚಳಿಕೆ ಬರೆಸಿಕೊಳ್ಳಬೇಕು. ಅವರ ಪ್ರವಾಸಿ/ವೀಕ್ಷಣಾ ಕಾರ್ಯಕ್ರಮಗಳನ್ನು ಪರಿಶೀಲಿಸಿ, ಅವುಗಳಲ್ಲಿ ಅಪಾಯದ ಸಾಧ್ಯತೆಗಳು ಇಲ್ಲದಿರುವುದನ್ನು ಖಚಿತಪಡಿಸಿಕೊಳ್ಳಬೇಕು' ಎಂದು ಸೂಚಿಸಿದೆ.

'ತಕ್ಷಣದಿಂದಲೇ ಈ ಪ್ರಕ್ರಿಯೆಯನ್ನು ಪ್ರಾರಂಭಿಸಿ, ಒಂದು ವಾರದಲ್ಲಿ ಪೂರ್ಣಗೊಳಿಸಬೇಕು. ಇದೇ 18ರ ಒಳಗೆ ವರದಿ ನೀಡಬೇಕು' ಎಂದು ಸೂಚಿಸಿದೆ.

ನಿರ್ದೇಶನಗಳು

- ವಿದೇಶಿ ಪ್ರವಾಸಿಗರೂ ಒಳಗೊಂಡು ಎಲ್ಲರ ರಕ್ಷಣೆಗೆ ಅಗತ್ಯವಿರುವ ಕ್ರಮಗಳನ್ನು ತಕ್ಷಣವೇ ತೆಗೆದುಕೊಳ್ಳಬೇಕು
- ರೆಸಾರ್ಟ್ ಅಥವಾ ಹೋಂಸ್ಟೇ ಆವರಣದ ಹೊರವಲಯ ಮತ್ತು ನಿರ್ಜನ ಪ್ರದೇಶಗಳಿಗೆ ಪ್ರವಾಸಿಗರನ್ನು ಕರೆದೊಯ್ಯುವ ಮುನ್ನ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು. ಅನುಮತಿ ಪಡೆದುಕೊಳ್ಳಬೇಕು
- ಪೊಲೀಸ್ ಮತ್ತು ಅರಣ್ಯ ಇಲಾಖೆ ಸಿಬ್ಬಂದಿಯಿಂದ ಪೂರ್ವಾನುಮತಿ ಪಡೆಯದೆ ನಿರ್ಜನ ಪ್ರದೇಶ/ಹೊರವಲಯ/ಅರಣ್ಯ ಪ್ರದೇಶಗಳಿಗೆ ಪ್ರವಾಸಿಗರನ್ನು ಕರೆದೊಯ್ಯಬಾರದು
- ಅನುಮತಿ ಪಡೆಯದೇ ಕರೆದೊಯ್ದ ಸಂದರ್ಭದಲ್ಲಿ ಕಾಡುಪ್ರಾಣಿಗಳಿಂದ ಅಥವಾ ದುಷ್ಕರ್ಮಿಗಳಿಂದ ಅಪಾಯ ಎದುರಾದಲ್ಲಿ ಮಾಲೀಕರೇ ಜವಾಬ್ದಾರರು. ಇದು ಶಿಕ್ಷಾರ್ಹ ಅಪರಾಧ



'ಸಂಚಾರಿ ಆರೋಗ್ಯ ಘಟಕ' ವಾಹನಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು. ರಿಜ್ವಾನ್ ಅರ್ಷದ್, ಸಂತೋಷ್ ಎಸ್. ಲಾಡ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಕಟ್ಟಡ ಕಾರ್ಮಿಕರಿಗೆ ಸಂಚಾರಿ ಚಿಕಿತ್ಸಾಲಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾರ್ಮಿಕರು ಸುಭಿಕ್ಷವಾಗಿದ್ದರೆ, ರಾಜ್ಯದ ಅಭಿವೃದ್ಧಿ ಸಾಧ್ಯವಾಗುತ್ತದೆ. ಹೀಗಾಗಿಯೇ ಕಾರ್ಮಿಕರ ಆರೋಗ್ಯ ಕಾಪಾಡಲು ಸಂಚಾರಿ ಚಿಕಿತ್ಸಾಲಯಗಳ ಸೇವೆಯನ್ನು ಆರಂಭಿಸುತ್ತಿದ್ದೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕಾರ್ಮಿಕ ಇಲಾಖೆ ಮತ್ತು ಕಟ್ಟಡ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಸಹಯೋಗದಲ್ಲಿ ರೂಪಿಸಲಾಗಿರುವ 100 ಸಂಚಾರಿ ಚಿಕಿತ್ಸಾಲಯ ಬಸ್‌ಗಳಿಗೆ ವಿಧಾನಸೌಧದ ಎದುರು ಮಂಗಳವಾರ ಚಾಲನೆ ನೀಡಿ ಅವರು ಮಾತನಾಡಿದರು.

'ಆರ್ಥಿಕತೆಯಲ್ಲಿ ಮಹತ್ವದ ಕೊಂಡಿಗಳಾಗಿರುವ ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ಚಿಕಿತ್ಸೆ ಪಡೆದುಕೊಳ್ಳುವುದೇ ದುಸ್ತರವಾಗಿದೆ. ಈ ಸಮಸ್ಯೆಯನ್ನು ಸಂಚಾರಿ ಚಿಕಿತ್ಸಾಲಯಗಳು ನಿವಾರಿಸಲಿವೆ' ಎಂದರು.

'15 ಲಕ್ಷ ಕಾರ್ಮಿಕರಿಗೆ ಚಿಕಿತ್ಸೆ': 'ಈ ಚಿಕಿತ್ಸಾಲಯಗಳ ಮೂಲಕ ವಾರ್ಷಿಕ 15 ಲಕ್ಷ ಕಾರ್ಮಿಕರಿಗೆ ಚಿಕಿತ್ಸೆ ನೀಡುವ ಗುರಿ ಇದೆ' ಎಂದು ಕಾರ್ಮಿಕ ಸಚಿವ ಸಂತೋಷ್ ಎಸ್. ಲಾಡ್ ಹೇಳಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಶಾಸಕ ರಿಜ್ವಾನ್ ಅರ್ಷದ್ ಸಂಚಾರಿ ಚಿಕಿತ್ಸಾಲಯಗಳನ್ನು ಪರಿಶೀಲಿಸಿದರು. ಅವುಗಳಲ್ಲಿನ ಸವಲತ್ತುಗಳ ಬಗ್ಗೆ ಸಿಬ್ಬಂದಿಯಿಂದ ಮಾಹಿತಿ ಪಡೆದುಕೊಂಡರು.

'ಕಾರ್ಮಿಕರ ಮಕ್ಕಳಿಗೆ ವಸತಿ ಶಾಲೆ'

'ಕಟ್ಟಡ ಕಾರ್ಮಿಕರ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು ಎಂದು ವಸತಿ ಶಾಲೆ ಆರಂಭಿಸುತ್ತಿದ್ದೇವೆ' ಎಂದು ಸಿದ್ದರಾಮಯ್ಯ ಘೋಷಿಸಿದರು.

'ಕಾರ್ಮಿಕರ ಕಲ್ಯಾಣಕ್ಕೆ ಸರ್ಕಾರ ಕಟಿಬದ್ಧವಾಗಿದೆ. ಈ ಕಾರ್ಮಿಕರು ಕೆಲಸಕ್ಕೆ ಹೋಗುವಾಗ ಮಕ್ಕಳನ್ನೂ ಜತೆಗೆ ಕರೆದೊಯ್ಯುತ್ತಾರೆ. ಮುಂದೆ ಆ ಮಕ್ಕಳೂ ಬಾಲ ಕಾರ್ಮಿಕರಾಗುತ್ತಾರೆ. ಇದನ್ನು ತಪ್ಪಿಸುವ ಸಲುವಾಗಿ ಅಂತಹ ಮಕ್ಕಳಿಗೆ ಉಚಿತ ವಸತಿಶಾಲೆಗಳನ್ನು ಆರಂಭಿಸುತ್ತಿದ್ದೇವೆ' ಎಂದರು.

ಬೀದರ್‌ನ ಸಣ್ಣ ನೀರಾವರಿ ಕಚೇರಿಯಲ್ಲೇ ಎಫ್‌ಡಿಸಿ ಮೇಲೆ ಹಲ್ಲೆ

ಸೂಪರಿಂಟೆಂಡೆಂಟ್–ಎಫ್‌ಡಿಸಿ ಜಟಾಪಟಿ

ಪ್ರಜಾವಾಣಿ ವಾರ್ತೆ

ಬೀದರ್: ನಗರದ ಸಣ್ಣ ನೀರಾವರಿ ಇಲಾಖೆಯ ಸೂಪರಿಂಟೆಂಡೆಂಟ್ ಕುಂದನಬಾಯಿ ಎಂಬುವರ ಮಕ್ಕಳು ಹಾಗೂ ಸಂಬಂಧಿಕರು ಎಫ್‌ಡಿಸಿ ಸಂಜು ಡಾಕುಳಗಿ ಎಂಬುವರ ಮೇಲೆ ಹಲ್ಲೆ ನಡೆಸಿದ್ದು, ಗಂಭೀರವಾಗಿ ಗಾಯಗೊಂಡಿರುವ ಅವರನ್ನು ಬ್ರಿಮ್ಸ್‌ಗೆ ದಾಖಲಿಸಲಾಗಿದೆ.

ಸಂಜು ಡಾಕುಳಗಿ ಅವರು ಎಂದಿನಂತೆ ಸೋಮವಾರ ಮಧ್ಯಾಹ್ನ ಕಚೇರಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ಈ ವೇಳೆ ಕುಂದನಬಾಯಿ ಅವರ ಮಕ್ಕಳು, ಸಂಬಂಧಿಕರು ಸೇರಿದಂತೆ ಸುಮಾರು 15ಕ್ಕೂ ಹೆಚ್ಚು ಜನ ಕಲ್ಲು, ಬಡಿಗೆ, ರಾಡ್‌ನಿಂದ ಸಂಜು ಡಾಕುಳಗಿ ಮೇಲೆ ಹಲ್ಲೆ ನಡೆಸಿದ್ದಾರೆ. ಗಂಭೀರವಾಗಿ ಗಾಯಗೊಂಡು ಪ್ರಜ್ಞೆ ತಪ್ಪಿ ಬಿದ್ದಿದ್ದ ಅವರನ್ನು ಬ್ರಿಮ್ಸ್‌ಗೆ ದಾಖಲಿಸಲಾಯಿತು ಎಂದು ಪ್ರತ್ಯಕ್ಷದರ್ಶಿಗಳು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಸಂಜು ಡಾಕುಳಗಿ ಅವರು ಎಫ್‌ಡಿಸಿಯಿಂದ ಸೂಪರಿಂಟೆಂಡೆಂಟ್ ಆಗಿ ಬಡ್ತಿ ಹೊಂದಿದ್ದಾರೆ. ಆ ಸ್ಥಾನ ಬಿಟ್ಟುಕೊಡಬೇಕೆಂದು ಕುಂದನಬಾಯಿ ಅವರಿಗೆ ಕೇಳಿದ್ದಾರೆ. ಇದರಿಂದ ಸಿಟ್ಟಿಗೆದ್ದು ಅವರು ಮಕ್ಕಳು, ಸಂಬಂಧಿಕರ ಮೂಲಕ ಹಲ್ಲೆ ನಡೆಸಿದ್ದಾರೆ ಎಂದು ಗೊತ್ತಾಗಿದೆ.

ಈ ಸಂಬಂಧ ಕುಂದನಬಾಯಿ ಅವರನ್ನು 'ಪ್ರಜಾವಾಣಿ' ಸಂಪರ್ಕಿಸಿದಾಗ, 'ಸಂಜು ಡಾಕುಳಗಿ ಅವರು ಬಡ್ತಿ ಹೊಂದಿದ್ದರೆ ಸರ್ಕಾರಿ ಆದೇಶ ಪತ್ರ ತೆಗೆದುಕೊಂಡು ಬರಬೇಕು. ಯಾವುದೇ ಆದೇಶ ಪತ್ರ ಇಲ್ಲದೆ ಕುರ್ಚಿ ಬಿಟ್ಟುಕೊಡಬೇಕೆಂದು ಕೇಳುತ್ತಿದ್ದಾರೆ. ಕಳೆದ ಎರಡು ವರ್ಷಗಳಿಂದ ಅವರು ಅನಗತ್ಯವಾಗಿ ಕಿರಿಕಿರಿ ಮಾಡುತ್ತಿದ್ದಾರೆ. ಅವರ ವರ್ತನೆ ಸರಿಯಿಲ್ಲ' ಎಂದು ಆರೋಪಿಸಿದ್ದಾರೆ.

'ಕುಂದನಬಾಯಿ ಅವರ ಜಾಗಕ್ಕೆ ನನಗೆ ಬಡ್ತಿ ಸಿಕ್ಕಿದೆ. ಅವರು ಮೂಲತಃ ಆರ್‌ಡಿಪಿಆರ್ ಇಲಾಖೆಯವರು. ಅಲ್ಲಿ ಸದ್ಯ ಈ ಹುದ್ದೆಗೆ ಸಮನಾದ ಹುದ್ದೆ ಖಾಲಿಯಿಲ್ಲ. ನನಗೆ ಸ್ಥಾನ ಬಿಟ್ಟುಕೊಟ್ಟರೆ ಅಲ್ಲಿ ತಕ್ಷಣವೇ ಹುದ್ದೆ ಸಿಗುವುದಿಲ್ಲ ಎಂದು ಭಾವಿಸಿ ಈ ರೀತಿ ಮಾಡಿದ್ದಾರೆ. ಅವರು ನನ್ನ ತಾಯಿ ಸಮಾನರು. ಅವರನ್ನು ಕೆಟ್ಟ ದೃಷ್ಟಿಯಿಂದ ನೋಡುವ ಪ್ರಶ್ನೆಯೇ ಇಲ್ಲ. ನನ್ನ ನಡತೆ ಹೇಗಿದೆ ಎನ್ನುವುದನ್ನು ಕಚೇರಿಯಲ್ಲಿ ಯಾರನ್ನು ಬೇಕಾದರೂ ಕೇಳಬಹುದು' ಎಂದು ಸಂಜು ಡಾಕುಳಗಿ ಪ್ರತಿಕ್ರಿಯಿಸಿದ್ದಾರೆ.

ಘಟನೆ ಸಂಬಂಧ ಇನ್ನಷ್ಟೇ ಪ್ರಕರಣ ದಾಖಲಾಗಬೇಕಿದೆ.

ಮುಖ್ಯಾಂಶಗಳು

- ಕಲ್ಲು, ಬಡಿಗೆ, ರಾಡ್‌ನಿಂದ ಸಂಜು ಡಾಕುಳಗಿ ಮೇಲೆ ಕಚೇರಿಯಲ್ಲೇ ಹಲ್ಲೆ
- ಎರಡು ವರ್ಷಗಳಿಂದ ಅನಗತ್ಯವಾಗಿ ಕಿರಿಕಿರಿ– ಕುಂದನಬಾಯಿ ಆರೋಪ
- 'ಕುಂದನಬಾಯಿಯನ್ನು ಕೆಟ್ಟ ದೃಷ್ಟಿಯಿಂದ ನೋಡಿಲ್ಲ'



ಕುಂದನಬಾಯಿ



ಸಂಜು

ಜೆಆರ್‌ಎಫ್ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಡುಪಿ ಜಿಲ್ಲೆಯ ಕುಂದಾಪುರದ ಮೂಡಲಕಟ್ಟೆಯಲ್ಲಿರುವ ಐಎಂಜೆ ಇನ್‌ಸ್ಟಿಟ್ಯೂಟ್ ಆಫ್ ರಿಸರ್ಚ್ ಸಂಸ್ಥೆಯ ಡೆಲ್ಟಾ–ಕ್ಯು ವಿಭಾಗದಲ್ಲಿ 'ಕ್ವಾಂಟಮ್ ಕಂಪ್ಯೂಟಿಂಗ್ ಮತ್ತು ಎಲೆಕ್ಟ್ರಾನ್- ಪಾಸಿಟ್ರಾನ್' ಸಂಶೋಧನೆಗಾಗಿ ಜೆಆರ್‌ಎಫ್ ಹುದ್ದೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಭೌತವಿಜ್ಞಾನದಲ್ಲಿ ಎಂಎಸ್‌ಸಿ ಪದವಿ ಹೊಂದಿದವರು imjir.org ವೆಬ್‌ಸೈಟ್ ಮೂಲಕ ಮಾರ್ಚ್ 20ರ ಒಳಗಾಗಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗೆ info@imjir.org ಸಂಪರ್ಕಿಸಬಹುದು.



ಉತ್ಸವ... ನಾಗಮಂಗಲ ತಾಲ್ಲೂಕಿನ ಆದಿಚುಂಚನಗಿರಿ ಜಾತ್ರಾ ಮಹೋತ್ಸವದ ಅಂಗವಾಗಿ ಸೋಮವಾರ ರಾತ್ರಿ ಸಿದ್ಧೇಶ್ವರ ಸ್ವಾಮಿ ಉತ್ಸವ ನಡೆಯಿತು. ರಥಕ್ಕೆ ಚಾಲನೆ ನೀಡಿದ ನಿರ್ಮಲಾನಂದನಾಥ ಸ್ವಾಮೀಜಿ ಭಕ್ತರೊಂದಿಗೆ ಮೆರವಣಿಗೆಯಲ್ಲಿ ಸಾಗಿದರು. ಮಠದ ಪ್ರಧಾನ ಕಾರ್ಯದರ್ಶಿ ಪ್ರಸನ್ನನಾಥ ಸ್ವಾಮೀಜಿ, ಶಾಖಾ ಮಠಗಳ ಸ್ವಾಮೀಜಿಗಳು ಪಾಲ್ಗೊಂಡಿದ್ದರು

2020ನೇ ಸಾಲಿನ ರಾಜ್ಯ ವಾರ್ಷಿಕ ಚಲನಚಿತ್ರ ಪ್ರಶಸ್ತಿಗಳ ವಿವರ

2020ನೇ ಸಾಲಿನ ರಾಜ್ಯ ವಾರ್ಷಿಕ ಚಲನಚಿತ್ರ ಪ್ರಶಸ್ತಿಗಾಗಿ 71 ಸಿನಿಮಾಗಳು ಅರ್ಜಿ ಸಲ್ಲಿಸಿದ್ದವು. ಈ ಪೈಕಿ ಐದು ಚಲನಚಿತ್ರಗಳು ತಾಂತ್ರಿಕ ಕಾರಣಗಳಿಂದ 2020ನೇ ಸಾಲಿಗೆ ಅರ್ಹವಾಗದ ಕಾರಣ ಅವುಗಳನ್ನು ಹೊರತುಪಡಿಸಿ 66 ಚಲನಚಿತ್ರಗಳನ್ನು ನಿರ್ದೇಶಕ ಬಿ.ಎಸ್.ಲಿಂಗದೇವರು ಅಧ್ಯಕ್ಷತೆಯ ಸಮಿತಿಯು ವೀಕ್ಷಿಸಿ ಪ್ರಶಸ್ತಿಯ ವರದಿ ನೀಡಿದೆ.

ಮೊದಲನೇ ಅತ್ಯುತ್ತಮ ಚಿತ್ರ
ಪಿಂಕಿ ಎಲ್ಲಿ
ನಿರ್ಮಾಪಕ: ಕೃಷ್ಣೇಗೌಡ
ನಿರ್ದೇಶಕ: ಪೃಥ್ವಿ ಕೊಣನೂರು
ಪ್ರಶಸ್ತಿ: ತಲಾ ₹1 ಲಕ್ಷ, 50 ಗ್ರಾಂ ಚಿನ್ನದ ಪದಕ

ಎರಡನೇ ಅತ್ಯುತ್ತಮ ಚಿತ್ರ
ವರ್ಣಪಟಲ
ನಿರ್ಮಾಪಕ: ಕವಿತಾ ಸಿ.ಹಿರೇಮಠ
ನಿರ್ದೇಶಕ: ಚೇತನ್ ಮುಂಡಾಡಿ
ಪ್ರಶಸ್ತಿ: ತಲಾ ₹75 ಸಾವಿರ, 100 ಗ್ರಾಂ ಬೆಳ್ಳಿ ಪದಕ

ಮೂರನೇ ಅತ್ಯುತ್ತಮ ಚಿತ್ರ
ಹರಿವ ನದಿಗೆ ಮೈಯೆಲ್ಲಾ ಕಾಲು
ನಿರ್ಮಾಪಕ/ ನಿರ್ದೇಶಕ: ಬಾಬು ಈಶ್ವರ ಪ್ರಸಾದ್ ಎಸ್.ಎಸ್.
ಪ್ರಶಸ್ತಿ: ತಲಾ ₹50 ಸಾವಿರ, 100 ಗ್ರಾಂ ಬೆಳ್ಳಿ ಪದಕ

ವಿಶೇಷ ಸಾಮಾಜಿಕ ಕಾಳಜಿಯ ಚಿತ್ರ:
1.ಗಿಳಿಯು ಪಂಜರದೊಳಿಲ್ಲ
ನಿರ್ಮಾಪಕ: ರಾಮದಾಸ ನಾಯ್ಡು ಪಿ.ಆರ್.
ನಿರ್ದೇಶಕ: ಶಿವಪ್ರಸಾದ್ ಶೆಟ್ಟಿ ಕೆ.ಪಿ.
ಪ್ರಶಸ್ತಿ: ತಲಾ ₹75 ಸಾವಿರ, 100 ಗ್ರಾಂ ಬೆಳ್ಳಿ ಪದಕ
2.ಈ ಮಣ್ಣು
ನಿರ್ಮಾಪಕ: ರಾಮದಾಸ ನಾಯ್ಡು ಪಿ.ಆರ್.
ನಿರ್ದೇಶಕ: ಶಿವಧ್ವಜ್ ಶೆಟ್ಟಿ
ಪ್ರಶಸ್ತಿ: ತಲಾ ₹75 ಸಾವಿರ, 100 ಗ್ರಾಂ ಬೆಳ್ಳಿ ಪದಕ

ಅತ್ಯುತ್ತಮ ಜನಪ್ರಿಯ ಮನರಂಜನಾ ಚಿತ್ರ: ಫೋರ್ ವಾಲ್ಸ್
ನಿರ್ಮಾಪಕ: ಟಿ.ವಿಶ್ವನಾಥ್ ನಾಯ್ಕ್
ನಿರ್ದೇಶಕ: ಸಂಗಮೇಶ್ ಎಸ್.ಸಜ್ಜನರ್
ಪ್ರಶಸ್ತಿ: ತಲಾ ₹50 ಸಾವಿರ, 100 ಗ್ರಾಂ ಬೆಳ್ಳಿ ಪದಕ

ಅತ್ಯುತ್ತಮ ಮಕ್ಕಳ ಚಿತ್ರ: ಪದಕ
ನಿರ್ಮಾಪಕ/ ನಿರ್ದೇಶಕ: ಆದಿತ್ಯ ಆರ್.ಚಿರಂಜೀವಿ
ಪ್ರಶಸ್ತಿ: ತಲಾ ₹50 ಸಾವಿರ, 100 ಗ್ರಾಂ ಬೆಳ್ಳಿ ಪದಕ

ನಿರ್ದೇಶಕರ ಪ್ರಥಮ ನಿರ್ದೇಶನದ ಅತ್ಯುತ್ತಮ ಚಿತ್ರ: ನೀಲಿ ಹಕ್ಕಿ
ನಿರ್ಮಾಪಕ: ಯೋಗೇಶ್ ಕೆ.ಎಸ್.
ನಿರ್ದೇಶಕ: ಗಣೇಶ್ ಹೆಗ್ಡೆ
ಪ್ರಶಸ್ತಿ: ತಲಾ ₹50 ಸಾವಿರ, 100 ಗ್ರಾಂ ಬೆಳ್ಳಿ ಪದಕ

ಅತ್ಯುತ್ತಮ ಕರ್ನಾಟಕ ಪ್ರಾದೇಶಿಕ ಭಾಷಾ ಚಿತ್ರ: ಜೀಟಿಗೆ (ತುಳು ಭಾಷೆ)
ನಿರ್ಮಾಪಕ: ಅರುಣ್ ರೈ ಬಾಲಕೃಷ್ಣ
ನಿರ್ದೇಶಕ: ಸಂತೋಷ್ ಮಾಡ
ಪ್ರಶಸ್ತಿ: ತಲಾ ₹50 ಸಾವಿರ, 100 ಗ್ರಾಂ ಬೆಳ್ಳಿ ಪದಕ

ಅತ್ಯುತ್ತಮ ನಟ: ಪ್ರಜ್ವಲ್ ದೇವರಾಜ್
ಚಿತ್ರ: ಜಂಟಲ್‌ಮನ್

ಅತ್ಯುತ್ತಮ ನಟಿ: ಅಕ್ಷತಾ ಪಾಂಡವಪುರ
ಚಿತ್ರ: ಪಿಂಕಿ ಎಲ್ಲಿ

ಅತ್ಯುತ್ತಮ ಪೋಷಕ ನಟ: ರಮೇಶ್ ಪಂಡಿತ್
ಚಿತ್ರ: ತಲೆದಂಡ
ಪ್ರಶಸ್ತಿ: ₹20 ಸಾವಿರ, 100 ಗ್ರಾಂ ಬೆಳ್ಳಿ ಪದಕ

ಅತ್ಯುತ್ತಮ ಪೋಷಕ ನಟಿ: ಕೆ.ಎಸ್.ಮಂಜುಳಮ್ಮ
ಚಿತ್ರ: ದಂತಪುರಾಣ
ಪ್ರಶಸ್ತಿ: ₹20 ಸಾವಿರ, 100 ಗ್ರಾಂ ಬೆಳ್ಳಿ ಪದಕ

ಅತ್ಯುತ್ತಮ ಕತೆ: ಶಶಿಕಾಂತ್ ಗಟ್ಟಿ
ಚಿತ್ರ: ರಾಂಚಿ
ಪ್ರಶಸ್ತಿ: ₹20 ಸಾವಿರ, 100 ಗ್ರಾಂ ಬೆಳ್ಳಿ ಪದಕ

ಅತ್ಯುತ್ತಮ ಚಿತ್ರಕತೆ: ರಾಘವೇಂದ್ರ ಕುಮಾರ್
ಚಿತ್ರ: ಚಾಂದಿನಿ ಬಾರ್
ಪ್ರಶಸ್ತಿ: ₹20 ಸಾವಿರ, 100 ಗ್ರಾಂ ಬೆಳ್ಳಿ ಪದಕ

ಅತ್ಯುತ್ತಮ ಸಂಭಾಷಣೆ: ವೀರಪ್ಪ ಮರಳವಾಡಿ
ಚಿತ್ರ: ಹೂವಿನ ಹಾರ
ಪ್ರಶಸ್ತಿ: ₹20 ಸಾವಿರ, 100 ಗ್ರಾಂ ಬೆಳ್ಳಿ ಪದಕ

ಅತ್ಯುತ್ತಮ ಛಾಯಾಚಿತ್ರಗ್ರಹಣ: ಅಶೋಕ್ ಕಶ್ಯಪ್
ಚಿತ್ರ: ತಲೆದಂಡ
ಪ್ರಶಸ್ತಿ: ₹20 ಸಾವಿರ, 100 ಗ್ರಾಂ ಬೆಳ್ಳಿ ಪದಕ

ಅತ್ಯುತ್ತಮ ಸಂಗೀತ ನಿರ್ದೇಶನ: ಗಗನ ಬಡೇರಿಯಾ
ಚಿತ್ರ: ಮಾಲ್ಗುಡಿ ಡೇಸ್
ಪ್ರಶಸ್ತಿ: ₹20 ಸಾವಿರ, 100 ಗ್ರಾಂ ಬೆಳ್ಳಿ ಪದಕ

ಅತ್ಯುತ್ತಮ ಸಂಕಲನ: ನಾಗೇಂದ್ರ ಕೆ. ಉಜ್ಜನಿ
ಚಿತ್ರ: ಆ್ಯಕ್ಟ್ 1978
ಪ್ರಶಸ್ತಿ: ₹20 ಸಾವಿರ, 100 ಗ್ರಾಂ ಬೆಳ್ಳಿ ಪದಕ

ಅತ್ಯುತ್ತಮ ಬಾಲ ನಟ: ಮಾಸ್ಟರ್ ಆಹಿಲ್ ಅನ್ಸಾರಿ
ಚಿತ್ರ: ದಂತ ಪುರಾಣ
ಪ್ರಶಸ್ತಿ: ₹20 ಸಾವಿರ, 100 ಗ್ರಾಂ ಬೆಳ್ಳಿ ಪದಕ

ಅತ್ಯುತ್ತಮ ಬಾಲ ನಟಿ: ಬೇಬಿ ಹಿತೈಷಿ ಪೂಜಾರ್
ಚಿತ್ರ: ಪಾರು
ಪ್ರಶಸ್ತಿ: ₹20 ಸಾವಿರ, 100 ಗ್ರಾಂ ಬೆಳ್ಳಿ ಪದಕ

ಅತ್ಯುತ್ತಮ ಕಲಾ ನಿರ್ದೇಶನ: ಗುಣಶೇಖರ್
ಚಿತ್ರ: ಬಿಚ್ಚುಗತ್ತಿ
ಪ್ರಶಸ್ತಿ: ₹20 ಸಾವಿರ, 100 ಗ್ರಾಂ ಬೆಳ್ಳಿ ಪದಕ

ಅತ್ಯುತ್ತಮ ಗೀತ ರಚನೆ: ಗಾರ್ಗಿ ಕಾರೆಹಕ್ಲು
ಚಿತ್ರ: ಪರ್ಜನ್ಯ (ಮೌನವು ಮಾತಾಗಿದೆ)
ಸಚಿನ್ ಶೆಟ್ಟಿ ಕುಂಬ್ಳೆ
ಚಿತ್ರ: ಈ ಮಣ್ಣು (ದಾರಿಯೊಂದು ಹುಡುಕುತ್ತಿದೆ)
ಪ್ರಶಸ್ತಿ: ₹20 ಸಾವಿರ, 100 ಗ್ರಾಂ ಬೆಳ್ಳಿ ಪದಕ

ಅತ್ಯುತ್ತಮ ಹಿನ್ನೆಲೆ ಗಾಯಕ: ಅನಿರುದ್ಧ ಶಾಸ್ತ್ರಿ
ಚಿತ್ರ: ಆಚಾರ್ಯ ಶ್ರೀ ಶಂಕರ
ಪ್ರಶಸ್ತಿ: ₹20 ಸಾವಿರ, 100 ಗ್ರಾಂ ಬೆಳ್ಳಿ ಪದಕ

ಅತ್ಯುತ್ತಮ ಹಿನ್ನೆಲೆ ಗಾಯಕಿ: ಅರುಂದತಿ ವಶಿಷ್ಠ
ಚಿತ್ರ: ದಂತಪುರಾಣ
ಪ್ರಶಸ್ತಿ: ₹20 ಸಾವಿರ, 100 ಗ್ರಾಂ ಬೆಳ್ಳಿ ಪದಕ

ತೀರ್ಪುಗಾರರ ವಿಶೇಷ ಪ್ರಶಸ್ತಿ
1.ನಟನೆಗಾಗಿ (ಮರಣೋತ್ತರವಾಗಿ) ಬಿ.ವಿಜಯ್ ಕುಮಾರ್ (ಸಂಚಾರಿ ವಿಜಯ್) **ಚಿತ್ರ:** ತಲೆದಂಡ
2.ವಸ್ತ್ರವಿನ್ಯಾಸ: ಶ್ರೀವಲ್ಲಿ
ಚಿತ್ರ: ಸಾರವಜ್ರ
3.ಪ್ರಸಾಧನ: ರಮೇಶ್ ಬಾಬು
ಚಿತ್ರ: ತಲೆದಂಡ
4.ಶಬ್ದಗ್ರಹಣ: ವಿ.ಜಿ.ರಾಜನ್
ಚಿತ್ರ: ಅಮೃತ್ ಅಪಾರ್ಟ್‌ಮೆಂಟ್ಸ್
ಪ್ರಶಸ್ತಿ: ತಲಾ ₹20 ಸಾವಿರ, 100 ಗ್ರಾಂ ಬೆಳ್ಳಿ ಪದಕ

ವಿಶೇಷ ಪ್ರಶಸ್ತಿ(ಪ್ರಮಾಣ ಪತ್ರ)
ವಿಶೇಷಚೇತನ ನಟ: ವಿಶ್ವಾಸ್ ಕೆ.ಎಸ್.
ಚಿತ್ರ: ಅರಬ್ಬೀ

ಅತ್ಯುತ್ತಮ ನಿರ್ಮಾಣ ನಿರ್ವಾಹಕ: ಚಂಪಕಧಾಮ ಬಾಬು
ಚಿತ್ರ: ಕನ್ನಡಿಗ
ಪ್ರಶಸ್ತಿ: ತಲಾ ₹20 ಸಾವಿರ, 100 ಗ್ರಾಂ ಬೆಳ್ಳಿ ಪದಕ



ಡಿವೈಎಸ್‌ಪಿ ಕನಕಲಕ್ಷ್ಮಿ ಬಂಧನ

ಒಂದನೇ ಪುಟದಿಂದ...

'ಪ್ರಕರಣದ ಸಂಬಂಧ ವಿಚಾರಣೆಗೆ ಬರುವಂತೆ ಕನಕಲಕ್ಷ್ಮಿ ಅವರಿಗೆ ನೋಟಿಸ್ ಜಾರಿ ಮಾಡಲಾಗಿತ್ತು. ಮಂಗಳವಾರ ವಿಚಾರಣೆಗೆ ಬಂದಿದ್ದರು. ವಿಚಾರಣೆ ವೇಳೆ ವಶಕ್ಕೆ ಪಡೆದು ಬಂಧಿಸಲಾಯಿತು' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

'ಕರ್ನಾಟಕ ಭೋವಿ ನಿಗಮ ಹಗರಣದ ಸಂಬಂಧ ವಿಚಾರಣೆ ವೇಳೆ ವಿವಸ್ತ್ರಗೊಳಿಸಿ ₹25 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದರು. ಇದರಿಂದ ಮಾನಸಿಕವಾಗಿ ನೊಂದು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ' ಎಂಬುದಾಗಿ ಜೀವಾ ಅವರು ಮರಣ ಪತ್ರದಲ್ಲಿ ಉಲ್ಲೇಖಿಸಿದ್ದರು. 13 ಪುಟಗಳ ಮರಣ ಪತ್ರ ಬರೆದಿಟ್ಟಿದ್ದರು. ಮರಣ ಪತ್ರವನ್ನು ಪೊಲೀಸರು ವಶಕ್ಕೆ ಪಡೆದು ಪರಿಶೀಲನೆ ನಡೆಸಿದ್ದರು. ಅಲ್ಲದೇ ಮರಣ ಪತ್ರದ ನೈಜತೆ ತಿಳಿದುಕೊಳ್ಳಲು ಜೀವಾ ಅವರ ಕೈಬರಹವಿದ್ದ ಪತ್ರ ಹಾಗೂ ಮರಣ ಪತ್ರ ಎರಡನ್ನೂ ತನಿಖಾಧಿಕಾರಿಗಳು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ರವಾನೆ ಮಾಡಿದ್ದರು.

ಏನಿದು ಹಗರಣ?: ಬಿಜೆಪಿ ಸರ್ಕಾರದ ಅವಧಿಯಲ್ಲಿ ಭೋವಿ ನಿಗಮದಲ್ಲಿ ನಡೆದಿದ್ದ ಅಕ್ರಮ ಪ್ರಕರಣದ ತನಿಖೆಯನ್ನು ಕಾಂಗ್ರೆಸ್ ಸರ್ಕಾರವು ಸಿಐಡಿ ತನಿಖೆಗೆ ವಹಿಸಿತ್ತು. ಸಿಐಡಿ ಡಿವೈಎಸ್‌ಪಿ ಕನಕಲಕ್ಷ್ಮಿ ಅವರು ತನಿಖಾಧಿಕಾರಿ ಆಗಿದ್ದರು.

2018ರಿಂದ 2024ರವರೆಗೆ ಸುಮಾರು ₹90 ಕೋಟಿಗೂ ಅಧಿಕ ಮೊತ್ತದ ಅಕ್ರಮ ನಡೆದಿರುವುದು ತನಿಖೆಯಿಂದ ದೃಢಪಟ್ಟಿದೆ ಎಂದು ಸಿಐಡಿ ಹೇಳಿತ್ತು.

ನಿಗಮದ ಮಾಜಿ ಪ್ರಧಾನ ವ್ಯವಸ್ಥಾಪಕ ಬಿ.ಕೆ.ನಾಗರಾಜಪ್ಪ ಮನೆಯಲ್ಲಿ, ಉದ್ಯಮಿಯೂ ಆಗಿದ್ದ ವಕೀಲೆ ಜೀವಾ ಹಾಗೂ ಆಕೆಯ ಸಹೋದರಿ ಸಂಗೀತಾ ಬಾಡಿಗೆಗೆ ಇದ್ದರು. ಇದೇ ಮನೆಯನ್ನೇ ತಮ್ಮ ಸಹೋದರಿ ಸಂಗೀತಾ ಒಡೆತನದ ಹರ್ನಿತಾ ಕ್ರಿಯೇಷನ್ಸ್ ಕಂಪನಿಯ ಕಚೇರಿ ಎಂದು ಹೇಳಿಕೊಂಡು ಜೀವಾ ಹಣ ವರ್ಗಾವಣೆ ಮಾಡಿಕೊಂಡಿದ್ದರು ಎಂಬುದನ್ನು ತನಿಖಾ ತಂಡ ಪತ್ತೆ ಹಚ್ಚಿತ್ತು. ಅದಾದ ಮೇಲೆ ಜೀವಾ ಅವರನ್ನು ವಿಚಾರಣೆಗೆ ಕರೆಸಿ ಕಿರುಕುಳ ನೀಡಲಾಗಿತ್ತು ಎಂಬ ಆರೋಪವಿತ್ತು ಎಂದು ಮೂಲಗಳು ಹೇಳಿವೆ.

ಕನಕಲಕ್ಷ್ಮಿ ವಿರುದ್ಧ ಭ್ರಷ್ಟಾಚಾರ ತಡೆ ಕಾಯ್ದೆಯ ಸೆಕ್ಷನ್ 7 (ಎ) ಮತ್ತು ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 108ರ ಅಡಿಯಲ್ಲಿ ಜೀವಾ ಅವರ ಸಹೋದರಿ ಸಂಗೀತಾ ನೀಡಿದ ದೂರಿನ ಆಧಾರದ ಮೇಲೆ ಪ್ರಕರಣ ದಾಖಲಾಗಿತ್ತು.

'ರಾಜ್ಯದ ವಿ.ವಿಗಳು ಮರಣಶಯ್ಯೆಯಲ್ಲಿ'

ನವದೆಹಲಿ: ಕರ್ನಾಟಕದ ವಿಶ್ವವಿದ್ಯಾಲಯಗಳ ಉಪನ್ಯಾಸಕರಿಗೆ ಹಾಗೂ ಸಿಬ್ಬಂದಿಗೆ ವೇತನ ನೀಡಲು ರಾಜ್ಯ ಸರ್ಕಾರದ ಬಳಿ ದುಡ್ಡಿಲ್ಲ. ಈ ವಿಶ್ವವಿದ್ಯಾಲಯಗಳು ಮರಣ ಶಯ್ಯೆಯಲ್ಲಿವೆ ಎಂದು ರಾಜ್ಯಸಭೆಯ ಜೆಡಿಎಸ್ ಸದಸ್ಯ ಎಚ್.ಡಿ.ದೇವೇಗೌಡ ಕಳವಳ ವ್ಯಕ್ತಪಡಿಸಿದರು.

ರಾಜ್ಯಸಭೆಯಲ್ಲಿ ಮಂಗಳವಾರ ನಡೆದ ಶಿಕ್ಷಣ ಸಚಿವಾಲಯದ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, 'ವಿಶ್ವವಿದ್ಯಾಲಯಗಳು ಸ್ಥಿತಿ ದಯನೀಯವಾಗಿದೆ. ಕೇಂದ್ರ ಶಿಕ್ಷಣ ಸಚಿವಾಲಯ ಕೂಡಲೇ ಮಧ್ಯಪ್ರವೇಶಿಸಿ ಅನುದಾನ ಬಿಡುಗಡೆ ಮಾಡಬೇಕು. ಈ ವಿಷಯದಲ್ಲಿ ರಾಜಕೀಯ ಮಾಡುವುದು ಬೇಡ' ಎಂದು ಸಲಹೆ ನೀಡಿದರು.

'ಮೈಸೂರು ವಿ.ವಿ. ದೇಶದ ಹಳೆಯ ವಿ.ವಿಗಳಲ್ಲಿ ಒಂದು. ಶತಮಾನೋತ್ಸವ ಆಚರಿಸಿದ ವಿ.ವಿಯು ಸಂಕಷ್ಟದ ಸ್ಥಿತಿಯಲ್ಲಿದೆ. ಧಾರವಾಡದ ಕರ್ನಾಟಕ ವಿ.ವಿ. ಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ. ಸಿಬ್ಬಂದಿಗೆ ಕೆಲವು ತಿಂಗಳಿಂದ ಸರಿಯಾಗಿ ವೇತನ ಪಾವತಿ ಆಗಿಲ್ಲ' ಎಂದು ಗಮನ ಸೆಳೆದರು.

ಕರಾವಳಿಯಲ್ಲಿ 40 ಡಿಗ್ರಿ ಸೆಲ್ಸಿಯಸ್ ದಾಟಿದ ಉಷ್ಣಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರಾವಳಿಯಲ್ಲಿ ತಾಪಮಾನ ಹೆಚ್ಚಳವಾಗಿದ್ದು, ದಕ್ಷಿಣ ಕನ್ನಡದ ಸುಳ್ಯದಲ್ಲಿ ಗರಿಷ್ಠ ಉಷ್ಣಾಂಶ (41.4 ಡಿಗ್ರಿ ಸೆಲ್ಸಿಯಸ್) ಮಂಗಳವಾರ ದಾಖಲಾಗಿದೆ.

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಪ್ರಕಾರ ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡದ ತಲಾ 10 ಕಡೆ, ಉಡುಪಿಯ ಎರಡು ಕಡೆ ಹಾಗೂ ಕೊಡಗು ಜಿಲ್ಲೆಯ ಒಂದು ಕಡೆ ಗರಿಷ್ಠ ಉಷ್ಣಾಂಶವು 38 ಡಿಗ್ರಿ ಸೆಲ್ಸಿಯಸ್‌ನಿಂದ 41 ಡಿಗ್ರಿ ಸೆಲ್ಸಿಯಸ್ ವರೆಗೆ ವರದಿಯಾಗಿದೆ. ಉತ್ತರ ಒಳನಾಡಿನಲ್ಲಿ ಮುಂದಿನ ಎರಡು ದಿನಗಳು 2ರಿಂದ 3 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಹೆಚ್ಚಳವಾಗುವ ಸಾಧ್ಯತೆಯಿದೆ ಎಂದು ಕೇಂದ್ರ ತಿಳಿಸಿದೆ.

ನೈಋತ್ಯ ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತದಿಂದಾಗಿ ಮೈಸೂರು, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಯ ಒಂದು ಅಥವಾ ಎರಡು ಸ್ಥಳಗಳಲ್ಲಿ ಬುಧವಾರ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬೆಂಗಳೂರಿನ ಕೆಲವೆಡೆ ಮಂಗಳವಾರ ಸಂಜೆ ತುಂತುರು ಮಳೆ ಸುರಿದಿದೆ. ಇದು ಈ ವರ್ಷದ ಮೊದಲ ಮಳೆಯಾಗಿದೆ. ಬುಧವಾರ ಮಧ್ಯಾಹ್ನದ ಬಳಿಕ ಮೋಡ ಕವಿದ ವಾತಾವರಣ ಇರಲಿದೆ ಎಂದು ಇಲಾಖೆ ತಿಳಿಸಿದೆ.

ಮಂಗಳೂರು ವರದಿ: ದಕ್ಷಿಣ ಕನ್ನಡ ಜಿಲ್ಲೆಯ ಪಾಣೆಮಂಗಳೂರು (40.5 ಡಿಗ್ರಿ ಸೆಲ್ಸಿಯಸ್), ಕಡಬ (40.4), ಬೆಳ್ತಂಗಡಿ ಕೊಕ್ಕಡ (40.3), ಪುತ್ತೂರು (40.2), ಉಪ್ಪಿನಂಗಡಿ (40), ಮೂಡಬಿದಿರೆ (39), ಬಂಟ್ವಾಳ (38), ಉಡುಪಿ ಜಿಲ್ಲೆಯ ಹೆಬ್ರಿ (39.5), ಕಾರ್ಕಳ (38), ಕೊಡಗು ಜಿಲ್ಲೆಯ ಸಂಪಾಜೆ (40.7), ಉತ್ತರ ಕನ್ನಡ ಜಿಲ್ಲೆಯ ಕಾರವಾರ ಘಡಸಾಯಿ (41.1), ಹೊನ್ನಾವರ ಮಾವಿನಕುರ್ವೆ (39.2), ಮುಂಡಗೋಡ ಪಾಳ ಮತ್ತು ಕಾರವಾರ ಸಾವಂತವಾಡ (39.3), ಅಂಕೋಲಾ ಅವರ್ಸಾ (38.4) ಗರಿಷ್ಠ ಉಷ್ಣಾಂಶ ದಾಖಲಾದ ಹೋಬಳಿಗಳು.

2028ಕ್ಕೆ ₹9.25 ಲಕ್ಷ ಕೋಟಿ ಸಾಲ

ಒಂದನೇ ಪುಟದಿಂದ....

ಮುಂಬರುವ ಆರ್ಥಿಕ ವರ್ಷಗಳಲ್ಲಿ ವೇತನ–ಪಿಂಚಣಿ ಮತ್ತಿತರ ಬದ್ಧ ವೆಚ್ಚಗಳಲ್ಲಿ ಏರಿಕೆಯಾಗುವ ಸಾಧ್ಯತೆ ನಿಚ್ಚಳವಾಗಿರುವ ಕಾರಣ, ರಾಜ್ಯದ ಮೇಲಿನ ಹಣಕಾಸು ಹೊರೆಯೂ ಹೆಚ್ಚಾಗಲಿದೆ. ಈ ಹೊರೆಗಳ ನಿರ್ವಹಣೆಗೆ ಸಾಲದ ಮೇಲಿನ ಅವಲಂಬನೆ ಅನಿವಾರ್ಯ ಎಂಬುದನ್ನು ಆರ್ಥಿಕ ಇಲಾಖೆಯು ಸದನದಲ್ಲಿ ಮಂಡಿಸಿದ 'ಮಧ್ಯಮಾವಧಿ ವಿತ್ತೀಯ ಯೋಜನೆ 2025–29'ರ ಮುನ್ನಂದಾಜಿನಲ್ಲಿ ಉಲ್ಲೇಖಿಸಲಾಗಿದೆ.

ಈ ಕಾರಣದಿಂದಲೇ 2027–28ಕ್ಕೆ (2028ರ ಮಾರ್ಚ್ ಅಂತ್ಯ) ಒಟ್ಟು ಸಾಲ ₹9.25 ಲಕ್ಷ ಕೋಟಿ, 2028–29ಕ್ಕೆ (2029ರ ಮಾರ್ಚ್ ಅಂತ್ಯ) ಒಟ್ಟು ಸಾಲ ₹10.17 ಲಕ್ಷ ಕೋಟಿಗೆ ಮುಟ್ಟಲಿದೆ ಎಂದು ಅಂದಾಜಿಸಲಾಗಿದೆ.

ಹೀಗಿದ್ದೂ ರಾಜ್ಯದ ಒಟ್ಟು ಉತ್ಪಾದನೆಯ (ಜಿಎಸ್‌ಡಿಪಿ) ಹೋಲಿಕೆಯಲ್ಲಿ ಸಾಲದ ಪ್ರಮಾಣವನ್ನು ಕಡಿಮೆ ಮಾಡುವತ್ತ ಮುನ್ನಂದಾಜಿನಲ್ಲಿ ಸರ್ಕಾರ ಗಮನ ಹರಿಸಿದೆ. ಇದನ್ನು ಸಾಧಿಸಲು, ಕೇಂದ್ರದ ತೆರಿಗೆ ಆದಾಯದಲ್ಲಿನ ಪಾಲಿನ ಹೆಚ್ಚಳ ಮತ್ತು ಜಿಎಸ್‌ಟಿ ಪರಿಹಾರ ಸೆಸ್ ರದ್ದಾಗಿ, ಅದು ಪೂರ್ಣ ಪ್ರಮಾಣದಲ್ಲಿ ರಾಜ್ಯಕ್ಕೆ ಲಭ್ಯವಾಗುತ್ತದೆ ಎಂದು ಸರ್ಕಾರ ನಿರೀಕ್ಷಿಸಿದೆ.

ಆದರೆ ಈ ನಿರೀಕ್ಷೆಗಳು ಈಡೇರುವ ಸಾಧ್ಯತೆಗಳು ತೀರಾ ತೆಳುವಾಗಿವೆ. '16ನೇ ಹಣಕಾಸು ಆಯೋಗದಲ್ಲಿ ರಾಜ್ಯಕ್ಕೆ ಹೆಚ್ಚಿನ ಪಾಲು ನಿಗದಿ ಮಾಡುವ ನಿರೀಕ್ಷೆ ಇದೆ. ಹೀಗಾಗಿ ಕೇಂದ್ರದಿಂದ ಸ್ವೀಕೃತವಾಗುವ ರಾಜಸ್ವವು ಗಣನೀಯ ಪ್ರಮಾಣದಲ್ಲಿ ಹೆಚ್ಚಳವಾಗಬಹುದು' ಎಂದು ಮುನ್ನಂದಾಜಿನಲ್ಲಿ ಆರ್ಥಿಕ ಇಲಾಖೆ ಹೇಳಿದೆ.

'ಈ ನಿರೀಕ್ಷೆ ಈಡೇರಲಾರದು. ಏಕೆಂದರೆ 15ನೇ ಹಣಕಾಸು ಆಯೋಗದ ಶಿಫಾರಸಿನಂತೆ ಕೇಂದ್ರ ಸರ್ಕಾರವು ತನ್ನ ಒಟ್ಟು ತೆರಿಗೆ ಆದಾಯದಲ್ಲಿ ಶೇ 41ರಷ್ಟನ್ನು ಮಾತ್ರ ರಾಜ್ಯಗಳ ಜತೆಗೆ ಹಂಚಿಕೊಳ್ಳುತ್ತಿದೆ. ಇದನ್ನು ಶೇ 40ಕ್ಕೆ ಇಳಿಸಿ, ಶಿಫಾರಸು ಮಾಡಿ ಎಂದು 16ನೇ ಹಣಕಾಸು ಆಯೋಗಕ್ಕೆ ಕೇಂದ್ರ ಸರ್ಕಾರವು ಸೂಚಿಸಿ ಪತ್ರ ಬರೆದಿದೆ. ಇದು ಅನುಷ್ಠಾನಕ್ಕೆ ಬಂದಲ್ಲಿ ಕೇಂದ್ರದ ತೆರಿಗೆಯಲ್ಲಿ ರಾಜ್ಯದ ಪಾಲು ಇನ್ನಷ್ಟು ಕಡಿಮೆಯಾಗಲಿದೆ' ಎನ್ನುತ್ತಾರೆ ಆರ್ಥಿಕ ಇಲಾಖೆಯ ಅಧಿಕಾರಿಗಳು.

'ಕೇಂದ್ರದಿಂದ ಬರುವ ಪಾಲಿನ ಪ್ರಮಾಣ ಕಡಿಮೆ ಆದರೆ, ವಿತ್ತೀಯ ಕೊರತೆಯೂ ಹೆಚ್ಚಲಿದೆ. ಪರಿಣಾಮವಾಗಿ ಸಾಲದ ಪ್ರಮಾಣ ಹೆಚ್ಚಾಗಬಹುದು. ಇದನ್ನು ಸ್ವಲ್ಪವಾದರೂ ನಿಯಂತ್ರಿಸುವ ಏಕೈಕ ಹಾದಿ ಎಂದರೆ ಅನಗತ್ಯ ವೆಚ್ಚಕ್ಕೆ ಕಡಿವಾಣ ಹಾಕುವುದು. ಆದರೆ, ಆ ಸಾಧ್ಯತೆ ಕಡಿಮೆ' ಎಂಬುದು ಅಧಿಕಾರಿಗಳ ಅಂದಾಜು.

ಜಿಎಸ್‌ಡಿಪಿ ಏರಿಕೆ

2024-25	₹28.61 ಲಕ್ಷ ಕೋಟಿ
2025-26	₹30.70 ಲಕ್ಷ ಕೋಟಿ
2026-27	₹34.38 ಲಕ್ಷ ಕೋಟಿ
2027-28	₹38.51 ಲಕ್ಷ ಕೋಟಿ
2028-29	₹43.13 ಲಕ್ಷ ಕೋಟಿ

40.5%
2025-26ರಿಂದ 2028-29ರವರೆಗೆ ಜಿಎಸ್‌ಡಿಪಿ ಬೆಳವಣಿಗೆ ಮುನ್ನಂದಾಜು

ಬಂಡವಾಳ ವೆಚ್ಚ

2024-25	₹56,963 ಕೋಟಿ
2025-26	₹71,336 ಕೋಟಿ
2026-27	₹89,883 ಕೋಟಿ
2027-28	₹1.04 ಲಕ್ಷ ಕೋಟಿ
2028-29	₹1.16 ಲಕ್ಷ ಕೋಟಿ

63.7%
2025-26ರಿಂದ 2028-29ರವರೆಗೆ ಏರಿಕೆ ಮುನ್ನಂದಾಜು



ಸಿಇಟಿ: ಏ. 18 ಬದಲಿಸಲು ಆಗ್ರಹ

ಬೆಂಗಳೂರು: ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಏ.16, 17, 18ರಂದು ಸಿಇಟಿ ನಡೆಯುತ್ತಿದ್ದು, ಕ್ರೈಸ್ತ ವಿದ್ಯಾರ್ಥಿಗಳ ಅನುಕೂಲಕ್ಕೆ ಏ.18ರಂದು ನಿಗದಿ ಆಗಿರುವ ಪರೀಕ್ಷೆಯನ್ನು ಮುಂದೂಡಬೇಕು ಎಂದು ಕಾಂಗ್ರೆಸ್‌ನ ಐವನ್ ಡಿಸೋಜ ಒತ್ತಾಯಿಸಿದರು.

ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು, ಏ. 18ರಂದು ಗುಡ್‌ಫ್ರೈಡೇ ಇದೆ. ಗುಡ್‌ಫ್ರೈಡೇ ಸರ್ಕಾರಿ ರಜಾದಿನ ಎಂದು ತಿಳಿದಿದ್ದರೂ ಅಧಿಕಾರಿಗಳು ಅಂದೇ ಪರೀಕ್ಷೆ ನಿಗದಿ ಮಾಡಿದ್ದಾರೆ. ಹಾಗಾಗಿ, ಪರೀಕ್ಷೆ ಮುಂದೂಡಬೇಕು ಎಂದರು.

ಏ. 18ರಂದು ಗಡಿನಾಡು-ಹೊರನಾಡು ವಿದ್ಯಾರ್ಥಿಗಳಿಗೆ ಕನ್ನಡ ಪರೀಕ್ಷೆ ಇದೆ. 2,537 ವಿದ್ಯಾರ್ಥಿಗಳು ಹೆಸರು ನೋಂದಾಯಿಸಿಕೊಂಡಿದ್ದು, ಅವರಲ್ಲಿ 115 ಕ್ರೈಸ್ತ ವಿದ್ಯಾರ್ಥಿಗಳು ಇದ್ದಾರೆ. ದ್ವಿತೀಯ ಪಿಯು ಪರೀಕ್ಷೆ ಮಾರ್ಚ್ 20ರಂದು ಮುಕ್ತಾಯವಾಗಲಿದೆ. ಮೇ 4ರಂದು ನೀಟ್ ಇರುತ್ತದೆ. ಹಾಗಾಗಿ, ಮುಂದೂಡಲಾಗಲ್ಲ ಎಂದು ಈ ಹಿಂದೆ ಕೆಇಎ ಅಧಿಕಾರಿಗಳು ಪ್ರತಿಕ್ರಿಯಿಸಿದ್ದರು.

ಗ್ಯಾರಂಟಿ ಸಮಿತಿ ಕುರಿತು ಜಟಾಪಟಿ: ವಿರೋಧ ಪಕ್ಷಗಳಿಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರಶ್ನೆ

‘ಕೈ’ ಕಾರ್ಯಕರ್ತರಿಗೆ ಸಂಬಳ ಕೊಟ್ಟರೆ ತಪ್ಪೇನು?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ಯಾರಂಟಿ ಸಮಿತಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿಗೆ ಸರ್ಕಾರದಿಂದ ಸಂಬಳ ಕೊಡುವುದನ್ನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬಲವಾಗಿ ಸಮರ್ಥಿಸಿಕೊಂಡರು.

ವಿಧಾನಸಭೆಯಲ್ಲಿ ಬಿಜೆಪಿ–ಜೆಡಿಎಸ್ ಸದಸ್ಯರ ಧರಣಿ ಮತ್ತು ಗದ್ದಲ ಮಧ್ಯೆ ಮಾತನಾಡಿದ ಅವರು, ‘ಕಾಂಗ್ರೆಸ್ ಕಾರ್ಯಕರ್ತರಿಗೆ ಸಂಬಳ ನೀಡುತ್ತಿರುವುದನ್ನು ಸಹಿಸಿಕೊಳ್ಳಲು ನಿಮಗೆ ಆಗುತ್ತಿಲ್ಲವೆ’ ಎಂದು ಪ್ರಶ್ನಿಸಿದರು.

‘ಬೆಲೆ ಏರಿಕೆಯಿಂದ ತತ್ತರಿಸಿದ್ದ ಜನರ ನೆರವಿಗಾಗಿ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದ್ದೇವೆ. ಕಾಂಗ್ರೆಸ್ ಅಧಿಕಾರದಲ್ಲಿ ಇರುವವರೆಗೂ ಅವು ಮುಂದುವರಿಯುತ್ತವೆ. ಅವುಗಳು ಸರಿಯಾಗಿ ಜನರಿಗೆ ತಲುಪುತ್ತಿವೆಯೊ? ಇಲ್ಲವೊ? ಎಂಬುದರ ಪರಿಶೀಲನೆಗೆ ಕಾಂಗ್ರೆಸ್ ವತಿಯಿಂದ ಸಮಿತಿ ರಚಿಸಿದ್ದೇವೆ’ ಎಂದರು.

‘ಗ್ಯಾರಂಟಿಗಳಿಗೆ ನಮ್ಮ ವಿರೋಧ ವಿಲ್ಲ. ಕಾಂಗ್ರೆಸ್ ಕಾರ್ಯಕರ್ತರ ನೇತೃತ್ವ ದಲ್ಲಿ ಸಮಿತಿ ರಚಿಸಿರುವುದ ಕ್ಕಷ್ಟೇ ವಿರೋಧ’ ಎಂದು ಬಿಜೆಪಿ, ಜೆಡಿಎಸ್ ಸದಸ್ಯರು ಹೇಳಿದರು. ಅದಕ್ಕೆ ಪ್ರತಿಯಾಗಿ, ಡಿ.ವಿ. ಗುಂಡಪ್ಪ ಅವರ ‘ಮಂಕು ತಿಮ್ಮನ ಕಗ್ಗ’ದ ‘ಎದ್ದೆದ್ದು ಬೀಳುತಿಹೆ...’ ಪದ್ಯದ ಸಾಲುಗಳನ್ನು ಉಲ್ಲೇಖಿಸಿದ ಶಿವಕುಮಾರ್, ವಿರೋಧ ಪಕ್ಷದ ಸದಸ್ಯರನ್ನು ಛೇಡಿಸಿದರು.

ಗದ್ದಲದ ಮಧ್ಯೆ ಸಭಾಧ್ಯಕ್ಷ ಯು.ಟಿ. ಖಾದರ್ ಅವರು ಕಲಾಪವನ್ನು ಮುಂದೂಡಿದರು. ಪುನಃ ಕಲಾಪ ಆರಂಭವಾದಾಗ ಹೇಳಿಕೆ ನೀಡಿದ ಶಿವಕುಮಾರ್, ‘ಪ್ರತಿಪಕ್ಷ ಸದಸ್ಯರ ಬೇಡಿಕೆ ಕುರಿತು ಸಂಪುಟ ಸಭೆಯಲ್ಲಿ ಚರ್ಚಿಸಿ, ನಿರ್ಧಾರ ಕೈಗೊಳ್ಳುತ್ತೇವೆ’ ಎಂದರು.

‘ಪ್ರಜಾಪ್ರಭುತ್ವ ವ್ಯವಸ್ಥೆಗೆ ಅಕ್ರಮವಾಗಿ ಪರ್ಯಾಯ ವ್ಯವಸ್ಥೆಯನ್ನು ಮಾಡಲು ಹೊರಟಿದ್ದೀರಿ. ಇದು ಪ್ರಜಾತಂತ್ರ ಮತ್ತು ಸಂವಿಧಾನಕ್ಕೆ ಮಾಡುತ್ತಿರುವ ಅಗೌರವ. ಜನರ ತೆರಿಗೆ ಹಣವನ್ನು ಬೇಕಾಬಿಟ್ಟಿ ಕಾಂಗ್ರೆಸ್ ಕಾರ್ಯಕರ್ತರಿಗೆ ಹಂಚುವುದು ತರವಲ್ಲ. ಕಳ್ಳರ ರೀತಿಯಲ್ಲಿ ದರೋಡೆ ಮಾಡಿ ಹಂಚುತ್ತಿದ್ದೀರಿ’ ಎಂದು ಆರ್. ಅಶೋಕ ಟೀಕಿಸಿದರು.



ವಿಧಾನ ಸಭೆಯ ಕಲಾಪದಲ್ಲಿ ಆರ್. ಅಶೋಕ ಮಾತನಾಡಿದರು

ಆರ್‌ಎಸ್‌ಎಸ್ ಕಾರ್ಯಕರ್ತರು ಇರಬಹುದೆ: ಪ್ರಿಯಾಂಕ್ ಖರ್ಗೆ

‘ಮಹಾರಾಷ್ಟ್ರದಲ್ಲಿ ಆರ್‌ಎಸ್‌ಎಸ್ ಕಾರ್ಯಕರ್ತರನ್ನು ಸಚಿವರ ಆಪ್ತ ಸಹಾಯಕರನ್ನಾಗಿ ನೇಮಿಸಲಾಗಿದೆ. ಕೇಂದ್ರ ಸರ್ಕಾರದಲ್ಲೂ ನೇಮಿಸಲಾಗಿದೆ. ಈ ನಡೆ ಬಗ್ಗೆ ರಾಜ್ಯ ಬಿಜೆಪಿಯವರಿಗೆ ಸಹಮತ ಇದೆಯೆ’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

‘ಬಿಜೆಪಿಯವರಿಗೆ ತಮ್ಮವರು ಮಾಡಿದರೆ ಸಂತಸ, ಬೇರೆಯವರು ಮಾಡಿದರೆ ಸಂಕಟ ಏಕೆ’ ಎಂದು ಕೇಳಿದರು.

ಗ್ಯಾರಂಟಿ ಸಮಿತಿಗಳು ಶಾಸಕರನ್ನು ಅವಮಾನಿಸುವ ಅಸಾಂವಿಧಾನಿಕ ಸಮಿತಿಗಳು. ತಕ್ಷಣವೇ ಈ ಸಮಿತಿಗಳನ್ನು ರದ್ದು ಮಾಡಬೇಕು
ಆರಗ ಜ್ಞಾನೇಂದ್ರ, ಬಿಜೆಪಿ ಶಾಸಕ

ಕಾಂಗ್ರೆಸ್‌ನ ಶಾಸಕರು ಮತ್ತು ಮಾಜಿ ಶಾಸಕರ ಮಕ್ಕಳಲ್ಲಿ ಎಷ್ಟು ಮಂದಿ ಗ್ಯಾರಂಟಿ ಅನುಷ್ಠಾನ ಸಮಿತಿಗಳ ಅಧ್ಯಕ್ಷರಾಗಿದ್ದಾರೆ ಎಂಬ ವಿವರವನ್ನು ಸದನದ ಮುಂದಿಡಬೇಕು
ಸಿ.ಸಿ. ಪಾಟೀಲ, ಬಿಜೆಪಿ ಶಾಸಕ

ಸಭಾಧ್ಯಕ್ಷರು ಶಾಸಕರ ಹಕ್ಕನ್ನು ರಕ್ಷಿಸಬೇಕು. ಹಕ್ಕು ಮೊಟಕು ಮಾಡಲು ಹೊರಟಿರುವವರಿಗೆ ಪ್ರೋತ್ಸಾಹ ನೀಡಬಾರದು. ಗ್ಯಾರಂಟಿ ಸಮಿತಿಗಳಿಗೆ ಶಾಸಕರನ್ನೇ ಅಧ್ಯಕ್ಷರನ್ನಾಗಿ ಮಾಡಿ
ವಿ. ಸುನಿಲ್ ಕುಮಾರ್, ಬಿಜೆಪಿ ಶಾಸಕ

ಮುಖ್ಯಾಂಶಗಳು

- ತೆರಿಗೆ ಹಣವನ್ನು ಬೇಕಾಬಿಟ್ಟಿ ಕಾಂಗ್ರೆಸ್ ಕಾರ್ಯಕರ್ತರಿಗೆ ಹಂಚುವುದು ತರವಲ್ಲ
- ಬಿಜೆಪಿ– ಜೆಡಿಎಸ್ ಸದಸ್ಯರಿಂದ ಗದ್ದಲ
- ಸರ್ಕಾರದ ನಿಲುವು ಸಮರ್ಥಿಸಿಕೊಂಡ ಡಿಸಿಎಂ

‘ಸರ್ಕಾರಿ ಸಂಬಳ ನಿಯಮಬಾಹಿರ’

ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿಗೆ ಪ್ರತಿ ತಿಂಗಳು ಸರ್ಕಾರದ ಬೊಕ್ಕಸದಿಂದ ಸಂಬಳ ಪಾವತಿ ಮಾಡುತ್ತಿರುವುದು ಅಕ್ರಮ. ಸರ್ಕಾರದ ನಿಯಮಗಳಿಗೆ ವಿರುದ್ಧ. ಇದರ ವಿರುದ್ಧ ಹೋರಾಟ ಮಾಡಲಾಗುವುದು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.

ವಿಧಾನಸಭೆ ಕಲಾಪ ಮುಂದೂಡಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ಸರ್ಕಾರದ ಬೊಕ್ಕಸದಿಂದ ವರ್ಷಕ್ಕೆ ₹20 ಕೋಟಿಯಷ್ಟು ಲೂಟಿ ಮಾಡಿ ಕಾಂಗ್ರೆಸ್ ಕಾರ್ಯಕರ್ತರಿಗೆ ಹಂಚುವ ವ್ಯವಸ್ಥೆ ಮಾಡಿದ್ದಾರೆ ಎಂದರು.

ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಮುಖಂಡರನ್ನು ನೇಮಿಸಿ ತಿಂಗಳಿಗೆ ₹25 ಸಾವಿರ ಸಂಬಳ ನೀಡಿ ಅವರಿಗೆ ಆಪ್ತ ಸಹಾಯಕರನ್ನು ನೇಮಿಸಲಾಗುತ್ತಿದೆ. ಇವರಿಗೆ ₹1,100 ಭಾಗವಹಿಸುವಿಕೆಯ ಶುಲ್ಕ(ಸಿಟ್ಟಿಂಗ್ ಫೀಸ್) ನಿಗದಿ ಮಾಡಲಾಗಿದೆ. ರಾಜ್ಯದ ಅಧ್ಯಕ್ಷನಿಗೆ ₹40 ಸಾವಿರ, ಉಪಾಧ್ಯಕ್ಷನಿಗೆ ₹25 ಸಾವಿರ ಸಂಬಳ ನೀಡಲಾಗುತ್ತಿದೆ ಎಂದರು.

ಸರ್ಕಾರದ ಹಣ ಬಡವರಿಗೆ ತಲುಪಬೇಕು. ಅಂಗನವಾಡಿಯಲ್ಲಿ ಅಡುಗೆ ಮಾಡುವವರಿಗೆ ₹3,000, ಆಶಾ ಕಾರ್ಯಕರ್ತೆಯರಿಗೆ ₹7,000, ಅತಿಥಿ ಶಿಕ್ಷಕರಿಗೆ ₹12 ಸಾವಿರ ನೀಡಲಾಗುತ್ತಿದೆ. ಆದರೆ, ಗ್ಯಾರಂಟಿ ಸಮಿತಿ ಅಧ್ಯಕ್ಷರು, ಉಪಾಧ್ಯಕ್ಷರಿಗೆ ಹೆಚ್ಚಿನ ಸಂಬಳ ನೀಡುತ್ತಾರೆ. ಇದೇ ಹಣವನ್ನು ವಿಶ್ವವಿದ್ಯಾಲಯಗಳಿಗೆ ಅಥವಾ ಅಂಗನವಾಡಿ, ಆಶಾ ಕಾರ್ಯಕರ್ತೆಯರಿಗೆ ನೀಡಬಹುದಿತ್ತು. ಕಾಂಗ್ರೆಸ್ ಕಾರ್ಯಕರ್ತರಿಗೆ ತೆರಿಗೆದಾರರ ಹಣ ನೀಡುವುದನ್ನು ತಪ್ಪಿಸಬಹುದಿತ್ತು ಎಂದು ಅಶೋಕ ಹೇಳಿದರು.

ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಚುನಾಯಿತ ಶಾಸಕರು ಇರುತ್ತಾರೆ. ಅವರ ಮೇಲೆ ಒಬ್ಬ ಕಾಂಗ್ರೆಸ್ ಕಾರ್ಯಕರ್ತನನ್ನು ನೇಮಿಸಿ, ಆತನಿಂದ ಪ್ರತಿ ನ್ಯಾಯಬೆಲೆ ಅಂಗಡಿಯಲ್ಲಿ ದರ ನಿಗದಿ ಮಾಡಿ, ಅಲ್ಲಿಂದಲೂ ಹಣ ವಸೂಲಿ ಮಾಡಲಾಗುತ್ತದೆ. ಈ ಹಂತದಲ್ಲೇ ಗ್ಯಾರಂಟಿ ಹೆಸರಿನಲ್ಲಿ ಅಕ್ರಮ ಆರಂಭವಾಗುತ್ತಿದೆ ಎಂದು ಹೇಳಿದರು.ಅಂಬೇಡ್ಕರ್ ವಸತಿ, ಆಶ್ರಯ, ಬಗರ್‌ಹುಕುಂ ಸಾಗುವಳಿ ಯೋಜನೆ ಮೊದಲಾದ ಸಮಿತಿಗಳಿಗೆ ಶಾಸಕರೇ ಅಧ್ಯಕ್ಷರಾಗಿರುತ್ತಾರೆ. ಗ್ಯಾರಂಟಿ ಸಮಿತಿಗಳಿಗೂ ಶಾಸಕರನ್ನೇ ಅಧ್ಯಕ್ಷ ರನ್ನಾಗಿ ಮಾಡಬೇಕು ಎಂದು ಅಶೋಕ ಆಗ್ರಹಿಸಿದರು.

ಸುದ್ದಿ 2 ನಿಮಿಷ

ಲಿಂಗಾಯತ ಸಮಾವೇಶದಿಂದ ಲಾಭವಿಲ್ಲ: ವಿಜಯೇಂದ್ರ

ಚಿಕ್ಕಮಗಳೂರು: ‘ನಾನು ಬಿಜೆಪಿ ಅಧ್ಯಕ್ಷನಾಗಿರುವ ಸಂದರ್ಭದಲ್ಲಿ ವೀರಶೈವ– ಲಿಂಗಾಯತ ಸಮಾವೇಶ ನಡೆಸುವುದು ಪಕ್ಷಕ್ಕೆ ಲಾಭ ತರುವುದಿಲ್ಲ. ಅಧಿವೇಶನ ಮುಗಿದ ಕೂಡಲೇ ಎಲ್ಲರ ಜೊತೆ ಮಾತನಾಡುತ್ತೇನೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಬಾಳೆಹೊನ್ನೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಎಲ್ಲಾ ತಾರ್ಕಿಕ ಅಂತ್ಯಕ್ಕೆ ಬರುವಾಗ ಸಮಾಜದ ಸಮಾವೇಶ ನಡೆಸುವುದು ಸರಿಯಲ್ಲ. ನೀವು ಪ್ರಶ್ನೆ ಕೇಳುತ್ತಿರುವ ಕಾರಣಕ್ಕೆ ಬೂಟಾಟಿಕೆಗೆ ಈ ಮಾತು ಹೇಳುತ್ತಿಲ್ಲ’ ಎಂದರು.



‘ರಂಭಾಪುರಿ ಮಠದ ಯುಗಮಾನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೇನೆ. ಬಿ.ಎಸ್.ಯಡಿಯೂರಪ್ಪ ಅವರ ಪರವಾಗಿ ರಂಭಾಪುರಿ ಶ್ರೀಗಳು ಎಲ್ಲಾ ಸಮಯದಲ್ಲೂ ಧ್ವನಿ ಎತ್ತಿದ್ದಾರೆ. ವಿಜಯೇಂದ್ರ ಬಗ್ಗೆಯೂ ಶ್ರೀಗಳಿಗೆ ಸಾಕಷ್ಟು ನಿರೀಕ್ಷೆ, ಅಪೇಕ್ಷೆ ಇದೆ. ಎಲ್ಲರನ್ನೂ ಒಗ್ಗೂಡಿಸಿಕೊಂಡು ಹೋಗಬೇಕು ಎಂಬ ಸಂದೇಶ ನೀಡಿದ್ದಾರೆ’ ಎಂದರು.

ರನ್ಯಾ ರಾವ್ ಪ್ರಕರಣದ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಬೆಂಕಿ ಇಲ್ಲದೆ ಹೊಗೆಯಾಡುವುದಿಲ್ಲ ಎಂದು ಹಿರಿಯರು ಹೇಳುತ್ತಾರೆ. ಯಾರದೊ ಬೆಂಬಲ ಇಲ್ಲದೆ ಇಂತಹ ಗಂಭೀರ ಪ್ರಕರಣ ನಡೆಯಲು ಸಾಧ್ಯವೇ ಇಲ್ಲ. ಐಪಿಎಸ್ ಅಧಿಕಾರಿಯ ಮಗಳು ಒಂದೆಡೆಯಾದರೆ ಸಚಿವರ ಸಂಪರ್ಕ ಇತ್ತು ಎಂಬುದರ ಬಗ್ಗೆ ಸಾಕಷ್ಟು ಚರ್ಚೆ ನಡೆಯುತ್ತಿದೆ. ಸೂಕ್ತ ತನಿಖೆಯ ಬಳಿಕ ಸತ್ಯಾಂಶ ಹೊರಬರಲಿದೆ’ ಎಂದು ಹೇಳಿದರು.

‘ನನ್ನ ಬಲಿ ಪಶು ಮಾಡಿದವರೇ, ಯತ್ನಾಳರನ್ನು ಬಳಸಿಕೊಳ್ಳುತ್ತಿದ್ದಾರೆ’

ಹೊಸಪೇಟೆ (ವಿಜಯನಗರ): ‘ಯಡಿಯೂರಪ್ಪ ವಿರುದ್ಧ ನನ್ನನ್ನು ಎತ್ತಿಕಟ್ಟಿ ಬಲಿ ಪಶು ಮಾಡಿದವರೇ, ಈಗ ಬಸನಗೌಡ ಪಾಟೀಲ ಯತ್ನಾಳ ಅವರನ್ನೂ ಬಳಸಿಕೊಳ್ಳುತ್ತಿದ್ದಾರೆ’ ಎಂದು ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಆರೋಪಿಸಿದರು.

‘ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ವಿರುದ್ಧ ಯತ್ನಾಳ ಅವರನ್ನು ಎತ್ತಿಕಟ್ಟಲಾಗುತ್ತಿದೆ. ಆದರೆ, ಯತ್ನಾಳ ಅವರೂ ವೀರಶೈವ ಸಮಾಜದ ನಾಯಕರು. ಅವರ ಬಗ್ಗೆ ನಮಗೆ ಅಪಾರ ಗೌರವವಿದೆ’ ಎಂದು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

‘ಯತ್ನಾಳ ಅವರನ್ನು ಕೆಲವರು ಯಡಿಯೂರಪ್ಪ ವಿರುದ್ಧ ಮಾತನಾಡಲು ಎತ್ತಿ ಕಟ್ಟಿದ್ದಾರೆ. ಅವರನ್ನು ಚೂರಿಯಂತೆ ಬಳಸುತ್ತಿದ್ದಾರೆ. ಹಿಂದೆ ನನ್ನನ್ನೂ ಸಹ ಇದೇ ರೀತಿ ಬಳಸಿಕೊಂಡಿದ್ದರು, ಬಳಿಕ ನನಗೆ ಜ್ಞಾನೋದಯವಾಯಿತು. ಪಕ್ಷದ ಅಧ್ಯಕ್ಷರ ವಿರುದ್ಧ ಮಾತನಾಡುವವರು ಮುಖ್ಯಮಂತ್ರಿಯೂ ಆಗಲ್ಲ, ಪಕ್ಷದ ಅಧ್ಯಕ್ಷರೂ ಆಗಲ್ಲ’ ಎಂದರು.

ನಬಾರ್ಡ್ ಕೃಷಿ ಸಾಲ ಶೇ 70.65 ಕಡಿತ

ರಾಜ್ಯಕ್ಕೆ ನಿಗದಿಯಾದ ಮೊತ್ತ ₹9,160 ಕೋಟಿ, ನೀಡಿದ್ದು ₹3,236 ಕೋಟಿ: ಸಚಿವ ಕೆ.ಎನ್. ರಾಜಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ (ನಬಾರ್ಡ್) ರಾಜ್ಯದ ಅಲ್ಪಾವಧಿ ಕೃಷಿಗೆ ನೀಡುವ ಸಾಲದ ಪ್ರಮಾಣ ಶೇ 70.65ರಷ್ಟು ಕಡಿಮೆಯಾಗಿದೆ ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಹೇಳಿದರು.

ವಿಧಾನಪರಿಷತ್‌ನಲ್ಲಿ ಕಾಂಗ್ರೆಸ್‌ನ ದಿನೇಶ್ ಗೂಳಿಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಅವರು ಕೇಂದ್ರ ಸರ್ಕಾರದ ನೀತಿಗೆ ಅನುಗುಣವಾಗಿ ಡಿಸಿಸಿ ಬ್ಯಾಂಕ್‌ಗಳ ವಾಸ್ತವಿಕ ಸಾಲ ಯೋಜನೆಗೆ ನಬಾರ್ಡ್ ರಿಯಾಯಿತಿ ಬಡ್ಡಿ ದರದಲ್ಲಿ ಶೇ 40ರಷ್ಟು ಪುನರ್ಧನ ನೀಡುತ್ತದೆ. ಪ್ರಸಕ್ತ ವರ್ಷ ರಾಜ್ಯಕ್ಕೆ ₹9,160.80 ಕೋಟಿ ನಿಗದಿಯಾಗಿದೆ. ಆದರೆ, ನೀಡಿರುವುದು ₹3,236.11 ಕೋಟಿ. ₹5,924.69 ಕೋಟಿ ಕೊರತೆಯಾಗಿದೆ. ಕಳೆದ ಐದು ವರ್ಷಗಳಿಂದಲೂ ಇದೇ ಸ್ಥಿತಿ ಮುಂದುವರಿದಿದೆ ಎಂದು ವಿವರ ನೀಡಿದರು.

2020–24ರ ಅವಧಿಯ ಸಾಲದ ಮಿತಿ ಕಡಿಮೆಯಾಗಿದ್ದರೂ ನಿಶ್ಚಿತ ಬಡ್ಡಿ ದರದ ಸಾಲದ ಶೇ 60ರಷ್ಟು ಪುನರ್ಧನವನ್ನು ಡಿಸಿಸಿ ಬ್ಯಾಂಕ್‌ಗಳು ಬಳಸಿಕೊಳ್ಳುತ್ತಿವೆ. ಬಡ್ಡಿ ದರ ಹೆಚ್ಚಳದ ಕಾರಣ ಈ ಯೋಜನೆಯ ಸಾಲಕ್ಕೆ ಅರ್ಜಿ ಸಲ್ಲಿಸಲು ಹೆಚ್ಚಿನ ಸಹಕಾರ ಸಂಘಗಳು ಹಿಂದೇಟು ಹಾಕಿವೆ ಎಂದು ಹೇಳಿದರು.

ಹಿಂದೆ ನೀಡುತ್ತಿದ್ದಂತೆ ಶೇ 4.50 ಬಡ್ಡಿ ದರದಲ್ಲಿ ಶೇ 40ರಷ್ಟು ಪುನರ್ಧನ ನೀಡುವಂತೆ ಮನವಿ ಮಾಡಲು ಕೇಂದ್ರದ ಬಳಿಗೆ ಸರ್ವಪಕ್ಷಗಳ ನಿಯೋಗವನ್ನು ಕರೆದುಕೊಂಡು ಹೋಗಲು ನಿರ್ಧರಿಸಲಾಗಿದೆ ಎಂದು ಹೇಳಿದರು.



ಪರಿಷತ್ ಕಲಾಪದಲ್ಲಿ ವಿಧಾನ ಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ, ಸಚಿವರಾದ ಚಲುವರಾಯಸ್ವಾಮಿ ಮತ್ತು ಸಂತೋಷ್ ಎಸ್. ಲಾಡ್ ಮಾತಿನಲ್ಲಿ ತೊಡಗಿದ್ದರು – ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

2,127 ಪೌರಕಾರ್ಮಿಕರು ಕಾಯಂ

ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳಲ್ಲಿ ಕೆಲಸ ಮಾಡುತ್ತಿರುವ 2,127 ಪೌರ ಕಾರ್ಮಿಕರನ್ನು ಮೂರು ತಿಂಗಳ ಒಳಗೆ ಕಾಯಂ ಮಾಡಲಾಗುವುದು ಎಂದು ಪೌರಾಡಳಿತ ಸಚಿವ ರಹೀಂ ಖಾನ್ ಹೇಳಿದರು.

ಬಿಜೆಪಿಯ ಎನ್. ರವಿಕುಮಾರ್ ಅವರ ಪ್ರಶ್ನೆಗೆ ಉತ್ತರ ನೀಡಿದ ಅವರು, 9,155 ಕಾಯಂ ಪೌರ ಕಾರ್ಮಿಕರು ಇದ್ದಾರೆ. 2017ರಿಂದ ಸ್ವಚ್ಛತಾ ಕಾರ್ಯಕ್ಕೆ ಹೊರಗುತ್ತಿಗೆ ನೀಡುವುದನ್ನು ಸ್ಥಗಿತಗೊಳಿಸಲಾಗಿದೆ. ಹಾಗಾಗಿ, ಹೊರಗುತ್ತಿಗೆ ಆಧಾರದಲ್ಲಿ ಪೌರ ಕಾರ್ಮಿಕರನ್ನೂ ತೆಗೆದುಕೊಳ್ಳುತ್ತಿಲ್ಲ. ಈಗಿರುವ ನೇರಪಾವತಿ ಆಧಾರಿತ ಸಿಬ್ಬಂದಿ ಕಾಯಂಗೊಳಿಸುವ ಪ್ರಕ್ರಿಯೆ ನಡೆಯುತ್ತಿದೆ ಎಂದರು.

‘ಫಲಾನುಭವಿ ಆಯ್ಕೆ: ಹಳೆಯ ಅರ್ಜಿ ಪರಿಗಣನೆ’

ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ನಿಗಮಗಳ ಫಲಾನುಭವಿಗಳ ಆಯ್ಕೆಗೆ ಹಿಂದಿನ ವರ್ಷ ಸಲ್ಲಿಸಿದ ಅರ್ಜಿ ಮತ್ತು ದಾಖಲೆಗಳನ್ನು ಪರಿಗಣಿಸುವಂತೆ ನಿರ್ದೇಶನ ನೀಡಲಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ವಿಧಾನಸಭೆಯಲ್ಲಿ ಬಿಜೆಪಿಯ ಯಶ್‌ಪಾಲ್ ಸುವರ್ಣ ಅವರ ಪ್ರಶ್ನೆಗೆ ಮಂಗಳವಾರ ಉತ್ತರ ನೀಡಿದ ಅವರು, ‘ಪದೇ ಪದೇ ಅರ್ಜಿ ಸಲ್ಲಿಸಬೇಕಾದ ತೊಂದರೆ ತಪ್ಪಿಸಲು ಈ ಕ್ರಮ ಕೈಗೊಳ್ಳಲಾಗಿದೆ. ವಿವಿಧ ಯೋಜನೆಗಳಲ್ಲಿ ಬಳಕೆಯಾಗದೇ ಉಳಿದ ಅನುದಾನವನ್ನು ಬೇಡಿಕೆ ಇರುವ ಯೋಜನೆಗಳಿಗೆ ವರ್ಗಾವಣೆ ಮಾಡುವುದಕ್ಕೂ ಅವಕಾಶ ಕಲ್ಪಿಸಲಾಗಿದೆ’ ಎಂದರು.

ವಿವಿಧ ಯೋಜನೆಗಳಿಗೆ ನಿಗದಿಪಡಿಸಿದ್ದ ಭೌತಿಕ ಗುರಿಗಿಂತಲೂ ಹೆಚ್ಚಿನ ಅರ್ಜಿಗಳು ಸಲ್ಲಿಕೆಯಾಗಿವೆ. 2024–25ನೇ ಆರ್ಥಿಕ ವರ್ಷದಲ್ಲಿ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ 16,932 ಫಲಾನುಭವಿಗಳ ಗುರಿಗೆ ಪ್ರತಿಯಾಗಿ 18,206, ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದಲ್ಲಿ 1,000 ಫಲಾನುಭವಿಗಳ ಗುರಿಗೆ ಪ್ರತಿಯಾಗಿ 6,646 ಮತ್ತು ಕರ್ನಾಟಕ ಮೇದಾರ ಅಲೆಮಾರಿ ಅಭಿವೃದ್ಧಿ ನಿಗಮದಲ್ಲಿ 300 ಫಲಾನುಭವಿಗಳ ಗುರಿಗೆ ಪ್ರತಿಯಾಗಿ 3,097 ಅರ್ಜಿಗಳು ಸಲ್ಲಿಕೆಯಾಗಿವೆ ಎಂದು ಮಾಹಿತಿ ನೀಡಿದರು.

‘ಗುರಿಗೆ ಸೀಮಿತವಾಗಿ ಮಂಜೂರಾತಿ ನೀಡುತ್ತಿಲ್ಲ. ಈ ಮೂರೂ ನಿಗಮಗಳಿಗೆ ಆರಂಭದಲ್ಲಿ ₹140 ಕೋಟಿ ಅನುದಾನ ಒದಗಿಸಲಾಗಿತ್ತು. ಆದರೆ, ₹167 ಕೋಟಿ ಬಿಡುಗಡೆ ಮಾಡಲಾಗಿದೆ’ ಎಂದರು.

ಬೆಳಗಾವಿ: ಕಾಯಂ ಶಿಕ್ಷಕರ ನೇಮಕಕ್ಕೆ ಕ್ರಮ

ಬೆಳಗಾವಿ: ‘ಅಥಣಿ ತಾಲ್ಲೂಕಿನ ಶಿರೂರಿನ ಸರ್ಕಾರಿ ಕನ್ನಡ ಕಿರಿಯ ಪ್ರಾಥಮಿಕ ಶಾಲೆಗೆ ನಿಯೋಜನೆ ಆಧಾರದಲ್ಲಿ ಒಬ್ಬ ಕಾಯಂ ಶಿಕ್ಷಕರ ನೇಮಕಕ್ಕೆ ಕ್ರಮ ಕೈಗೊಳ್ಳಲಾಗುವುದು’ ಎಂದು ಚಿಕ್ಕೋಡಿ ಡಿಡಿಪಿಐ ಎಸ್.ಆರ್.ಸೀತಾರಾಮು ತಿಳಿಸಿದರು.

‘ಈ ಶಾಲೆಯಲ್ಲಿ 1 ರಿಂದ 5ನೇ ತರಗತಿಯವರೆಗೆ 59 ವಿದ್ಯಾರ್ಥಿಗಳು ಇದ್ದಾರೆ. ಮೂವರು ಅತಿಥಿ ಶಿಕ್ಷಕರು ಇದ್ದಾರೆ. ಸದ್ಯಕ್ಕೆ ನಿಯೋಜನೆ ಆಧಾರದಲ್ಲಿ ಬೇರೆ ಶಾಲೆಯ ಒಬ್ಬ ಕಾಯಂ ಶಿಕ್ಷಕರನ್ನು ನೇಮಿಸುತ್ತೇವೆ. ಮುಂದಿನ ವರ್ಷ ನಡೆಯುವ ವರ್ಗಾವಣೆ ವೇಳೆ, ಈ ಶಾಲೆ ಆಯ್ಕೆ ಮಾಡಿಕೊಳ್ಳಲು ಶಿಕ್ಷಕರ ಮನವೊಲಿಸುತ್ತೇವೆ’ ಎಂದರು.

ವರದಿ ಕೊಡಲು ಸೂಚನೆ: ‘ಬೆಳಗಾವಿಯ ವ್ಯಾಕ್ಸಿನ್ ಡಿಪೊ ಆವರಣದಲ್ಲಿರುವ ಮತ್ತು ತಾಲ್ಲೂಕಿನ ತುರಮರಿಯ ಸರ್ಕಾರಿ ಮರಾಠಿ ಪ್ರಾಥಮಿಕ ಶಾಲೆಗಳು ವಿವಿಧ ಸೌಕರ್ಯ ಕೊರತೆಯಿಂದ ಬಳಲುತ್ತಿರುವ ಬಗ್ಗೆ ಪರಿಶೀಲಿಸಿ, ವರದಿ ಸಲ್ಲಿಸುವಂತೆ ಬೆಳಗಾವಿ ನಗರ ಮತ್ತು ಗ್ರಾಮೀಣ ಬಿಇಒಗಳಿಗೆ ಸೂಚಿಸಿದ್ದೇನೆ. ’ ಎಂದು ಇಲಾಖೆ ಬೆಳಗಾವಿ ಉಪನಿರ್ದೇಶಕಿ ಲೀಲಾವತಿ ಹಿರೇಮಠ ತಿಳಿಸಿದರು.

‘ಗಡಿಯಲ್ಲಿ ಯಾರಿಗೂ ಸಲ್ಲದ ಶಾಲೆಗಳು’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯಲ್ಲಿ ಮಾ.9ರಂದು ಪ್ರಕಟಗೊಂಡ ವರದಿಯಲ್ಲಿ ಈ ಮೂರು ಶಾಲೆಗಳ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಲಾಗಿತ್ತು.

ಅಧಿಕಾರಿಗಳ ವರ್ಗಾವಣೆ ಸಚಿವರ ನಡುವೆ ಜಟಾಪಟಿ


ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ರ‍್ಯಾಡಿಸನ್ ಬ್ಲ್ಯೂ ಹೋಟೆಲ್‌ನಲ್ಲಿ ಸೋಮವಾರ (ಮಾರ್ಚ್ 10) ರಾತ್ರಿ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ, ಅಧಿಕಾರಿಗಳ ವರ್ಗಾವಣೆ ವಿಚಾರ ಪ್ರಸ್ತಾಪವಾಗಿ ಶಾಸಕರು ಮತ್ತು ಸಚಿವರ ನಡುವೆ ಮಾತಿನ ಚಕಮಕಿ ನಡೆದಿದೆ.


‘ಶಾಸಕರ ಅಭಿಪ್ರಾಯ ಕೇಳಿ ಅಧಿಕಾರಿಗಳ ವರ್ಗಾವಣೆ ಮಾಡಿದರೆ ಮಾತ್ರ ಆಡಳಿತದಲ್ಲಿ ಹಿಡಿತ ಸಾಧಿಸಲು ಸಾಧ್ಯ. ಆದರೆ, ಜಿಲ್ಲಾ ಉಸ್ತುವಾರಿ ಸಚಿವರು ಶಾಸಕರ ಮಾತಿಗೆ ಬೆಲೆ ಕೊಡುವುದಿಲ್ಲ. ತಮಗೆ ಬೇಕಾದವರನ್ನು ವರ್ಗಾವಣೆ ಮಾಡಿಸಿಕೊಂಡರೆ ಹೇಗೆ’ ಎಂದು ಕಂಪ್ಲಿ ಶಾಸಕ ಕಂಪ್ಲಿ ಗಣೇಶ್ ಪ್ರಶ್ನಿಸಿದ್ದಾರೆ.

ಆಗ ಮಧ್ಯಪ್ರವೇಶಿಸಿದ ಶಾಸಕಾಂಗ ಪಕ್ಷದ ನಾಯಕರೂ ಆಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ‘ಶಾಸಕರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರು ಒಟ್ಟಾಗಿ ಬಂದರೆ ಅಧಿಕಾರಿಗಳ ವರ್ಗಾವಣೆ ವಿಚಾರದಲ್ಲಿ ಗೊಂದಲಕ್ಕೆ ಅವಕಾಶ ಆಗುವುದಿಲ್ಲ. ಆದರೆ, ಆ ರೀತಿ ಆಗುತ್ತಿಲ್ಲ. ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಅಲ್ಲಿನ ಶಾಸಕರು ಒಂದಾಗಿ ಬರುತ್ತಾರೆಯೇ’ ಎಂದರು.

ಆಗ ರಾಯಚೂರು ಜಿಲ್ಲೆಯ ಅಧಿಕಾರಿಗಳ ವರ್ಗಾವಣೆ ವಿಚಾರಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಸಚಿವ ಎನ್.ಎಸ್. ಬೋಸರಾಜು, ‘ನಾನು ರಾಯಚೂರು ಜಿಲ್ಲೆಯವನು. ವರ್ಗಾವಣೆ ವಿಚಾರಕ್ಕೆ ನೀವು ಯಾಕೆ ಪತ್ರ ನೀಡುತ್ತೀರಾ’ ಎಂದು ಸಚಿವ ಡಾ. ಶರಣಪ್ರಕಾಶ್ ಪಾಟೀಲ ಅವರನ್ನು ಪ್ರಶ್ನಿಸಿದರು. ಅದಕ್ಕೆ ಶರಣಪ್ರಕಾಶ್ ಪಾಟೀಲ, ‘ನಾನು ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವ. ಸ್ಥಳೀಯ ಶಾಸಕರು ಕೇಳಿದ ಕಾರಣಕ್ಕೆ ಪತ್ರ ನೀಡಿದ್ದೇನೆ. ಶಾಸಕರ ಬೇಡಿಕೆಗಳಿಗೆ ಸ್ಪಂದಿಸುವುದು ನನ್ನ ಕೆಲಸ’ ಎಂದು ಪ್ರತಿಕ್ರಿಯಿಸಿದ್ದಾರೆ.



ಎನ್ ಎಸ್ ಬೋಸರಾಜು



ಶರಣ ಪ್ರಕಾಶ ಪಾಟೀಲ

ವರ್ಗಾವಣೆಗೆ ಸಂಬಂಧಿಸಿದಂತೆ, ಶಾಸಕ ಬಸನಗೌಡ ದದ್ದಲ್ ಅವರಿಗೆ ಶರಣಪ್ರಕಾಶ್ ಪಾಟೀಲ ಪತ್ರ ಕೊಟ್ಟಿದ್ದರು. ಇದು ಬೋಸರಾಜು ಅವರನ್ನು ಕೆರಳಿಸಿತ್ತು. ‘ನನ್ನನ್ನು ಕೇಳದೆ ಹೇಗೆ ಪತ್ರ ಕೊಟ್ಟಿದ್ದೀರಿ’ ಎಂದು ಬೋಸರಾಜು ಮರು ಪ್ರಶ್ನಿಸಿದ್ದು, ಇಬ್ಬರು ಸಚಿವರ ನಡುವೆ ಜಟಾಪಟಿಗೆ ಕಾರಣವಾಯಿತು ಎಂದು ಗೊತ್ತಾಗಿದೆ.

ಬೋಸರಾಜು ಕೂಡ ಉದ್ವೇಗದಲ್ಲಿ ಮಾತನಾಡಿದಾಗ ಸಚಿವ ಶರಣ್ ಪ್ರಕಾಶ್ ಕೂಡ ಧ್ವನಿಯೇರಿಸಿದ್ದಾರೆ. ಈ ಹಂತದಲ್ಲಿ ಉಭಯ ಸಚಿವರ ನಡುವೆ ಏಕ ವಚನದಲ್ಲಿ ವಾಗ್ವಾದ ನಡೆದಿದೆ ಎನ್ನಲಾಗಿದೆ. ಈ ಹಂತದಲ್ಲಿ ಪರಿಸ್ಥಿತಿ ವಿಕೋಪಕ್ಕೆ ತಿರುಗುವುದನ್ನು ಗಮನಿಸಿದ ಮುಖ್ಯಮಂತ್ರಿ ಮಧ್ಯೆಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಿದರು ಎನ್ನಲಾಗಿದೆ.

ಬಾಗಲಕೋಟೆ ವಿವಿ ವಿಭಜನೆಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಡ್ಯ ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯ ಸ್ಥಾಪನೆಗಾಗಿ ಬಾಗಲಕೋಟೆ ತೋಟಗಾರಿಕಾ ವಿಶ್ವವಿದ್ಯಾಲಯವನ್ನು ವಿಭಜಿಸುವ ಸರ್ಕಾರದ ಕ್ರಮಕ್ಕೆ ಉತ್ತರ ಕರ್ನಾಟಕವನ್ನು ಪ್ರತಿನಿಧಿಸುವ ಸದಸ್ಯರು ವಿರೋಧ ವ್ಯಕ್ತಪಡಿಸಿದರು.

ವಿಧಾನಪರಿಷತ್‌ನಲ್ಲಿ ವಿಷಯ ಪ್ರಸ್ತಾಪಿಸಿದ ಬಿಜೆಪಿಯ ಪಿ.ಎಚ್. ಪೂಜಾರ್, ತಳವಾರ್ ಸಾಬಣ್ಣ ಅವರು ತೋಟಗಾರಿಕಾ ಸಂಶೋಧನೆ ಮತ್ತು ವಿಸ್ತರಣಾ ಚಟುವಟಿಕೆಗಳಲ್ಲಿ ವಿಶ್ವವಿದ್ಯಾಲಯ ದೇಶದಲ್ಲೇ ಉತ್ತಮ ಸಾಧನೆ ಮಾಡಿದೆ. ರೈತರ ಅನುಕೂಲಕ್ಕಾಗಿ 46 ವಿವಿಧ ತೋಟಗಾರಿಕಾ ತಳಿಗಳು, 300ಕ್ಕೂ ಹೆಚ್ಚು ಆಧುನಿಕ ತಾಂತ್ರಿಕತೆಗಳನ್ನು ಅಭಿವೃದ್ಧಿಪಡಿಸಿದೆ. ಇಂತಹ ವಿಶ್ವವಿದ್ಯಾಲಯವನ್ನು ವಿಭಜಿಸುವ ಮೊದಲು ಉತ್ತರ ಕರ್ನಾಟಕ ಭಾಗದ ಜನಪ್ರತಿನಿಧಿಗಳ ಜತೆಗೂ ಚರ್ಚಿಸಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ತೋಟಗಾರಿಕಾ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಮಾತನಾಡಿ, ಮಂಡ್ಯ ಕೃಷಿ ವಿಶ್ವವಿದ್ಯಾಲಯಕ್ಕೆ ಈಗಾಗಲೇ ವಿಶೇಷಾಧಿಕಾರಿ ನೇಮಿಸಲಾಗಿದೆ. ವಿಭಜನೆ ಪ್ರಕ್ರಿಯೆ ನಡೆಯುತ್ತಿದೆ. ಮೈಸೂರು ತೋಟಗಾರಿಕಾ ಮಹಾವಿದ್ಯಾಲಯ, ಅರಸೀಕೆರೆ ತೋಟಗಾರಿಕಾ ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರ, ಸೋಮನಹಳ್ಳಿ ಹಾಗೂ ಆಲೂಗಡ್ಡೆ ಕಾವಲ್‌ಗಳನ್ನು ಯಥಾವತ್ತಾಗಿ ಹಸ್ತಾಂತರಿಸಲು ಶಿಫಾರಸು ಮಾಡಲಾಗಿದೆ ಎಂದು ತಿಳಿಸಿದರು.

ಹಣಮಂತ ನಿರಾಣಿ ಅವರ ಪ್ರಶ್ನೆಗೆ, ‘ತೋಟಗಾರಿಕಾ ವಿ.ವಿಗೆ ₹113.20 ಕೋಟಿ ಅನುದಾನ ನೀಡಲಾಗಿದೆ. 750 ಕಾಯಂ, 328 ಹೊರಗುತ್ತಿಗೆ ನೌಕರರು ಇದ್ದಾರೆ’ ಎಂದು ಉತ್ತರಿಸಿದರು.

ಆರ್ಥಿಕ ನಷ್ಟದಲ್ಲಿರುವ 34 ಸಾರ್ವಜನಿಕ ವಲಯದ ಉದ್ಯಮಗಳ ಮೌಲ್ಯಮಾಪನ ಕಾರ್ಯ ನಡೆಯುತ್ತಿದೆ. ಪುನಶ್ಚೇತನ ಅವಶ್ಯವೆನಿಸಿದ ಉದ್ಯಮಗಳಿಗೆ ಹಣಕಾಸಿನ ನೆರವು ನೀಡಲಾಗುವುದು
ಈಶ್ವರ ಖಂಡ್ರೆ, ಅರಣ್ಯ ಸಚಿವ



ಕನಕದುರ್ಗೆ ಸಿಡಿಬಂಡಿ ... ಬಳ್ಳಾರಿಯ ಕನಕದುರ್ಗಮ್ಮನ ದೇವಾಲಯದ ಸಿಡಿಬಂಡಿ ಉತ್ಸವವು ಮಂಗಳವಾರ ಅಪಾರ ಸಂಖ್ಯೆಯ ಭಕ್ತರ ಸಮ್ಮುಖದಲ್ಲಿ ನೆರವೇರಿತು ಚಿತ್ರ: ಮುರಳಿಕಾಂತ ರಾವ್

ಸೌಜನ್ಯ ಕೊಲೆ ಪ್ರಕರಣ: ಯೂ–ಟ್ಯೂಬ್‌ನಲ್ಲಿ ಸುದ್ದಿ ಬಿತ್ತರ

ಸಮೀರ್ ವಿರುದ್ಧದ ಎಫ್‌ಐಆರ್‌ಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧರ್ಮಸ್ಥಳದ ಸೌಜನ್ಯ ಮೇಲಿನ ಅತ್ಯಾಚಾರ ಮತ್ತು ಕೊಲೆ ಆರೋಪದ ಪ್ರಕರಣಕ್ಕೆ ಸಂಬಂಧಿಸಿದಂತೆ ಸುದ್ದಿ ಬಿತ್ತರಿಸಿದ ಯೂ–ಟ್ಯೂಬರ್ ಎಂ.ಡಿ.ಸಮೀರ್ ವಿರುದ್ಧ ಬಳ್ಳಾರಿಯ ಕೌಲ್ ಬಜಾರ್ ಠಾಣೆ ಪೊಲೀಸರು ದಾಖಲಿಸಿರುವ ಎಫ್‌ಐಆರ್‌ಗೆ ಹೈಕೋರ್ಟ್‌ಗೆ ಮಧ್ಯಂತರ ತಡೆ ನೀಡಿದೆ.

ಈ ಸಂಬಂಧ ಸಮೀರ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ ಚಂದನಗೌಡರ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸಮೀರ್ ಪರ ಹಾಜರಾಗಿ ವಾದ ಮಂಡಿಸಿದ ಸುಪ್ರೀಂ ಕೋರ್ಟ್ ವಕೀಲರಾದ ಎ.ವೇಲನ್ ಮತ್ತು ಕೆ.ವಿ.ಧನಂಜಯ ಅವರು, ‘ಪೊಲೀಸರು ಅರ್ಜಿದಾರರ ವಿರುದ್ಧ ಎಫ್‌ಐಆರ್ ದಾಖಲಿಸಿರುವುದು ಕಾನೂನುಬಾಹಿರವಾಗಿದೆ. ಇದು ನಾಗರಿಕರಿಗೆ ಸಾಂವಿಧಾನಿಕವಾಗಿ ಕೊಡಮಾಡಿರುವ ಅಭಿವ್ಯಕ್ತಿ ಸ್ವಾತಂತ್ರ್ಯದ ಮೂಲಭೂತ ಹಕ್ಕು 19(1) ಮತ್ತು 21ನೇ ವಿಧಿಗೆ ವಿರುದ್ಧವಾಗಿದೆ’ ಎಂದು ಪ್ರತಿಪಾದಿಸಿದರು.

‘ಧಾರ್ಮಿಕ ವ್ಯಕ್ತಿಯ ಹೇಳಿಕೆ ಧರ್ಮದ ವಿರುದ್ಧ ಹೇಳಿಕೆ ಆಗುವುದಿಲ್ಲ. ಅದರ ವ್ಯಾಪ್ತಿ ಸೀಮಿತವಾದುದು. ಧಾರ್ಮಿಕ ಭಾವನೆಗೆ ಧಕ್ಕೆ ತರುವಂತಹ ಆರೋಪಗಳು ಈ ಪ್ರಕರಣದಲ್ಲಿ ಅನ್ವಯ ಆಗುವುದಿಲ್ಲ. ಹಾಗೆ ನೋಡಿದರೆ ನಿತ್ಯಾನಂದ ಸ್ವಾಮಿ ವಿರುದ್ಧ ಪ್ರಕರಣ ದಾಖಲಿಸಲಿಕ್ಕೇ ಸಾಧ್ಯವಿರುತ್ತಿರಲಿಲ್ಲ’ ಎಂದರು.

ವಾದ ಆಲಿಸಿದ ನ್ಯಾಯಪೀಠ, ‘ಬಂಧನ ತಡೆದರೆ ಸಾಕಾ ಅಥವಾ ಎಫ್‌ಐಆರ್‌ಗೇ ತಡೆ ನೀಡಬೇಕಾ’ ಎಂದು ಅರ್ಜಿದಾರರ ಪರ ವಕೀಲರನ್ನು ಪ್ರಶ್ನಿಸಿತು. ಇದಕ್ಕೆ ಅರ್ಜಿದಾರರ ಪರ ವಕೀಲರು, ‘ಕೇವಲ ಬಂಧನಕ್ಕೆ ತಡೆ ನೀಡಿದರೆ ಸಾಲದು. ಸಂಪೂರ್ಣ ಎಫ್‌ಐಆರ್‌ಗೇ ತಡೆ ನೀಡಬೇಕು’ ಎಂದು ಮನವಿ ಮಾಡಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಎಫ್‌ಐಆರ್‌ಗೆ ತಡೆ ನೀಡಿ ಆದೇಶಿಸಿತು. ಅಂತೆಯೇ, ರಾಜ್ಯ ಪ್ರಾಸಿಕ್ಯೂಷನ್ ಮತ್ತು ತನಿಖಾಧಿಕಾರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಮುಂದಿನ ವಾರಕ್ಕೆ ಮುಂದೂಡಿತು. ಸಮೀರ್ ಪರ ಸುಪ್ರೀಂ ಕೋರ್ಟ್ ವಕೀಲ ಎ.ಪವನ್ ಶ್ಯಾಮ್ ವಕಾಲತ್ತು ವಹಿಸಿದ್ದಾರೆ.



ಅರಣ್ಯ ಒತ್ತುವರಿ ಸಾಬೀತು: 1 ವರ್ಷ ಜೈಲು ಶಿಕ್ಷೆ

ಶಿವಮೊಗ್ಗ ತಾಲ್ಲೂಕು ಹೊಳಲೂರು ಹೋಬಳಿಯ ಕುಂಚೇನಹಳ್ಳಿ ವ್ಯಾಪ್ತಿಯ ರಾಜ್ಯ ಅರಣ್ಯ ಪ್ರದೇಶದಲ್ಲಿನ 7 ಎಕರೆ ಒತ್ತುವರಿ ಆರೋಪ ಸಾಬೀತಾದ ಕಾರಣ ಇದೇ ಗ್ರಾಮದ ಚಿನ್ನಸ್ವಾಮಿ ಅವರಿಗೆ, ‘ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ’ ಒಂದು ವರ್ಷದ ಸಾಧಾರಣ ಜೈಲು ಶಿಕ್ಷೆ ಮತ್ತು ₹10 ಸಾವಿರ ದಂಡ ವಿಧಿಸಿದೆ.

ಒತ್ತುವರಿ ಆರೋಪಕ್ಕೆ ಸಂಬಂಧಿಸಿದಂತೆ ಶಿವಮೊಗ್ಗದ ಶಂಕರ ವಲಯ ಅರಣ್ಯಾಧಿಕಾರಿ ನೀಡಿದ್ದ ದೂರಿನ ಅನುಸಾರ ವಿಚಾರಣೆ ನಡೆಸಿದ ವಿಶೇಷ ನ್ಯಾಯಾಲಯದ ನ್ಯಾಯಿಕ ಸದಸ್ಯ ಪಾಟೀಲ ನಾಗಲಿಂಗನಗೌಡ ಮತ್ತು ಕಂದಾಯ ಸದಸ್ಯ ಕೆ.ಎಚ್.ಅಶ್ವತ್ಥ ನಾರಾಯಣಗೌಡ ಅವರಿದ್ದ ಪೀಠವು ಈ ಕುರಿತಂತೆ ಆದೇಶಿಸಿದೆ. ‘ದಂಡ ಪಾವತಿಸಲು ತಪ್ಪಿದರೆ ಮೂರು ತಿಂಗಳ ಸಾಧಾರಣ ಜೈಲು ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ’ ಎಂದೂ ತಿಳಿಸಿದೆ.

‘ಆರೋಪಿಗಳು ಒತ್ತುವರಿ ಮಾಡಿರುವ ಅರಣ್ಯ ಜಮೀನನ್ನು ಕೂಡಲೇ ತೆರವುಗೊಳಿಸಬೇಕು. ಈ ಸಂಬಂಧ ವಲಯ ಅರಣ್ಯಾಧಿಕಾರಿ 60 ದಿನಗಳ ಒಳಗಾಗಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಬೇಕು’ ಎಂದು ಪೀಠವು ನಿರ್ದೇಶಿಸಿದೆ.

ಸಾಲ ವಸೂಲಿ ಸುಗ್ರೀವಾಜ್ಞೆ: ಕಾಯ್ದಿರಿಸಿದ ತೀರ್ಪು

ಬಲವಂತದ ಸಾಲ ವಸೂಲಿ ಮತ್ತು ಸಾಲಗಾರರಿಗೆ ಕಿರುಕುಳ ನೀಡುವುದನ್ನು ತಪ್ಪಿಸುವ ಉದ್ದೇಶದಿಂದ ರಾಜ್ಯ ಸರ್ಕಾರ ಅನುಷ್ಠಾನಗೊಳಿಸಿರುವ ‘ಕರ್ನಾಟಕ ಕಿರು ಸಾಲ ಮತ್ತು ಸಣ್ಣ ಸಾಲ (ಬಲವಂತದ ಕ್ರಮಗಳ ತಡೆ) ಸುಗ್ರೀವಾಜ್ಞೆ-2025’ ಅನ್ನು ಪ್ರಶ್ನಿಸಲಾಗಿರುವ ಅರ್ಜಿ ಮೇಲಿನ ವಿಚಾರಣೆಯನ್ನು ಪೂರ್ಣಗೊಳಿಸಿರುವ ಹೈಕೋರ್ಟ್ ತೀರ್ಪು ಕಾಯ್ದಿರಿಸಿದೆ.

ಈ ಕುರಿತಂತೆ, ‘ಕರ್ನಾಟಕ ಹೈರ್ ಪರ್ಚೇಸಿಂಗ್ ಅಸೋಸಿಯೇಷನ್’ ಕಾರ್ಯದರ್ಶಿ ವಿಜಯರಾಜ ಛಜ್ಜೇದ ಸಲ್ಲಿಸಿದ್ದ ರಿಟ್ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ಪೂರ್ಣಗೊಳಿಸಿತು.

ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, ‘ಸಾಲ ನೀಡಿದ ಕಂಪನಿಗಳು ಸಾಲಗಾರರಿಗೆ ಕಿರುಕುಳ ನೀಡಬಾರದು’ ಎಂಬ ಮೌಖಿಕ ಅಭಿಪ್ರಾಯ ವ್ಯಕ್ತಪಡಿಸಿತಲ್ಲದೆ, ‘ಸುಗ್ರೀವಾಜ್ಞೆಯಲ್ಲಿನ ಅಂಶಗಳನ್ನು ಪರಾಮರ್ಶೆ ಮಾಡಲಾಗುವುದು’ ಎಂದು ತಿಳಿಸಿ ತೀರ್ಪು ಕಾಯ್ದಿರಿಸಿ ಆದೇಶಿಸಿತು. ರಾಜ್ಯ ಸರ್ಕಾರದ ಪರ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ವಾದ ಮಂಡಿಸಿದರು.

ಪಂಚಪೀಠಾಧೀಶರ ಹೇಳಿಕೆಗೆ ಮಠಾಧಿಪತಿಗಳ ಒಕ್ಕೂಟ ಖಂಡನೆ

ಪ್ರಜಾವಾಣಿ ವಾರ್ತೆ

ಬೀದರ್: ‘ಪಂಚಪೀಠದ ಪೀಠಾಧಿಪತಿಗಳು ಹತಾಶರಾಗಿ ಲಿಂಗಾಯತ ಧರ್ಮ ಕುರಿತು ಮಿಥ್ಯ ಹಾಗೂ ದ್ವಂದ್ವ ಸೃಷ್ಟಿಸುವ ಹೇಳಿಕೆ ನೀಡುತ್ತಿದ್ದಾರೆ. ಅವರ ಹೇಳಿಕೆ ಖಂಡನಾರ್ಹ’ ಎಂದು ಲಿಂಗಾಯತ ಮಠಾಧಿಪತಿಗಳ ಒಕ್ಕೂಟದ ಅಧ್ಯಕ್ಷರೂ ಆದ ಬಸವಕಲ್ಯಾಣ ಅನುಭವ ಮಂಟಪ ಟ್ರಸ್ಟ್ ಅಧ್ಯಕ್ಷ ಬಸವಲಿಂಗ ಪಟ್ಟದ್ದೇವರು ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಇತ್ತೀಚೆಗೆ ಎಲ್ಲ ಲಿಂಗಾಯತ ಹಾಗೂ ವೀರಶೈವ ಸಂಘಟನೆಗಳು ಒಗ್ಗೂಡಿ ಮಾಡಿದ ‘ವಚನ ದರ್ಶನ ಮಿಥ್ಯ, ಸತ್ಯ’ ಗ್ರಂಥ ಲೋಕಾರ್ಪಣೆ ಕಾರ್ಯಕ್ರಮ ಯಶಸ್ವಿಯಾಗಿರುವುದು ಪಂಚಪೀಠದ ಪೀಠಾಧಿಪತಿಗಳ ನಿದ್ದೆಗೆಡಿಸಿದೆ. ಈ ಕಾರ್ಯಕ್ರಮದಲ್ಲಿ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭೆಯ ರಾಜ್ಯ ಘಟಕದ ಅಧ್ಯಕ್ಷ ಶಂಕರ ಬಿದರಿ ಅವರು ಭಾಗವಹಿಸಿ ಲಿಂಗಾಯತ ಸಮಾಜ ಸಂಘಟನೆ ಮತ್ತು ಬಸವತತ್ವದ ಪರವಾಗಿ ಮಾತನಾಡಿರುವುದು ಅವರಿಗೆ ಬಿಸಿ ತುಪ್ಪವಾಗಿ ಪರಿಣಮಿಸಿದೆ’ ಎಂದು ಮಂಗಳವಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬಸವಲಿಂಗ ಪಟ್ಟದ್ದೇವರು

‘ಪಂಚಪೀಠದ ಪೀಠಾಧಿಪತಿಗಳ ಹೇಳಿಕೆಯಲ್ಲಿ ವೀರಶೈವ ಧರ್ಮದ ಪ್ರಾಚೀನತೆ, ಶರಣರ ವಚನಗಳಲ್ಲಿ ವೀರಶೈವ ಪದ ಬಳಕೆ, ಹಿಂದೂ ಕಾಯ್ದೆಗಳು ಹಾಗೂ ಕೆಲವು ಅಧಿವೇಶನಗಳ ನಿರ್ಣಯಗಳ ಕುರಿತು ನಿಲುವು ಸ್ಪಷ್ಟಪಡಿಸುವಲ್ಲಿ ದ್ವಂದ್ವ ನೀತಿ ಅನುಸರಿಸಿದ್ದಾರೆ. ಒಂದು ಕಡೆ ವೀರಶೈವ ಧರ್ಮ ಪ್ರಾಚೀನ ಎಂದು ಹೇಳುತ್ತಲೇ ಅದು ಹಿಂದೂ ಧರ್ಮದ ಭಾಗವೆಂದು ಘೋಷಿಸಿದ್ದಾರೆ. ಪಂಚಪೀಠಾಧೀಶರು ವೀರಶೈವರೇ ಅಥವಾ ಹಿಂದೂಗಳೇ ಎಂಬುದು ಮೊದಲು ನಿರ್ಣಯಿಸಿಕೊಳ್ಳಬೇಕು. ಒಂದು ಧರ್ಮದಲ್ಲಿ ಇನ್ನೊಂದು ಧರ್ಮ ಇರಲು ಸಾಧ್ಯವಿಲ್ಲ. ಪಂಚಪೀಠಗಳಿಗೆ ವೀರಶೈವ ಧರ್ಮ ಎಂದು ಹೇಳುವುದಾದರೆ ಅವರು ಹಿಂದೂಗಳಲ್ಲ ಎಂದು ಹೇಳಬೇಕಾಗುತ್ತದೆ. ಅವರು ನಾವು ಹಿಂದೂಗಳು ಎಂದು ಹೇಳುವುದಾದರೆ ವೀರಶೈವ ಧರ್ಮದವರಲ್ಲ ಎಂದು ಹೇಳಬೇಕಾಗುತ್ತದೆ’ ಎಂದು ಹೇಳಿದ್ದಾರೆ.

‘ಪಂಚಪೀಠದ ಪೀಠಾಧಿಪತಿಗಳು ಮಾತಿನ ಭರಾಟೆಯಲ್ಲಿ ಖ್ಯಾತ ಚಿಂತಕ ಗೊ.ರು.ಚನ್ನಬಸಪ್ಪನವರ ಕುರಿತು ಏಕವಚನದಲ್ಲಿ ಮಾತನಾಡಿರುವುದು ಅವರ ಸ್ಥಾನಕ್ಕೆ ಅವರೇ ಮಾಡಿದ ದ್ರೋಹವಾಗಿದೆ’ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪೊಲೀಸರ ನೆರವಿನಿಂದ ಬಡ ರೈತನ ಅಂತ್ಯ ಸಂಸ್ಕಾರ

ಪ್ರಜಾವಾಣಿ ವಾರ್ತೆ

ಔರಾದ್ (ಬೀದರ್ ಜಿಲ್ಲೆ): ತಾಲ್ಲೂಕಿನ ಅಲ್ಲಾಪುರ ಗ್ರಾಮದಲ್ಲಿ ಆಕಸ್ಮಿಕವಾಗಿ ಮೃತಪಟ್ಟ ಬಡ ರೈತನ ಅಂತ್ಯಕ್ರಿಯೆ ಪೊಲೀಸರ ನೆರವಿನಿಂದ ನಡೆದಿದೆ.

ರೈತ ರಮೇಶ ಸ್ವಾಮಿ (50) ಅವರು ಭಾನುವಾರ ಕಾಡು ಹಂದಿ ದಾಳಿ ತಪ್ಪಿಸಲು ಜೋಳ ಕಾಯಲು ಹೊಲಕ್ಕೆ ಹೋಗಿದ್ದಾಗ ಮೃತಪಟ್ಟಿದ್ದರು.

ವಿಷಯ ತಿಳಿದ ಪಿಎಸ್‌ಐ ವಸೀಮ್ ಪಟೇಲ್ ಸ್ಥಳಕ್ಕೆ ಭೇಟಿ ನೀಡಿದಾಗ ಮೃತ ರೈತ ಬಡವರು. ಅವರ ಬಳಿ ಶವ ಸಂಸ್ಕಾರಕ್ಕೂ ಹಣವಿಲ್ಲ ಎಂಬುದನ್ನು ತಿಳಿದು ತಾವೇ ಸ್ವತಃ ₹5 ಸಾವಿರ ಹಣ ಕೊಟ್ಟರು. ಅವರ ಮಾನವೀಯತೆಗೆ ಮೆಚ್ಚಿದ ಗ್ರಾಮಸ್ಥರು ಕೂಡ ಅವರ ಜತೆ ಕೈಜೋಡಿಸಿ ₹12 ಸಾವಿರ ಸಂಗ್ರಹಿಸಿ ಮೃತ ರೈತನ ಅಂತ್ಯಕ್ರಿಯೆ ನೆರವೇರಿಸಿದರು.

ರೈತ ರಮೇಶ ಸ್ವಾಮಿಗೆ ಅರ್ಧ ಎಕರೆ ಜಮೀನು ಇದೆ. ಮೂರು ವರ್ಷಗಳ ಹಿಂದೆ ಹೆಂಡತಿ ತೀರಿ ಹೋಗಿದ್ದಾರೆ. ಕಳೆದ ವರ್ಷ ಒಬ್ಬ ಮಗಳ ಮದುವೆ ಮಾಡಿದ್ದಾರೆ. ಇಬ್ಬರು ಗಂಡು ಮಕ್ಕಳು ಓದುತ್ತಿದ್ದಾರೆ. ಮನೆಯಲ್ಲಿ ವೃದ್ಧ ತಾಯಿ ಇದ್ದಾರೆ. ಇವರ ಈ ಕೌಟುಂಬಿಕ ಸಂಕಷ್ಟವನ್ನು ಅರಿತ ಪೊಲೀಸರು ಶವ ಸಂಸ್ಕಾರ ಮಾಡಿಸಿದರು.

ಕಪ್ಪು ಅಂಗಿ ಧರಿಸಿ ಸದನಕ್ಕೆ ಬಂದಿದ್ದ ಡಿಎಂಕೆ ಸದಸ್ಯರು • ಸಂಸತ್ ಭವನದ ಹೊರಗೆ ಪ್ರತಿಭಟನೆ

ಕ್ಷೇತ್ರ ಮರುವಿಂಗಡಣೆಗೆ ವಿರೋಧ

ನವದೆಹಲಿ(ಪಿಟಿಐ): ಕ್ಷೇತ್ರಗಳ ಮರು ವಿಂಗಡಣೆ ವಿರೋಧಿಸಿ ದಕ್ಷಿಣದ ರಾಜ್ಯಗಳ ಸಂಸದರು ಗಲಾಟೆ ಮಾಡಿದ ಕಾರಣ, ರಾಜ್ಯಸಭೆಯ ಬೆಳಗಿನ ಕಲಾಪವನ್ನು 40 ನಿಮಿಷಗಳಷ್ಟು ಮುಂದೂಡಲಾಯಿತು.

ಕ್ಷೇತ್ರಗಳ ಮರುವಿಂಗಡಣೆ ಕುರಿತು ಚರ್ಚೆಗೆ ಅವಕಾಶ ನೀಡಬೇಕು ಎಂದು ಡಿಎಂಕೆ ಹಾಗೂ ಇತರ ಪಕ್ಷಗಳ ಸಂಸದರು ನಿಯಮ 267ರಡಿ ನೋಟಿಸ್ ನೀಡಿದ್ದರು.

ಪೀಠದಲ್ಲಿದ್ದ ಉಪಸಭಾಪತಿ, ಈ ನೋಟಿಸ್‌ಗಳನ್ನು ತಿರಸ್ಕರಿಸಿ-ದಾಗ, ವಿಪಕ್ಷಗಳ ಸಂಸದರು ಗಲಾಟೆ ಶುರು ಮಾಡಿದರಲ್ಲದೇ, ಪೀಠದ ಮುಂದೆ ಬಂದು ಘೋಷಣೆಗಳನ್ನು ಕೂಗಲು ಆರಂಭಿಸಿದರು. ಕಪ್ಪು ಅಂಗಿಗಳನ್ನು ಧರಿಸಿ ಸದನಕ್ಕೆ ಬಂದಿದ್ದ ಡಿಎಂಕೆ ಸದಸ್ಯರು, ಕೇಂದ್ರದ ವಿರುದ್ಧ ಘೋಷಣೆಗಳನ್ನು ಕೂಗಿದರು.

'ಈ ವಿಚಾರ ಕುರಿತು ಈಗಾಗಲೇ ಚರ್ಚೆ ನಡೆಸಲಾಗಿದೆ. ಹೀಗಾಗಿ, ಸದಸ್ಯರು ತಮ್ಮ ಸ್ಥಾನಗಳಿಗೆ ಮರಳಬೇಕು' ಎಂಬ ಹರಿವಂಶ್ ಸಿಂಗ್ ಅವರ ಮನವಿಗೆ ಪ್ರತಿಭಟನೆ ನಿರತ ಸಂಸದರು ಕಿವಿಗೊಡಲಿಲ್ಲ. ಆಗ, ಹರಿವಂಶ್ ಸಿಂಗ್ ಅವರು ಕಲಾಪವನ್ನು ಮಧ್ಯಾಹ್ನ 12ರ ವರೆಗೆ ಮುಂದೂಡಿದರು.

ಡಿಎಂಕೆಯ ಆರ್.ಗಿರಿರಾಜನ್, ಎಂಡಿಎಂಕೆ ಪಕ್ಷದ ವೈಕೊ, ಸಿಪಿಐನ ಸಂತೋಷ್ ಕುಮಾರ್ ಪಿ. ಮಾತನಾಡಿದರು. ತಮಿಳು ಭಾಷಿಕರ ಮೇಲೆ ಹಿಂದಿ ಹೇರಲಾಗುತ್ತಿದೆ ಎಂದು ದೂರಿ, ಡಿಎಂಕೆ, ಎಂಡಿಎಂಕೆ ಸಂಸದರು, ನಂತರ ಸಂಸತ್ ಭವನದ ಹೊರಗೆ ಪ್ರತಿಭಟಿಸಿದರು.



ಹಿಂದಿ ಹೇರಿಕೆ ವಿರೋಧಿಸಿ ಡಿಎಂಕೆ ಸಂಸದ ಎ.ರಾಜಾ ಹಾಗೂ ಎಂಡಿಎಂಕೆ ಮುಖ್ಯಸ್ಥ ವೈಕೊ ನೇತೃತ್ವದಲ್ಲಿ ನವದೆಹಲಿಯಲ್ಲಿ ಸಂಸತ್ ಭವನದ ಹೊರಗಡೆ ಮಂಗಳವಾರ ಪ್ರತಿಭಟನೆ ನಡೆಯಿತು —ಪಿಟಿಐ ಚಿತ್ರ

> **ಕೆಲವರು ಭಾಷೆ ವಿಚಾರವಾಗಿ ರಾಜಕೀಯ ಮಾಡುತ್ತಿದ್ದಾರೆ. ದೇಶ ವಿಭಜಿಸಲು ಯತ್ನಿಸುತ್ತಿದ್ದಾರೆ**
> **ಪೀಯೂಷ್ ಗೋಯಲ್**
> ಕೇಂದ್ರ ವಾಣಿಜ್ಯ ಸಚಿವ

'ಡೀಪ್‌ಸೀಕ್' ನಿಷೇಧಕ್ಕೆ 'ಕೈ' ಒತ್ತಾಯ

'ರಾಷ್ಟ್ರೀಯ ಭಾವನೆಗಳಿಗೆ ಧಕ್ಕೆ ತಂದಿರುವ ಕಾರಣ, ಚೀನಾದ ಕೃತಕ ಬುದ್ಧಿ-ಮತ್ತೆ(ಎ.ಐ) ಆ್ಯಪ್ 'ಡೀಪ್ ಸೀಕ್'ಅನ್ನು ದೇಶದಲ್ಲಿ ನಿಷೇಧಿಸಬೇಕು ಎಂದು ಮಹಾರಾಷ್ಟ್ರದ ಕಾಂಗ್ರೆಸ್ ಸಂಸದ ಗೋವಾಲ್ ಕೆ.ಪಡವಿ ಲೋಕಸಭೆಯಲ್ಲಿ ಮಂಗಳವಾರ ಒತ್ತಾಯಿಸಿದರು.

ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು, 'ಅರುಣಾಚಲ ಪ್ರದೇಶವು ಭಾರತದ ಭಾಗವೇ ಎಂಬ ಪ್ರಶ್ನೆಗೆ 'ಡೀಪ್‌ಸೀಕ್' ಉತ್ತರ ನೀಡಿಲ್ಲ. ಹೀಗಾಗಿ ಈ ಆ್ಯಪ್ ಅನ್ನು ನಿಷೇಧಿಸಬೇಕು' ಎಂದು ಒತ್ತಾಯಿಸಿದರು.

ಈ ವಿಚಾರವಾಗಿ ಚೀನಾಕ್ಕೆ ನೋಟಿಸ್ ಜಾರಿ ಮಾಡುವಂತೆಯೂ ಅವರು ವಿದೇಶಾಂಗ ವ್ಯವಹಾರಗಳ ಸಚಿವಾಲಯಕ್ಕೆ ಒತ್ತಾಯಿಸಿದರು.

'ಆಶಾ' ಕಾರ್ಯಕರ್ತೆಯರ ಗೌರವಧನ ಹೆಚ್ಚಳ: ಜೆ.ಪಿ.ನಡ್ಡಾ



'ಆಶಾ' ಕಾರ್ಯಕರ್ತೆಯರ ಗೌರವಧನ ಹೆಚ್ಚಳ ಮಾಡುವುದಕ್ಕೆ ರಾಷ್ಟ್ರೀಯ ಆರೋಗ್ಯ ಮಿಷನ್‌ನ (ಎನ್‌ಎಚ್‌ಎಂ) 'ಕಾರ್ಯಕ್ರಮ ಸಂಚಾಲಕ ಗುಂಪು' ನಿರ್ಧಾರ ಕೈಗೊಂಡಿದ್ದು, ಸರ್ಕಾರ ಇದನ್ನು ಅನು-ಷ್ಠಾನಗೊಳಿಸಲಿದೆ ಎಂದು ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾ ಅವರು ರಾಜ್ಯಸಭೆಗೆ ಮಂಗಳವಾರ ತಿಳಿಸಿದ್ದಾರೆ.

'ಆಶಾ ಕಾರ್ಯಕರ್ತ'ರ ಗೌರವ ಧನ ಹೆಚ್ಚಿಸಬೇಕು ಎಂದು ರಾಜ್ಯ ಗಳು ಬೇಡಿಕೆ ಮುಂದಿಟ್ಟಿರುವ ಮಧ್ಯೆಯೇ, ಕೇಂದ್ರ ಈ ಮಾತು ಹೇಳಿದೆ.

'ಆಸ್ಟ್ರೇಲಿಯಾ: ಶಿಕ್ಷೆಗೊಳಗಾದ ಅತ್ಯಾಚಾರಿಗೆ ಬಿಜೆಪಿ ನಂಟು'

ನವದೆಹಲಿ (ಪಿಟಿಐ): 'ಅತ್ಯಾಚಾರ ಆರೋಪದಲ್ಲಿ ಆಸ್ಟ್ರೇಲಿಯಾದಲ್ಲಿ 40 ವರ್ಷ ಶಿಕ್ಷೆಗೊಳಗಾದ ಭಾರತೀಯ ಸಮುದಾಯದ ನಾಯಕನಿಗೆ ಬಿಜೆಪಿ, ಪ್ರಧಾನಿ ನರೇಂದ್ರ ಮೋದಿ ಜೊತೆಗೆ ನಿಕಟ ಸಂಬಂಧವಿದೆ' ಎಂದು ಕಾಂಗ್ರೆಸ್ ಆರೋಪಿಸಿದೆ.

'ಉದ್ಯೋಗ ಕೊಡಿಸುವುದಾಗಿ ನಕಲಿ ಜಾಹೀರಾತು ನೀಡಿ ಮಹಿಳೆಯರನ್ನು ಸಿಡ್ನಿಯ ತನ್ನ ನಿವಾಸಕ್ಕೆ ಕರೆಸಿ ಅವರಿಗೆ ಮಾದಕ ಪದಾರ್ಥ-ಗಳನ್ನು ನೀಡಿ ಅತ್ಯಾಚಾರ ಮಾಡಿದ ಅಪರಾಧಕ್ಕಾಗಿ ಬಾಲೇಶ್ ಧನಕರ್‌ಗೆ (43) ಶಿಕ್ಷೆ ವಿಧಿಸಲಾಗಿತ್ತು' ಎಂದು ಅಸೋಸಿಯೇಟೆಡ್ ಪ್ರೆಸ್ ವರದಿ ಮಾಡಿದೆ.

ಈ ಬೆಳವಣಿಗೆ ಕುರಿತು ನವದೆಹಲಿಯ ಅಕ್ಬರ್ ರಸ್ತೆಯ-ಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ಮಂಗಳವಾರ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಕಾಂಗ್ರೆಸ್ ಪಕ್ಷದ ಮಹಿಳಾ ಘಟಕದ ಅಧ್ಯಕ್ಷೆ ಅಲ್ಕಾ ಲಾಂಬಾ, 'ಪ್ರಧಾನಿ ನರೇಂದ್ರ ಮೋದಿ ಅವರ ಜೊತೆಗೆ ಬಾಲೇಶ್ ಧನಕರ್ ಜೊತೆಗಿರುವ ಚಿತ್ರ ದೇಶ- ವಿದೇಶಗಳಲ್ಲಿ ಹರಿದಾಡುತ್ತಿದೆ. ಆತ ಯಾರು..? ಆಸ್ಟ್ರೇಲಿಯಾದ ಸಾಗರೋತ್ತರ ಬಿಜೆಪಿ ಘಟಕದ ಮುಖ್ಯಸ್ಥ. ಅತ್ಯಾಚಾರ ಸೇರಿದಂತೆ ಗಂಭೀರ ಅಪರಾಧದ ಮೇಲೆ 40 ವರ್ಷ ಶಿಕ್ಷೆಗೊಳಗಾಗಿದ್ದಾನೆ' ಎಂದು ಆರೋಪಿಸಿದರು.

'ಉದ್ಯೋಗ ಕೊಡಿಸುವುದಾಗಿ ಸುಳ್ಳು ಜಾಹೀರಾತು ನೀಡಿ, ಮನೆಗೆ ಕರೆಸಿಕೊಂಡು ಮಹಿಳೆಯರ ಮೇಲೆ ಅತ್ಯಾಚಾರವೆಸಗಿ, ನಂತರ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ. ಐದು ಮಂದಿ ಮಹಿಳೆಯರಿಗೆ ವಂಚನೆವೆಸಗಿದ ಆರೋಪದ ಮೇಲೆ ಆಸ್ಟ್ರೇಲಿಯಾದಲ್ಲಿ ಶಿಕ್ಷೆಗೆ ಒಳಗಾಗಿದ್ದಾನೆ. ನಾವು ಪ್ರಧಾನಿ ಅವರಿಗೆ ಪ್ರಶ್ನೆ ಕೇಳಲು ಬಯಸುತ್ತೇವೆ. ಬಾಲೇಶ್ ಜೊತೆಗೆ ನಿಮಗಿರುವ ಸಂಬಂಧ ಏನು? ಯಾವ ರೀತಿ ನಿಮಗೆ ಹತ್ತಿರವಾದ? ಆತ ಮಾಡಿದ ಕೃತ್ಯಗಳ ಕುರಿತು ಪ್ರಧಾನಿ ಕಚೇರಿಗೆ ಅರಿವು ಇರಲಿಲ್ಲವೇ? ಈ ವಿಷಯ ಗೊತ್ತಿದ್ದರೂ ಕೂಡ ಬಿಜೆಪಿ ಹಾಗೂ ಪ್ರಧಾನಿ ಈ ವಿಷಯವನ್ನು ಗೌಪ್ಯವಾಗಿಟ್ಟಿತ್ತು ? ಎಂದು ಅಲ್ಕಾ ಲಾಂಬಾ ಪ್ರಶ್ನಿಸಿದ್ದಾರೆ.

'ಬಿಜೆಪಿ ಈ ಬಗ್ಗೆ ಸುಮ್ಮನಿರುವುದು ಸರಿಯಲ್ಲ, ಈ ಬಗ್ಗೆ ಮಾತನಾಡಬೇಕು' ಎಂದು ಒತ್ತಾಯಿಸಿದ್ದಾರೆ.



ಆಸ್ಟ್ರೇಲಿಯಾದಲ್ಲಿ ಶಿಕ್ಷೆಗೊಳಗಾದ ಅತ್ಯಾಚಾರಿ ಜೊತೆಗೆ ಪ್ರಧಾನಿ ನರೇಂದ್ರ ಮೋದಿ ಹಸ್ತಲಾಘವ ಮಾಡುತ್ತಿರುವ ಚಿತ್ರವನ್ನು ಅಖಿಲ ಭಾರತೀಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಅಲ್ಕಾ ಲಾಂಬಾ ಅವರು ಬಿಡುಗಡೆಗೊಳಿಸಿದರು —ಪಿಟಿಐ ಚಿತ್ರ

ಮಲ್ಹಾರ್ ಪ್ರಮಾಣೀಕರಣದ ಮಾಂಸ ಖರೀದಿಸಲು ಮೀನುಗಾರಿಕೆ ಸಚಿವ ರಾಣೆ ಕರೆ

ಮಹಾರಾಷ್ಟ್ರ: ಈಗ ಮಾಂಸದ ರಾಜಕಾರಣ

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದಲ್ಲಿ ಈಗ 'ಹಲಾಲ್ ಕಟ್ ಮಾಂಸ ಮತ್ತು ಜಟ್ಕಾ ಕಟ್ ಮಾಂಸ'ದ ಮೇಲೆ ರಾಜಕಾರಣ ಶುರುವಾಗಿದೆ.

ಬಿಜೆಪಿ ನಾಯಕ, ರಾಜ್ಯದ ಬಂದರು ಮತ್ತು ಮೀನುಗಾರಿಕೆ ಸಚಿವ ನಿತೇಶ್ ರಾಣೆ ಅವರು ಹಿಂದೂ ಖತಿಕ್ ಸಮುದಾಯದ ಸಂಸ್ಥೆ ನೀಡುವ 'ಮಲ್ಹಾರ್ ಪ್ರಮಾಣೀಕರಣ'ದ ಮಾಂಸವನ್ನು ಮಾತ್ರ ಖರೀದಿಸಲು ಹಿಂದೂಗಳಿಗೆ ಕರೆ ಕೊಟ್ಟಿರುವುದು 'ಹಲಾಲ್ ಕಟ್ ಮತ್ತು ಜಟ್ಕಾ ಕಟ್' ವಿಷಯ ಮತ್ತೊಮ್ಮೆ ಭುಗಿಲೇಳುವಂತೆ ಮಾಡಿದೆ.

'ಮಹಾರಾಷ್ಟ್ರದ ಹಿಂದೂ ಸಮುದಾಯಕ್ಕಾಗಿ ನಾವು ಮಹತ್ವದ ಹೆಜ್ಜೆ ಇಟ್ಟಿದ್ದೇವೆ. ಮಲ್ಹಾರ್ ಪ್ರಮಾಣೀಕರಣ ಪ್ರಾರಂಭಿಸಲಾಗಿದೆ. ಮಲ್ಹಾರ್ ಪ್ರಮಾಣೀಕರಣದ ಮೂಲಕ, ನಾವು ನಮ್ಮ ಹಕ್ಕಿನ ಮಟನ್ ಅಂಗಡಿಗಳಿಗೆ ಹೋಗಬಹುದು. ಇಲ್ಲಿ ಪ್ರಾಣಿ ವಧೆ ಮಾಡುವ, ಮಾಂಸ ಕತ್ತರಿಸುವ, ಮಾಂಸ ಮಾರಾಟ ಮಾಡುವ ವ್ಯಕ್ತಿಗಳು ಹಿಂದೂಗಳೇ ಆಗಿರುತ್ತಾರೆ. ಎಲ್ಲಿಯೂ ಮಾಂಸ ಕಲಬೆರಕೆಗೆ ಅವಕಾಶವಿಲ್ಲ. ಈ ಪ್ರಯತ್ನಗಳು ಖಂಡಿತವಾಗಿಯೂ ಹಿಂದೂ ಯುವಕರನ್ನು ಆರ್ಥಿಕವಾಗಿ ಸಬಲೀಕರಣ-ಗೊಳಿಸುತ್ತವೆ' ಎಂದು ರಾಣೆ ಹೇಳಿದ್ದಾರೆ.

'ಮಲ್ಹಾರ್ ಪ್ರಮಾಣೀಕರಣವನ್ನು ಹೆಚ್ಚು ಹೆಚ್ಚು ಬಳಸಬೇಕು. ಮಲ್ಹಾರ್ ಪ್ರಮಾಣೀಕರಣ-ವಿಲ್ಲದ ಅಂಗಡಿಗಳಿಂದ ಹಿಂದೂಗಳು ಮಟನ್ ಖರೀದಿಸಬಾರದು. ಜೈ ಶ್ರೀರಾಮ್' ಎಂದಿದ್ದಾರೆ.

ಕಳೆದ ಕೆಲವು ವರ್ಷಗಳಿಂದ, ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಬಲಪಂಥೀಯ ಗುಂಪುಗಳು ಹಲಾಲ್ ಮಾಂಸದ ವಿರುದ್ಧ ಅಭಿಯಾನ ಪ್ರಾರಂಭಿಸಿವೆ.

ರಾಣೆ ಅವರ ಈ ಹೇಳಿಕೆಗೆ ತಿರುಗೇಟು ನೀಡಿರುವ ಎನ್‌ಸಿಪಿ (ಎಸ್‌ಪಿ) ನಾಯಕ, ಮಾಜಿ ಸಚಿವ ಡಾ. ಜಿತೇಂದ್ರ ಅವ್ಹಾದ್ 'ಬಜೆಟ್ ತೋಪಾಗಿದೆ. ಹಾಗಾಗಿ ಬಿಜೆಪಿಯವರು ಈ ವಿಷಯ ಇಟ್ಟುಕೊಂಡು ಹೊರಟಿದ್ದಾರೆ. ಇದು ಬಾಲಿಶ' ಎಂದು ಟೀಕಿಸಿದ್ದಾರೆ.

ಕಳೆದ ವರ್ಷ, ವಿ.ಡಿ. ಸಾವರ್ಕರ್ ಅವರ ಮೊಮ್ಮಗ ಮತ್ತು ಸ್ವಾತಂತ್ರ್ಯವೀರ ಸಾವರ್ಕರ್ ರಾಷ್ಟ್ರೀಯ ಸ್ಮಾರಕದ ಅಧ್ಯಕ್ಷ ರಂಜಿತ್ ಸಾವರ್ಕರ್ ಅವರು 'ಹಲಾಲ್ ಪ್ರಮಾಣೀಕರಣದ ಮೂಲಕ ಧಾರ್ಮಿಕ ಪ್ರಭಾವ ವಿಸ್ತರಿಸುವ ಪ್ರಯತ್ನಗಳು ನಡೆಯುತ್ತಿವೆ. ಇದಕ್ಕೆ ಪ್ರತಿಯಾಗಿ, ಸ್ವಾತಂತ್ರ್ಯ-ವೀರ ಸಾವರ್ಕರ್ ರಾಷ್ಟ್ರೀಯ ಸ್ಮಾರಕವು 'ಓಂ ಪ್ರಮಾಣೀಕರಣ' ವನ್ನು ಪರಿಚಯಿಸಿದೆ. ದೇವಾ-ಲಯಗಳಲ್ಲಿ ಅಥವಾ ಸುತ್ತಮುತ್ತ ಕೆಲಸ ಮಾಡುವ ಹಿಂದೂ ವ್ಯಾಪಾರಿಗಳಿಗೆ ಈ ಪ್ರಮಾಣೀಕರಣವು ಅತ್ಯಗತ್ಯವಾಗಿದೆ' ಎಂದು ಹೇಳಿದ್ದರು.

ಏನಿದು ಮಲ್ಹಾರ್ ಜಟ್ಕಾ ಕಟ್ ಮಟನ್?

ಮಲ್ಹಾರ್ ಪ್ರಮಾಣೀಕರಣವು ದೇಶದಲ್ಲಿ ಅಸ್ತಿತ್ವದಲ್ಲಿರುವ ಹಲಾಲ್ ಕಟ್ ಪ್ರಮಾಣೀಕರಣ-ವನ್ನೇ ಹೋಲುತ್ತದೆ. https://malharcertification.com ವೆಬ್‌ಸೈಟ್‌ನಲ್ಲಿರುವ ಮಾಹಿತಿ ಪ್ರಕಾರ, ಮಲ್ಹಾರ್ ಎಂಬುದು ಜಟ್ಕಾ ಕಟ್ ಮಟನ್ ಮತ್ತು ಕೋಳಿ ಮಾಂಸ ಮಾರಾಟಗಾರರಿಗೆ ಪ್ರಮಾಣೀಕೃತ ವೇದಿಕೆಯಾಗಿದೆ. ಹಿಂದೂ ಧಾರ್ಮಿಕ ಸಂಪ್ರದಾಯಗಳ ಪ್ರಕಾರ ಬಲಿ ನೀಡಲಾದ ಮೇಕೆ ಮತ್ತು ಕುರಿ ಮಾಂಸವು ತಾಜಾ, ಸ್ವಚ್ಛವಾಗಿದೆ. ಜೊಲ್ಲಿನ ಮಲೀನದಿಂದಲೂ ಮುಕ್ತವಾಗಿದೆ. ಬೇರೆ ಪ್ರಾಣಿಯ ಮಾಂಸ ಬೆರಕೆಯಾಗಿಲ್ಲವೆಂಬುದನ್ನು ಮಲ್ಹಾರ್ ಖಚಿತಪಡಿಸುತ್ತದೆ. ಹಿಂದೂ ಖತಿಕ್ ಸಮುದಾಯದ ಮಾರಾಟಗಾರರ ಬಳಿ ಮಾತ್ರ ಮಲ್ಹಾರ್ ಪ್ರಮಾಣೀಕರಣದ ಜಟ್ಕಾ ಕಟ್ ಮಾಂಸ ಮತ್ತು ಕೋಳಿ ಮಾಂಸ ಲಭ್ಯವಿರಲಿದೆ.

ಕಾಶ್ಮೀರದ ಎರಡು ಸಂಘಟನೆ ನಿಷೇಧಗಳು

ಪ್ರಜಾವಾಣಿ ವಾರ್ತೆ

ಶ್ರೀನಗರ: ಕಾಶ್ಮೀರದ ಮುಸ್ಲಿಂ ಧರ್ಮಗುರು ಮಿರ್ವಾಯಿಜ್ ಉಮರ್ ಫಾರೂಕ್ ನೇತೃತ್ವದ ಅವಾಮಿ ಆ್ಯಕ್ಷನ್ ಕಮಿಟಿ (ಎಎಸಿ) ಮತ್ತು ಶಿಯಾ ಸಮುದಾಯದ ನಾಯಕ ಮಸ್ರೂರ್ ಅನ್ಸಾರಿ ನೇತೃತ್ವದ ಜಮ್ಮು ಮತ್ತು ಕಾಶ್ಮೀರ ಇತ್ತಿಹಾದುಲ್ ಮುಸ್ಲಿಮೀನ್ ಸಂಘಟನೆಯನ್ನು ಕೇಂದ್ರ ಸರ್ಕಾರವು ಮಂಗಳವಾರ ನಿಷೇಧಿಸಿದೆ.

ದೇಶ ವಿರೋಧಿ ಚಟುವಟಿಕೆಗಳಲ್ಲಿ ಭಾಗಿಯಾದ, ಭಯೋತ್ಪಾದನೆಗೆ ಬೆಂಬಲ ನೀಡಿದ ಆರೋಪದ ಅಡಿ ಈ ಸಂಘಟನೆಗಳ ವಿರುದ್ಧ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಕೇಂದ್ರ ಹೇಳಿದೆ.

ಕೇಂದ್ರ ಗೃಹ ಸಚಿವಾಲಯವು ಮಿರ್ವಾಯಿಜ್ ಅವರ ಭದ್ರತೆಯನ್ನು ಈಚೆಗಷ್ಟೇ ಹೆಚ್ಚಿಸಿತ್ತು. ಮಿರ್ವಾಯಿಜ್ ಅವರು ಈಚೆಗೆ ದೆಹಲಿಗೆ ಭೇಟಿ ನೀಡಿದ್ದಾಗ, ಕಾಶ್ಮೀರಿ ಪಂಡಿತ ಸಮುದಾಯದ ಪ್ರತಿನಿಧಿಗಳ ಜೊತೆ ಸಮಾಲೋಚನೆ ನಡೆಸಿದ್ದರು. ಅಲ್ಲದೆ, ವಕ್ಫ್ ತಿದ್ದುಪಡಿ ಮಸೂದೆ ವಿಚಾರವಾಗಿ ಸಂಸತ್ತಿನ ಸಮಿತಿಯ ಮುಂದೆ ಹಾಜರಾಗಿದ್ದರು.

ಸಂಘಟನೆಯನ್ನು ನಿಷೇಧಿಸಿರುವುದನ್ನು ಖಂಡಿಸಿ ರುವ ಮಿರ್ವಾಯಿಜ್, '...ಸತ್ಯದ ದನಿಯನ್ನು ಬಲ ಪ್ರಯೋಗದ ಮೂಲಕ ಹತ್ತಿಕ್ಕಬಹುದು, ಆದರೆ ಅದನ್ನು ಅಡಗಿಸಲು ಆಗುವುದಿಲ್ಲ' ಎಂದು ಹೇಳಿದ್ದಾರೆ.

ಪ್ರಜಾತಂತ್ರಕ್ಕೆ ಅಡ್ಡಿಯಾಗಲು ಅವಕಾಶ ಇಲ್ಲ: 'ಸುಪ್ರೀಂ'



ನವದೆಹಲಿ (ಪಿಟಿಐ): ಮಹಾರಾಷ್ಟ್ರದ ಗ್ರಾಮವೊಂದರ ಸರಪಂಚ ಸ್ಥಾನಕ್ಕೆ ಮಹಿಳೆಯೊಬ್ಬರನ್ನು ಸುಪ್ರೀಂ ಕೋರ್ಟ್ ಪುನಃ ನೇಮಕ ಮಾಡಿದ್ದು, ತಳ ಮಟ್ಟದಲ್ಲಿ ಪ್ರಜಾತಂತ್ರದ ಪ್ರಗತಿಗೆ ಅಡ್ಡಿಯಾಗಲು ಅಧಿಕಾರಿಗಳಿಗೆ ಅವಕಾಶ ಕೊಡಲಾಗದು ಎಂದು ಸ್ಪಷ್ಟಪಡಿಸಿದೆ.

ಮಹಾರಾಷ್ಟ್ರ-ದಲ್ಲಿ ಪಂಚಾಯತ್‌ನ ಚುನಾಯಿತ ಪ್ರತಿನಿಧಿಗಳ ಜೊತೆ ಅಧಿಕಾರಿಗಳು ಅನುಚಿತವಾಗಿ ವರ್ತಿಸಿದ ಹಲವು ನಿದರ್ಶನಗಳು ತನ್ನ ಗಮನಕ್ಕೆ ಬಂದಿವೆ ಎಂದು ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಎನ್. ಕೋಟೀಶ್ವರ ಸಿಂಗ್ ಅವರು ಇರುವ ವಿಭಾಗೀಯ ಪೀಠವು ಹೇಳಿದೆ.

'ಅಧಿಕಾರಿಗಳು ಚುನಾಯಿತ ಪ್ರತಿನಿಧಿಗಳ ಜೊತೆ ತಪ್ಪಾಗಿ ನಡೆದುಕೊಂಡ ಎರಡು–ಮೂರು ಪ್ರಕರಣಗಳಲ್ಲಿ ನಾವು ತೀರ್ಪು ಕೊಟ್ಟಿದ್ದೇವೆ. ಇದು ಮಹಾರಾಷ್ಟ್ರದಲ್ಲಿ ಆಗುತ್ತಿದೆ. ಈ ಅಧಿಕಾರಿಗಳು ಚುನಾಯಿತ ಪ್ರತಿನಿಧಿಗಳ ಅಧೀನದಲ್ಲಿ ಇರಬೇಕು. ತಳಮಟ್ಟದಲ್ಲಿ ಪ್ರಜಾತಂತ್ರದ ಬೆಳವಣಿಗೆಗೆ ಅಡ್ಡಿಪಡಿಸಲು ಈ ಅಧಿಕಾರಿಗಳಿಗೆ ಅವಕಾಶ ಮಾಡಿಕೊಡಲಾಗದು' ಎಂದು ಪೀಠವು ಹೇಳಿದೆ.

ಕಲಾವತಿ ರಾಜೇಂದ್ರ ಕೋಕಲೆ ಎನ್ನುವವರನ್ನು ರೋಹಾ ತಾಲ್ಲೂಕಿನ ಗ್ರಾಮವೊಂದರ ಸರಪಂಚ ಆಗಿ ಸುಪ್ರೀಂ ಕೋರ್ಟ್ ಮರುನೇಮಕ ಮಾಡಿದೆ. ರಾಯಗಢ ಜಿಲ್ಲಾಧಿಕಾರಿಯು ಕೋಕಲೆ ಅವರು ಹೊಂದಿದ್ದ ಸ್ಥಾನ ತೆರವಾಗಿದೆ ಎಂದು 2024ರ ಜೂನ್ 7ರಂದು ಆದೇಶಿಸಿದ್ದರು. ಈ ಆದೇಶವನ್ನು ಹೈಕೋರ್ಟ್ ರದ್ದುಪಡಿ-ಸಿತ್ತು. ಹೈಕೋರ್ಟ್ ನಿಲುವನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ.

ಕೋಕಲೆ ಅವರು ಸರಪಂಚ ಸ್ಥಾನಕ್ಕೆ ಸಲ್ಲಿಸಿದ್ದ ರಾಜೀನಾಮೆಯನ್ನು ಹಿಂಪಡೆದಿದ್ದರೂ, ಅವರು ಈ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ ಎಂದು ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದರು.

ಸದನದಲ್ಲಿ ಕಿಡಿ ಹೊತ್ತಿಸಿದ 'ಠೋಕೆಂಗೆ'

ಒಂದನೇ ಪುಟದಿಂದ...

ಆಡಳಿತ ಪಕ್ಷಗಳ ಸದಸ್ಯರು, ಖರ್ಗೆ ಅವರ ಹೇಳಿಕೆ 'ಅಸಂಸದೀಯ' ಎಂದು ಆಕ್ಷೇಪ ವ್ಯಕ್ತಪಡಿಸಿದರು. ಆಗ ಮಧ್ಯಪ್ರ-ವೇಶಿಸಿದ ಸದನ ನಾಯಕ ಜೆ.ಪಿ.ನಡ್ಡಾ, 'ವಿಪಕ್ಷ ನಾಯಕ ಖರ್ಗೆ ಬಳಸಿದ ಪದ ಖಂಡನಾರ್ಹ' ಎಂದರು.

'ಇಂತಹ ಹೇಳಿಕೆ ನೀಡಿದ್ದಕ್ಕಾಗಿ ಖರ್ಗೆ ಅವರು ಕ್ಷಮೆ ಕೇಳಬೇಕು ಹಾಗೂ ಈ ಪದವನ್ನು ಕಡತದಿಂದ ತೆಗೆದು ಹಾಕಬೇಕು' ಎಂದು ಪೀಠವನ್ನು ಕೋರಿದರು. ತಕ್ಷಣವೇ ಪ್ರತಿಕ್ರಿಯಿ-ಸಿದ, ಖರ್ಗೆ, 'ನಾನು ನೀಡಿದ ಹೇಳಿಕೆ ಹಿಂಪಡೆಯುವೆ ಹಾಗೂ ಪೀಠದ ಕ್ಷಮೆ ಕೋರುವೆ' ಎಂದರು.

'ಖರ್ಗೆ ಅವರು ಪೀಠದ ಕ್ಷಮೆ ಕೋರಿದ್ದಾರೆ. ಇದು ಒಳ್ಳೆಯ ಹಾಗೂ ಮೆಚ್ಚುವಂಥ ನಡೆ. ಅವರ ಹೇಳಿಕೆಗಳು ಸರ್ಕಾರವನ್ನು ಕುರಿತಾಗಿದ್ದರೂ ಅವು ಖಂಡನಾರ್ಹ' ಎಂದು ನಡ್ಡಾ ಹೇಳಿದರು.

ಈ ವಿಷಯಕ್ಕೆ ಅಂತ್ಯ ಹಾಡಿದ ಉಪಸಭಾಪತಿಯವರು, ಚರ್ಚೆ ಮುಂದುವರಿಸುವಂತೆ ದಿಗ್ವಿಜಯ ಸಿಂಗ್ ಅವರಿಗೆ ಸೂಚಿಸಿದರು.

ಮಾಸ್ಕೊ: ಡ್ರೋನ್ ದಾಳಿಗೆ 3 ಸಾವು

ಸಪ್ರೊನೊವೊ (ರಷ್ಯಾ) (ಎಎಫ್‌ಪಿ): ಮಾಸ್ಕೊದ ಹೊರವಲಯದಲ್ಲಿರುವ ಅಪಾರ್ಟ್‌ಮೆಂಟ್‌ಗಳನ್ನು ಗುರಿಯಾಗಿಸಿ ಕೊಂಡು ಮಂಗಳವಾರ ಮುಂಜಾನೆ ಉಕ್ರೇನ್ ನಡೆಸಿದ ಡ್ರೋನ್ ದಾಳಿಯಲ್ಲಿ ಮೂವರು ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ.

ಮೂರು ವರ್ಷಗಳ ಸಂಘರ್ಷದಲ್ಲಿ, ರಷ್ಯಾದ ರಾಜಧಾನಿಯ ಮೇಲೆ ನಡೆದ ಅತಿ ದೊಡ್ಡ ದಾಳಿ ಇದು ಎಂದು ಎರಡೂ ಕಡೆಯವರು ಹೇಳಿದ್ದಾರೆ. ಮಾಸ್ಕೊ ಸುತ್ತಮುತ್ತಲಿನ ಪ್ರದೇಶದಲ್ಲಿ 337 ಡ್ರೋನ್‌ಗಳನ್ನು ಹೊಡೆದುರುಳಿಸಿರುವು-ದಾಗಿ ರಷ್ಯಾ ತಿಳಿಸಿದೆ.

ಅಮೆರಿಕ ಮತ್ತು ಉಕ್ರೇನ್‌ನ ಅಧಿಕಾರಿಗಳು ಸೌದಿ ಅರೇಬಿಯಾದಲ್ಲಿ ಮಾತುಕತೆ ಆರಂಭಿಸುವ ಕೆಲ ಗಂಟೆಗಳ ಮೊದಲು ಈ ದಾಳಿ ನಡೆದಿದೆ. ಉಕ್ರೇನ್ ಮೇಲೆ ನಡೆಸುತ್ತಿರುವ ವೈಮಾನಿಕ ದಾಳಿ ನಿಲ್ಲಿಸುವಂತೆ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರ ಮೇಲೆ ಒತ್ತಡ ಹಾಕಲು ಈ ದಾಳಿ ನಡೆಸಲಾಗಿದೆ ಎಂದು ಕೀವ್ ತಿಳಿಸಿದೆ. ಉಕ್ರೇನ್‌ನ ಈ ಪ್ರಸ್ತಾವವನ್ನು ರಷ್ಯಾ ಈ ಹಿಂದೆಯೇ ತಳ್ಳಿಹಾಕಿದೆ.

ರಷ್ಯಾ ಸೇನೆ ಸಹ ಉಕ್ರೇನ್ ಮೇಲೆ ಕ್ಷಿಪಣಿ, ಡ್ರೋನ್ ಹಾಗೂ ಬಾಂಬ್ ದಾಳಿ ನಡೆಸಿದ್ದು, ನಾಲ್ವರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಉಕ್ರೇನ್- ಅಮೆರಿಕ ಮಾತುಕತೆ: ಉಕ್ರೇನ್–ರಷ್ಯಾ ಯುದ್ಧವನ್ನು ಅಂತ್ಯಗಾಣಿಸುವ ಸಂಬಂಧ ಉಕ್ರೇನ್ ಮತ್ತು ಅಮೆರಿಕದ ಉನ್ನತ ಅಧಿಕಾರಿಗಳು ಸೌದಿ ಅರೇಬಿಯಾದಲ್ಲಿ ಮಂಗಳವಾರ ಮಾತುಕತೆ ನಡೆಸಿದರು.

'ಮಾತುಕತೆ ರಚನಾತ್ಮಕವಾಗಿ ನಡೆದಿದೆ. ಹಲವಾರು ವಿಷಯಗಳ ಬಗ್ಗೆ ಚರ್ಚಿಸಲಾಯಿತು' ಎಂದು ಉಕ್ರೇನ್ ಹೇಳಿದೆ.

12 ವಸಾಹತು ಮರುವಶ

ಮಾಸ್ಕೊ (ರಾಯಿಟರ್ಸ್): ರಷ್ಯಾದ ಪಶ್ಚಿಮದಲ್ಲಿರುವ ಕರ್ಸ್ಕ್ ಪ್ರದೇಶ ದಿಂದ ಉಕ್ರೇನ್ ಸೇನೆಯನ್ನು ಹಿಮ್ಮೆಟ್ಟಿಸಿ, ತನ್ನ ಭೂಭಾಗದ ಮರುವಶಕ್ಕೆ ರಷ್ಯಾ ಸೇನೆ ಮುಂದಾಗಿದೆ. ಕರ್ಸ್ಕ್‌ನ 100 ಚದರ ಕಿ.ಮೀ ಪ್ರದೇಶ ಹಾಗೂ 12 ವಸಾಹತುಗಳನ್ನು ಉಕ್ರೇನ್ ಸೇನೆಯಿಂದ ಮರು-ವಶಪಡಿಸಿಕೊಳ್ಳಲಾಗಿದೆ ಎಂದು ರಷ್ಯಾ ತಿಳಿಸಿದೆ.

ವಾಯು ಮಾಲಿನ್ಯ

ದೆಹಲಿ ಅಲ್ಲ ಮೇಘಾಲಯದ ಬರ್ನಿಹಾಟ್‌ನಲ್ಲಿ ಹೆಚ್ಚು

ಬೆಂಗಳೂರು: ಭಾರತದ ಈಶಾನ್ಯ ರಾಜ್ಯಗಳು ತನ್ನ ಪ್ರಾಕೃತಿಕ ಸೌಂದರ್ಯಕ್ಕೆ ಹೆಸರು ಗಳಿಸಿರುವ ಪ್ರದೇಶಗಳು. ಆದರೆ, ಮೇಘಾಲಯದ ಬರ್ನಿಹಾಟ್ ನಗರವು ಈ ಹೆಸರನ್ನು ಕಳಚಿಕೊಂಡು ಜಗತ್ತಿನಲ್ಲಿಯೇ ಅತಿ ಹೆಚ್ಚು ವಾಯು ಮಾಲಿನ್ಯ ಹೊಂದಿರುವ ನಗರವಾಗಿ ಮಾರ್ಪಟ್ಟಿದೆ. ಸ್ವಿಟ್ಜರ್‌ಲೆಂಡ್‌ನ ವಾಯು ಗುಣಮಟ್ಟ ತಂತ್ರಜ್ಞಾನ ಕಂಪನಿಯಾದ 'ಐಕ್ಯೂಏರ್' **(IQAir)** 'ದಿ ವರ್ಲ್ಡ್ ಏರ್ ಕ್ವಾಲಿಟಿ ರಿಪೋರ್ಟ್ 2024' ಅನ್ನು ಮಂಗಳವಾರ ಬಿಡುಗಡೆ ಮಾಡಿದೆ. ಈ ವರದಿಯಲ್ಲಿ ಭಾರತದ ಕುರಿತು ಹಲವು ಅಂಶಗಳು ಪ್ರಸ್ತಾಪಿತಗೊಂಡಿವೆ

> ಒಂದು ಘನ ಮೀಟರ್‌ನಷ್ಟು ಗಾಳಿಯಲ್ಲಿ 2.5 ಮೈಕ್ರಾನ್ ಗಾತ್ರದ 5 ಮೈಕ್ರೋಗ್ರಾಂನಷ್ಟು ಮಾಲಿನ್ಯಕಾರಕ ಕಣಗಳು ಇದ್ದರೆ, ಅದು ಸುರಕ್ಷಿತ ಮಟ್ಟ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಹೇಳಿದೆ

ಭಾರತದ ಸ್ಥಿತಿ

54.4 ಮೈಕ್ರೋಗ್ರಾಂ 2023ರಲ್ಲಿ | 50.6 ಮೈಕ್ರೋಗ್ರಾಂ 2024ರಲ್ಲಿ

(ಶೇ 7.5ರಷ್ಟು ಇಳಿಕೆ)

ಭಾರತದ ಶೇ 35ರಷ್ಟು ನಗರಗಳಲ್ಲಿ ಮಾಲಿನ್ಯಕಾರಕ ಕಣಗಳ ಪ್ರಮಾಣವು ಸುರಕ್ಷಿತ ಮಟ್ಟಕ್ಕಿಂತ 10ಪಟ್ಟು ಹೆಚ್ಚು

ಬರ್ನಿಹಾಟ್‌ನಲ್ಲಿ 128.2 ಮೈಕ್ರೋಗ್ರಾಂ ಮಾಲಿನ್ಯಕಾರಕ ಕಣಗಳಿವೆ (ಡಬ್ಲ್ಯುಎಚ್‌ಒ) ನಿಗದಿ ಮಾಡಿರುವ ಮಿತಿಗಿಂತ 25 ಪಟ್ಟು ಹೆಚ್ಚು)

13 ನಗರಗಳು ಯಾವುವು?

1. ಬರ್ನಿಹಾಟ್, ಮೇಘಾಲಯ
2. ದೆಹಲಿ (ಕೇಂದ್ರಾಡಳಿತ ಪ್ರದೇಶ)
4. ಮುಲ್ಲಂಪುರ, ಪಂಜಾಬ್
6. ಫರೀದಾಬಾದ್, ಹರಿಯಾಣ
8. ಲೋಣಿ, ಉತ್ತರ ಪ್ರದೇಶ
9. ನವದೆಹಲಿ, ದೆಹಲಿ
13. ಗುರುಗ್ರಾಮ, ಹರಿಯಾಣ
14. ಗಂಗಾನಗರ, ರಾಜಸ್ಥಾನ
16. ಗ್ರೇಟರ್ ನೊಯಿಡಾ, ಉತ್ತರ ಪ್ರದೇಶ
17. ಭಿವಾಡಿ, ರಾಜಸ್ಥಾನ
18. ಮುಜಾಫರ್‌ನಗರ, ಉತ್ತರ ಪ್ರದೇಶ
19. ಹನುಮಗಢ, ರಾಜಸ್ಥಾನ
20. ನೊಯಿಡಾ, ಉತ್ತರ ಪ್ರದೇಶ

(ಜಗತ್ತಿನ 20 ನಗರಗಳ ಪಟ್ಟಿಯಲ್ಲಿ ಭಾರತದ 13 ನಗರಗಳನ್ನು ಅದರ ಸ್ಥಾನಕ್ಕೆ ಅನುಗುಣವಾಗಿ ಕ್ರಮವಾಗಿ ಬರೆಯಲಾಗಿದೆ)

ದೆಹಲಿ

102.4 ಮೈಕ್ರೋಗ್ರಾಂ 2023ರಲ್ಲಿ | 108.3 ಮೈಕ್ರೋಗ್ರಾಂ 2024ರಲ್ಲಿ

(ಶೇ5.7ರಷ್ಟು ಏರಿಕೆ)

ಬೆಂಗಳೂರು

28.6 ಮೈಕ್ರೋಗ್ರಾಂ 2023ರಲ್ಲಿ | 30 ಮೈಕ್ರೋಗ್ರಾಂ 2024ರಲ್ಲಿ

(ಶೇ4ರಷ್ಟು ಏರಿಕೆ)

ಒಂದು ಘನ ಮೀಟರ್ ಗಾಳಿ

ಆಧಾರ: 'ದಿ ವರ್ಲ್ಡ್ ಏರ್ ಕ್ವಾಲಿಟಿ ರಿಪೋರ್ಟ್ 2024', ಪಿಟಿಐ



- ಜಗತ್ತಿನಲ್ಲಿರುವ ಅತಿ ಹೆಚ್ಚು ವಾಯು ಮಾಲಿನ್ಯ ಹೊಂದಿರುವ 20 ನಗರಗಳ ಪೈಕಿ 13 ನಗರಗಳು ಭಾರತದಲ್ಲಿಯೇ ಇವೆ
- ಜಗತ್ತಿನ ಅತಿ ಹೆಚ್ಚು ವಾಯು ಮಾಲಿನ್ಯ ಹೊಂದಿರುವ 10 ನಗರಗಳ ಪೈಕಿ 6 ನಗರಗಳು ಭಾರತದಲ್ಲಿವೆ
- ಜಗತ್ತಿನಲ್ಲಿ ಅತಿ ಹೆಚ್ಚು ವಾಯು ಮಾಲಿನ್ಯ ಹೊಂದಿರುವ ದೇಶಗಳ ಪೈಕಿ ಭಾರತವು 5ನೇ ಸ್ಥಾನದಲ್ಲಿದೆ (2023ರಲ್ಲಿ 3ನೇ ಸ್ಥಾನದಲ್ಲಿತ್ತು)
- ಜಗತ್ತಿನಲ್ಲಿ ಅತಿ ಹೆಚ್ಚು ವಾಯು ಮಾಲಿನ್ಯ ಹೊಂದಿರುವ ರಾಷ್ಟ್ರ ರಾಜಧಾನಿಗಳ ಪಟ್ಟಿಯಲ್ಲಿ ದೆಹಲಿ ಮೊದಲ ಸ್ಥಾನದಲ್ಲಿದೆ

ಬರ್ನಿಹಾಟ್: ಕಳಪೆ ಸಾಧನೆ

ಭಾರತದ ಮಟ್ಟಿಗೆ 2024ರಲ್ಲಿ ಈಶಾನ್ಯ ರಾಜ್ಯಗಳಲ್ಲಿ ಹೆಚ್ಚಿನ ವಾಯು ಮಾಲಿನ್ಯ ಹಬ್ಬಿದೆ. ಮೇಘಾಲಯದ ಬರ್ನಿಹಾಟ್ ನಗರವು 2023ರಲ್ಲಿ ದೇಶದಲ್ಲಿಯೇ ಅಧಿಕ ವಾಯು ಮಾಲಿನ್ಯ ಹೊಂದಿದ ನಗರ ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ (ಸಿಪಿಸಿಬಿ) ಪಟ್ಟಿ ಮಾಡಿತ್ತು. ಜೊತೆಗೆ ಮಾಲಿನ್ಯ ಸೂಚ್ಯಂಕದಲ್ಲಿ 'ಅತ್ಯಂತ ಕಳಪೆ' ಎಂದು ಹೇಳಿತ್ತು. 2024ರಲ್ಲಿ ಈ ನಗರವು ಜಗತ್ತಿನಲ್ಲಿಯೇ ಅಧಿಕ ವಾಯು ಮಾಲಿನ್ಯ ಹೊಂದಿದ ನಗರವಾಗಿ ಮಾರ್ಪಟ್ಟಿದೆ.

ಡಿಸ್ಟಿಲರಿಗಳು ಕಾರ್ಖಾನೆಗಳು ಸೇರಿದಂತೆ ಸ್ಥಳೀಯವಾಗಿರುವ ವಿವಿಧ ಕಾರ್ಖಾನೆಗಳು, ಕಬ್ಬಿಣ ಮತ್ತು ಉಕ್ಕಿನ ಘಟಕಗಳ ಕಾರಣದಿಂದ ಬರ್ನಿಹಾಟ್‌ನಲ್ಲಿ ವಾಯು ಮಾಲಿನ್ಯ ಹೆಚ್ಚಿದೆ. ಈ ನಗರವು ಮೇಘಾಲಯ ಹಾಗೂ ಅಸ್ಸಾಂನ ಗಡಿಯಲ್ಲಿದೆ. ಗುವಾಹಟಿಯಲ್ಲಿರುವ ಕೈಗಾರಿಕಾ ಪ್ರದೇಶಕ್ಕೆ ಬರ್ನಿಹಾಟ್ ಹತ್ತಿರದಲ್ಲಿದೆ. ಈ ನಗರದಲ್ಲಿನ ಜನರು ಈಗಾಗಲೇ ಶ್ವಾಸಕೋಶದ ರೋಗಗಳಿಂದ, ಕಾರ್ಖಾನೆಗಳ ಶಬ್ದದಿಂದ ನರಳಾಡುತ್ತಿದ್ದಾರೆ.

ಈ ಬಗ್ಗೆ ಮುಖ್ಯಮಂತ್ರಿ ಕಾನ್ರಾಡ್ ಕೆ. ಸಂಗ್ಮಾ ಅವರು ಪ್ರತಿಕ್ರಿಯಿಸಿದ್ದು, ಇದು ಅತ್ಯಂತ ಚಿಂತೆಗೀಡು ಮಾಡುವಂಥದ್ದು. ವಾಯು ಮಾಲಿನ್ಯ ತಡೆಗಟ್ಟಲು ತುರ್ತಿನ ಹಾಗೂ ದೀರ್ಘಾವಧಿ ಕ್ರಮಗಳನ್ನು ಕೈಗೊಳ್ಳಲಾಗುವುದು. ವಾಯು ವಾಲಿನ್ಯ ತಡೆಗಟ್ಟುವಲ್ಲಿ ಅಸ್ಸಾಂ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in




❦ ಸುಭಾಷಿತ ❦

ಓದು ವ್ಯಕ್ತಿಯನ್ನು ರೂಪಿಸುತ್ತದೆ, ಚರ್ಚೆ ಆತನನ್ನು ಸಿದ್ಧಗೊಳಿಸುತ್ತದೆ, ಬರಹ ಪರಿಪೂರ್ಣ ವ್ಯಕ್ತಿಯನ್ನಾಗಿ ಮಾಡುತ್ತದೆ.

-ಕುವೆಂಪು

ನಟಿ ರನ್ಯಾ ರಾವ್ ಬಂಧನ ಚಿನ್ನದ ಕಳ್ಳಸಾಗಣೆಗೆ ಅಂಕುಶ ಹಾಕಿ

ಕನ್ನಡ ಚಲನಚಿತ್ರ ನಟಿ ರನ್ಯಾ ರಾವ್ ಅವರನ್ನು ಕಂದಾಯ ಗುಪ್ತಚರ ನಿರ್ದೇಶನಾಲಯವು (ಡಿಆರ್‌ಐ) ಈಚೆಗೆ ಬಂಧಿಸಿರುವುದು ದೇಶದಲ್ಲಿ ನಡೆಯುತ್ತಿರುವ ಚಿನ್ನದ ಕಳ್ಳಸಾಗಣೆಯ ಬಗ್ಗೆ ಎಚ್ಚರಿಕೆಯ ಕರೆಗಂಟೆಯಂತೆ ಇದೆ. ರನ್ಯಾ ಅವರು ಚಿನ್ನವನ್ನು ಕಳ್ಳಸಾಗಣೆ ಮಾಡುತ್ತಿದ್ದ ಬಗೆಯ ಕುರಿತ ವರದಿಗಳು ಉನ್ನತ ಅಧಿಕಾರ ಸ್ಥಾನಗಳಲ್ಲಿ ಇರುವವರು ತೋರಿರಬಹುದಾದ ಪ್ರಭಾವ ಮತ್ತು ಇಂತಹ ಅಪರಾಧಗಳನ್ನು ತಡೆಯುವಲ್ಲಿ ವ್ಯವಸ್ಥೆಯು ಸೋತಿರುವುದನ್ನು ಹೇಳುತ್ತಿವೆ. ರನ್ಯಾ ರಾವ್ ಅವರನ್ನು ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಈ ತಿಂಗಳ 3ರಂದು ಬಂಧಿಸಲಾಯಿತು. ದುಬೈನಿಂದ ಬಂದಿಳಿದಾಗ ಅವರ ಬಳಿ ವಿದೇಶಿ ಮೂಲದ 14.8 ಕೆ.ಜಿ.ಯಷ್ಟು ಚಿನ್ನ ಇತ್ತು ಎಂದು ಅಧಿಕಾರಿಗಳು ಹೇಳಿದ್ದಾರೆ. ಈ ಚಿನ್ನದ ಮಾರುಕಟ್ಟೆ ಮೌಲ್ಯ ಅಂದಾಜು ₹12.56 ಕೋಟಿ. ಕಳೆದ ಒಂದು ವರ್ಷದ ಅವಧಿಯಲ್ಲಿ ರನ್ಯಾ ಅವರು ದುಬೈಗೆ ಇಪ್ಪತ್ತಕ್ಕೂ ಹೆಚ್ಚು ಬಾರಿ ತೆರಳಿದ್ದರು, ಪ್ರತಿ ಬಾರಿಯೂ ಅವರು ಚಿನ್ನವನ್ನು ಅಕ್ರಮವಾಗಿ ದೇಶದೊಳಕ್ಕೆ ತರುತ್ತಿದ್ದರು, ಪ್ರತಿ ಕೆ.ಜಿ. ಚಿನ್ನದಿಂದ ಅವರು ಗರಿಷ್ಠ ₹4 ಲಕ್ಷದವರೆಗೆ ಲಾಭ ಮಾಡಿಕೊಳ್ಳುತ್ತಿದ್ದರು ಎಂದು ವರದಿಗಳು ಹೇಳಿವೆ. ಬಂಧನದ ನಂತರ ರನ್ಯಾ ಅವರ ಮನೆಯ ಮೇಲೆ ಅಧಿಕಾರಿಗಳು ದಾಳಿ ನಡೆಸಿದ್ದು, ಅಲ್ಲಿ ₹2.67 ಕೋಟಿ ನಗದು ಹಾಗೂ ₹2.06 ಕೋಟಿ ಮೌಲ್ಯದ ಚಿನ್ನ ಸಿಕ್ಕಿದೆ.



ತಪ್ಪು ಮಾಡಿದವರು ಎಷ್ಟೇ ದೊಡ್ಡವರಾಗಿದ್ದರೂ ಅವರು ಶಿಕ್ಷೆಗೆ ಗುರಿಯಾಗುವಂತೆ ನೋಡಿಕೊಳ್ಳಬೇಕು, ಸರ್ಕಾರದ ನೀತಿಗಳಲ್ಲಿ ಸುಧಾರಣೆಗಳು ಆಗಬೇಕು

ರನ್ಯಾ ಅವರು ದುಬೈಗೆ ಮತ್ತೆ ಮತ್ತೆ ತೆರಳುತ್ತಿದ್ದರು, ಅವರು ಅಲ್ಲಿಗೆ ಹೋಗಿಬರುತ್ತಿದ್ದ ಬಗೆಯು ಅನುಮಾನ ಮೂಡಿಸುವಂತೆ ಇತ್ತು. ಹೀಗಿದ್ದರೂ ಬೆಂಗಳೂರಿನಲ್ಲಿರುವ ಕೇಂದ್ರೀಯ ಏಜೆನ್ಸಿಗಳ ಅಧಿಕಾರಿಗಳಿಗೆ ರನ್ಯಾ ಅವರ ಅಕ್ರಮ ಇದುವರೆಗೆ ಅರಿವಿಗೆ ಬಂದಿರಲಿಲ್ಲ ಎಂಬುದು ಕಳವಳಕ್ಕೆ ಕಾರಣವಾಗುವ ಸಂಗತಿ. ವಿವಿಧ ಮೂಲಗಳಿಂದ ಲಭ್ಯವಾದ ಸುಳಿವು ಆಧರಿಸಿ ಡಿಆರ್‌ಐ ದೆಹಲಿ ಘಟಕವು ರನ್ಯಾ ಅವರನ್ನು ಬಂಧಿಸಿದೆ. ಅಂದರೆ, ಬೆಂಗಳೂರಿನಲ್ಲಿನ ಅಧಿಕಾರಿಗಳಿಗೆ ರನ್ಯಾ ಅವರ ಚಟುವಟಿಕೆಗಳು ಗೊತ್ತಾಗಿರಲಿಲ್ಲ ಅಥವಾ ಅವರು ಗೊತ್ತಿದ್ದರೂ ಸುಮ್ಮನಿದ್ದರು ಎಂಬ ಅನುಮಾನಗಳು ಮೂಡುತ್ತವೆ. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಿಯಮಗಳ ಪಾಲನೆಯಲ್ಲಿ ಗಂಭೀರ ಲೋಪ ಆಗಿರುವ ಸಾಧ್ಯತೆಯನ್ನು ಇದು ಸೂಚಿಸುತ್ತಿದೆ. ರನ್ಯಾ ಅವರು ಹಿರಿಯ ಪೊಲೀಸ್ ಅಧಿಕಾರಿ ಕೆ. ರಾಮಚಂದ್ರ ರಾವ್ ಅವರ ಮಲಮಗಳು. ರನ್ಯಾ ಅವರು ತಮ್ಮ ಕುಟುಂಬದ ಪ್ರಭಾವವನ್ನು ಬಳಸಿಕೊಂಡು ಭದ್ರತಾ ತಪಾಸಣೆಗಳಿಂದ ವಿನಾಯಿತಿ ಪಡೆದುಕೊಳ್ಳುತ್ತಿದ್ದರು ಎನ್ನಲಾಗಿದೆ. ಇದು ನಿಜವೇ ಆಗಿದ್ದರೆ ದೇಶದ ವಿಐಪಿ ಸಂಸ್ಕೃತಿಯು ದೇಶದ ಹಿತಕ್ಕೇ ಕೆಡುಕು ಉಂಟುಮಾಡುತ್ತಿದೆ ಎಂಬುದಕ್ಕೆ ಇದೊಂದು ನಿದರ್ಶನವಾಗುತ್ತದೆ. ರನ್ಯಾ ಅವರ ಪ್ರಕರಣವು ರಾಯಭಾರಿಗಳಿಗೆ ಇರುವ ಸೌಲಭ್ಯವನ್ನು ಬಳಸಿಕೊಂಡು ಹಿಂದೆ ಕೇರಳದಲ್ಲಿ 30 ಕೆ.ಜಿ. ಚಿನ್ನವನ್ನು ಕಳ್ಳಸಾಗಣೆ ಮಾಡಿದ ಪ್ರಕರಣವನ್ನು ನೆನಪಿಸುವಂತಿದೆ. ಉನ್ನತ ಸ್ಥಾನಗಳಲ್ಲಿನ ಅಧಿಕಾರಿಗಳಿಗೆ ಇರುವ ವಿಶೇಷ ಅಧಿಕಾರವನ್ನು ಬಳಸಿಕೊಂಡು, ಭದ್ರತಾ ತಪಾಸಣೆಯಿಂದ ವಿನಾಯಿತಿ ಪಡೆದು, ಅಕ್ರಮಗಳಲ್ಲಿ ತೊಡಗುವುದು ವ್ಯವಸ್ಥೆಯಲ್ಲಿನ ಹುಳುಕುಗಳನ್ನು ಎತ್ತಿತೋರಿಸುತ್ತದೆ.

ಈಗ ನಡೆದಿರುವ ತನಿಖೆಯು ರನ್ಯಾ ಮತ್ತು ಅವರ ಜೊತೆಗಾರರ ಆಚೆಗೂ ವಿಸ್ತರಿಸಿಕೊಳ್ಳಬೇಕು. ರನ್ಯಾ ಅವರಿಗೆ ಅಕ್ರಮ ಎಸಗಲು ಅಧಿಕಾರಿಗಳ ಮಟ್ಟದಲ್ಲಿ ಯಾರಾದರೂ ಬೆಂಬಲ ನೀಡಿದ್ದರೇ ಎಂಬುದನ್ನು, ರನ್ಯಾ ಅವರಿಗೆ ಕೆಲವು ಸಚಿವರ ಜೊತೆ ನಂಟು ಇದೆ ಎಂಬ ಆರೋಪಗಳನ್ನು ತನಿಖೆಯು ಪರಿಶೀಲನೆಗೆ ಒಳಪಡಿಸಬೇಕು. ಚಿನ್ನದ ಅಕ್ರಮ ಸಾಗಣೆಯ ಪ್ರಯೋಜನ ಪಡೆದುಕೊಳ್ಳುತ್ತಿದ್ದ ಆಭರಣ ಮಳಿಗೆಯ ಮಾಲೀಕರನ್ನು ಕೂಡ ತನಿಖೆಯಿಂದ ಪತ್ತೆ ಮಾಡಬೇಕು. ಉನ್ನತ ಹಂತಗಳಲ್ಲಿನ ವ್ಯಕ್ತಿಗಳ ಬೆಂಬಲ ಇಲ್ಲದೆ ರನ್ಯಾ ಅವರು ಅಕ್ರಮವನ್ನು ನಡೆಸಿರುವ ಸಾಧ್ಯತೆ ಕಡಿಮೆ. ಅಧಿಕಾರಿಗಳ ಹಂತದಲ್ಲಿನ ಭ್ರಷ್ಟಾಚಾರ ಮತ್ತು ವಿಐಪಿ ಸಂಸ್ಕೃತಿಯ ದುರ್ಬಳಕೆಯನ್ನು ರನ್ಯಾ ಪ್ರಕರಣವು ಹೇಳುತ್ತಿರುವಂತಿದೆ. ಚಿನ್ನದ ಕಳ್ಳಸಾಗಣೆಯನ್ನು ತಡೆಯಲು ಸರ್ಕಾರವು ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಬೇಕು. ಅಂದರೆ ಕಳ್ಳಸಾಗಣೆಯಲ್ಲಿ ತೊಡಗಿರುವ ಜಾಲವನ್ನು ಮುರಿಯಬೇಕು, ತಪ್ಪು ಮಾಡಿದವರು ಎಷ್ಟೇ ದೊಡ್ಡವರಾಗಿದ್ದರೂ ಅವರು ಶಿಕ್ಷೆಗೆ ಗುರಿಯಾಗುವಂತೆ ನೋಡಿಕೊಳ್ಳಬೇಕು, ಅಕ್ರಮಗಳಿಗೆ ಕಾರಣವಾಗುವ ಅಂಶಗಳನ್ನು ನಿವಾರಿಸಬೇಕು. ಭದ್ರತಾ ಶಿಷ್ಟಾಚಾರಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು, ಕಣ್ಗಾವಲು ಇನ್ನಷ್ಟು ಬಿಗಿಗೊಳ್ಳಬೇಕು ಮತ್ತು ಸರ್ಕಾರದ ನೀತಿಗಳಲ್ಲಿ ಸುಧಾರಣೆಗಳು ಆಗಬೇಕು. ಪಾರದರ್ಶಕತೆ ಮತ್ತು ಉತ್ತರದಾಯಿತ್ವಕ್ಕೆ ತನಗೆ ಬದ್ಧತೆ ಇದೆ ಎಂಬುದನ್ನು ಸರ್ಕಾರ ತೋರಿಸಿಕೊಡಬೇಕು. ಈಗ ಬಯಲಾಗಿರುವ ಅಕ್ರಮದಲ್ಲಿ ಭಾಗಿಯಾದ ಎಲ್ಲರೂ ಕಾನೂನಿನ ಮುಂದೆ ತಲೆಬಾಗುವಂತೆ ಮಾಡಬೇಕು.

ಆರೋಗ್ಯ, ಶಿಕ್ಷಣ ಕ್ಷೇತ್ರದಲ್ಲಿ ಎ.ಐ. ಬಳಸಿ ದೊಡ್ಡ ಬದಲಾವಣೆ ತರಲು ಸಾಧ್ಯ

ಎ.ಐ. ನುಡಿ: ಸಜ್ಜಾಗಿದೆಯೇ ಕನ್ನಡ?



ವಿಶ್ಲೇಷಣೆ

ವಸಂತ ಶೆಟ್ಟಿ

ಅದೊಂದು ಅತ್ಯಂತ ಹಿಂದುಳಿದ ತಾಲ್ಲೂಕಿನ ಹಳ್ಳಿಯೊಂದರಲ್ಲಿ ಇರುವ ಸರ್ಕಾರಿ ಶಾಲೆ. ಒಂದರಿಂದ ಐದನೆಯ ತರಗತಿಯ ಐವತ್ತು ಮಕ್ಕಳು ಓದುತ್ತಿರುವ ಶಾಲೆಯಲ್ಲಿ ಇರುವವರು ಇಬ್ಬರು ಶಿಕ್ಷಕರು. ಅವರೇ ಎಲ್ಲ ತರಗತಿಗಳನ್ನು ನಡೆಸುವುದರ ಜೊತೆಗೆ ಬಿಸಿಯೂಟ ಸೇರಿದಂತೆ ಶಾಲೆಯ ಆಡಳಿತವನ್ನೂ ನಿರ್ವಹಿಸಬೇಕು. ಸಹಜವಾಗಿಯೇ ಅಲ್ಲಿ ಮಕ್ಕಳಿಗೆ ಕೊಡಬೇಕಾದ ಗಮನವನ್ನಾಗಲಿ, ಸಮಯವನ್ನಾಗಲಿ ಕೊಡಲಾಗದ ಶಿಕ್ಷಕರಿಂದ ಮಕ್ಕಳ ಕಲಿಕೆ ಕುಂಠಿತವಾಗುತ್ತಿದೆ.


ಈಗ ಅದೇ ಶಾಲೆಗೆ ಉಪಗ್ರಹ ಆಧಾರಿತ ವೇಗದ ಅಂತರ್ಜಾಲದ ಸಂಪರ್ಕ ಕೊಟ್ಟು, ಎಲ್ಲ ಕೋಣೆಗಳಲ್ಲೂ ಒಂದು ಸ್ಮಾರ್ಟ್ ಟಿ.ವಿ.ಯ ಮೂಲಕ ಕೃತಕ ಬುದ್ಧಿಮತ್ತೆ (ಎ.ಐ.) ಬಳಸಿ ಸೃಷ್ಟಿಸಲಾದ ಶಿಕ್ಷಕರೊಬ್ಬರನ್ನು ನೇಮಿಸಲಾಗುತ್ತದೆ. ಪ್ರತಿ ವಿಷಯದ ಬಗ್ಗೆಯೂ ಆಳವಾದ ತಿಳಿವುಳ್ಳ, ಮಕ್ಕಳ ನುಡಿಯನ್ನು ಸಹ ಚೆನ್ನಾಗಿ ಬಲ್ಲ ಈ ಎ.ಐ. ಶಿಕ್ಷಕ, ಯಾವ ಪ್ರಶ್ನೆಯನ್ನು ಕೇಳಿದರೂ ಕಿಂಚಿತ್ತೂ ಬೇಸರಿಸಿಕೊಳ್ಳದೆ ಮಕ್ಕಳಿಗೆ ಹೇಳಿಕೊಡುತ್ತದೆ. ಮಕ್ಕಳು ಮನೆಯಲ್ಲಿ ಓದಿಕೊಳ್ಳುವಾಗಲೂ ಅವರಿಗೆ ಪ್ರಶ್ನೆಗಳು ಎದುರಾದರೆ, ತಕ್ಷಣವೇ ತಂದೆ-ತಾಯಿಯ ಮೊಬೈಲ್ ಫೋನ್ ಮೂಲಕ ಮಕ್ಕಳೊಡನೆ ಒಡನಾಡಿ ಅದನ್ನು ಬಗೆಹರಿಸುತ್ತದೆ. ಹಳ್ಳಿಯ ಈ ಶಾಲೆಯ ಎಲ್ಲ ಮಕ್ಕಳ ಕಲಿಕೆಯ ಮಟ್ಟವನ್ನೂ ಕೆಲ ವರ್ಷಗಳಲ್ಲೇ ಮೇಲಕ್ಕೆತ್ತುವ ಇಂತಹ ಕಲಿಕೆಯು ಸಿದ್ಧಗೊಂಡರೆ ಹೇಗಿರುತ್ತದೆ?

ಇನ್ನೊಂದು ಉದಾಹರಣೆ. ಅದೇ ಹಳ್ಳಿಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆರು ತಿಂಗಳಿಂದ ಸರಿಯಾದ ವೈದ್ಯರಿಲ್ಲ. ಸಣ್ಣಪುಟ್ಟ ಅನಾರೋಗ್ಯಕ್ಕೂ 30 ಕಿ.ಮೀ. ದೂರದ ಪಟ್ಟಣಕ್ಕೆ ಹೋಗಬೇಕಾದ ಸ್ಥಿತಿಯಿದೆ. ಈ ಆಸ್ಪತ್ರೆಗೂ ಇದೇ ತಂತ್ರಜ್ಞಾನದ ಸಹಾಯದಿಂದ ಒಬ್ಬ ಎ.ಐ. ವೈದ್ಯರನ್ನು ಒದಗಿಸಲಾಗುತ್ತದೆ. ಈ ವೈದ್ಯರ ಬಳಿ ಮೈಬಿಸಿ, ಬಿ.ಪಿ., ಇ.ಸಿ.ಜಿ., ರಕ್ತದಲ್ಲಿನ ಆಮ್ಲಜನಕವನ್ನು ಕಣ್ಣೂಚನೆಯಲ್ಲೇ ಅಳೆಯುವ ಸಾಧನಗಳು, ರೋಗಿಯ ಕಣ್ಣು, ನಾಲಿಗೆ ಪರೀಕ್ಷಿಸುವ ಅನುಕೂಲಗಳು ಇರುತ್ತವೆ. ರೋಗಿಯ ಮೊದಲ ಹಂತದ ತಪಾಸಣೆಯನ್ನು ರೋಗಿಗೆ ತಿಳಿದಿರುವ ಕನ್ನಡ ಭಾಷೆಯಲ್ಲೇ ಅಚ್ಚುಕಟ್ಟಾಗಿ ಮಾಡಿ ಮುಗಿಸಿ, ನಂತರ ಅಲ್ಲಿಂದಲೇ ಜಿಲ್ಲಾ ಕೇಂದ್ರದಲ್ಲಿರುವ ನುರಿತ ವೈದ್ಯರ ಕೇಂದ್ರವನ್ನು ಅದು ಸಂಪರ್ಕಿಸುತ್ತದೆ. ಯಾವ ಚಿಕಿತ್ಸೆ ನೀಡಬೇಕು ಎಂದು ಖಾತರಿಪಡಿಸಿಕೊಂಡು ಅದನ್ನು ನೀಡುತ್ತದೆ. ಹಳ್ಳಿಗಾಡಿನ ಆಸ್ಪತ್ರೆಯಲ್ಲಿ ವೈದ್ಯರು ಸಿಗದೆ ಒದ್ದಾಡುವ ಜನರಿಗೆ ದಿನದ ಇಪ್ಪತ್ನಾಲ್ಕು ಗಂಟೆಯೂ ಲಭ್ಯವಿರುವ ಇಂತಹದ್ದೊಂದು ಎ.ಐ. ವೈದ್ಯರು ಸಿಕ್ಕರೆ ಹಳ್ಳಿಗಳಲ್ಲಿ ಆರೋಗ್ಯದ ವಿಷಯದಲ್ಲಿ ಎಂತಹ ಕ್ರಾಂತಿಯಾಗಬಹುದು?

ಕೇಳಲೇನೋ ಇದು ಸೈನ್ಸ್ ಫಿಕ್ಷನ್ ಕಾದಂಬರಿಯಂತೆ ಸೊಗಸಾಗಿ ಕೇಳಿಸುತ್ತದೆ. ಆದರೆ ಇಂತಹ ಕನಸನ್ನು ಅನುಷ್ಠಾನಗೊಳಿಸುವ ಸಾಮರ್ಥ್ಯದಲ್ಲಿ ಅಗಾಧ ಕೊರತೆ ಇರುವ ಭಾರತದಂತಹ ದೇಶದಲ್ಲಿ ಇದು ನನಸಾಗಲು ಸಾಧ್ಯವೇ ಅನ್ನುವ ಪ್ರಶ್ನೆ ಯಾರಲ್ಲೂ ಏಳಬಹುದು. ಅದು ಸಹಜವೂ ಹೌದು. ಆದರೆ ಎ.ಐ. ತಂತ್ರಜ್ಞಾನ ಕ್ಷೇತ್ರದಲ್ಲಿ ದಿನ ದಿನಕ್ಕೂ ಆಗುತ್ತಿರುವ ದಾಪುಗಾಲಿನ ಪ್ರಗತಿಯನ್ನು ಕಂಡಾಗ, ಈ ಕನಸುಗಳೆಲ್ಲ ಮುಂದಿನ ಐದರಿಂದ ಹತ್ತು ವರ್ಷಗಳಲ್ಲೇ ನಿಜವಾಗುವ ಎಲ್ಲ ಸಾಧ್ಯತೆಗಳು ದಟ್ಟವಾಗುತ್ತಿವೆ. ಇಪ್ಪತ್ತು ವರ್ಷದ ಹಿಂದೆ ಯಾರಾದರೂ ಕೈಯಲ್ಲಿನ ಮೊಬೈಲ್ ಫೋನ್‌ನಲ್ಲೇ ದಿನನಿತ್ಯದ ನೂರಾರು ಕೆಲಸಗಳನ್ನು ಮಾಡಿ ಮುಗಿಸಬಹುದು, ವಾಟ್ಸ್‌ಆ್ಯಪ್ ತರಹದ ಸಂಪರ್ಕ ಸಾಧನಗಳು ದೇಶದೇಶಗಳ ಚುನಾವಣೆಯ ದಿಕ್ಕನ್ನೇ ಬದಲಿಸಬಹುದು ಅಂತ ಹೇಳಿದ್ದರೆ ಯಾರೂ ಹೇಗೆ ನಂಬುತ್ತಿರಲಿಲ್ಲವೋ ಇದೂ ಕೊಂಚ ಹಾಗೆಯೇ ಅಂದುಕೊಳ್ಳಿ. ಆದರೆ ತಂತ್ರಜ್ಞಾನ ಕ್ಷೇತ್ರದಲ್ಲಿನ ಬೆಳವಣಿಗೆಯನ್ನು ಹತ್ತಿರದಿಂದ ಗಮನಿಸುತ್ತಿರುವವರಿಗೆ ಚೆನ್ನಾಗಿ ತಿಳಿದಿದೆ: ಬುದ್ಧಿವಂತಿಕೆಯು ಅಂಗಡಿಯಲ್ಲಿ ಕೊಳ್ಳುವ ಸರಕಿನಂತಾಗುವ ಕಾಲ ಬಹಳ ಹತ್ತಿರದಲ್ಲಿದೆ.

ಮೇಲಿನ ಎರಡು ಉದಾಹರಣೆಗಳನ್ನು ಕಂಡಾಗ ಯಾವ ಪ್ರಶ್ನೆಗಳು ಮೂಡಬಹುದು? ಇಂತಹ ತಂತ್ರಜ್ಞಾನವನ್ನು ವ್ಯಾಪಕವಾಗಿ ಅಳವಡಿಸಲು ಸಾಧ್ಯವೇ? ಅದಕ್ಕೆ ಬೇಕಾದ ಸಂಪನ್ಮೂಲ ನಮ್ಮಲ್ಲಿ ಇದೆಯೇ? ಒಂದೊಮ್ಮೆ ಅಳವಡಿಸಿಕೊಂಡರೂ ನಂತರ ನಮ್ಮ ಭ್ರಷ್ಟ ವ್ಯವಸ್ಥೆಯಲ್ಲಿ ಅದನ್ನು ನಿರ್ವಹಿಸುವುದು ಸಾಧ್ಯವೇ? ಕಲಿಕೆ ಮತ್ತು ಆರೋಗ್ಯದಂತಹ ಕ್ಷೇತ್ರಗಳನ್ನು ಒಂದು ತಂತ್ರಜ್ಞಾನದ ಕೈಯಲ್ಲಿ ಕೊಡುವುದು ತರವೇ? ಈ ತಂತ್ರಜ್ಞಾನ ತಪ್ಪೆಸಗಿದರೆ ಅದಕ್ಕೆ ಯಾರು ಹೊಣೆ? ಈ ತಂತ್ರಜ್ಞಾನದ ತರಬೇತಿಯಲ್ಲಿ ಒಳಹೊಕ್ಕಿರಬಹುದಾದ ಪೂರ್ವಗ್ರಹಗಳು ತೊಂದರೆ ತರುವುದಿಲ್ಲವೇ? ಈ ಕ್ಷೇತ್ರದಲ್ಲಿ ದುಡಿಯುತ್ತಿರುವವರ ಉದ್ಯೋಗಕ್ಕೆ ಇದು ಕುತ್ತು ತರಲಿದೆಯೇ? ಹೀಗೆ ಹಲವಾರು ಪ್ರಶ್ನೆಗಳು ಎದುರಾಗಬಹುದು. ಆದರೆ, ಸೂಕ್ಷ್ಮವಾಗಿ ಗಮನಿಸಿದರೆ, ಯಾವುದೇ ಹೊಸ ತಂತ್ರಜ್ಞಾನ ಅಳವಡಿಸಿಕೊಳ್ಳುವಾಗಲೂ ಮೂಡುವಂತಹ ಸಾಮಾನ್ಯ ಪ್ರಶ್ನೆಗಳೇ ಇವಾಗಿವೆ ಎಂಬುದು ತಿಳಿಯುತ್ತದೆ.

ಹಳ್ಳಿಯ ಸಮಾಜ ಮತ್ತು ಆರ್ಥಿಕತೆಯ ಪಾಲುದಾರರಾದ ಪಂಚಾಯಿತಿ ಸದಸ್ಯರು, ಆಶಾ ಕಾರ್ಯಕರ್ತೆಯರು, ಶಾಲಾ ಅಭಿವೃದ್ಧಿ ಸಮಿತಿಯ ಎಲ್ಲರನ್ನೂ ತೊಡಗಿಸಿಕೊಂಡು ಸೂಕ್ತವಾದ ನೀತಿ, ನಿಲುವುಗಳನ್ನು ರೂಪಿಸಿಕೊಳ್ಳುತ್ತ ಈ ತಂತ್ರಜ್ಞಾನವನ್ನು ನಮ್ಮ ಒಳಿತಿನ ಭಾಗವಾಗಿ ತಂದುಕೊಂಡರೆ, ಖಂಡಿತವಾಗಿಯೂ ಇದು ಇವತ್ತಿನ ಹಳ್ಳಿಗಾಡಿನ ಸ್ಥಿತಿಯಲ್ಲಿ ದೊಡ್ಡ ಬದಲಾವಣೆ ತರಬಹುದು. ಐದರಿಂದ ಹತ್ತು ವರ್ಷಗಳಲ್ಲಿ ಈ ತಂತ್ರಜ್ಞಾನ ಎಲ್ಲ ರೀತಿಯಲ್ಲೂ ವ್ಯಾಪಕವಾಗಿ, ಅಗ್ಗವಾಗಿ ಅನುಷ್ಠಾನಕ್ಕೆ ತರುವ ಮಟ್ಟಕ್ಕೆ ಹೋಗಲಿದೆ. ಅದಕ್ಕೆ ನಾವು ಸಜ್ಜಾಗಬೇಕಷ್ಟೆ. ಹೀಗೆ ಸಜ್ಜಾಗುವುದರ ಒಂದು ಮುಖ್ಯ ಆಯಾಮ ಭಾಷೆಯದ್ದು. ಈ ತಂತ್ರಜ್ಞಾನ ಎಷ್ಟೇ ಚೆನ್ನಾಗಿದ್ದರೂ ಅದು ಕೊನೆಯಲ್ಲಿ ಸಾಮಾನ್ಯ ಜನರೊಡನೆ ಅವರ ಭಾಷೆಯಲ್ಲಿ ಒಡನಾಡದಿದ್ದರೆ ಪರಿಣಾಮಕಾರಿಯಾಗದು. ಇಂತಹ ತಂತ್ರಜ್ಞಾನಕ್ಕೆ ಕನ್ನಡ ಸಜ್ಜಾಗಿದೆಯೇ?



ಎ.ಐ. ತಂತ್ರಜ್ಞಾನದ ಹಿಂದಿರುವುದು, ಡಿಜಿಟಲ್ ರೂಪದಲ್ಲಿರುವ ಅಗಾಧ ಮಾಹಿತಿಯ ಕಣಜವನ್ನು ನುಡಿಮಾದರಿ ಎನ್ನುವ ಒಂದು ಕಂಪ್ಯೂಟರ್ ವ್ಯವಸ್ಥೆಗೆ ಉಣಬಡಿಸಿ, ಸರಿಯಾದ ತರಬೇತಿಯ ಮೂಲಕ ಈ ಮಾಹಿತಿಯನ್ನು ತಿಳಿವಳಿಕೆಯ ರೂಪಕ್ಕೆ ಇಳಿಸುವ ಏರ್ಪಾಡು. ಮಾಹಿತಿ ಮತ್ತು ತರಬೇತಿ ಎಷ್ಟು ಗುಣಮಟ್ಟದ್ದಾಗಿರುತ್ತವೋ ಅಷ್ಟೇ ಗುಣಮಟ್ಟದಲ್ಲಿ ಈ ಎ.ಐ. ಕೆಲಸ ಮಾಡುತ್ತದೆ. ಸದ್ಯಕ್ಕೆ ಅಂತರ್ಜಾಲದಲ್ಲಿರುವ ಹೆಚ್ಚಿನ ಮಾಹಿತಿ ಇಂಗ್ಲಿಷ್ ಭಾಷೆಯಲ್ಲಿರುವ ಕಾರಣದಿಂದಾಗಿ ಈ ತಂತ್ರಜ್ಞಾನ ಇಂಗ್ಲಿಷ್ ಭಾಷೆಯಲ್ಲಿ ಹೆಚ್ಚು ಸಶಕ್ತವಾಗಿ ಕೆಲಸ ಮಾಡುತ್ತಿದೆ. ಹಾಗಿದ್ದರೆ ಮೇಲೆ ತಿಳಿಸಿದ ಎರಡು ಉದಾಹರಣೆಗಳು ನಿಜಕ್ಕೂ ಪರಿಣಾಮಕಾರಿಯಾಗಿ ಕನ್ನಡದಲ್ಲೂ ಕೆಲಸ ಮಾಡಬೇಕು ಎಂದರೆ ಏನಾಗಬೇಕು? ಉತ್ತರ: ಯಾವೆಲ್ಲ ತಿಳಿವಳಿಕೆಯನ್ನು ಇಂಗ್ಲಿಷ್ ಮೂಲಕ ಈ ನುಡಿಮಾದರಿಗಳಲ್ಲಿ ಕಟ್ಟಲಾಗಿದೆಯೋ ಅದೆಲ್ಲವನ್ನು ಕನ್ನಡದಲ್ಲೂ ಕಟ್ಟಲು ಸಾಧ್ಯವಾಗಬೇಕು.

ಸದ್ಯಕ್ಕೆ ಅಂತರ್ಜಾಲದಲ್ಲಿ ಸಿನಿಮಾ, ರಾಜಕೀಯ, ಕತೆ, ಕಾದಂಬರಿ, ಅಡುಗೆ, ಆಟೋಟದಂತಹ ಕೆಲ ಕ್ಷೇತ್ರಗಳ ಮಾಹಿತಿ ಕನ್ನಡದಲ್ಲಿದೆ. ಆದರೆ ಇಂದಿನ ಆರ್ಥಿಕತೆಯನ್ನು ರೂಪಿಸಿರುವ ವಿಜ್ಞಾನ, ತಂತ್ರಜ್ಞಾನ, ವ್ಯಾಪಾರ, ಕಾನೂನಿನಂತಹ ಕ್ಷೇತ್ರಗಳ ಮಾಹಿತಿ ಕನ್ನಡದಲ್ಲಿ ಬಹಳ ಕಡಿಮೆಯಿದೆ. ಸಹಜವಾಗಿಯೇ ಕನ್ನಡದಲ್ಲಿ ಎ.ಐ. ನುಡಿಮಾದರಿಯೊಂದನ್ನು ಕಟ್ಟಲು ಹೊರಟಾಗ, ಎಲ್ಲೆಲ್ಲಿ ಕನ್ನಡದಲ್ಲಿ ಕೊರತೆ ಇದೆಯೋ ಅಲ್ಲೆಲ್ಲ ಈ ನುಡಿಮಾದರಿಗಳು ಎಡವುತ್ತವೆ. ಈ ಕ್ಷೇತ್ರಗಳಲ್ಲಿ ಇಂಗ್ಲಿಷಿನಲ್ಲಿರುವ ಮಾಹಿತಿ ಅಥವಾ ತಿಳಿವನ್ನು ಅನುವಾದದ ಮೂಲಕ ಕನ್ನಡಕ್ಕೆ ತರುವ ಪ್ರಯತ್ನಗಳು ಆಗುತ್ತಿವೆ. ಆದರೂ ಅನುವಾದಕ್ಕೆ ಬೇಕಿರುವ ಪಾರಿಭಾಷಿಕ ಪದಗಳ ಕೊರತೆಯಿಂದಾಗಿ ಅವೆಲ್ಲವೂ ನಮ್ಮ ವಿಜ್ಞಾನ ಮತ್ತು ಗಣಿತದ ಪಠ್ಯಪುಸ್ತಕಗಳಲ್ಲಿ ಕಾಣುವಂತಹ, ಸಾಮಾನ್ಯವಾಗಿ ಯಾರಿಗೂ ಅರ್ಥವಾಗದ, ಕಷ್ಟದ ಪದಗಳನ್ನೇ ಎರವಲಾಗಿ ಪಡೆದು, ಕನ್ನಡದಲ್ಲಿ ಎ.ಐ. ಬಳಸುವಲ್ಲಿ ಹೊಸ ತೊಡಕುಗಳನ್ನು ಸೃಷ್ಟಿ ಮಾಡುತ್ತಿವೆ.

ಕನ್ನಡದಲ್ಲಿ ಸರಳವಾದ ಪಾರಿಭಾಷಿಕ ಪದಗಳನ್ನು ಕಟ್ಟಬೇಕು ಎಂದರೆ ಕನ್ನಡದ ನುಡಿ ಮತ್ತು ನುಡಿಯರಿಮೆಯ ಸ್ವರೂಪದ ಕುರಿತು ಸಂಶೋಧನೆ, ಹೊಸ ಪದಗಳನ್ನು ಕಟ್ಟುವಾಗ ಕನ್ನಡದ ಒಳನುಡಿಗಳನ್ನು ಹೇಗೆ ತೊಡಗಿಸಿಕೊಳ್ಳುವುದು ಅನ್ನುವ ಬಗ್ಗೆ ಅರಕೆ, ಪದ ಕಟ್ಟಣೆಯತ್ತ ಸಮುದಾಯದ ಪಾಲ್ಗೊಳ್ಳುವಿಕೆಯ ಯೋಜನೆಗಳು ಸೇರಿದಂತೆ ಹತ್ತಾರು ಬಗೆಯ ಕೆಲಸಗಳು ಆಗಬೇಕಿವೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯವು ತಂತ್ರಜ್ಞಾನವನ್ನು ಕನ್ನಡದಲ್ಲಿ ಕಟ್ಟುವತ್ತಲಿನ ಕೆಲಸಗಳಿಗೂ ಒಂದಿಷ್ಟು ಗಮನ ಹರಿಸಬೇಕು. ಎಷ್ಟು ಬೇಗ ಸರಳವಾದ ಕನ್ನಡದಲ್ಲಿ ಜ್ಞಾನ- ವಿಜ್ಞಾನದ ಎಲ್ಲ ಕವಲುಗಳನ್ನು ಕಟ್ಟುತ್ತ ಅಂತರ್ಜಾಲದಲ್ಲಿ ಅದನ್ನು ಪಸರಿಸುತ್ತೇವೆಯೋ ಅಷ್ಟೇ ಬೇಗ ಎ.ಐ. ನುಡಿಮಾದರಿಗಳು ಕನ್ನಡಕ್ಕೆ ಸಜ್ಜಾಗುವುದರ ಜೊತೆಗೆ ಕಲಿಕೆ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಮೇಲೆ ಬಣ್ಣಿಸಿದ ಕನಸನ್ನು ನನಸಾಗಿಸಬಹುದು.

ಚುರುಮುರಿ



ಹೊಟ್ಟೆಪಾಡು

• ಮಣ್ಣೆ ರಾಜು

ಸ್ಥೂಲಕಾಯದ ಸಿಬ್ಬಂದಿಯಿಂದ ಕಂಪನಿಯ ಆರ್ಥಿಕ ಪರಿಸ್ಥಿತಿ ಮೇಲೆ ಪ್ರತಿಕೂಲ ಪರಿಣಾಮ ಆಗುತ್ತದೆ ಎಂದು ಆಡಳಿತ ಮಂಡಳಿ ಭಾವಿಸಿತ್ತು. ಕಡ್ಡಾಯವಾಗಿ ಬೊಜ್ಜು ಕರಗಿಸಿಕೊಳ್ಳಲು ಸಿಬ್ಬಂದಿಗೆ ಸೂಚಿಸಿತ್ತು. ಕರಗಿಸಿಕೊಂಡವರಿಗೆ ಪ್ರಮೋಷನ್ ಆಫರ್ ನೀಡಿತ್ತು.

'ಕಂಪ್ಯೂಟರ್ ಮುಂದೆ ಕುಳಿತು ಕೆಲ್ಸ ಮಾಡಿದ್ರೆ ಹೊಟ್ಟೆ ಬೆಳೆಯುತ್ತೆ ಹೊರತು ಬುದ್ಧಿ ಬೆಳೆಯುವುದಿಲ್ಲ. ಬುದ್ಧಿವಂತಿಕೆಯಿಂದಂತೂ ಸಾಧ್ಯವಿಲ್ಲ, ಬೊಜ್ಜು ಕರಗಿಸಿಯಾದರೂ ಪ್ರಮೋಷನ್ ಪಡೆಯಿರಿ' ಸುಮಿ ಗಂಡನಿಗೆ ಹೇಳಿದಳು.

'ಕೆಲಸದ ಒತ್ತಡದಿಂದಲೂ ಬೊಜ್ಜು ಬೆಳೆಯುವುದಂತೆ. ವಿಧಾನಸೌಧದಲ್ಲಿ ಶಾಸಕರು ಸಣ್ಣ ನಿದ್ರೆ ತೆಗೆಯಲು ರಿಕ್ಲೈನರ್ ಚೇರ್ ಇರುವಂತೆ ಆಫೀಸಿನಲ್ಲೂ ಅಂಥಾ ಚೇರ್ ಇದ್ದರೆ ನಾವೂ ವಿಶ್ರಾಂತಿ ಪಡೆದು ಆರೋಗ್ಯ ಕಾಪಾಡಿಕೊಳ್ಳಬಹುದಿತ್ತು' ಅಂದ ಶಂಕ್ರಿ.

'ಸ್ಥೂಲಕಾಯ ಜಾಗತಿಕ ಸಮಸ್ಯೆಯಾಗುತ್ತಿದೆಯಂತೆ. ಬಳಸುವ ಅಡುಗೆ ಎಣ್ಣೆಯಿಂದ ಸ್ಥೂಲಕಾಯ ಬೆಳೆದು ಆರೋಗ್ಯ ಸಮಸ್ಯೆಗಳಿಗೂ ಕಾರಣವಾಗುತ್ತದೆ ಅಂತ ಪ್ರಧಾನಿ ಮೋದಿಯೂ ಹೇಳಿದ್ದಾರೆ'.

'ಸ್ಥೂಲಕಾಯ ತಡೆಗೆ ಸರ್ಕಾರ ಯೋಜನೆ ರೂಪಿಸಬಹುದು. ಬೊಜ್ಜಿಗೆ ವಿಮಾ ಸೌಲಭ್ಯ, ಅದನ್ನು ಕರಗಿಸಲು ಚಿಕಿತ್ಸಾ ವೆಚ್ಚ ಕೊಡಬಹುದು'.

ಸರ್ಕಾರವನ್ನು ನಂಬಿಕೊಂಡ್ರೆ ಆಗೋದಿಲ್ಲ ಎಂದು ಸುಮಿ ನಿತ್ಯ ವಾಕಿಂಗ್, ರನಿಂಗ್, ಸ್ಕಿಪಿಂಗ್ ಮಾಡಿ ಸ್ಲಿಮ್ ಆಗಲು ಗಂಡನಿಗೆ ತಾಕೀತು ಮಾಡಿದಳು. ಶಂಕ್ರಿ ದಿನಾ ಬೆವರು ಹರಿಸಿದ. ಆಹಾರ ಪಥ್ಯ ಅನುಸರಿಸಿದ. ಡೊಳ್ಳು ಹೊಟ್ಟೆ ಜಗ್ಗಲಿಲ್ಲ.

ಹೊಟ್ಟೆ ತಜ್ಞರ ಬಳಿ ಕರೆದೊಯ್ದು ಗಂಡನ ಹೊಟ್ಟೆ ತೋರಿಸಿ ಮದ್ದು ಕೊಡಿಸಿದಳು. ಯಾವ ಕಷಾಯ, ಕಸರತ್ತಿಗೂ ಗಂಡನ ಹೊಟ್ಟೆ ಕರಗಲಿಲ್ಲ. ಆದರೆ ಶಂಕ್ರಿಯ ಮನಸ್ಸು ಕರಗಿತು!

'ಒಡಹುಟ್ಟಿದ ಹೊಟ್ಟೆ, ನನ್ನನ್ನೇ ನಂಬಿಕೊಂಡಿರುವ ಹೊಟ್ಟೆಗೆ ನಾನಲ್ಲದೆ ಇನ್ಯಾರು ಗತಿ? ಬಂಧುಬಳಗ ದೂರವಾದರೂ ಕೊನೆವರೆಗೂ ಜೊತೆ ಬಾಳುವ ಹೊಟ್ಟೆಯನ್ನು ಕರಗಿಸದೆ ಕಾಪಾಡಿಕೊಳ್ಳಬೇಕು' ಎಂದು ಶಂಕ್ರಿ ಸಂಕಲ್ಪ ಮಾಡಿದ.

ದಿನದ ಟ್ವೀಟ್

ಇಬ್ಬಗೆಯ ನಿಲುವೇಕೆ?



ಕಳೆದ 75 ವರ್ಷಗಳಲ್ಲಿ ಕೇಂದ್ರ ಪಟ್ಟಿ ಮತ್ತು ಜಂಟಿ ಪಟ್ಟಿಯಲ್ಲಿನ ಅಂಶಗಳು ಹೆಚ್ಚಾಗುತ್ತಲೇ ಇವೆ. ಈ ಮೂಲಕ 140 ಕೋಟಿ ಜನರಿಗೆ ಬೇಕಾದ ಕಾನೂನುಗಳನ್ನು ದೆಹಲಿಯಲ್ಲಿ ರೂಪಿಸಲಾಗುತ್ತಿದೆ... ಇಂಡಿಯಾದಲ್ಲಿ ಅಧಿಕಾರ ಕೇಂದ್ರೀಕರಣಕ್ಕೆ ಒತ್ತು ನೀಡಲಾಗುತ್ತಿದೆ. ಅಧಿಕಾರ ಕೇಂದ್ರೀಕರಣದ ಬಗ್ಗೆ ಕರ್ನಾಟಕದ ರಾಜಕಾರಣಿಗಳು ಮಾತನಾಡುವುದು ತೀರಾ ಕಡಿಮೆ. ಇಂತಹ ರಾಜಕಾರಣಿಗಳು ಆಡಳಿತವನ್ನು ಸುಲಭ ಮಾಡುವುದಕ್ಕೆ ಇಂದು ಬೆಂಗಳೂರು ಮಹಾನಗರ ಪಾಲಿಕೆಯನ್ನು ಒಡೆಯಲು ಮುಂದಾಗುತ್ತಿದ್ದಾರೆ...

ಅರುಣ್ ಜಾವಗಲ್, ಕನ್ನಡಪರ ಕಾರ್ಯಕರ್ತ

ಸುಳ್ಳು ಮಾಹಿತಿ ಗುರುತಿಸೋಣ



ಸೋಷಿಯಲ್ ಮೀಡಿಯಾದಲ್ಲಿ ಕೆಲವರು ತಮಿಳುನಾಡಿನ ಬಗ್ಗೆ, ಕೆಲವರು ಕೇರಳದ ಬಗ್ಗೆ, ಕೆಲವರು ಉತ್ತರಪ್ರದೇಶ, ಗುಜರಾತಿನ ಬಗ್ಗೆ ಸಕಾರಾತ್ಮಕವಾದ ಸಾಕಷ್ಟು ಸುಳ್ಳು ಮಾಹಿತಿಗಳನ್ನು ಹಂಚುತ್ತಾರೆ. ಇವರಿಗೆಲ್ಲಾ ಸರ್ಕಾರಗಳ ಜೊತೆ ನಂಟು ಅಥವಾ ರಿಯಲ್ ಎಸ್ಟೇಟ್‌ನಲ್ಲಿ ಯಾವುದಾದರೂ ಬ್ಯುಸಿನೆಸ್ ಇರಬಹುದು. ನಾಡಿನ ಏಳಿಗೆ ಇಂತಹ ಪಿ.ಆರ್.ಗಳನ್ನೂ ಹೊರತುಪಡಿಸಿ ಆಗಬೇಕು. ಕನ್ನಡ ನಾಡಿನ ಬಗ್ಗೆ ಅಭಿಮಾನ, ಪ್ರೀತಿ ಎಲ್ಲವೂ ಇರುವ ನಾವು, ಎಲ್ಲೆಲ್ಲಿ ಎಡುವುತ್ತಿದ್ದೇವೋ ಅಲ್ಲಿ ಅದನ್ನು ಖಂಡಿಸಿ ಸರಿಪಡಿಸುವ ಕಡೆ ಗಮನಹರಿಸಿದರೆ ಒಳ್ಳೆಯದು. ಕೇವಲ ಹೊಗಳುಭಟ್ಟರಾಗಿ ಸಾಧಿಸುವುದೇನೂ ಇಲ್ಲ.

ಅಮರನಾಥ್ ಶಿವಶಂಕರ್, ಐ.ಟಿ. ಉದ್ಯೋಗಿ

ಕಿಡಿನುಡಿ

ಬಹುತೇಕ ಅಧಿಕಾರಿಗಳು ತಮಗೆ ಒದಗಿಸಿರುವ ವಾಹನಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಾರೆ. ತಮಗೆ ಮಂಜೂರಾಗಿರುವ ವಾಹನಗಳಲ್ಲಿ ತಮ್ಮ ಮಕ್ಕಳನ್ನು ಶಾಲಾ ಕಾಲೇಜುಗಳಿಗೆ ಬಿಡಲು ಅಥವಾ ಕುಟುಂಬದ ಸಮಾರಂಭಗಳಲ್ಲಿ ಪಾಲ್ಗೊಳ್ಳಲು ಬಳಸಿಕೊಳ್ಳುವುದನ್ನು ನೀವು ನೋಡಬಹುದು. ಮಾಧ್ಯಮಗಳು ಈ ಬಗ್ಗೆ ರಿಯಾಲಿಟಿ ಚೆಕ್ ಮಾಡಬೇಕು.

ಶಶಿಧರ್ ಎಸ್.

25 ವರ್ಷಗಳ ಹಿಂದೆ

ಭಾನುವಾರ, 12-3-2000

• ಮತ್ತೆ ರಾಬ್ಡಿ ದೇವಿ ಮುಖ್ಯಮಂತ್ರಿ

ಪಟ್ನಾ, ಮಾರ್ಚ್ 11– ರಾಬ್ಡಿ ದೇವಿ ಅವರು ಬಿಹಾರದ ಮುಖ್ಯಮಂತ್ರಿಯಾಗಿ ಇಂದು ಪ್ರಮಾಣವಚನ ಸ್ವೀಕರಿಸಿದರು.

ಸರ್ಕಾರ ರಚಿಸುವಂತೆ ಇದಕ್ಕೆ ಮುನ್ನ ಇಂದು ಮಧ್ಯಾಹ್ನ ರಾಜ್ಯಪಾಲ ವಿ.ಸಿ. ಪಾಂಡೆ ಅವರು ರಾಬ್ಡಿ ದೇವಿ ಅವರಿಗೆ ಆಹ್ವಾನ ನೀಡಿದರು. ಆರ್‌ಜೆಡಿ ನಾಯಕರು ಹಾಜರಿದ್ದರೆ, ಎನ್‌ಡಿಎ ನಾಯಕರು ಸಮಾರಂಭವನ್ನು ಬಹಿಷ್ಕರಿಸಿದರು.

10 ದಿನಗಳ ಒಳಗೆ ವಿಧಾನಸಭೆಯಲ್ಲಿ ಬಹುಮತ ಸಾಬೀತುಪಡಿಸುವಂತೆ ರಾಬ್ಡಿ ದೇವಿ ಅವರಿಗೆ ರಾಜ್ಯಪಾಲರು ಸೂಚಿಸಿದ್ದಾರೆ. ರಾಬ್ಡಿ ದೇವಿ ಅವರು 8 ದಿನಗಳ ಬಿಡುವಿನ ನಂತರ ಮತ್ತೆ ಮುಖ್ಯಮಂತ್ರಿ ಆಗಿದ್ದಾರೆ.

ಗೊತ್ತಿರುವ ಆದಾಯಕ್ಕಿಂತ ಹೆಚ್ಚಿನ ಆಸ್ತಿಪಾಸ್ತಿ ಸಂಪಾದಿಸಿದ್ದಾರೆ ಎಂಬ ಆರೋಪದಲ್ಲಿ ಸಿಬಿಐ ರಾಬ್ಡಿ ದೇವಿ ಹಾಗೂ ಲಾಲೂ ಪ್ರಸಾದ್ ಇಬ್ಬರ ಮೇಲೂ ಖಟ್ಲೆ ಹೂಡಲು ರಾಜ್ಯಪಾಲರ ಅನುಮತಿಯನ್ನು ಕೇಳಿದೆ. ಹೀಗಾಗಿ, ಇವರಿಬ್ಬರೂ ಮುಖ್ಯಮಂತ್ರಿ ಪದವಿಗೆ ಅನರ್ಹರು ಎಂದು ವಾದಿಸಿ ಎನ್‌ಡಿಎ, ರಾಜ್ಯಪಾಲರಿಗೆ ಪತ್ರ ಬರೆದು ರಾಬ್ಡಿ ದೇವಿಗೆ ನೀಡಿರುವ ಆಹ್ವಾನವನ್ನು ಖಂಡಿಸಿದೆ.

• ಕೇಬಲ್ ಟಿ.ವಿ.ಗೆ ನೀತಿಸಂಹಿತೆ ಪರಿಶೀಲನೆಯಲ್ಲಿ

ನವದೆಹಲಿ, ಮಾರ್ಚ್ 11 (ಪಿಟಿಐ)– ಕೇಬಲ್ ಟೆಲಿವಿಷನ್‌ಗಳಿಗೆ ನೀತಿಸಂಹಿತೆಯೊಂದನ್ನು ಜಾರಿಗೊಳಿಸುವ ಪ್ರಸ್ತಾವವನ್ನು ಸರ್ಕಾರ ಪರಿಶೀಲಿಸುತ್ತಿದೆ ಎಂದು ಸಮಾಚಾರ ಮತ್ತು ಪ್ರಸಾರ ಖಾತೆಯ ಸಚಿವ ಅರುಣ್ ಜೇಟ್ಲಿ ಇಂದು ಇಲ್ಲಿ ಹೇಳಿದರು.

ಕೇಬಲ್ ಟಿ.ವಿ.ಗಳು ಪ್ರಸಾರ ಮಾಡುವ ಕಾರ್ಯಕ್ರಮಗಳು ಒಂದು ನೀತಿಸಂಹಿತೆಯ ಚೌಕಟ್ಟಿನಲ್ಲಿ ಇರುವಂತೆ ನೋಡಿಕೊಳ್ಳುವುದು ಮತ್ತು ಮಹಿಳೆಯರನ್ನು ಕೀಳಾಗಿ ಬಿಂಬಿಸುವಂಥ ಕಾರ್ಯಕ್ರಮಗಳನ್ನು ಪ್ರಸಾರ ಮಾಡದಂತೆ ನಿರ್ಬಂಧಿಸುವುದು ಇದರ ಉದ್ದೇಶ ಎಂದು ಅವರು ಹೇಳಿದರು.

ಸಂಗತ

ಶಾಲೆ ಆಗಲಿ ಮೌಲ್ಯಗಳ ಸೆಲೆ

ಪಠ್ಯಪುಸ್ತಕಗಳಲ್ಲಿ ಮಾನವೀಯ ಮೌಲ್ಯಗಳನ್ನು ಪರಿಣಾಮಕಾರಿಯಾಗಿ ಅಂತರ್ಗತವಾಗಿಸಿ ಮಕ್ಕಳಿಗೆ ಕಲಿಸಬೇಕಾದ ತುರ್ತು ಅಗತ್ಯ ಇದೆ

• ಎಚ್.ಬಿ.ಚಂದ್ರಶೇಖರ್

ಇಂದಿನ ಸಮಕಾಲೀನ ಸಮಾಜದಲ್ಲಿ ಮಾನವೀಯ ಮೌಲ್ಯಗಳು ಬತ್ತಿ ಹೋಗುತ್ತಿದ್ದು, ಶಾಲೆಗಳಲ್ಲಿ ಮಕ್ಕಳಿಗೆ ಅವುಗಳನ್ನು ಕಲಿಸಬೇಕಾದ ತುರ್ತಿದೆ ಎಂದು ಸಾಮಾಜಿಕ ಕಳಕಳಿಯುಳ್ಳ ಹಿರಿಯರೊಬ್ಬರು ಹೇಳುತ್ತಿದ್ದರು. ವಿಜ್ಞಾನ, ಗಣಿತ, ಸಮಾಜವಿಜ್ಞಾನ, ಭಾಷಾ ವಿಷಯಗಳ ರೀತಿಯಲ್ಲಿ 'ಮಾನವೀಯ ಮೌಲ್ಯ' ಎಂಬ ವಿಷಯದ ಕಲಿಕೆಯನ್ನೂ ಕಡ್ಡಾಯ ಮಾಡಬೇಕು ಎಂಬುದು ಅವರ ಅಭಿಪ್ರಾಯವಾಗಿತ್ತು.

ಪರಿಸರ ನಾಶ, ವಾಯು–ಜಲಮಾಲಿನ್ಯ, ಹವಾಮಾನ ವೈಪರೀತ್ಯದಂತಹ ಪ್ರಪಂಚದ ಅನೇಕ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಎಂದರೆ, ಅವುಗಳನ್ನು ವಿದ್ಯಾರ್ಥಿಗಳು ಕಲಿಯುವ ವಿಷಯಗಳನ್ನಾಗಿ ಅಳವಡಿಸುವುದು ಎಂಬ ಚಿಂತನೆಯನ್ನು ಕೆಲವರು ಹೊಂದಿದ್ದಾರೆ. ಸಾಮಾಜಿಕ ಹಿತಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ಇರಬೇಕು ಎಂಬ ಕಾರಣದಿಂದ, ಅದಕ್ಕೆ ಪೂರಕವಾದ ಸಂಗತಿಗಳನ್ನು ಪಠ್ಯಪುಸ್ತಕಗಳಲ್ಲಿ ಹೊಸದಾಗಿ ಅಳವಡಿಸಬೇಕು ಎಂಬ ಅಭಿಪ್ರಾಯ ಮಾಧ್ಯಮಗಳಲ್ಲಿ ಆಗಾಗ್ಗೆ ಪ್ರಕಟವಾಗುತ್ತಿರುತ್ತದೆ. ಇಂತಹ ಒತ್ತಡಗಳ ಪರಿಣಾಮವೋ ಎಂಬಂತೆ ನಮ್ಮ ಶಾಲಾ ಪಠ್ಯಪುಸ್ತಕಗಳು ವರ್ಷದಿಂದ ವರ್ಷಕ್ಕೆ ತಮ್ಮ ಗಾತ್ರವನ್ನು ಹಿಗ್ಗಿಸಿಕೊಳ್ಳುತ್ತಲೇ ಇವೆ.

ಪಠ್ಯಪುಸ್ತಕದಲ್ಲಿ ಈಗಾಗಲೇ ಪಾಠಗಳಾಗಿ ಅಳವಡಿಕೆಯಾಗಿರುವ ವಿಷಯಗಳನ್ನು ಮಕ್ಕಳು ಪರೀಕ್ಷೆಗಾಗಿ ಓದಿ, ನಂತರ ಮರೆತು ಹಗುರಾಗಿ, ಮುಂದಿನ ವರ್ಷದ ಪಾಠಗಳನ್ನು 'ಕಲಿಯಲು' ಮತ್ತೆ ಸಿದ್ಧರಾಗುತ್ತಾರೆ. ಪಠ್ಯಪುಸ್ತಕಗಳಲ್ಲಿ ಇರುವ ಇಂತಹ ಹೆಚ್ಚಿನ ವಿಷಯಗಳು 'ಕಲಿಕೆ'ಯಾಗಿ ಎಷ್ಟರಮಟ್ಟಿಗೆ ಮಾರ್ಪಡುತ್ತಿವೆ ಎಂಬುದು ಚಿಂತನಾರ್ಹ ಮತ್ತು ಶೋಧಿಸಬೇಕಾದ ಸಂಗತಿಯಾಗಿದೆ. ಶಿಕ್ಷಣವು ಮಾಹಿತಿ ಸಂಗ್ರಹಕ್ಕಷ್ಟೇ ಒತ್ತು ನೀಡದೆ, ಮಾನವೀಯ ಮೌಲ್ಯಗಳಿಗೆ ಪ್ರಾಮುಖ್ಯ ನೀಡಿ ಉತ್ತಮ ವ್ಯಕ್ತಿತ್ವ ರೂಪಿಸುವಂತೆ ಇರಬೇಕು ಎಂದು ಸ್ವಾಮಿ ವಿವೇಕಾನಂದರು ಕರೆ ನೀಡಿದ್ದಾರೆ. ಶಾಲಾ ಪಠ್ಯಪುಸ್ತಕಗಳಲ್ಲಿ ಮಾನವೀಯ ಮೌಲ್ಯಗಳನ್ನು ಪರಿಣಾಮಕಾರಿಯಾಗಿ ಅಂತರ್ಗತವಾಗಿಸಿ ಕಲಿಸುವುದು ಉತ್ತಮವಾದ ಕ್ರಮ.

ಶಾಲೆಯು ಮಾನವೀಯ ಮೌಲ್ಯಗಳ ನೆಲೆ, ಸೆಲೆಯಾಗಿ ಕಾರ್ಯನಿರ್ವಹಿಸಬೇಕು. ತರಗತಿ ಬೋಧನೆ, ಶಾಲಾ ಪ್ರಾರ್ಥನಾ ಸಮಯ, ಪ್ರಯೋಗಾಲಯ, ಗ್ರಂಥಾಲಯ, ಆಟದ ಮೈದಾನದಲ್ಲಿ ನಡೆಯುವ ಎಲ್ಲಾ ಶೈಕ್ಷಣಿಕ ಚಟುವಟಿಕೆಗಳಲ್ಲಿ ಮಾನವೀಯ ಮೌಲ್ಯಗಳು ಬೆಸೆಯುವಂತೆ ಯೋಜನೆ ರೂಪಿಸಲು ಅವಕಾಶವಿದೆ. ಈ ದಿಸೆಯಲ್ಲಿ ತಮ್ಮದೇ ಆದ ವಿಧಾನದಲ್ಲಿ ಅನೇಕ ಶಿಕ್ಷಕರು ಈಗಾಗಲೇ ಕಾರ್ಯನಿರ್ವಹಿಸುತ್ತಿದ್ದಾರೆ.

ಪಾಠ ಬೋಧನೆ, ನೀತಿ ನಿರೂಪಣೆಗಳ ಮೂಲಕವಷ್ಟೇ ಮೌಲ್ಯಗಳನ್ನು ಬೆಳೆಸುವ ಕಾರ್ಯವು ಗಿಡಗಳ ಬುಡಕ್ಕೆ ನೀರೆರೆಯದೆ ಎಲೆಗಳಿಗೆ ನೀರು ಸಿಂಪಡಿಸಿದಂತೆ ಆಗುತ್ತದೆ. ಮೌಲ್ಯಗಳ ಬಗ್ಗೆ ಶಿಕ್ಷಕರು ಮಾಡಿದ ಪಾಠದಿಂದ ವಿದ್ಯಾರ್ಥಿಗಳು ಕಿರು ಪರೀಕ್ಷೆ, ಪರೀಕ್ಷೆಯಲ್ಲಿ ಚೆಂದದ ಉತ್ತರ ಬರೆದು, ಹೆಚ್ಚಿನ ಅಂಕ ಗಳಿಸಬಹುದಷ್ಟೆ. ಆದರೆ ಮೌಲ್ಯಗಳನ್ನು ಮೈಗೂಡಿಸಿಕೊಳ್ಳಲು ವ್ಯಕ್ತಿಯ ಸುತ್ತಲಿನ ವಾತಾವರಣ ಪೂರಕ ಹಾಗೂ ಪ್ರೇರಕವಾಗಿ ಇರುವುದು ಅವಶ್ಯ.

ಶಿಕ್ಷಕರ ಜೊತೆ ವಿದ್ಯಾರ್ಥಿಗಳ ಒಡನಾಟ ನಿರಂತರವಾಗಿರುತ್ತದೆ. ಪ್ರೀತಿ, ಶಾಂತಿ, ಅಹಿಂಸೆ, ಪ್ರಾಮಾಣಿಕತೆ, ನ್ಯಾಯ, ಸಮಾನತೆ, ಕೃತಜ್ಞತೆ, ಅನುಭೂತಿ, ದಯೆ, ನ್ಯಾಯ, ಕರುಣೆ, ಸೂಕ್ಷ್ಮ ಮನೋಭಾವ, ಸಂವೇದನೆ, ಔದಾರ್ಯ, ಸಹಿಷ್ಣುತೆ, ಏಕತೆ, ಸಮಗ್ರತೆಯಂತಹ ಮೌಲ್ಯಗಳು ತಮ್ಮ ಜೊತೆಗಿನ ಒಡನಾಟದ ಸಂದರ್ಭಗಳಲ್ಲಿ ಹಾಗೂ ಇತರ ಎಲ್ಲ ಪ್ರಕ್ರಿಯೆಗಳಲ್ಲಿ ಮೇಳೈಸುವಂತೆ ಶಿಕ್ಷಕರು ಅಗತ್ಯವಾದ ಚಟುವಟಿಕೆಗಳನ್ನು ರೂಪಿಸಲು ಸಾಧ್ಯವಿದೆ. ಮುಖ್ಯ ಶಿಕ್ಷಕರು, ಶಿಕ್ಷಕರು ಹಾಗೂ ಶಾಲೆಯ ಎಲ್ಲ ಸಿಬ್ಬಂದಿಯ ವ್ಯಕ್ತಿತ್ವವು ವಿದ್ಯಾರ್ಥಿಗಳ ಮೇಲೆ ಗಾಢ ಪರಿಣಾಮ ಬೀರುತ್ತದೆ. ಹೀಗಾಗಿ, ಅವರೆಲ್ಲರೂ ತಮ್ಮ ನಡವಳಿಕೆಗಳ ಬಗ್ಗೆ ಬಹಳಷ್ಟು ಎಚ್ಚರ ವಹಿಸಬೇಕಾದುದು ಅಗತ್ಯ.



ಮಾನವೀಯ ಮೌಲ್ಯಗಳಿಗೆ ಸವಾಲೆಸೆಯುವಂತಹ, ಅದಕ್ಕೆ ಧಕ್ಕೆಯಾಗುವಂತಹ ಪ್ರಕರಣಗಳು ಸಮಾಜದಲ್ಲಿ ಆಗಾಗ್ಗೆ ಸಂಭವಿಸುತ್ತಲೇ ಇರುತ್ತವೆ. ಇಂತಹ ವಿದ್ಯಮಾನಗಳು ಮಕ್ಕಳ ಗಮನಕ್ಕೆ ಬಂದಾಗ ಅವರಲ್ಲಿ ಸಹಜವಾಗಿ ಮಾನಸಿಕ ಸಂಘರ್ಷ, ಸಂದಿಗ್ಧ, ಗೊಂದಲ ಉಂಟಾಗುತ್ತವೆ. ಆಗ ಶಿಕ್ಷಕರು ಅವರೊಂದಿಗೆ ಚರ್ಚಿಸುವ ಮೂಲಕ ಮಾನವೀಯ ಮೌಲ್ಯಗಳ ಪ್ರಾಮುಖ್ಯವನ್ನು ಮುನ್ನೆಲೆಗೆ ತರಬಹುದು. ಮಾನವೀಯ ಮೌಲ್ಯಗಳು ಏಕೆ ಮತ್ತು ಹೇಗೆ ಅಗತ್ಯ ಎಂಬ ಬಗೆಗಿನ ಚಿಂತನೆಯನ್ನು ಪ್ರಸಂಗ, ಪಾತ್ರಾಭಿನಯದ ಮೂಲಕ ಮಕ್ಕಳಲ್ಲಿ ಹುಟ್ಟುಹಾಕಬೇಕು.

ಶಾಲೆ ಹಾಗೂ ಶಾಲೆಯಾಚೆ ನಡೆಯುವ ಎಷ್ಟೋ ಪ್ರಸಂಗಗಳಲ್ಲಿ ವಿದ್ಯಾರ್ಥಿಗಳು, ಕುಟುಂಬ ಸದಸ್ಯರು ಹಾಗೂ ಶಿಕ್ಷಕರು ಸದ್ವರ್ತನೆಯನ್ನು ತೋರಿರುತ್ತಾರೆ. ಇಂತಹ ಪ್ರಸಂಗಗಳನ್ನು ಉದಾಹರಣೆಯಾಗಿ ಪ್ರಸ್ತಾಪಿಸಿ, ಮಾನವೀಯ ಮೌಲ್ಯಗಳು ಹೇಗೆ ನಮ್ಮ ಸುತ್ತಲಿನ ಪರಿಸರದಲ್ಲಿ ಸಕ್ರಿಯವಾಗಿವೆ ಮತ್ತು ಜೀವಂತವಾಗಿವೆ ಎಂಬುದನ್ನು ವಿವರಿಸಿ, ಚರ್ಚಿಸುವುದು ಪರಿಣಾಮಕಾರಿ ಆಗಬಲ್ಲದು.

ತಂತ್ರಜ್ಞಾನದ ಅತಿಬಳಕೆಯು ಮಾನವನ ಸೂಕ್ಷ್ಮ ಭಾವನೆ ಹಾಗೂ ಸಂವೇದನೆಗಳನ್ನು ಕುಗ್ಗಿಸಬಲ್ಲದು. ಇದಕ್ಕೆ ಮಕ್ಕಳೂ ಹೊರತಲ್ಲ. ತಂತ್ರಜ್ಞಾನದ ಆಚೆ ನೇರ ಒಡನಾಟ, ಸಂವಹನಗಳಿಗೆ ಮಕ್ಕಳು ತೆರೆದುಕೊಳ್ಳುವ ಅವಕಾಶಗಳನ್ನು ಸೃಷ್ಟಿಸಿ, ಅವುಗಳ ಮೂಲಕ ಮಾನವೀಯ ಮೌಲ್ಯಗಳ ಪ್ರಾಮುಖ್ಯವನ್ನು ಅವರಿಗೆ ಮನಗಾಣಿಸಬೇಕು. ಅಂತಹ ಮೌಲ್ಯಗಳನ್ನು ಮೈಗೂಡಿಸಿಕೊಳ್ಳುವ ದಿಸೆಯಲ್ಲಿ ಶಾಲಾ ಚಟುವಟಿಕೆಗಳನ್ನು ಸಕ್ರಿಯವಾಗಿಸುವ ಅಗತ್ಯ ಇದೆ.

ವಾಚಕರ ವಾಣಿ

ಹೈಕಮಾಂಡ್ ಓಲೈಸುವ ಚಾಳಿ

ಕರ್ನಾಟಕದ ಕಾಂಗ್ರೆಸ್ಸಿಗರು ಬೆಂಗಳೂರು ನಗರ ವಿಶ್ವವಿದ್ಯಾಲಯಕ್ಕೆ ಮನಮೋಹನ ಸಿಂಗ್ ಅವರ ಹೆಸರಿಡಲು ಮುಂದಾಗಿದ್ದಾರೆ. ಇವರಿಗೆ ನಮ್ಮ ನಾಡಿನಲ್ಲಿ ಎಲ್ಲೆಡೆ ಹೆಸರಿಡಲು ನೆಹರೂ, ಇಂದಿರಾ, ರಾಜೀವ್ ಮತ್ತು ಕನ್ನಡೇತರರೇ ಬೇಕು. ಇನ್ನು ಬಿಜೆಪಿಯವರು ಸಹ ತಮ್ಮ ಅಧಿಕಾರಾವಧಿಯಲ್ಲಿ, ಜಿದ್ದಿಗೆ ಬಿದ್ದವರಂತೆ ವಾಜಪೇಯಿ, ಶ್ಯಾಮ ಪ್ರಸಾದ್ ಮುಖರ್ಜಿ, ಸಾವರ್ಕರ್, ದೀನ ದಯಾಳ್ ಉಪಾಧ್ಯಾಯ ಅವರ ಹೆಸರಿಡುವ ಮೂಲಕ ಹೈಕಮಾಂಡ್ ಅನ್ನು ಓಲೈಸುವ ಚಾಳಿಯನ್ನು ಸಾಬೀತು ಮಾಡಿದ್ದಾರೆ.

ತಮ್ಮ ಕೆಲಸಗಳ ಮೂಲಕ ಜನಾನುರಾಗಿಗಳಾಗಿ ಕನ್ನಡ ನಾಡಿನ ಏಳಿಗೆಗೆ ದುಡಿದ ಕರ್ನಾಟಕದ ಸಾಧಕರ ನೆನಪು ಇಲ್ಲಿನ ಯೋಜನೆಗಳಿಗೆ ಹೆಸರಿಡುವಾಗ ಇವರಿಗೆ ನೆನಪಾಗುವುದಿಲ್ಲವೇ? ಹಾಗಿದ್ದರೆ ಇನ್ಯಾರು, ಯಾವಾಗ, ಎಲ್ಲಿ, ಹೇಗೆ ಕನ್ನಡಿಗರ ಹೆಸರಿನಲ್ಲಿ ಯೋಜನೆಗಳನ್ನು ಜಾರಿಗೆ ತರಬೇಕು ಎಂಬುದು ಪ್ರಶ್ನೆಯಾಗಿದೆ. ಹೀಗೆ ಕರ್ನಾಟಕದಲ್ಲಿನ ಯೋಜನೆ, ಸ್ಮಾರಕ ಎಲ್ಲವೂ ಕನ್ನಡೇತರರ ಹೆಸರಿನಲ್ಲಿ ಇದ್ದರೆ, ಕರ್ನಾಟಕದ ಬೆಳವಣಿಗೆಯ ಇತಿಹಾಸದಲ್ಲಿ ಕನ್ನಡಿಗರ ಪಾತ್ರವೇ ಇಲ್ಲ ಎಂದು ನಾವೇ ನಮ್ಮ ಮುಂದಿನ ಪೀಳಿಗೆಗೆ ತಪ್ಪು ಸಂದೇಶ ನೀಡಿದಂತೆ ಆಗುತ್ತದಲ್ಲವೇ?

ಸರತಿಯಂತೆ ನಮ್ಮನ್ನು ಆಳುತ್ತಿರುವ ರಾಷ್ಟ್ರೀಯ ಪಕ್ಷಗಳ ನಾಯಕರು ಬರೀ ಪಕ್ಷ- ಹೈಕಮಾಂಡಿನ ನಿಷ್ಠರಷ್ಟೇ ಆಗಿದ್ದಾರೆ. ಅವರಿಗೆ ಕನ್ನಡ, ಕನ್ನಡಿಗ, ಕರ್ನಾಟಕ ಎಂಬುದು ಕಡ್ಡಾಯವಲ್ಲದ ಕಡೆಯ ಆಯ್ಕೆಯಾಗಿರುವುದು ವಿಪರ್ಯಾಸ. ದೇಶದ ಇತರ ರಾಜ್ಯಗಳಲ್ಲಿನ ರಾಜಕಾರಣಿಗಳಿಗೆ ಸ್ಥಳೀಯ ಹಿತಾಸಕ್ತಿಯ ಬಗೆಗೆ ಇರುವಂತಹ ಆಸಕ್ತಿ ರಾಷ್ಟ್ರೀಯ ಪಕ್ಷಗಳ ನಮ್ಮ ರಾಜಕಾರಣಿಗಳಿಗೆ ಬರುವುದು ಯಾವಾಗ?

ಕಲ್ಯಾಣ ರಾಮನ್ ಚಂದ್ರಶೇಖರನ್, ಬೆಂಗಳೂರು

ಶುರುವಾಗಲಿ ಸ್ವಯಂಸೇವಾ ಅಭಿಯಾನ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶ್ರಮಿಕ ವರ್ಗದವರೇ ರಚಿಸಿಕೊಂಡಿರುವ ತಂಡವೊಂದು ಸರ್ಕಾರಿ ಶಾಲೆಯ ಶೌಚಾಲಯಗಳನ್ನು ಸ್ವಚ್ಛಗೊಳಿಸುವ ಅಭಿಯಾನ ಕೈಗೆತ್ತಿಕೊಂಡಿರುವುದು (ಪ್ರ.ವಾ., ಮಾರ್ಚ್ 11) ಪ್ರಶಂಸಾರ್ಹ. ಈ ರೀತಿಯ ಸಮಾಜಮುಖಿ ಕಾರ್ಯಗಳಲ್ಲಿ ಯುವಜನ ಹೆಚ್ಚೆಚ್ಚು ತೊಡಗಿಕೊಳ್ಳಬೇಕು.

ಇತ್ತೀಚೆಗೆ ವೀಕೆಂಡ್ ಪಾರ್ಟಿಗಳ ಹೆಸರಿನಲ್ಲಿ ಕೆಲವು ಮಂದಿ ಊರ ಹೊರಗಿನ ಕೆರೆಯಂತಹ ಸ್ಥಳಗಳಲ್ಲಿ ಸೇರುತ್ತಾರೆ. ಬಹುತೇಕ ವಿದ್ಯಾವಂತರೇ ಆಗಿರುವ ಇವರು ಈ ಪಾರ್ಟಿಗಳಿಂದ ಉಂಟಾದ ತ್ಯಾಜ್ಯವನ್ನು ಅಲ್ಲಿಯೇ ಬಿಟ್ಟು ಬರುತ್ತಾರೆ. ಈ ತ್ಯಾಜ್ಯವನ್ನು ವಾಪಸ್ ತಂದು, ಕಸ ವಿಲೇವಾರಿಯಾಗುವ ಜಾಗದಲ್ಲೇಕೆ ಅವರು ಹಾಕಬಾರದು? ಇದು ನಮ್ಮ ಸಾಮಾಜಿಕ ಜವಾಬ್ದಾರಿಯಲ್ಲವೇ? ಇಂತಹ ಜಾಗಗಳ ಸುತ್ತ ಓಡಾಡುವಾಗ ಮದ್ಯದ ಬಾಟಲಿಗಳು, ಪ್ಲಾಸ್ಟಿಕ್ ತ್ಯಾಜ್ಯವನ್ನು ಕಂಡಾಗ ಬೇಸರವಾಗುತ್ತದೆ. ಇದರಿಂದ ಪರಿಸರ ಮತ್ತು ಜೀವಿಗಳಿಗೆ ಹಾನಿಯಾಗುತ್ತದೆ. ಆದಷ್ಟೂ ನಮ್ಮ ಕೆಲಸಗಳನ್ನು ನಿರ್ವಹಿಸಲು ಸ್ವಯಂಸೇವಕರಾಗೋಣ. ಪರಿಸರದ ಸ್ವಚ್ಛತೆ ಕಾಪಾಡಿಕೊಳ್ಳೋಣ.

ವನಜಾಕ್ಷಿ ಎಸ್., ಮೈಸೂರು

ನದಿಗೆ ಕಂಟಕವಾಗದಿರಲಿ ಒಳಚರಂಡಿ

ಕೇಂದ್ರ ಜಲ ಸಚಿವಾಲಯದ ವರದಿಯಂತೆ, ದೇಶದ 302 ನದಿಗಳು ಮಲಿನಗೊಂಡಿವೆ. ಇದಕ್ಕೆ ಬಹುತೇಕ ಕಾರಣವಾಗಿರುವುದು ಒಳಚರಂಡಿ. ಕೋಟ್ಯಂತರ ಜನರು ಮಲ, ಮೂತ್ರ ವಿಸರ್ಜಿಸಿದ, ಸ್ನಾನ ಮಾಡಿದ, ಬಟ್ಟೆ ಒಗೆದ ಈ ಕೆರೆಗಳ ನೀರು ಒಳಚರಂಡಿಗಳ ಮೂಲಕ ನದಿಯನ್ನು ಸೇರಿ ಮಾಲಿನ್ಯ ಉಂಟು ಮಾಡುತ್ತಿದೆ. ಇದು ಬುದ್ಧಿಜೀವಿಗಳಿಗೆ, ಅಧಿಕಾರಿಶಾಹಿಗೆ ತಿಳಿದಿಲ್ಲವೇ? ಒಳಚರಂಡಿ ರಾಕ್ಷಸನನ್ನು ಸಂಹಾರ ಮಾಡದೇ ಹೋದರೆ ನದಿಗಳ ಮಾಲಿನ್ಯವನ್ನು ನಿಲ್ಲಿಸಲು ಸಾಧ್ಯವಿಲ್ಲ. ನಮ್ಮ ವೃಷಭಾವತಿ, ಅರ್ಕಾವತಿ ನದಿಗಳು ನಿರ್ಜೀವವಾಗಿರುವುದು ಒಳಚರಂಡಿಯ ನೀರಿನ ಕಾರಣದಿಂದ ಎಂಬುದು ನಮ್ಮ ಕಣ್ಣು ತೆರೆಸುವಂತೆ ಆಗಲಿ.

ಎಚ್.ಆರ್.ಪ್ರಕಾಶ್, ಕೆ.ಬಿ. ದೊಡ್ಡಿ, ಮಂಡ್ಯ

ಸಿಇಟಿ: ಮುಂಜಾಗ್ರತಾ ಕ್ರಮ ಅಗತ್ಯ

ಹಿಂದಿನ ಶೈಕ್ಷಣಿಕ ವರ್ಷದಲ್ಲಿ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ನಡೆಸಿದಂತಹ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ (ಸಿಇಟಿ) ಉಂಟಾದ ಗೊಂದಲಗಳು ದುರದೃಷ್ಟಕರ. ಈ ಬಾರಿ ಸಿಇಟಿಗೆ ದಿನಾಂಕ ನಿಗದಿಯಾಗಿದೆ. ಪರೀಕ್ಷಾ ಪ್ರಾಧಿಕಾರವು ಈ ಬಗ್ಗೆ ವಿಶೇಷ ಗಮನಹರಿಸಿ, ಪರೀಕ್ಷಾ ಅವ್ಯವಸ್ಥೆಯ ಕಾರಣದಿಂದ ವಿದ್ಯಾರ್ಥಿಗಳ ಭವಿಷ್ಯಕ್ಕೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಹಿಂದಿನ ಬಾರಿಯಂತೆ ಪಠ್ಯಕ್ಕೆ ಹೊರತಾದ ಪ್ರಶ್ನೆಗಳು ಇಲ್ಲದಂತೆ ನೋಡಿಕೊಂಡು, ಸೂಕ್ತವಾದ ಪ್ರಶ್ನೆಪತ್ರಿಕೆಯನ್ನು ಸಿದ್ಧಪಡಿಸಬೇಕು. ಈ ಮೂಲಕ ಪರೀಕ್ಷೆಗೆ ಅಗತ್ಯವಾದ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು.

ಕೆ.ಎನ್.ರಂಗಸ್ವಾಮಿ, ಉಜಿರೆ

ಡಿಜಿಟಲೀಕರಣ: ಕಂದಾಯ ಇಲಾಖೆಗೆ ಅನ್ವಯಿಸದೇ?

ಡಿಜಿಟಲೀಕರಣ ಎಂದರೆ ಅತ್ಯಂತ ವೇಗವಾಗಿ, ಪರಿಣಾಮಕಾರಿಯಾಗಿ ಮತ್ತು ಕರಾರುವಾಕ್ಕಾಗಿ ಕಾರ್ಯ ನಿರ್ವಹಿಸುವುದು ಎಂಬುದು ನಮ್ಮೆಲ್ಲರ ಭಾವನೆ. ಆದರೆ ಇದು ಕಂದಾಯ ಇಲಾಖೆಗೆ ಅನ್ವಯಿಸುವುದಿಲ್ಲ ಎನ್ನುವುದು ಇತ್ತೀಚಿನ ಅನುಭವದಿಂದ ತಿಳಿಯಿತು.

ಎನ್‌ಕಂಬ್ರನ್ಸ್ ಸರ್ಟಿಫಿಕೇಟ್ ಅಂದರೆ ಆಸ್ತಿಯ ಮೇಲಿನ ಋಣಭಾರ ಪ್ರಮಾಣಪತ್ರ ಪಡೆಯಲು ಸಂಬಂಧಪಟ್ಟ ನೋಂದಣಾಧಿಕಾರಿ ಕಚೇರಿಗೆ ಹೋದರೆ ಇಂತಹ ಅನುಭವ ಆಗುವುದು ಸಾಮಾನ್ಯ. ಸುತ್ತಮುತ್ತ ಕಂಪ್ಯೂಟರ್‌ಗಳನ್ನು ಇಟ್ಟುಕೊಂಡು ಕುಳಿತಿರುವವರ ಹತ್ತಿರ ಹೋಗಿ ಆಸ್ತಿಯ ವಿವರದ ಮಾಹಿತಿ ಕೊಟ್ಟು, ನಿಗದಿತ ಶುಲ್ಕದ ಜೊತೆಗೆ ಮೇಲ್ಕಾಣಿಕೆ ಕೊಟ್ಟು ಬರಬೇಕು. ಆಗ ಮರುದಿನ ನಮಗೆ ಬೇಕಾದ ಪ್ರಮಾಣಪತ್ರ ನಮ್ಮ ಮೊಬೈಲ್ ಫೋನ್‌ನಲ್ಲಿ ವಾಟ್ಸ್‌ಆ್ಯಪ್ ಮೂಲಕ ತಲುಪುತ್ತದೆ. ಆದರೆ ಈಗ ಈ ಪ್ರಮಾಣಪತ್ರ ಆನ್‌ಲೈನ್ ಮೂಲಕ ಸಿಗುತ್ತದೆ ಎಂದು ನಾವೇನಾದರೂ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದರೆ, 3ರಿಂದ 7 ಕಾರ್ಯದ ದಿನಗಳು ಕಾಯಬೇಕಾಗುತ್ತದೆ. ಡಿಜಿಟಲೀಕರಣದ ಮೂಲ ಉದ್ದೇಶವೇ ಇಲ್ಲಿ ನೆರವೇರದಂತೆ ಆಗಿದೆ. ಕಂದಾಯ ಸಚಿವರು ಇತ್ತ ಗಮನಹರಿಸಲಿ.

ಟಿ.ವಿ.ಬಿ. ರಾಜನ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.



ಚಿನ್ನ ಕಳ್ಳಸಾಗಣೆ ಅನಿಯಂತ್ರಿತ ದಂಧೆ

ಚಿತ್ರನಟಿ ರನ್ಯಾ ಚಿನ್ನ ಕಳ್ಳ ಸಾಗಣೆ ಆರೋಪದಲ್ಲಿ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂಧಿತರಾಗಿದ್ದಾರೆ. ಚಿನ್ನ ಕಳ್ಳಸಾಗಣೆಯು ಭಾರತದಲ್ಲಿ ದೊಡ್ಡ ದಂಧೆಯೇ ಆಗಿದ್ದು, ಪ್ರತಿ ವರ್ಷ ಸಾವಿರಾರು ಕೆ.ಜಿ. ಚಿನ್ನ ಅಕ್ರಮ ಮಾರ್ಗಗಳಲ್ಲಿ ದೇಶದೊಳಗೆ ಬರುತ್ತಿದೆ. ಹಳದಿ ಲೋಹವು ಯುಎಇ, ಚೀನಾ, ಮ್ಯಾನ್ಮಾರ್, ಬಾಂಗ್ಲಾದೇಶ, ಶ್ರೀಲಂಕಾ ಮುಂತಾದ ರಾಷ್ಟ್ರಗಳಿಂದ ಅಕ್ರಮವಾಗಿ ಒಳಬರುತ್ತಿದೆ. ಜಾಗತಿಕವಾಗಿ ಚಿನ್ನ ಕಳ್ಳಸಾಗಣೆ ನಡೆಯುವ ರಾಷ್ಟ್ರಗಳ ಪೈಕಿ ಭಾರತ ಮುಂಚೂಣಿಯಲ್ಲಿದೆ

ಪ್ರಜಾವಾಣಿ ವಾರ್ತೆ

ಅಮೂಲ್ಯವಾದ ಲೋಹ ಎಂದೇ ಹೆಸರಾಗಿರುವ ಚಿನ್ನದ ಬಗ್ಗೆ ಭಾರತೀಯರಿಗೆ ಭಾರಿ ಮೋಹ. ಆದರೆ, ಬೇಡಿಕೆಗೆ ತಕ್ಕಷ್ಟು ಚಿನ್ನ ದೇಶದಲ್ಲಿ ದೊರೆಯುತ್ತಿಲ್ಲ. ಹೀಗಾಗಿ ಹೊರದೇಶಗಳಿಂದ ಚಿನ್ನ ಆಮದು ಮಾಡಿಕೊಳ್ಳಲಾಗುತ್ತಿದೆ. ಆಮದು ಮಾಡಲಾಗುವ ಚಿನ್ನದ ಮೇಲೆ ಸರ್ಕಾರ ವಿಧಿಸುವ ಸುಂಕ ತಪ್ಪಿಸಲು ದಂಧೆಕೋರರು ಕಳ್ಳಸಾಗಣೆಯ ಮಾರ್ಗ ಹಿಡಿಯುತ್ತಿದ್ದು, ದೊಡ್ಡ ಪ್ರಮಾಣದ ಚಿನ್ನ ಅಕ್ರಮವಾಗಿ ದೇಶದೊಳಗೆ ಬರುತ್ತಿದೆ.

ಭಾರತಕ್ಕೆ ಯುಎಇ ಸೇರಿದಂತೆ ಅರಬ್ ರಾಷ್ಟ್ರಗಳು, ಮ್ಯಾನ್ಮಾರ್, ಶ್ರೀಲಂಕಾ, ಚೀನಾ, ಸಿಂಗಾಪುರ, ಬಾಂಗ್ಲಾದೇಶ, ನೇಪಾಳ ಸೇರಿದಂತೆ ಹಲವು ರಾಷ್ಟ್ರಗಳಿಂದ ಚಿನ್ನ ಕಳ್ಳಸಾಗಣೆ ಆಗುತ್ತಿದೆ.

ಕೊಲ್ಲಿ ಮತ್ತು ಆಗ್ನೇಯ ಏಷ್ಯಾದ ರಾಷ್ಟ್ರಗಳಿಂದ ಭಾರತದ ದೆಹಲಿ, ಮುಂಬೈ, ಚೆನ್ನೈ, ಹೈದರಾಬಾದ್ ಮತ್ತು ಬೆಂಗಳೂರು ವಿಮಾನ ನಿಲ್ದಾಣಗಳ ಮೂಲಕ ದೊಡ್ಡ ಮಟ್ಟದಲ್ಲಿ ಚಿನ್ನ ಕಳ್ಳಸಾಗಣೆ ನಡೆಯುತ್ತಿದೆ. ಅರಬ್ ರಾಷ್ಟ್ರಗಳಿಗೆ ಕೇರಳದಿಂದ ಮತ್ತು ಕರ್ನಾಟಕದ ಕರಾವಳಿಯಿಂದ ಹೆಚ್ಚು ಮಂದಿ ವಲಸೆ ಹೋಗಿದ್ದಾರೆ. ಈ ಕಾರಣಕ್ಕೆ ಕೇರಳ ಮತ್ತು ಮಂಗಳೂರು, ಬೆಂಗಳೂರು ವಿಮಾನ ನಿಲ್ದಾಣಗಳಲ್ಲಿ ಮತ್ತು ಜಲಮಾರ್ಗಗಳಲ್ಲಿ ಕಳ್ಳಸಾಗಣೆಯ ಚಿನ್ನ ದೊಡ್ಡ ಪ್ರಮಾಣದಲ್ಲಿ ಆಗಿಂದಾಗ್ಗೆ ಪತ್ತೆಯಾಗುತ್ತಲೇ ಇರುತ್ತದೆ. ದೆಹಲಿ, ಮುಂಬೈ ಮತ್ತು ಚೆನ್ನೈ ವಿಮಾನ ನಿಲ್ದಾಣಗಳ ಮೂಲಕ ಹೆಚ್ಚು ಕಳ್ಳಸಾಗಣೆ ನಡೆಯುತ್ತಿದೆ ಎನ್ನುವ ವರದಿಗಳಿವೆ.

ತೀವ್ರವಾದ ತಪಾಸಣೆ ವ್ಯವಸ್ಥೆ ಇದ್ದರೂ ಕಳ್ಳಸಾಗಣೆಯನ್ನು ತಡೆಯಲು ಸಾಧ್ಯವಾಗಿಲ್ಲ. ವಿವಿಧ ರೀತಿಗಳಲ್ಲಿ ಸುಂಕ ತಪ್ಪಿಸಿ ಚಿನ್ನವನ್ನು ಅಕ್ರಮವಾಗಿ ದೇಶದೊಳಗೆ ತರಲಾಗುತ್ತಿದೆ. ಕೆಲವು ಬಾರಿ ಚಿನ್ನವನ್ನು ಇತರೆ ಲೋಹ/ವಸ್ತುಗಳೊಂದಿಗೆ ಸೇರಿಸಿ ಸಾಗಿಸಲಾಗುತ್ತದೆ. ಕೆಲವೊಮ್ಮೆ ಪುಡಿ ಮಾಡಿ, ದೂಳಿನ ರೂಪದಲ್ಲಿ, ಪೇಸ್ಟ್, ಕ್ಯಾಪ್ಸ್ಯೂಲ್ ರೂಪದಲ್ಲಿ ಗುದದ್ವಾರ, ಗುಪ್ತಾಂಗ ಸೇರಿದಂತೆ ತಮ್ಮ ದೇಹದ ವಿವಿಧ ಭಾಗಗಳಲ್ಲಿ ಬಚ್ಚಿಟ್ಟುಕೊಂಡು ಸಾಗಣೆ ಮಾಡುತ್ತಾರೆ. ನಂತರ ವ್ಯಕ್ತಿಗಳ ಮೂಲಕ ಬಸ್ ಅಥವಾ ರೈಲುಗಳಲ್ಲಿ ದೇಶದ ಇತರ ನಗರಗಳಿಗೆ ಸಾಗಿಸಲಾಗುತ್ತದೆ.

ಚಿನ್ನದ ತಾಣ ದುಬೈ: ದುಬೈನಲ್ಲಿ ಚಿನ್ನದ ಖರೀದಿಗೆ ತೆರಿಗೆ ವಿಧಿಸಲಾಗುವುದಿಲ್ಲ ಮತ್ತು ಅಲ್ಲಿ ಮೇಕಿಂಗ್ ಚಾರ್ಜ್ ಕೂಡ ಕಡಿಮೆ. ಚಿನ್ನವನ್ನು ಸ್ಪರ್ಧಾತ್ಮಕ ಬೆಲೆಯಲ್ಲಿ ಅಲ್ಲಿ ಮಾರಲಾಗುತ್ತದೆ. ಅಲ್ಲಿ ಚಿನ್ನ ಕೊಂಡರೆ, ಭಾರತಕ್ಕಿಂತಲೂ ಸುಮಾರು ಶೇ 20ರಷ್ಟು ಹಣ ಉಳಿತಾಯವಾಗುತ್ತದೆ ಎನ್ನುವ ಒಂದು ಅಂದಾಜಿದೆ. ಹೀಗಾಗಿ ಭಾರತೀಯರಿಗೆ ಚಿನ್ನ ಕೊಳ್ಳಲು ದುಬೈ ಅತ್ಯಂತ ನೆಚ್ಚಿನ ತಾಣ. ಆದರೆ, ಕೊಂಡ ಚಿನ್ನವನ್ನು ಭಾರತಕ್ಕೆ ತರುವುದು ಸುಲಭದ ಕೆಲಸವಲ್ಲ. ನಿಗದಿತ ಮಿತಿ ದಾಟಿದರೆ, ಚಿನ್ನದ ತೂಕ ಮತ್ತು ಅದರ ಮೌಲ್ಯವನ್ನು ಅನುಸರಿಸಿ ಸುಂಕ ಪಾವತಿಸಬೇಕಾಗುತ್ತದೆ. ಈ ಸುಂಕ ತಪ್ಪಿಸಲು ಚಿನ್ನವನ್ನು ಅಕ್ರಮ ಮಾರ್ಗಗಳಲ್ಲಿ ದೇಶದೊಳಗೆ ತರಲಾಗುತ್ತಿದೆ.

ಭಾರತವು ಚಿನ್ನದ ಆಮದಿನ ಮೇಲೆ ಕೆಲವು ನಿರ್ಬಂಧ ವಿಧಿಸಿದ್ದು, ತೆರಿಗೆಗಳನ್ನು ವಿಧಿಸುತ್ತಿದೆ. ಮೊದಲು ಚಿನ್ನದ ಆಮದಿನ ಮೇಲೆ ಶೇ 15ರಷ್ಟು ಸುಂಕ ವಿಧಿಸಲಾಗುತ್ತಿತ್ತು. ಚಿನ್ನ ಕಳ್ಳಸಾಗಣೆ ತಡೆಯುವ ಸಲುವಾಗಿ 2024ರ ಜುಲೈಯಲ್ಲಿ ಇದನ್ನು ಶೇ 6ಕ್ಕೆ ಇಳಿಸಲಾಯಿತು. ಇಷ್ಟು ಸುಂಕ ಪಾವತಿಸಿದರೂ ನಿರ್ದಿಷ್ಟ ಪ್ರಮಾಣದಲ್ಲಿ ಮಾತ್ರವೇ ಚಿನ್ನವನ್ನು ತರಲು ಅವಕಾಶವಿದೆ. ಅದನ್ನು ಮೀರಿದರೆ, ತನಿಖೆಗೆ ಒಳಪಡಬೇಕಾಗುತ್ತದೆ (ಸುಂಕ ಕಡಿತದ ನಂತರ ಕಳ್ಳಸಾಗಣಿಕೆ ಇಳಿದಿದೆ ಎಂದು ಕೇಂದ್ರ ಪರೋಕ್ಷ ತೆರಿಗೆಗಳು ಮತ್ತು ಕಸ್ಟಮ್ಸ್ ಮಂಡಳಿ–ಸಿಬಿಐಸಿ ಹೇಳಿದೆ).


ಮಾಫಿಯಾ ನಂಟು: ಚಿನ್ನ ಕಳ್ಳಸಾಗಣೆ ಕೇವಲ ಹಣಕಾಸಿನ ವ್ಯವಹಾರವಾಗಿ ಉಳಿಯದೇ ಮಾಫಿಯಾ ನಂಟಿನೊಂದಿಗೆ ಸಮಾಜವಿರೋಧಿ ಶಕ್ತಿಗಳ ಒಂದು ತಂತ್ರವಾಗಿಯೂ ಪರಿಣಮಿಸಿದೆ. ಚಿನ್ನ ಕಳ್ಳಸಾಗಣೆಯನ್ನು ದೇಶದ ಒಳಗಿನ ಮತ್ತು ಹೊರಗಿನ ಪಾತಕಿಗಳು, ಭಯೋತ್ಪಾದಕರು ತಮ್ಮ ಅಪರಾಧ ಕೃತ್ಯಗಳಿಗೆ ಬಳಸಿಕೊಳ್ಳುತ್ತಿದ್ದಾರೆ. ಸುಡಾನ್ ಸೇರಿದಂತೆ ಆಫ್ರಿಕಾದ ಹಲವು ರಾಷ್ಟ್ರಗಳು, ಶ್ರೀಲಂಕಾದ ಪ್ರಜೆಗಳು ಅಕ್ರಮ ಮಾರ್ಗಗಳಲ್ಲಿ ಚಿನ್ನವನ್ನು ಭಾರತಕ್ಕೆ ತರುವ ವೇಳೆ ಬಂಧಿತರಾಗಿದ್ದಾರೆ. ಮಾಫಿಯಾದೊಂದಿಗೆ ದೇಶದ ಪ್ರಭಾವಿಗಳು, ಅಧಿಕಾರಿಗಳು, ಉದ್ಯಮಿಗಳು ಶಾಮೀಲಾಗಿದ್ದ ಘಟನೆಗಳೂ ವರದಿಯಾಗಿವೆ.


ಆಧಾರ: ಪಿಟಿಐ, ಕೇಂದ್ರ ಪರೋಕ್ಷ ತೆರಿಗೆಗಳು ಮತ್ತು ಕಸ್ಟಮ್ಸ್ ಮಂಡಳಿ, ಡಿಆರ್‌ಐ ವಾರ್ಷಿಕ ವರದಿಗಳು

ಭೂಮಿ, ವಾಯು ಮಾರ್ಗಗಳಲ್ಲಿ ಹೆಚ್ಚು

ಕಳ್ಳ ಸಾಗಣೆದಾರರು ಚಿನ್ನವನ್ನು ಭೂಮಾರ್ಗ, ವಾಯು ಮಾರ್ಗ ಮತ್ತು ಜಲ ಮಾರ್ಗಗಳ ಮೂಲಕ ಭಾರತಕ್ಕೆ ತರುತ್ತಾರೆ. ಜಲ ಮಾರ್ಗಕ್ಕಿಂತ ಭೂಮಾರ್ಗ ಮತ್ತು ವಾಯುಮಾರ್ಗಗಳು ಹೆಚ್ಚು ಬಳಕೆಯಲ್ಲಿವೆ.

ಭಾರತದ ಈಶಾನ್ಯ ಗಡಿ ಭಾಗದಲ್ಲಿ ನೇಪಾಳ, ಬಾಂಗ್ಲಾದೇಶ, ಮ್ಯಾನ್ಮಾರ್‌ಗಳಿಂದ ಕಳ್ಳ ಸಾಗಣೆದಾರರು ರಸ್ತೆ ಮಾರ್ಗದ ಮೂಲಕವೇ ದೇಶವನ್ನು ಪ್ರವೇಶಿಸುತ್ತಾರೆ. ಪಶ್ಚಿಮ ಏಷ್ಯಾ, ಆಗ್ನೇಯ ಏಷ್ಯಾ ರಾಷ್ಟ್ರಗಳಿಂದ ವಾಯು ಮಾರ್ಗದ ಮೂಲಕ ಚಿನ್ನವನ್ನು ಕದ್ದು ತರಲಾಗುತ್ತದೆ. ಇತ್ತೀಚಿನ ವರ್ಷಗಳಲ್ಲಿ ಆಫ್ರಿಕಾದ ನೈರೋಬಿ, ಆಡಿಸ್ ಅಬಬ ವಿಮಾನ ನಿಲ್ದಾಣಗಳು, ಮಧ್ಯ ಏಷ್ಯಾದ ತಾಷ್ಕೆಂಟ್ ವಿಮಾನ ನಿಲ್ದಾಣದ ಮೂಲಕವೂ ಕಳ್ಳ ಸಾಗಣೆದಾರರು ದೇಶದ ವಿವಿಧ ರಾಜ್ಯಗಳ ವಿಮಾನ ನಿಲ್ದಾಣಗಳಲ್ಲಿ ಹಳದಿ ಲೋಹದೊಂದಿಗೆ ಬಂದಿಳಿಯುತ್ತಿದ್ದಾರೆ.






ವಿದೇಶಿಯರ ಮೂಲಕ ದಂಧೆ

ಹಾಜಿ ಮಸ್ತಾನ್, ಕರೀಂಲಾಲಾ ಮತ್ತು ದಾವೂದ್ ಇಬ್ರಾಹಿಂರಂತಹ ಗ್ಯಾಂಗ್‌ಸ್ಟರ್‌ಗಳು ಮತ್ತು ಕಳ್ಳಸಾಗಣೆದಾರರಿಗೆ ಮಹಾರಾಷ್ಟ್ರದ ಬಂದರು ನಗರಿ ಡೊಂಗರಿ ನೆಲೆಯಾಗಿತ್ತು. ಬಹಳ ಕಾಲದವರೆಗೆ ಚಿನ್ನ ಕಳ್ಳಸಾಗಣೆ ತಂಡಗಳು ಅಲ್ಲಿಂದ ಕಾರ್ಯಾಚರಣೆ ಮಾಡುತ್ತಿದ್ದವು.

2019ರ ಏಪ್ರಿಲ್‌ನಲ್ಲಿ ಕಳ್ಳಮಾರ್ಗದಲ್ಲಿ ದೇಶದೊಳಗೆ ತಂದಿದ್ದ ₹1,473 ಕೋಟಿ ಮೊತ್ತದ 4,522 ಕೆ.ಜಿ ಚಿನ್ನವನ್ನು ಡೊಂಗರಿ ತಂಡದಿಂದ ವಶಪಡಿಸಿಕೊಳ್ಳಲಾಗಿತ್ತು. ಸುಡಾನ್‌ನ 18 ಮಹಿಳೆಯರನ್ನು ಕಳ್ಳಸಾಗಣೆಯ ಕೆಲಸಕ್ಕೆ ನೇಮಿಸಿಕೊಳ್ಳಲಾಗಿತ್ತು. ಅವರು ಚಿನ್ನದ ದೂಳು, ಪೇಸ್ಟ್ ಅನ್ನು ದೇಹದ ವಿವಿಧ ಭಾಗಗಳಿಗೆ ಮೆತ್ತಿಕೊಂಡು, ಚಿನ್ನದ ಕ್ಯಾಪ್ಸೂಲ್‌ಗಳನ್ನು ದೇಹದ ವಿವಿಧ ಭಾಗಗಳಲ್ಲಿ ಬಚ್ಚಿಟ್ಟುಕೊಂಡು ಕಳ್ಳಸಾಗಣೆ ಮಾಡುತ್ತಿದ್ದರು. ಗುಜರಾತ್‌ನ ಕಛ್ ಮತ್ತು ಮುಂದ್ರಾ ಬಂದರುಗಳ ಮೂಲಕ, ಕೆಲವು ವಿಶೇಷ ಆರ್ಥಿಕ ವಲಯಗಳ (ಎಸ್‌ಇಝೆಡ್) ಮೂಲಕವೂ ಕಳ್ಳಸಾಗಣೆ ಮಾಡುವುದನ್ನು ಅಧಿಕಾರಿಗಳು ಪತ್ತೆಹಚ್ಚಿದ್ದರು.

ಸಿಬಿಐಸಿ ಕೈಗೊಂಡ ಕ್ರಮ



ಕೇರಳ ಪ್ರಕರಣದ ನೆನಪು

ರಾಜ್ಯದಲ್ಲಿ ತೀವ್ರ ಚರ್ಚೆ ಹುಟ್ಟುಹಾಕಿರುವ ಚಿನ್ನ ಕಳ್ಳಸಾಗಣೆ ಪ್ರಕರಣವು 2020ರಲ್ಲಿ ಕೇರಳದಲ್ಲಿ ನಡೆದಿದ್ದ ಚಿನ್ನ ಕಳ್ಳಸಾಗಣೆ ಪ್ರಕರಣವನ್ನು ನೆನಪಿಸುವಂತೆ ಮಾಡಿದೆ. 2020ರ ಜುಲೈ 5ರಂದು ತಿರುವನಂತಪುರ ವಿಮಾನ ನಿಲ್ದಾಣದಲ್ಲಿ ರಾಜತಾಂತ್ರಿಕ ಚೀಲದಲ್ಲಿದ್ದ 30 ಕೆ.ಜಿ. 24 ಕ್ಯಾರಟ್ ಚಿನ್ನವನ್ನು (₹14.82 ಕೋಟಿ ಮೌಲ್ಯ) ಕೇಂದ್ರ ಪರೋಕ್ಷ ತೆರಿಗೆಗಳು ಮತ್ತು ಕಸ್ಟಮ್ಸ್ ಮಂಡಳಿಯ ಅಧಿಕಾರಿಗಳು ಜಪ್ತಿ ಮಾಡಿದ್ದರು. ತಿರುವನಂತಪುರದ ಯುಎಇ ಕಾನ್ಸುಲೇಟ್ ಕಚೇರಿಗೆ ತಲುಪಿಸಬೇಕಾಗಿದ್ದ ಚೀಲದಲ್ಲಿ ಚಿನ್ನವನ್ನು ಇಡಲಾಗಿತ್ತು. ಯುಎಇ ಕಾನ್ಸುಲೇಟ್‌ನ ಮಾಜಿ ಉದ್ಯೋಗಿ, ಕೇರಳ ಸರ್ಕಾರದ ಸಂಸ್ಥೆಯೊಂದರಲ್ಲಿ ಗುತ್ತಿಗೆ ಆಧಾರದ ಹುದ್ದೆಯಲ್ಲಿದ್ದ ಸ್ವಪ್ನಾ ಸುರೇಶ್ ಎಂಬುವವರು ಪ್ರಕರಣದ ಆರೋಪಿಯಾಗಿದ್ದರು. ಈ ಪ್ರಕರಣ ಕೇರಳದಲ್ಲಿ ರಾಜಕೀಯ ಸುಂಟರಗಾಳಿಯನ್ನೇ ಎಬ್ಬಿಸಿತ್ತು. ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಈ ಪ್ರಕರಣದ ತನಿಖೆ ನಡೆಸಿತ್ತು. ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ಪ್ರಧಾನ ಕಾರ್ಯದರ್ಶಿಯಾಗಿದ್ದ ಎಂ. ಶಿವಶಂಕರ್ ಅವರಿಗೆ ಆರೋಪಿ ಸ್ವಪ್ನಾ ಸುರೇಶ್ ಅವರೊಂದಿಗೆ ನಂಟು ಇರುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿತ್ತು. ಹಾಗಾಗಿ, ಅವರನ್ನು ಆ ಹುದ್ದೆಯಿಂದ ತೆರವು ಮಾಡಲಾಗಿತ್ತಲ್ಲದೇ, ಸೇವೆಯಿಂದ ಅಮಾನತು ಮಾಡಲಾಗಿತ್ತು. ಮುಖ್ಯಮಂತ್ರಿ ವಿಜಯನ್ ಅವರೂ ಈ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎಂಬ ಆರೋಪವೂ ಕೇಳಿಬಂದಿತ್ತು.


ಸ್ವಪ್ನಾ ಸುರೇಶ್




‘ಅಪ್ಪು’ ರೀ ರಿಲೀಸ್

ಮುಂದಿನ ಸೋಮವಾರ (ಮಾರ್ಚ್ 17) ನಟ ದಿವಂಗತ ಪುನೀತ್ ರಾಜ್‌ಕುಮಾರ್ ಅವರ 50ನೇ ಜನ್ಮದಿನ. ಈ ಹೊಸ್ತಿಲಲ್ಲಿ ಅವರು ನಾಯಕರಾಗಿ ನಟಿಸಿದ ಮೊದಲ ಸಿನಿಮಾ ‘ಅಪ್ಪು’ ಮಾರ್ಚ್ 14 ರಂದು ಮರುಬಿಡುಗಡೆಯಾಗುತ್ತಿದೆ. ಪಾರ್ವತಮ್ಮ ರಾಜ್‌ಕುಮಾರ್ ಅವರು ನಿರ್ಮಾಣ ಮಾಡಿದ್ದ ಈ ಸಿನಿಮಾವನ್ನು ಪಿಆರ್‌ಕೆ ಪ್ರೊಡಕ್ಷನ್ಸ್ ರಿರಿಲೀಸ್ ಮಾಡುತ್ತಿದೆ.

ಕಳೆದ ವರ್ಷ ಇದೇ ಸಂದರ್ಭದಲ್ಲಿ ‘ಜಾಕಿ’ ಸಿನಿಮಾ ರಿರಿಲೀಸ್ ಆಗಿತ್ತು. ಇದೀಗ 24 ವರ್ಷಗಳ ಬಳಿಕ ಪುನೀತ್ ರಾಜ್‌ಕುಮಾರ್ ಹಾಗೂ ರಕ್ಷಿತಾ ಅಭಿನಯಿಸಿದ್ದ ‘ಅಪ್ಪು’ ಮತ್ತೆ ತೆರೆಗೆ ಬರುತ್ತಿದೆ. ಈ ಸಿನಿಮಾವನ್ನು ಪುರಿ ಜಗನ್ನಾಥ್ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿದ್ದರು. ಚಿತ್ರಕ್ಕೆ ಗುರುಕಿರಣ್ ಸಂಗೀತ ನೀಡಿದ್ದರು. ‘ನಾನು ಶಿವರಾಜ್‌ಕುಮಾರ್ ಅವರಿಗೆ ಧನ್ಯವಾದ ಹೇಳಬೇಕು. ಅವರಿಂದಾಗಿಯೇ ‘ಅಪ್ಪು’ ಸಿನಿಮಾ ಆಯಿತು. ನನ್ನನ್ನು ರಾಜ್‌ಕುಮಾರ್ ಹಾಗೂ ಪಾರ್ವತಮ್ಮ ರಾಜ್‌ಕುಮಾರ್ ಅವರಿಗೆ ಪರಿಚಯಿಸಿದ್ದೇ ಅವರು. ಇವರೆಲ್ಲರ ಮೂಲಕ ನಾನು ಪುನೀತ್ ರಾಜ್‌ಕುಮಾರ್ ಅವರನ್ನು ಭೇಟಿಯಾದೆ. ಪುನೀತ್ ಒಬ್ಬ ಬಹುಮುಖ ಪ್ರತಿಭೆಯಾಗಿದ್ದರು. ಕನ್ನಡ ಚಿತ್ರರಂಗದ ರತ್ನ ಅವರು. ‘ಅಪ್ಪು’ ಮೂಲಕ ಮತ್ತೊಮ್ಮೆ ಅವರನ್ನು ತೆರೆ ಮೇಲೆ ನೋಡಿ ಅವರನ್ನು ಸಂಭ್ರಮಿಸೋಣ’ ಎಂದಿದ್ದಾರೆ ಪುರಿ.

‘ರಾಜ್‌ಕುಮಾರ್ ಅವರು ಸಂಗೀತ ಸಂಯೋಜನೆ ವೇಳೆ ಕುಳಿತುಕೊಳ್ಳುತ್ತಿದ್ದರು. ಅಪ್ಪು ಯಾವತ್ತೂ ಹೊಸತನವನ್ನೇ ಬಯಸುತ್ತಿದ್ದರು. ಹೀರೊ ಪರಿಚಯಕ್ಕೆ ಉಪೇಂದ್ರ ಅವರು 45 ನಿಮಿಷದಲ್ಲಿ ‘ತಾಲಿಬಾನ್ ಅಲ್ವೇ..ಅಲ್ಲಾ..’ ಬರೆದಿದ್ದರು. ಮೊದಲ ಬಾರಿ ‘ಪಣವಿಡು.. ಪಣವಿಡು’ ರಾಕ್ ಜಾನರ್‌ನಲ್ಲಿದ್ದ ಹಾಡನ್ನು ರಾಜ್‌ಕುಮಾರ್ ಅವರು ಹಾಡಿದ್ದು ವಿಶೇಷವಾಗಿತ್ತು’ ಎಂದು ನೆನಪಿಸಿಕೊಳ್ಳುತ್ತಾರೆ ಗುರುಕಿರಣ್. ❖

ತೆರೆಯ ಮೇಲೆ ಚಾಮಯ್ಯ ಮೇಷ್ಟ್ರು



70ರ ದಶಕದಲ್ಲಿ ಬಿಡುಗಡೆಗೊಂಡು ಸೂಪರ್ ಹಿಟ್ ಆಗಿದ್ದ ಚಿತ್ರ ‘ನಾಗರಹಾವು’. ಇದರಲ್ಲಿನ ಚಾಮಯ್ಯ ಮೇಷ್ಟ್ರು ಪಾತ್ರ ಬಹಳ ಜನಪ್ರಿಯವಾಗಿತ್ತು. ಆ ಪಾತ್ರದ ಕಥೆ ಹೊಂದಿರುವ ‘ಚಾಮಯ್ಯ ಸನ್ ಆಫ್ ರಾಮಾಚಾರಿ’ ಚಿತ್ರ ತೆರೆಗೆ ಬರಲು ಸಜ್ಜಾಗಿದೆ.

ಚಿತ್ರವನ್ನು ರಾಧಾಕೃಷ್ಣ ಪಲ್ಲಕ್ಕಿ ಕಥೆ ಬರೆದು ನಿರ್ದೇಶಿಸಿದ್ದಾರೆ. ಜೊತೆಗೆ ತಮ್ಮದೇ ಜೋಳಿಗೆ ಸಿನಿಮಾಸ್ ಬ್ಯಾನರ್ ಅಡಿಯಲ್ಲಿ ಬಂಡವಾಳ ಹೂಡಿದ್ದಾರೆ. ‘ಈ ಬಂಧನ’ ಚಿತ್ರೀಕರಣ ಸಂದರ್ಭದಲ್ಲಿ ವಿಷ್ಣುವರ್ಧನ್ ಅವರನ್ನು ಭೇಟಿ ಮಾಡಿ, ಈ ಚಿತ್ರದ ಎಳೆ ಹೇಳಿದ್ದೆ. ಅವರು ಕಾಲವಾದ ನಂತರ ಇದನ್ನು ಮಾಡುವುದು ಬೇಡವೆಂದು ಸುಮ್ಮನಿದ್ದೆ. ಒಮ್ಮೆ ಉತ್ತರ ಕರ್ನಾಟಕದಲ್ಲಿ ನಾಟಕ ನೋಡಲು ಹೋದಾಗ ಅಲ್ಲಿ ರಂಗಭೂಮಿಯ ಹಿರಿಯ ಕಲಾವಿದ ಜಯಶ್ರೀ ರಾಜ್ ನಟನೆ ನೋಡಿದಾಗ, ಸಿನಿಮಾ ಮಾಡುವ ಆಲೋಚನೆ ಬಂದಿತು. ನಾಗರಹಾವು ಚಿತ್ರದ ಬಹುತೇಕ ಪಾತ್ರಗಳು ಇದರಲ್ಲಿವೆ’ ಎಂದರು ನಿರ್ದೇಶಕರು.

ಬೆಂಗಳೂರು, ಬಾದಾಮಿ, ಬನಶಂಕರಿ, ಐಹೊಳೆ ಮೊದಲಾದೆಡೆ ಚಿತ್ರೀಕರಣಗೊಂಡಿದೆ. ಜಯಶ್ರೀ ರಾಜ್ ರಾಮಾಚಾರಿಯಾಗಿ, ಚಾಮಯ್ಯನಾಗಿ ಪ್ರದೀಪ್ ಶಾಸ್ತ್ರೀ, ಮಗಳಾಗಿ ಚೈತ್ರಾ ಕಾಣಿಸಿಕೊಂಡಿದ್ದಾರೆ. ಸ್ಯಾಂ ಸಂಗೀತ, ಎಂ.ಆರ್.ಸೀನು ಛಾಯಾಚಿತ್ರಗ್ರಹಣ, ಶಿವಕುಮಾರ್ ಎ. ಸಂಕಲನವಿದೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net


ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಭಾರತ ಕ್ರಿಕೆಟ್ ತಂಡದ ವೇಗದ ಬೌಲರ್ ಮೊಹಮ್ಮದ್ ಶಮಿ ಅವರ ವಿಡಿಯೊ ಫೇಸ್‌ಬುಕ್ ಸೇರಿದಂತೆ ವಿವಿಧ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ವಿಡಿಯೊ ಕೆಳಭಾಗದಲ್ಲಿ ಅವರು ಎನರ್ಜಿ ಡ್ರಿಂಕ್ ಕುಡಿಯುತ್ತಿರುವ ಚಿತ್ರ ಇದೆ. ‘ನಾನು ರೋಝಾ (ರಂಜಾನ್ ಉಪವಾಸ) ಅನ್ನು ಮುರಿದಿದ್ದೇನೆ. ಹಾಗೆ ಮಾಡಲೇಬೇಕೆಂದು ನನ್ನನ್ನು ಒತ್ತಾಯಪಡಿಸಲಾಯಿತು. ಇಲ್ಲದಿದ್ದರೆ ಅವರು ನನ್ನ ವೃತ್ತಿಜೀವನವನ್ನು ನಾಶಪಡಿಸುತ್ತಿದ್ದರು. ನನ್ನನ್ನು ಕ್ಷಮಿಸಿ’ ಎಂದು ಶಮಿ ಹೇಳಿದ್ದಾರೆ ಎಂದು ವಿಡಿಯೊ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಅದು ಸುಳ್ಳು ಸುದ್ದಿ.

ವಿಡಿಯೊ ಅನ್ನು ಇನ್‌ವಿಡ್ ಟೂಲ್ ಮತ್ತು ಗೂಗಲ್ ಲೆನ್ಸ್ ಮೂಲಕ ಪರಿಶೀಲನೆ ಮಾಡಿದಾಗ, ಹಲವರು ಇದೇ ವಿಡಿಯೊ ಅನ್ನು ಹಂಚಿಕೊಂಡಿರುವುದು ಕಂಡುಬಂತು. ಸೂಕ್ಷ್ಮವಾಗಿ ನೋಡಿದಾಗ, ವಿಡಿಯೊದಲ್ಲಿ ತುಟಿ ಚಲನೆಗೂ ಧ್ವನಿಗೂ ಹೊಂದಾಣಿಕೆ ಆಗದೇ ಇರುವುದು ಕಂಡಿತು. ಮತ್ತಷ್ಟು ಹುಡುಕಿದಾಗ, ವಿಡಿಯೊದಲ್ಲಿರುವ ಕುರ್ತಾ ಮತ್ತು ಟೋಪಿಯನ್ನೇ ಶಮಿ ಅವರು ಧರಿಸಿರುವ ಚಿತ್ರಗಳು ಅವರ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಸಿಕ್ಕವು. ಚಿತ್ರದ ಜತೆಗೆ ಅವರ ಖಾತೆಯಲ್ಲಿ ಒಂದು ಪೋಸ್ಟ್ (2024ರ ಏ.11) ಇದ್ದು, ಅದರಲ್ಲಿ ಅವರು ‘ಎಲ್ಲರಿಗೂ ಈದ್ ಮುಬಾರಕ್’ ಎಂದು ಶುಭ ಹಾರೈಸಿದ್ದಾರೆ. ಶಮಿ ಅವರು ರಂಜಾನ್ ಉಪವಾಸ ಮುರಿದದ್ದಕ್ಕೆ ಕ್ಷಮೆ ಯಾಚಿಸಿದ ಬಗ್ಗೆ ಎಲ್ಲೂ ಅಧಿಕೃತ ಪುರಾವೆ ಇಲ್ಲ. ಅವರ ಹಳೆಯ ವಿಡಿಯೊ ಅನ್ನು ಬದಲಾಯಿಸಿ, ಸುಳ್ಳು ಪ್ರತಿಪಾದನೆ ಮಾಡಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಬುಧವಾರ ಮಾರ್ಚ್ 12, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲತ್ರಯೋದಶಿ ಗಂ.09-12 ನಕ್ಷತ್ರ: ಮಘ ಗಂ.28-06 ಯೋಗ: ಸುಕರ್ಮ ಗಂ.13-00 ಕರಣ: ತೈತಿಲ ಗಂ.09-12, ಕುಂಭ ಮಾಸದ 28 ನೇ ದಿನ, ಮಳೆನಕ್ಷತ್ರ: ಪೂರ್ವಾಭಾದ್ರ 3.

ರಾಹುಕಾಲ : ಮಧ್ಯಾಹ್ನ 12-00 – 01-30

ಸೂರ್ಯೋದಯ : 06-45 **ಸೂರ್ಯಾಸ್ತ :** 06-37

ಮುಸ್ಲಿಂ ದಿನಾಂಕ : 11 ರಂಜಾನ್

ದಿನ ವಿಶೇಷ : ಮಾಸಿ ಮಾಘಮ್, ಅದೃಷ್ಟ ಸಂಖ್ಯೆ : 5, 10

ಮೇಷ: ಗಂಭೀರ ಹಂತದಲ್ಲಿರುವ ವೈಯಕ್ತಿಕ ಹಾಗೂ ಔದ್ಯೋಗಿಕ ಸಂಬಂಧಗಳನ್ನು ಸರಿಗೊಳಿಸುವುದರಲ್ಲಿ ಯಶಸ್ವಿಯಾಗುವಿರಿ. ಮನೆಯವರ ಸಲಹೆಯಂತೆ ಪ್ರಯಾಣ ಕೈಗೊಳ್ಳಬೇಕಾಗುವುದು.

ವೃಷಭ: ಜನ್ಮತಃ ಬಂದಿರುವ ಧೈರ್ಯ ಹಾಗೂ ಸಹಿಷ್ಣುತೆ ನೆರವಿಗೆ ಬರಲಿದೆ. ಉಲ್ಲಾಸ ಹಾಗೂ ಕಾರ್ಯಪ್ರವೃತ್ತಿಯನ್ನು ಹೊಂದುವಿರಿ. ಪಾಲುದಾರಿಕೆ ಒಪ್ಪಂದ ಏರ್ಪಡುವುದು.

ಮಿಥುನ: ಸಾಂಪ್ರದಾಯಿಕ ವಿಚಾರದ ಚಿಂತನೆ ಅಥವಾ ಅಂಥ ಕಾರ್ಯಕ್ರಮದಲ್ಲಿ ಭಾಗವಹಿಸುವುದರಿಂದ ಘನತೆ ಹೆಚ್ಚಲಿದೆ. ಎದುರಾಗುವ ಅವಕಾಶಗಳಿಂದ ಉತ್ಸಾಹದ ಚಿಲುಮೆ ಇಮ್ಮಡಿಗೊಳ್ಳಲಿದೆ.

ಕರ್ಕಾಟಕ: ನಿರ್ಧಾರದ ಬಗ್ಗೆ ಪುನರ್ ಪರಿಶೀಲಿಸಲು ಸಮಯ ಮೀಸಲಿಡಿ. ಆರ್ಥಿಕವಾಗಿ ಲೇವಾದೇವಿ ವ್ಯವಹಾರದಲ್ಲಿ ಜಾಗರೂಕತೆ ಇರಲಿ. ಮಗನ ಜವಾಬ್ದಾರಿಯುತ ನಡವಳಿಕೆ ಹೆಮ್ಮೆ ಎನಿಸುವುದು.

ಸಿಂಹ: ಹೊಸ ವ್ಯಕ್ತಿಗಳಿಂದ ಪ್ರಚೋದನೆಗೆ ಒಳಗಾಗದಿರಿ. ಮನಸ್ಸಿನ ನಾಗಾಲೋಟಕ್ಕೆ ಕಡಿವಾಣ ಹಾಕಿ. ಸಂಯಮದ ನಡವಳಿಕೆ ಅಗತ್ಯ. ಚಾಲಕ ವೃತ್ತಿಯವರು ಉದ್ಯೋಗದಲ್ಲಿ ಜಾಗ್ರತರಾಗಿರಿ.

ಕನ್ಯಾ: ಕೆಲಸವನ್ನು ತ್ವರಿತಗೊಳಿಸುವುದರಿಂದ ಉಂಟಾಗುವ ನಷ್ಟದ ಪ್ರಮಾಣವನ್ನು ಕಡಿಮೆಗೊಳಿಸಿಕೊಳ್ಳಬಹುದು. ಸ್ತ್ರೀಯರು ಹೊಟ್ಟೆಗೆ ಸಂಬಂಧಿಸಿದ ಸಮಸ್ಯೆಯಿಂದ ನಿರುತ್ಸಾಹಿಯಾಗಿರುತ್ತೀರಿ.

ತುಲಾ: ವಾಹನಗಳ ಬಿಡಿ ಭಾಗ ಮಾರಾಟಗಾರರಿಗೆ ಮತ್ತು ರಿಪೇರಿ ಮಾಡುವವರಿಗೆ ಬಿಡುವಿಲ್ಲದ ದಿನ. ದುರಭ್ಯಾಸಗಳಿಂದ ಹೊರಬರುವ ಪ್ರಯತ್ನವಿರಲಿ. ಉತ್ತಮ ಫಲ ದೊರೆಯುವುದು.

ವೃಶ್ಚಿಕ: ಕೌಟುಂಬಿಕ ಸಮಸ್ಯೆಗಳನ್ನು ಎಲ್ಲರೂ ಮೆಚ್ಚುವಂತೆ ಪರಿಹರಿಸಿಕೊಳ್ಳುವ ಸಾಮರ್ಥ್ಯ ಅಭಿವೃದ್ಧಿಯಾಗಲಿದೆ. ಆರಕ್ಷಕ ಅಧಿಕಾರಿಗಳಿಗೆ ಕೆಲಸದ ಒತ್ತಡ ಕಡಿಮೆಯಾಗಲಿದೆ. ವಾಹನ ಕೊಳ್ಳುವಿರಿ.

ಧನು: ಬಂದಂಥ ಅವಕಾಶವನ್ನು ವಿವೇಚನೆಯಿಂದ ಉಪಯೋಗಿಸಿಕೊಳ್ಳಿ. ಸೃಜನಶೀಲ ಯೋಜನೆಗಳಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುವಿರಿ. ವೃತ್ತಿ ಬದಲಾವಣೆಯ ಸಮಸ್ಯೆ ನಿವಾರಣೆಯಾಗುವುದು.

ಮಕರ: ಧಾರ್ಮಿಕ ಕ್ಷೇತ್ರದಲ್ಲಿರುವವರು ವೃತ್ತಿ ಜೀವನದತ್ತ ಗಮನ ಹರಿಸುವುದು ಒಳ್ಳೆಯದು. ವಿವಾಹಕ್ಕೆ ಸೋದರಿಕೆಯಲ್ಲಿ ಸಂಬಂಧ ಪ್ರಸ್ತಾಪ ನಡೆಸಬಹುದು. ಸ್ನೇಹಿತನ ಹಣವನ್ನು ದಿನಾಂತ್ಯಕ್ಕೆ ಹಿಂದಿರುಗಿಸುವಿರಿ.

ಕುಂಭ: ಆಸ್ತಿ–ವ್ಯವಹಾರಗಳಿಂದ ಉತ್ತಮ ಲಾಭ. ವೃತ್ತಿ ಕ್ಷೇತ್ರದಲ್ಲಿ ನಿಷ್ಠೆ, ಪ್ರಾಮಾಣಿಕತೆಗೆ ಗೌರವ ಸಿಗಲಿದೆ. ಗುತ್ತಿಗೆ ಕೆಲಸಗಾರರಿಗೆ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯಲಿದೆ.

ಮೀನ: ವಾಣಿಜ್ಯೋದ್ಯಮ ಮಂದಿಗೆ ವ್ಯವಹಾರದಲ್ಲಿ ಬಂಡವಾಳ ತೊಡಗಿಸಲು ಉತ್ತಮ ದಿನ. ನಿರೀಕ್ಷೆಯಂತೆ ದಿನ ಸಾಗಲಿದೆ. ಸಾಲ ಮಾಡುವ ಯೋಚನೆ ಕೈ ಬಿಡಿ.

ನಮ್ಮ ದಾರಿಯಲ್ಲಿ ಬಿದ್ದ ಮುಳ್ಳನ್ನು ತೆಗೆಯಬೇಕು

ನುಡಿ ಬೆಳಗು 150



ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

ನಾವು ವಾಸಿಸುವ ಈ ಪ್ರಪಂಚ ವೈವಿಧ್ಯತೆಯಿಂದ ಕೂಡಿದೆ. ಇದು ಸಮ್ಮಿಶ್ರಣ. ಇಲ್ಲಿ ಹೂವು ಇರುವುದು ಎಷ್ಟು ಸತ್ಯವೋ, ಮುಳ್ಳು ಇರುವುದೂ ಅಷ್ಟೇ ಸತ್ಯ. ಇಲ್ಲಿ ಕತ್ತಲೆಯೂ ಇದೆ, ಬೆಳಕೂ ಇದೆ. ಇಲ್ಲಿ ಒಳ್ಳೆಯದೂ ಇದೆ, ಕೆಟ್ಟದ್ದೂ ಇದೆ. ಇಲ್ಲಿ ಹಿತವೂ ಇದೆ, ಅಹಿತವೂ ಇದೆ. ಇಲ್ಲಿ ಬುದ್ಧನೂ ಇದ್ದಾನೆ, ಅಂಗುಲಿಮಾಲನೂ ಇದ್ದಾನೆ. ಇಲ್ಲಿ ಬಸವಣ್ಣನೂ ಇದ್ದಾನೆ, ಮಂಚಣ್ಣನಂತಹವರೂ ಇದ್ದಾರೆ. ಧರ್ಮರಾಜನಂತಹವರೂ ಇದ್ದಾರೆ, ಶಕುನಿಗಳಂತಹವರೂ ಇದ್ದಾರೆ. ವಿಶ್ವೇಶ್ವರಯ್ಯ ಅಂಥವರೂ ಇದ್ದಾರೆ, ವೀರಪ್ಪನ್ ಅವರಂಥವರೂ ಇದ್ದಾರೆ. ಅಬ್ದುಲ್ ಕಲಾಂನಂಥವರೂ ಇದ್ದಾರೆ, ಕಸಬ್‌ನಂಥವರೂ ಇದ್ದಾರೆ. ಇದು ಸಮ್ಮಿಶ್ರಣ ಪ್ರಪಂಚ. ಆಯ್ಕೆ ನಮ್ಮದು.

ಈಗ ನಮ್ಮಲ್ಲಿ ಜಾಲಿ ಗಿಡ ಇದೆ. ಜಾಲಿ ಗಿಡದಲ್ಲಿ ಬಹಳ ಮುಳ್ಳುಗಳು ಇವೆ ಎಂದು ಅದನ್ನು ಸಂಪೂರ್ಣ ನಾಶ ಮಾಡುತ್ತೇನೆ ಎಂದು ಕೊಡಲಿ ಹಿಡಿದು ಹೋದರೆ ನಮ್ಮ ಜೀವ ಹೋಗುತ್ತದೆಯೇ ವಿನಾ ಜಾಲಿ ಸಂಪೂರ್ಣ ನಾಶ ಮಾಡಲು ಆಗದು. ಮನುಷ್ಯ ಏನು ತಿಳಕೋಬೇಕು ಎಂದರೆ ಎಲ್ಲೆಲ್ಲಿ ಮುಳ್ಳುಗಳು ಇವೆ, ಅದನ್ನು ತೆಗೆಯಲು ಹೋಗುವುದಲ್ಲ. ನನ್ನ ದಾರಿಯಲ್ಲಿ ಬಿದ್ದ ಮುಳ್ಳುಗಳನ್ನು ತೆಗೆದು ದಾರಿಯನ್ನು ಸುಗಮಗೊಳಿಸಿಕೊಳ್ಳಬೇಕು ಅಷ್ಟೇ. ಈಗ ತುಂಗಭದ್ರಾ ಡ್ಯಾಂ ಇದೆ. ಮಳೆ ಬಂತು ಅಂದರೆ ರಾಡಿ ನೀರು ಬರುತ್ತದೆ. ಅದೇ ನೀರನ್ನು ಕುಡಿದರೆ ನಮಗೆ ಇನ್‌ಫೆಕ್ಷನ್ ಆಗುತ್ತದೆ. ಅದಕ್ಕೆ ಫಿಲ್ಟರ್ ಮಾಡಿ ನೀರು ಕುಡಿಯಬೇಕು. ಅದು ಬಿಟ್ಟು ನಾನು ಬಹಳ ಶ್ರೀಮಂತ ಇದ್ದೇನೆ ಎಂದು ತುಂಗಭದ್ರಾ ಡ್ಯಾಂ ಫಿಲ್ಟರ್ ಮಾಡಲು ಹೋಗಬಾರದು. ನಮ್ಮ ಮನೆಗೆ ಬರುವ ನೀರನ್ನು ಕುದಿಸಿ ಆರಿಸಿ ಕುಡಿಯಬೇಕು ಅಷ್ಟೇ. ನಮಗೆ ಬೇಕಾದ ಸತ್ಯವೂ ಕೇಳುತ್ತವೆ. ನಮಗೆ ಬೇಕಾಗದ ಸತ್ಯಗಳೂ ಕೇಳುತ್ತವೆ. ಆಯ್ಕೆ ನಮ್ಮದು. ನಮಗೆ ಬೇಡಾದ ರೂಪ ಕಾಣಿಸುತ್ತಿರುತ್ತದೆ. ಯಾರದ್ದೋ ಮುಖ ನೋಡಬಾರದು ಎಂದುಕೊಂಡಿರುತ್ತೇವೆ. ಆದರೂ ದಿನಾ ಅವರೇ ಸಿಗುತ್ತಿರುತ್ತಾರೆ.

ಈ ಶಬ್ದಗಳನ್ನು ಕೇಳಲೇಬಾರದು ಎಂದುಕೊಂಡಿರುತ್ತೇವೆ. ಆದರೂ ಅಂತಹ ಶಬ್ದಗಳು ಕಿವಿಗೆ ಬಂದು ಬೀಳುತ್ತವೆ. ಏನು ಮಾಡೋದು? ಅದಕ್ಕೆ ಬಸವಣ್ಣ ‘ಅತ್ತ ಇತ್ತ ಹೋಗದಂತೆ ಹೆಳವನ ಮಾಡಯ್ಯ, ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯ, ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯ’ ಎಂದರು. ಹೆಳವನ ಮಾಡು ಎಂದರೆ ಕಾಲಿಲ್ಲದಂತೆ ಮಾಡು ಎಂದರ್ಥವಲ್ಲ. ಅಂಧನ ಮಾಡು ಎಂದರೆ ಕಣ್ಣು ಕಾಣದಂತೆ ಮಾಡು, ಕಿವುಡನ ಮಾಡು ಎಂದರೆ ಕಿವಿ ಕೇಳದಂತೆ ಮಾಡು ಎಂದು ಅರ್ಥವಲ್ಲ. ನೋಡು, ಕೇಳು, ಮುಟ್ಟು; ಆದರೆ ಮೈ ಹೊಲಸು ಮಾಡಿಕೊಳ್ಳಬೇಡ ಎಂದು ಅರ್ಥ. ಕೆಲವರಿಗೆ ಸಂಜೆಯಾದ ತಕ್ಷಣ ಕಾಲು ಎಲ್ಲೆಲ್ಲಿಗೋ ಹೋಗತೈತಿ. ಅದಕ್ಕೆ ಬಸವಣ್ಣ ಅತ್ತಿತ್ತ ಹೋಗಬೇಡ ಎಂದು ಹೇಳಿದ್ದು.

ದಾರಿಯಲ್ಲಿ ತಿಪ್ಪೆಯೂ ಕಾಣತೈತಿ, ಹೂವೂ ಕಾಣತೈತಿ. ನಾವು ತಿಪ್ಪೆಯ ಸುದ್ದಿಗೆ ಹೋಗಬಾರದು. ಹೂವಿನ ಬಗ್ಗೆ ಪ್ರಚಾರ ಮಾಡಬೇಕು. ಅದಕ್ಕೆ ಬಸವಣ್ಣ ‘ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯ..’ ಎಂದರು. ದಾರಿಯಲ್ಲಿ ಏನೇನೋ ಮಾತುಗಳು ಕೇಳುತ್ತವೆ. ಯಾವುದನ್ನು ಕೇಳಬೇಕೋ ಅದನ್ನಷ್ಟೇ ಕೇಳಿಸಿಕೊಳ್ಳಬೇಕು. ಬಸವಣ್ಣ ಹೇಳಿದ್ದೂ ಅದನ್ನೇ. ❖

ಪದಬಂಧ 5979


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಬಿರುಸಾದುದು ಅಥವಾ ಒರಟಾದುದನ್ನು ಹೀಗೆನ್ನಿ (3)
3.ನಿಧಾನವಾಗಿ ನೋಡಿ! ಒಪ್ಪಂದ ಇಲ್ಲಿ ಕಾಣುತ್ತಿದೆ (3)
5.ಈತ ಬುದ್ಧಿಗೆಟ್ಟವನು! (5)
6.ಅಲೆಯುತ್ತಿರುವಾಗ ಉಲ್ಟಾ ಬಡಿದ ತರಂಗ! (2)
8.ಸಂತತಿಯಲ್ಲಿರುವ ಸಾಧು (2)
9.ಹಸುವಿನ ಮರಿ (2)
10.ಅಧಿಕೃತ ದಾಖಲೆಗಳ ಕೊನೆಯಲ್ಲಿ ಸೇರಿಸುವ ವಿಶೇಷ ಅಂಶ (2)
14.ಮತ ಧರ್ಮವನ್ನು ಅನುಸರಿಸದವನು (5)
15.ಅತಿಯಾದ ಆತುರ (3)
16.ಕಣದಲ್ಲಿ ನಡೆದ ಮದುವೆ (3)

ಮೇಲಿಂದ ಕೆಳಕ್ಕೆ

1.ಕಲೆಯೊಳಗಿರುವ ಆಹ್ವಾನ ಪತ್ರ (4)
2.ನೂರರ ಮೊತ್ತ (3)
3.ಕಟಕಟೆಯಲ್ಲಿ ತೋಡಿಕೊಂಡ ನೋವು! (3)
4.ಅದೇ ತಾನೆ ಹುಟ್ಟಿದುದು (4)
7.ಹೂಗಳಿಂದ ತೆಗೆದ ಸುಗಂಧ ದ್ರವ್ಯ (3)
8.ಆನಂದ ಹೀಗೆ ಬಂದಿದೆ (3)
9.ಶಿಷ್ಯನ ಉಗುರು (4)
11.ವಾಲ್ಮೀಕಿ ವಿರಚಿತ ಬೃಹತ್ ಗ್ರಂಥ (4)
12.ಹಳದಿ ಬಣ್ಣದ ರಾಸಾಯನಿಕ ವಸ್ತು (3)
13.ಚಕಚಕನೆ ನೇಯುವ ರಾಟೆ (3)



5978ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಜ್ರ 3.ಮತದಾನ
5.ಅಪ್ರಸ್ತುತ
8.ಸಾಂಕ್ರಾಮಿಕರೋಗ
11.ಕಪೋಲಕಲ್ಪಿತ 13.ಡಮರುಗ
15.ತಲಾಂತರ 16 ಬಲೆ

ಮೇಲಿಂದ ಕೆಳಕ್ಕೆ:
1.ವನ 2.ಸುಸ್ತು
4.ತಪ್ರಸಾಂ 6.ಪ್ರಯೋಗ
7.ತಲೆನೋವು 9.ಕಪಾಲ
10.ಅವಘಡ 11.ಕದಿರು
12.ತದ್ಧಿತ 14.ಮಗ್ಗ
15.ತಲೆ

ಸುಡೊಕು 6364

3	9		2		5		6	
			4			8		5
	4	5			9		3	
4	6		9		7			
				4		1		6
8		7	5		6		4	
		4			2			
7	2			5		6		3
	8		7				5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ

6363ಸುಡೊಕು

6	7	9	3	5	4	2	1	8
5	2	4	1	6	8	9	3	7
1	8	3	2	7	9	6	5	4
8	6	7	9	3	5	1	4	2
2	4	5	6	1	7	3	8	9
9	3	1	4	8	2	5	7	6
4	1	8	5	9	6	7	2	3
3	9	2	7	4	1	8	6	5
7	5	6	8	2	3	4	9	1


ಕರ್ನಾಟಕದಲ್ಲಿ ಮಾನ್ಯತೆ ಪಡೆದ 16,954 ನವೋದ್ಯಮ: ಕೇಂದ್ರ

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷದ ಜನವರಿ 31ರ ವೇಳೆಗೆ ದೇಶದಲ್ಲಿ ಮಾನ್ಯತೆ ಪಡೆದ 1,61,150 ನವೋದ್ಯಮಗಳು ಇವೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಮಂಗಳವಾರ ಲೋಕಸಭೆಗೆ ತಿಳಿಸಿದ್ದಾರೆ. ಮಹಾರಾಷ್ಟ್ರದಲ್ಲಿ 28,511, ಕರ್ನಾಟಕದಲ್ಲಿ 16,954 ಇವೆ. ಸ್ಟಾರ್ಟ್‌ಅಪ್ ಇಂಡಿಯಾ ಕ್ರಿಯಾ ಯೋಜನೆ ಅಡಿಯಲ್ಲಿ ಈ ನವೋದ್ಯಮಗಳು ತೆರಿಗೆ ಪ್ರೋತ್ಸಾಹಕ್ಕೆ ಅರ್ಹತೆ ಹೊಂದಿರುತ್ತವೆ ಎಂದು ತಿಳಿಸಿದ್ದಾರೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ		ಗೊರಬಲು	17010-27259	ಬಿಳೆಗೋಟು	14199-28892
ಕೋಕ	20000-27500	ರಾಶಿ	34189-51609	ಚಾಲಿ	32011-37613
ಹೊಸತು	30000-40000	ಸರಕು	46659-92696	ಕೆಂಪುಗೋಟು	17699-23699
ಹಳತು	45200-49000	**ಸಿದ್ದಾಪುರ**		ರಾಶಿ	40299-47489
ಸಾಗರ		ಬಿಳೆಗೋಟು	20319-25499	**ಯಲ್ಲಾಪುರ**	
ಬಿಳೆಗೋಟು	14754-19000	ಚಾಲಿ	32199-35599	ಅಪಿ	59195-68179
ಚಾಲಿ	29899-33599	ಕೋಕ	13099-18299	ಬಿಳೆಗೋಟು	12899-26009
ಕೋಕ	8900-16100	ಹೊಸಚಾಲಿ	28889-35099	ಚಾಲಿ	27469-39049
ಕೆಂಪುಗೋಟು	15119-22600	ಕೆಂಪುಗೋಟು	19019-21419	ಕೋಕ	4699-16899
ರಾಶಿ	22109-50579	ರಾಶಿ	42099-49359	ಕೆಂಪುಗೋಟು	14099-26319
ಸಿಪ್ಪೆಗೋಟು	16570-16799	ತಟ್ಟಿಬೆಟ್ಟೆ	29089-39099	ರಾಶಿ	38809-58875
ಶಿವಮೊಗ್ಗ		**ಶಿರಸಿ**		ತಟ್ಟಿಬೆಟ್ಟೆ	29819-38169
ಬೆಟ್ಟೆ	40159-56009	ಬೆಟ್ಟೆ	23391-39099		

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,460
ಇಂದಿನ ಅಂತ್ಯ	22,497
▲	37
ದಿನದ ಗರಿಷ್ಠ	22,522

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹435
12 ಕ್ಕೆ	₹60
ಮೈಸೂರು	
100ಕ್ಕೆ	₹430

ವಿನಿಮಯ ದರ

$ ಡಾಲರ್	87.21
£ ಪೌಂಡ್	112.80
€ ಯುರೊ	95.18
¥ ಯೆನ್ (100ಕ್ಕೆ)	59

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿ)

ಆರ್‌ಎಸ್‌ಎಸ್-4	₹191
ಆರ್‌ಎಸ್‌ಎಸ್-5	₹186
ಗುಡ್ ಲಾಟ್	₹180

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹26250
ಎಸಿ	₹15400
ಆರ್‌ಪಿ	₹22250
ಆರ್‌ಸಿ	₹12150

'ಹತ್ತಿ ಆಮದು ಹೆಚ್ಚಳ ಸಾಧ್ಯತೆ'



ಮುಂಬೈ (ರಾಯಿಟರ್ಸ್): 'ಉತ್ಪಾದನೆ ಇಳಿಕೆಯಿಂದ ದೇಶದ ಹತ್ತಿ ಆಮದು ಪ್ರಮಾಣ ಒಂದೇ ವರ್ಷದಲ್ಲಿ ದ್ವಿಗುಣಗೊಳ್ಳುವ ಸಾಧ್ಯತೆ ಇದೆ' ಎಂದು ಭಾರತೀಯ ಹತ್ತಿ ಬೆಳೆಗಾರರ ಒಕ್ಕೂಟ (ಸಿಎಐ) ಮಂಗಳವಾರ ತಿಳಿಸಿದೆ.

ಬಿತ್ತನೆ ಪ್ರದೇಶದಲ್ಲಿ ಇಳಿಕೆ ಮತ್ತು ಹವಾಮಾನ ವೈಪರೀತ್ಯದಿಂದ ಉತ್ಪಾದನೆಯು ಕಡಿಮೆಯಾಗುವ ಸಾಧ್ಯತೆಯಿದೆ ಎಂದು ತಿಳಿಸಿದೆ. ಸೆಪ್ಟೆಂಬರ್ 30ಕ್ಕೆ ಕೊನೆಗೊಳ್ಳುವ ಪ್ರಸಕ್ತ ಮಾರುಕಟ್ಟೆ ವರ್ಷದಲ್ಲಿ ಭಾರತವು 30 ಲಕ್ಷ ಬೇಲ್‌ಗಳಷ್ಟು ಆಮದು ಮಾಡಿಕೊಳ್ಳಬಹುದು. ಹಿಂದಿನ ವರ್ಷದ ಇದೇ ಅವಧಿಯಲ್ಲಿ 15.2 ಲಕ್ಷ ಬೇಲ್ ಆಮದಾಗಿತ್ತು. ಅಕ್ಟೋಬರ್–ಫೆಬ್ರುವರಿಯಲ್ಲಿ 22 ಲಕ್ಷ ಬೇಲ್ ವಿದೇಶಿ ಹತ್ತಿ ಭಾರತದ ಬಂದರುಗಳಲ್ಲಿ ಬಂದಿಳಿದಿದೆ ಎಂದು ತಿಳಿಸಿದೆ. ಪ್ರಸಕ್ತ ವರ್ಷದಲ್ಲಿ ಹತ್ತಿ ಉತ್ಪಾದನೆ ಕಳೆದ ವರ್ಷಕ್ಕಿಂತ ಶೇ 10ರಷ್ಟು ಕುಸಿದು 2.95 ಕೋಟಿ ಬೇಲ್ ಗಳಷ್ಟಾಗಬಹುದು. ರಫ್ತು 28.4 ಲಕ್ಷ ಬೇಲ್‌ಗಳಿಂದ 17 ಲಕ್ಷ ಬೇಲ್‌ಗಳಿಗೆ ಇಳಿಯಲಿದೆ ಎಂದಿದೆ.

ನಾಲ್ಕು ವರ್ಷದ ಕನಿಷ್ಠಕ್ಕೆ ಆಮದು ಪ್ರಮಾಣ ಇಳಿಕೆ: ಎಸ್‌ಇಎ

ಅಡುಗೆ ಎಣ್ಣೆ ಆಮದು ಕುಸಿತ

ಮುಖ್ಯಾಂಶಗಳು

- ದರ ಏರಿಕೆಯಿಂದ ಕುಸಿದ ಬಳಕೆ ಮತ್ತು ಬೇಡಿಕೆ
- ಸೋಯಾ ಎಣ್ಣೆ ಶೇ 36, ಸೂರ್ಯಕಾಂತಿ ಎಣ್ಣೆ ಶೇ 20ರಷ್ಟು ಕುಸಿತ
- ಮಾರ್ಚ್ ತಿಂಗಳಲ್ಲಿ ಆಮದು ಪ್ರಮಾಣ ಸುಧಾರಣೆಗೊಳ್ಳುವ ನಿರೀಕ್ಷೆ



ಮುಂಬೈ/ನವದೆಹಲಿ (ರಾಯಿಟರ್ಸ್/ಪಿಟಿಐ): ದೇಶದ ಅಡುಗೆ ಎಣ್ಣೆ ಆಮದು ಪ್ರಮಾಣ ಫೆಬ್ರುವರಿಯಲ್ಲಿ ನಾಲ್ಕು ವರ್ಷಗಳ ಕನಿಷ್ಠ ಮಟ್ಟಕ್ಕೆ ದಾಖಲಾಗಿದೆ ಎಂದು ಭಾರತೀಯ ಎಣ್ಣೆ ಗಿರಣಿ ಮಾಲೀಕರ ಸಂಘ (ಎಸ್‌ಇಎ) ಮಂಗಳವಾರ ತಿಳಿಸಿದೆ.

'ಅತ್ಯಧಿಕ ಗುಣಮಟ್ಟದ ಅಡುಗೆ ಎಣ್ಣೆಯ ದರದಲ್ಲಿ ವಿಪರೀತ ಏರಿಕೆಯಾಗಿದೆ. ಇದರಿಂದಾಗಿ ಜನರ ಬಳಕೆ ಮತ್ತು ಬೇಡಿಕೆ ಎರಡೂ ಕುಸಿದಿದೆ. ಪರಿಣಾಮವಾಗಿ ಆಮದು ಕಡಿಮೆಯಾಗಿದೆ' ಎಂದು ಎಸ್‌ಇಎ ತಿಳಿಸಿದೆ.

2024ರ ಫೆಬ್ರುವರಿಯಲ್ಲಿ ಒಟ್ಟು 9.58 ಲಕ್ಷ ಟನ್‌ಗಳಷ್ಟು ಅಡುಗೆ ಎಣ್ಣೆ ಆಮದಾಗಿತ್ತು. ಈ ಫೆಬ್ರುವರಿಯಲ್ಲಿ 8.85 ಲಕ್ಷ ಟನ್‌ಗಳಷ್ಟು ಆಮದಾಗಿದ್ದು, ಶೇ 8ರಷ್ಟು ಕುಸಿತ ಕಂಡಿದೆ. ತಾಳೆ ಎಣ್ಣೆ ಆಮದಿನಲ್ಲಿ ಏರಿಕೆಯಾಗಿದ್ದರೂ ಸೋಯಾ ಎಣ್ಣೆ ಆಮದು ಶೇ 36ರಷ್ಟು (2.83 ಲಕ್ಷ ಟನ್) ಮತ್ತು ಸೂರ್ಯಕಾಂತಿ ಎಣ್ಣೆ ಶೇ 20ರಷ್ಟು (2.28 ಲಕ್ಷ ಟನ್) ಕುಸಿದಿದೆ. ಪರಿಣಾಮವಾಗಿ ಒಟ್ಟಾರೆ ಆಮದು ಕುಸಿದಿದೆ.

ಸೋಯಾ ಮತ್ತು ಸೂರ್ಯಕಾಂತಿ ಎಣ್ಣೆಯ ಆಮದು ಕುಸಿದ ಕಾರಣದಿಂದ, ದೇಶದ ಅಡುಗೆ ಎಣ್ಣೆ ದಾಸ್ತಾನು ಮಾರ್ಚ್ 1ರ ವೇಳೆಗೆ ಶೇ 14ರಷ್ಟು ಕಡಿಮೆಯಾಗಿ, 18.70 ಲಕ್ಷ ಟನ್ ಆಗಿದೆ. ಇದು ಮೂರು ವರ್ಷದ ಕನಿಷ್ಠ.

2024ರ ನವೆಂಬರ್‌ನಿಂದ 2025ರ ಅಕ್ಟೋಬರ್‌ವರೆಗಿನ ತೈಲ ಮಾರುಕಟ್ಟೆ ವರ್ಷದ ಮೊದಲ ನಾಲ್ಕು ತಿಂಗಳಲ್ಲಿ ಸಸ್ಯಜನ್ಯ ತೈಲ ಆಮದು 48.07 ಲಕ್ಷ ಟನ್ ಆಗಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ 46.38 ಲಕ್ಷ ಟನ್ ಇತ್ತು ಎಂದು ತಿಳಿಸಿದೆ.

ಭಾರತವು ತಾಳೆ ಎಣ್ಣೆಯನ್ನು ಇಂಡೊನೇಷ್ಯಾ, ಮಲೇಷ್ಯಾ ಮತ್ತು ಥಾಯ್ಲೆಂಡ್‌ದಿಂದ ಖರೀದಿಸುತ್ತದೆ. ಸೋಯಾ ಎಣ್ಣೆ ಮತ್ತು ಸೂರ್ಯಕಾಂತಿ ಎಣ್ಣೆಯನ್ನು ಅರ್ಜೆಂಟೀನಾ, ಬ್ರೆಜಿಲ್, ರಷ್ಯಾ ಮತ್ತು ಉಕ್ರೇನ್‌ನಿಂದ ಆಮದು ಮಾಡಿಕೊಳ್ಳುತ್ತದೆ.

ಪ್ರಸಕ್ತ ವರ್ಷದ ತೈಲ ಮಾರುಕಟ್ಟೆ ವರ್ಷದ ಮೊದಲ ನಾಲ್ಕು ತಿಂಗಳಲ್ಲಿ ತಾಳೆ ಎಣ್ಣೆ ಆಮದು ಪ್ರಮಾಣ ಶೇ 43ರಷ್ಟು ಇಳಿಕೆಯಾಗಿದೆ ಎಂದು ತಿಳಿಸಿದೆ.

ಹೆಚ್ಚಿದ ತಾಳೆ ಎಣ್ಣೆ ಬೆಲೆಯು ಇತ್ತೀಚಿನ ತಿಂಗಳುಗಳಲ್ಲಿ ಆಮದು ಮತ್ತು ಬಳಕೆ ಎರಡನ್ನೂ ಕಡಿಮೆ ಮಾಡಿದೆ. ಇದು ಸೋಯಾಬೀನ್ ಎಣ್ಣೆ ಮತ್ತು ಸೂರ್ಯಕಾಂತಿ ಎಣ್ಣೆಯ ಬಳಕೆಯ ಹೆಚ್ಚಳಕ್ಕೆ ಕಾರಣವಾಗಿದೆ.

'ಉದ್ಯಮವು ದಾಸ್ತಾನು ಪ್ರಮಾಣ ಹೆಚ್ಚಿಸಲು ಪ್ರಯತ್ನಿಸುತ್ತಿದೆ. ಇದರಿಂದ ಮಾರ್ಚ್ ತಿಂಗಳಲ್ಲಿ ತಾಳೆ ಎಣ್ಣೆ ಮತ್ತು ಸೋಯಾ ಎಣ್ಣೆ ಆಮದು ಸುಧಾರಣೆಗೊಳ್ಳುವ ನಿರೀಕ್ಷೆ ಇದೆ' ಎಂದು ಅಡುಗೆ ಎಣ್ಣೆ ವ್ಯಾಪಾರಿ ಜಿಜಿಎನ್ ರಿಸರ್ಚ್‌ನ ವ್ಯವಸ್ಥಾಪಕ ಪಾಲುದಾರ ರಾಜೇಶ್ ಪಟೇಲ್ ಹೇಳಿದ್ದಾರೆ.

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಪ್ರತಿ ಕೆ.ಜಿ)	₹300-662
ದ್ವಿತಳಿ (ಪ್ರತಿ ಕೆ.ಜಿ)	₹316-818

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1410 (1415)
ಸೋಯಾ (ರಿಫೈನ್ಡ್)	₹1320 (1330)
ಸೂರ್ಯಕಾಂತಿ (ರಿಫೈನ್ಡ್)	₹1420 (1420)
ಪಾಮೋಲೀನ್	₹1360 (1365)

ಉದ್ದು: ಆಮದಿಗೆ ಗಡುವು ವಿಸ್ತರಣೆ



ನವದೆಹಲಿ (ಪಿಟಿಐ): ಸುಂಕ ಮುಕ್ತ (ಸುಂಕ ರಹಿತ) ಉದ್ದು ಆಮದು ಮಾಡಿಕೊಳ್ಳಲು ಇರುವ ಗಡುವನ್ನು 2026ರ ಮಾರ್ಚ್ 31ರವರೆಗೆ ಕೇಂದ್ರ ಸರ್ಕಾರ ವಿಸ್ತರಿಸಿದೆ.


ಈ ಮೊದಲಿದ್ದ ಆದೇಶ ಇದೇ ಮಾರ್ಚ್‌ಗೆ ಅಂತ್ಯವಾಗುತ್ತಿತ್ತು. ಇದೀಗ ಸರ್ಕಾರ ಗಡುವನ್ನು ಮತ್ತೆ ವಿಸ್ತರಿಸಿದೆ. ದೇಶೀಯ ಮಾರುಕಟ್ಟೆಯಲ್ಲಿ ಸರಕುಗಳ ಬೆಲೆಯಲ್ಲಿ ಸ್ಥಿರತೆ ತರಲು ಇದು ನೆರವಾಗಲಿದೆ ಎಂದು ವಿದೇಶಿ ವ್ಯಾಪಾರ ಮಹಾನಿರ್ದೇಶನಾಲಯ (ಡಿಜಿಎಫ್‌ಟಿ) ತಿಳಿಸಿದೆ.

ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ನವೆಂಬರ್‌ವರೆಗೂ ₹5,242 ಕೋಟಿ ಮೌಲ್ಯದ ಉದ್ದು ಆಮದಾಗಿದೆ. ಈ ಪೈಕಿ ಮ್ಯಾನ್ಮಾರ್‌ನಿಂದಲೇ ₹4,788 ಕೋಟಿ ಮೌಲ್ಯದಷ್ಟು ಆಮದಾಗಿದೆ.

2023-24ರ ಆರ್ಥಿಕ ವರ್ಷದಲ್ಲಿ ₹5,783 ಕೋಟಿ ಮೌಲ್ಯದಷ್ಟು (ಮ್ಯಾನ್ಮಾರ್‌ನಿಂದ ₹5,636 ಕೋಟಿ) ಆಮದಾಗಿತ್ತು. ಮ್ಯಾನ್ಮಾರ್‌ನಿಂದ ಭಾರತಕ್ಕೆ ಹೆಚ್ಚಿನ ಪ್ರಮಾಣದ ಉದ್ದು ಆಮದಾಗುತ್ತದೆ. ಜೊತೆಗೆ ಸಿಂಗಪುರ, ಥಾಯ್ಲೆಂಡ್ ಮತ್ತು ಬ್ರೆಜಿಲ್‌ನಿಂದಲೂ ಉದ್ದು ಆಮದಾಗುತ್ತದೆ ಎಂದು ತಿಳಿಸಿದೆ.

ಭಾರತದಲ್ಲಿ ಮಧ್ಯಪ್ರದೇಶ, ಆಂಧ್ರಪ್ರದೇಶ, ಉತ್ತರಪ್ರದೇಶ, ರಾಜಸ್ಥಾನ, ತಮಿಳುನಾಡು ಮತ್ತು ಮಹಾರಾಷ್ಟ್ರದಲ್ಲಿ ಪ್ರಮುಖವಾಗಿ ಉದ್ದು ಬೆಳೆಯಲಾಗುತ್ತದೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಪ್ರಸನ್ನ ಕುಮಾರ್ ಆರ್.ಎಸ್, ನವನಗರ, ಹುಬ್ಬಳ್ಳಿ

- **ಪ್ರಶ್ನೆ:** ನಾನು ಪ್ರಸ್ತುತ ಮೂರು ಬ್ಯಾಂಕ್‌ಗಳ ಕ್ರೆಡಿಟ್ ಕಾರ್ಡ್ ಹೊಂದಿದ್ದೇನೆ. ಇದನ್ನು ಪ್ರತಿ ಹತ್ತು ದಿನದ ಅವಧಿಯಲ್ಲಿ ಪರ್ಯಾಯವಾಗಿ ಬಳಸುತ್ತಾ ನನ್ನ ಕಾರ್ಡ್ ಪಾವತಿ ಅವಧಿಯನ್ನು 40ರಿಂದ 50 ದಿನಕ್ಕೆ ಸರಿದೂಗುವಂತೆ ನಾನು ಮಾಡುವ ವ್ಯವಹಾರಗಳನ್ನು ಹೊಂದಿಸಿಕೊಳ್ಳುತ್ತಿದ್ದೇನೆ. ಈ ರೀತಿ ಮಾಡುವುದರಿಂದ ನನ್ನ ಬ್ಯಾಂಕ್ ಬ್ಯಾಲೆನ್ಸ್ ಸರಿಯಾಗಿ ನಿಭಾಯಿಸಿ ತುಸು ಪ್ರಮಾಣದಲ್ಲಿ ಬಡ್ಡಿ ಲಾಭ ಮಾಡಬಹುದೆಂದು ನನ್ನ ಅಂದಾಜು. ಈ ರೀತಿ ಬಹು ಬ್ಯಾಂಕ್‌ಗಳ ಕಾರ್ಡ್ ವ್ಯವಹಾರದಿಂದ ಏನಾದರೂ ಸಮಸ್ಯೆ ಇದೆಯೆ?

ಉತ್ತರ: ವ್ಯಕ್ತಿಯೊಬ್ಬನ ಆರ್ಥಿಕ ಕ್ಷಮತೆ ಹಾಗೂ ಪಾವತಿ ಸಾಮರ್ಥ್ಯಕ್ಕೆ ಸಂಬಂಧಿಸಿ, ಪಡೆಯಬಹುದಾದ ಅನೇಕ ಆರ್ಥಿಕ ಉತ್ಪನ್ನಗಳಲ್ಲಿ ಕ್ರೆಡಿಟ್ ಕಾರ್ಡ್ ಕೂಡ ಒಂದು. ಸರಿಯಾದ ರೀತಿಯಲ್ಲಿ ಇದನ್ನು ಬಳಸಿದರೆ ನಮಗೆ ಅನುಕೂಲಗಳೇ ಹೆಚ್ಚು. ಕೆಲವರು ಒಂದಕ್ಕಿಂತ ಹೆಚ್ಚು ಕ್ರೆಡಿಟ್ ಕಾರ್ಡ್ ಹೊಂದುವುದು ಉತ್ತಮವೇ ಎಂಬ ಪ್ರಶ್ನೆಯನ್ನು ಸಹಜವಾಗಿ ಕೇಳುವುದಿದೆ. ಇದರ ಗುಣಾವಗುಣಗಳನ್ನು ಇಲ್ಲಿ ಗಮನಿಸಿ ನಿಮಗೆ ಸರಿಯಾದುದನ್ನು ಅಳವಡಿಸಿಕೊಳ್ಳಿ.

ಬಹು ಕ್ರೆಡಿಟ್ ಕಾರ್ಡ್ ಹೊಂದುವ ಸದುಪಾಯಗಳು ಏನೇನೆಂದು ನೋಡುವುದಾದರೆ, ಪ್ರತಿ ಕ್ರೆಡಿಟ್ ಕಾರ್ಡ್ ಪಡೆಯುವಾಗಲೂ ಅದರ ಮಿತಿಯನ್ನು ಮೊದಲು ನಿರ್ಣಯಿಸಲಾಗುತ್ತದೆ. ಈ ಮಿತಿಗೆ ನಮ್ಮ ಬಳಕೆ ಹತ್ತಿರವಾದಂತೆಲ್ಲ, ಬಳಕೆಯ ದರ ಹೆಚ್ಚುತ್ತದೆ. ಇದು ಶೇಕಡಾ 80-90ಕ್ಕೂ ಅಧಿಕ ಆದಂತೆ, ಕಾರ್ಡ್ ಬಳಕೆದಾರರ ಸಾಲ ಬಳಕೆಯ ಅನುಪಾತ (ಕ್ರೆಡಿಟ್ ಯೂಟಿಲೈಜೇಶನ್ ರೇಷಿಯೋ) ಕ್ಷೀಣವಾಗುತ್ತದೆ. ಇದು ಒಂದೇ ಕಾರ್ಡ್ ಹೆಚ್ಚಾಗಿ ಬಳಸುವ ಕಾರಣದಿಂದಲೂ ಆಗಿರಬಹುದು. ಹೀಗಾಗಿ ಒಂದಕ್ಕಿಂತ ಅಧಿಕ ಕಾರ್ಡ್‌ಗಳನ್ನು ನಮ್ಮ ಅಗತ್ಯದ ಬಳಕೆಗೆ ಉಪಯೋಗಿಸಿದಂತೆ ಈ ರೇಷಿಯೋ ಉತ್ತಮವಾಗುತ್ತದೆ.

ಪ್ರಸ್ತುತ ದಿನಗಳಲ್ಲಿ ಬಹುತೇಕ ಹೆಚ್ಚುವರಿ ಪ್ರಯೋಜನಗಳು ಲಭ್ಯವಿರುವ ಹಾಗೂ ಬಳಕೆದಾರರನ್ನು ಖರೀದಿಗೆ ಒತ್ತಾಯಿಸುವ ಅನೇಕ ಕಾರ್ಡ್‌ಗಳು, ಉಡುಗೊರೆಗಳು, ಡಿಸ್ಕೌಂಟ್ ಕಾರ್ಡ್ ಇತ್ಯಾದಿಗಳು ಇವೆ. ಪ್ರತಿ ಕ್ರೆಡಿಟ್ ಕಾರ್ಡ್ ವಿಭಿನ್ನ ಅಂಶಗಳನ್ನು ಹೊಂದಿವೆ. ಇವೆಲ್ಲವನ್ನು ಸಮರ್ಪಕವಾಗಿ ಯೋಚಿಸಿ ಅವನ್ನು ಬಳಸಿಕೊಳ್ಳುವುದು ಸೂಕ್ತ. ಇದಕ್ಕೆ ತಗಲುವ ಯಾವುದೇ ವೆಚ್ಚ ಇದ್ದರೂ ಅದನ್ನು ಮೊದಲೇ ತಿಳಿದುಕೊಳ್ಳಿ.

ಇನ್ನು ಬಹು ಬ್ಯಾಂಕ್‌ಗಳ ಕಾರ್ಡ್ ಬಳಸಿ ಬಡ್ಡಿ ರಹಿತ ಅವಧಿಯಿಂದ ಲಾಭ ಪಡೆಯುವುದು ಪರೋಕ್ಷವಾಗಿ ಹೆಚ್ಚು ಲಾಭದಾಯಕವಾಗಿದ್ದರೂ ಚಾಕಚಕ್ಯವಾಗಿ ಬಳಸಿದರೆ ಮಾತ್ರ ಇದು ಪ್ರಯೋಜನಕಾರಿ. ಯಾವುದೇ ಸಮಯ ಕಾರ್ಡ್ ಬಾಕಿಯನ್ನು ಸಕಾಲದಲ್ಲಿ ಪಾವತಿಸುವುದು ಅಸಾಧ್ಯವಾದರೆ, ಅದರ ತೊಡಕು ಪ್ರತ್ಯೇಕವಾಗಿ ಇದ್ದೇ ಇರುತ್ತದೆ. ಆದರೆ ಸಕಾಲದಲ್ಲಿ ಪಾವತಿಸುವವರಿಗೆ, 40-50 ದಿನಗಳವರೆಗೆ ಯಾವುದೇ ಬಡ್ಡಿ ಇಲ್ಲದೇ ಖರೀದಿಗಳನ್ನು ಮುಂದೂಡಬಹುದು.

ಇಲ್ಲಿ ಹೇಗೆ ಬಹು ಕ್ರೆಡಿಟ್ ಕಾರ್ಡ್ ಹೊಂದುವ ಲಾಭ ಇರುತ್ತದೋ ಅದೇ ರೀತಿ, ಅವನ್ನು ಪರ್ಯಾಯವಾಗಿ ನಿರ್ವಹಿಸುವ ಅವಧಿಯನ್ನು ನೆನಪಿಟ್ಟು ಬಳಸಿಕೊಳ್ಳುವುದು ಕೂಡ ಹೆಚ್ಚು ನಿಗಾ ಇರಿಸಬೇಕಾದ ಕೆಲಸ. ಈ ನಿರ್ವಹಣೆ ಯಾರಿಗೆ ಸಾಧ್ಯವೋ ಅವರಿಗಷ್ಟೇ ಇದು ಹೆಚ್ಚು ಸೂಕ್ತ. ಇದಲ್ಲದೆ, ಬಹು ಕ್ರೆಡಿಟ್ ಕಾರ್ಡ್ ಹೊಂದಿದಾಗ ನಿಮಗೆ ಒಂದೇ ಕಾರ್ಡ್‌ಗೆ ಸಿಗುವ ಮಿತಿಗಿಂತ ಮೂರು ಕಾರ್ಡ್‌ಗಳಿಗೆ ಸೇರಿ ಸಿಗುವ ಮಿತಿ ಹೆಚ್ಚಾಗಿರುತ್ತದೆ. ಹೀಗಾಗಿ ಅತಿಯಾಗಿ ಖರ್ಚು ಮಾಡುವ ಅಪಾಯ ಹೆಚ್ಚುವರಿ ಕ್ರೆಡಿಟ್ ಲಿಮಿಟ್ ಇದ್ದರೆ ಇರುತ್ತದೆ. ಇಂತಹ ಸಂದರ್ಭಗಳಲ್ಲಿ ಆರ್ಥಿಕ ಶಿಸ್ತು ಪಾಲಿಸಿಕೊಂಡು, ಕಾರ್ಡ್ ಹೊಂದುವುದು ಹೆಚ್ಚು ಲಾಭದಾಯಕ. ಹೀಗಾಗಿ ಈ ಬಗ್ಗೆ ಯೋಚಿಸಿ ನಿರ್ಧರಿಸಿ. ಅವನ್ನು ಶಿಸ್ತಿನಿಂದ ನಿಭಾಯಿಸುವ ಹೊಣೆ, ಸಕಾಲದ ಪಾವತಿ ಸಾಧ್ಯತೆ ಇತ್ಯಾದಿ ಎಲ್ಲವೂ ಮುಖ್ಯ.

ಗೌತಮ, ಬೆಂಗಳೂರು

- **ಪ್ರಶ್ನೆ:** ನಾನು ಬಹುರಾಷ್ಟ್ರೀಯ ಕಂಪನಿಯಲ್ಲಿ ಸಾಫ್ಟ್‌ವೇರ್ ಉದ್ಯೋಗಿಯಾಗಿದ್ದು ನನ್ನ ಸಂಬಳದ ಭಾಗವಾಗಿ ಆಗಾಗ್ಗೆ ಕಂಪನಿಯ ವಿದೇಶಿ ಷೇರುಗಳು ಮಂಜೂರು ಆಗುತ್ತವೆ. ಈ ಷೇರುಗಳು ವಿದೇಶಿ ಟ್ರೇಡಿಂಗ್ ಅಕೌಂಟ್‌ನಲ್ಲಿ ಜಮೆಯಾಗುತ್ತವೆ. ಮಾರುಕಟ್ಟೆಯ ಏರಿಳಿತಕ್ಕೆ ಅನುಗುಣವಾಗಿಯೇ ನಾನು ಮಾರಬಹುದಾದರೂ, ಕೆಲವೊಂದು ಅವಧಿಯವರೆಗೆ ಬ್ಲಾಕ್ ಔಟ್ ಅವಧಿಯಲ್ಲಿ ಮಾರಲು ಸಾಧ್ಯವಾಗುವುದಿಲ್ಲ. ಒಮ್ಮೊಮ್ಮೆ ಬ್ಲಾಕ್ ಔಟ್ ಅವಧಿ ಮುಗಿದಾಗ ಮಾರುಕಟ್ಟೆಯ ದರ ಕಡಿಮೆಯಾಗಿರುತ್ತದೆ. ಅದಲ್ಲದೆ ಮಾರಾಟ ಮಾಡಿ ಬಂದ ಲಾಭದ ಮೇಲೆ ಅಲ್ಪಾವಧಿ ಅಥವಾ ದೀರ್ಘಾವಧಿ ಕ್ಯಾಪಿಟಲ್ ಗೇನ್ಸ್ ತೆರಿಗೆಯನ್ನೂ ಕೊಡಬೇಕಾಗುತ್ತದೆ. ಡಾಲರ್ ವಿನಿಮಯ ದರಕ್ಕೆ ತಕ್ಕ ಹಾಗೆ ಲಾಭದಲ್ಲೂ ಕಡಿಮೆಯಾಗುವ ಸಾಧ್ಯತೆ ಇರುತ್ತದೆ. ಇವೆಲ್ಲ ವಿಷಯಗಳನ್ನು ಪರಿಗಣಿಸಿ, ನನಗೆ ಸಿಗುತ್ತಿರುವ ಷೇರುಗಳಿಂದ ಅತ್ಯಧಿಕ ಲಾಭವನ್ನು ಪಡೆದು, ಅಗತ್ಯವಿದ್ದಲ್ಲಿ ಅವುಗಳಿಂದ ಸಿಗುವ ಹಣದಿಂದ ಭಾರತೀಯ ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿ ನನ್ನ ಸಂಪತ್ತನ್ನು ಹೇಗೆ ವೃದ್ಧಿ ಮಾಡಬಹುದೆಂದು ತಿಳಿಸಿ.

ಉತ್ತರ: ಯಾವುದೇ ಆರ್ಥಿಕ ವ್ಯವಹಾರಕ್ಕೆ ಸಂಬಂಧಿಸಿ, ಅದರಲ್ಲೂ ಮುಖ್ಯವಾಗಿ ಹೂಡಿಕೆಯ ಕ್ಷೇತ್ರಕ್ಕೆ ಸಂಬಂಧಿಸಿ ಹೇಳುವುದಾದರೆ, ಯಾವುದೇ ಆರ್ಥಿಕ ಅಪಾಯವೇ ಇರದ ಹೂಡಿಕೆ ಎಂಬುದು ಇಲ್ಲ. ಒಂದು ವೇಳೆ ಆರ್ಥಿಕ ಅಪಾಯ ಏನೂ ಇಲ್ಲ ಎಂದಾದಲ್ಲಿ ನಾವೆಲ್ಲಾ ಬಹು ನಿರೀಕ್ಷಿಸುವ ಸಂಪತ್ತು ವೃದ್ಧಿಸುವ ಅವಕಾಶ ಖಂಡಿತ ಇದ್ದೇ ಇದೆ ಎಂದು ಧೈರ್ಯದಿಂದ ಹೇಳಲಾಗದು. ನೀವೇ ಊಹಿಸಿ, ಬ್ಯಾಂಕ್, ಅಂಚೆ ಠೇವಣಿಯ ಹೂಡಿಕೆ, ನಿಶ್ಚಿತ ಬಡ್ಡಿಯನ್ನು ಯಾವುದೇ ಆರ್ಥಿಕ ಅಪಾಯ ಇಲ್ಲದೆ ನೀಡುತ್ತದೆ. ನಿಮ್ಮ ಅಸಲು ಮೊತ್ತಕ್ಕೂ ಯಾವುದೇ ಧಕ್ಕೆ ಇಲ್ಲ. ಆದರೆ, ಇದಕ್ಕಿಂತ ಹಲವು ಪಟ್ಟು ಲಾಭ ನೀಡುವ ಈಕ್ವಿಟಿ ಮಾರುಕಟ್ಟೆ, ಮ್ಯೂಚುವಲ್ ಫಂಡ್ ಇತ್ಯಾದಿ ಎಲ್ಲವೂ ಸಂಪತ್ತು ಸೃಷ್ಟಿಸುವ ನಿಟ್ಟಿನಲ್ಲಿ ಅತ್ಯುತ್ತಮವೇ. ಆದರೆ ಅದನ್ನು ನಾವು ಎಷ್ಟು ಸೂಕ್ಷ್ಮತೆಯಿಂದ, ಸಮಯೋಚಿತ ನಿರ್ಧಾರಗಳ ಮೂಲಕ ನಿಗಾ ಇರಿಸಿ ಅದರ ಒಳಹೊರಹುಗಳನ್ನು ಅರ್ಥೈಸಿ ಹೂಡಿಕೆ ಮಾಡುತ್ತೇವೆ ಎಂಬುದರ ಮೇಲೆ ಈ ಉದ್ದೇಶ ಸಾಧ್ಯವಾಗಿಸಬೇಕಾಗಿರುತ್ತದೆ. ಬಹುತೇಕ ಸಂದರ್ಭದಲ್ಲಿ ಲಾಟರಿ ರೀತಿ ನಾವು ಇಂತಹ ಹೂಡಿಕೆಗಳಲ್ಲಿ ಹಣ ತೊಡಗಿಸುತ್ತೇವೆ. ಆದರೆ, ಇದರಿಂದ ನಮ್ಮ ಗುರಿ ಸಾಧನೆ ಆಗಲಾರದು. ಸಕಾಲಕ್ಕೆ ಕಾಯಬೇಕು, ಹಂತ ಹಂತದ ಹೂಡಿಕೆ ಬೇಕು.

ಹೀಗಾಗಿ ಪ್ರತಿ ಹೂಡಿಕೆಗೂ ಇರಬೇಕಾದ ಪೂರ್ಣ ತಯಾರಿ ಹಾಗೂ ಯೋಜಿತ ನಿರ್ಧಾರದಿಂದ ಮಾತ್ರ ಇದು ಸಾಧ್ಯವಾಗುವ ವಿಚಾರ. ಅದನ್ನು ಅದೇ ರೀತಿ ನಿರ್ವಹಿಸುವುದು ಹೆಚ್ಚು ಸೂಕ್ತ. ಆ ಬಗ್ಗೆ ಯೋಚಿಸಿ ನಿರ್ಧರಿಸಿ. ನಿಮ್ಮ ಹಣ ಸಕಾಲದಲ್ಲಿ ಈ ವಿಭಾಗದಲ್ಲಿ ತೊಡಗಿಸಲು ಮಾನಸಿಕ ಸಿದ್ಧತೆ ಹಾಗೂ ಐದರಿಂದ ಹತ್ತು ವರ್ಷಗಳ ಮುಂದಿನ ಯೋಜನೆ ಇರಲಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ಕಿಸಾನ್ ಸಮ್ಮಾನ್‌ಗೆ ಭೂರಹಿತ ರೈತರ ಸೇರ್ಪಡೆ ಇಲ್ಲ: ಕೇಂದ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಗೆ ಭೂರಹಿತ ರೈತರನ್ನು ಸೇರಿಸುವ ಪ್ರಸ್ತಾವ ಸರ್ಕಾರದ ಮುಂದಿಲ್ಲ ಎಂದು ಕೇಂದ್ರ ಕೃಷಿ ಸಚಿವ ಶಿವರಾಜ ಸಿಂಗ್ ಚೌಹಾಣ್ ಸ್ಪಷ್ಟಪಡಿಸಿದರು.

ಲೋಕಸಭೆಯಲ್ಲಿ ಮಂಗಳವಾರ ಪ್ರಶ್ನೋತ್ತರ ಅವಧಿಯಲ್ಲಿ ರಾಯಚೂರು ಸಂಸದ ಕುಮಾರ ಜಿ.ನಾಯಕ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಈ ಯೋಜನೆಯಡಿ ಕೇಂದ್ರ ಸರ್ಕಾರವು ಈವರೆಗೆ 19 ಕಂತುಗಳಲ್ಲಿ ₹3.68 ಲಕ್ಷ ಕೋಟಿ ಮೊತ್ತವನ್ನು ರೈತರ ಖಾತೆಗಳಿಗೆ ವರ್ಗಾವಣೆ ಮಾಡಿದೆ' ಎಂದರು. ಯೋಜನೆಯ ಭಾಗವಾಗಿಲ್ಲದ ಎಲ್ಲ ಅರ್ಹ ರೈತರಿಗೆ ವಾರ್ಷಿಕ ₹6,000 ನಗದು ಪ್ರಯೋಜನ ನೀಡಲು ಸರ್ಕಾರ ಸಿದ್ಧವಾಗಿದೆ. ಅಂತಹ ರೈತರಿಗೆ ಹಿಂದಿನ ಕಂತುಗಳನ್ನು ನೀಡಲು ಸಿದ್ಧರಿದ್ದೇವೆ ಎಂದು ಹೇಳಿದರು.

ಅಂತಹ ರೈತರನ್ನು ಗುರುತಿಸಿ ಯೋಜನೆಯಲ್ಲಿ ಸೇರಿಸಲು ರಾಜ್ಯ ಸರ್ಕಾರಗಳು ಕೇಂದ್ರ ಸರ್ಕಾರಕ್ಕೆ ಸಹಕಾರ ನೀಡಬೇಕು ಎಂದು ಅವರು ಕೋರಿದರು.

ಎಲ್ಲ ಅರ್ಹ ಫಲಾನುಭವಿಗಳು ಕನಿಷ್ಠ ಪ್ರಮಾಣದ ಭೂಮಿ ಹೊಂದಿರಬೇಕು. ಇ-ಕೆವೈಸಿ ಮಾಡಿಸಿಕೊಳ್ಳಬೇಕು ಮತ್ತು ಪಿಎಂ-ಕಿಸಾನ್ ಪೋರ್ಟಲ್‌ನಲ್ಲಿ ತಮ್ಮನ್ನು ನೋಂದಾಯಿಸಿಕೊಳ್ಳಬೇಕು ಎಂದು ಸಚಿವರು ಹೇಳಿದರು. ನಿಧಿಯನ್ನು ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಮೂರು ಸಮಾನ ಕಂತುಗಳಲ್ಲಿ ವರ್ಗಾಯಿಸಲಾಗುತ್ತದೆ ಎಂದು ಅವರು ಹೇಳಿದರು.

ಕಿಸಾನ್ ಸಮ್ಮಾನ್ ಯೋಜನೆಯಡಿ ಭೂರಹಿತ ಕಾರ್ಮಿಕರನ್ನು ಹಾಗೂ ಬಾಡಿಗೆದಾರ ರೈತರನ್ನು ಪರಿಗಣಿಸಬೇಕು ಎಂದು ಕುಮಾರ ನಾಯಕ ಆಗ್ರಹಿಸಿದರು.

2011ರ ಜನಗಣತಿಯ ಪ್ರಕಾರ, ದೇಶದಲ್ಲಿ 26.3 ಕೋಟಿ ಜನರು ಕೃಷಿ ಚಟುವಟಿಕೆಯಲ್ಲಿ ತೊಡಗಿಕೊಂಡಿದ್ದಾರೆ. ಇವರಲ್ಲಿ 14.43 ಕೋಟಿ ಜನರು ಕೃಷಿ ಕಾರ್ಮಿಕರು ಹಾಗೂ 11.87 ಕೋಟಿ ಜನರು ಕೃಷಿಕರು ಎಂದು ಗುರುತಿಸಲಾಗಿದೆ. ಇದಲ್ಲದೆ, ಕಳೆದ ಕೆಲವು ವರ್ಷಗಳಲ್ಲಿ ಕೃಷಿ ಕಾರ್ಮಿಕರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದೆ. ಅವರಿಗೆ ಆರ್ಥಿಕ ಭದ್ರತೆ ಒದಗಿಸಲು ಸರ್ಕಾರ ಮುಂದಾಗಬೇಕು' ಎಂದು ಒತ್ತಾಯಿಸಿದರು.

ಒಣಮೆಣಸಿಕಾಯಿ: ಪಿಡಿಪಿ ಯೋಜನೆ ವಿಸ್ತರಣೆಗೆ ಕೇಂದ್ರಕ್ಕೆ ಮುಖ್ಯಮಂತ್ರಿ ಪತ್ರ

ಪ್ರಜಾವಾಣಿ ವಾರ್ತೆ

ಬಳ್ಳಾರಿ: 'ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿ (ಎಂಐಎಸ್) ಬೆಲೆ ಕೊರತೆ ಪಾವತಿ (ಪಿಡಿಪಿ) ಯೋಜನೆಯನ್ನು ಕರ್ನಾಟಕದ ಒಣಮೆಣಸಿನಕಾಯಿ ಬೆಳೆಗಾರರಿಗೂ ವಿಸ್ತರಿಸಬೇಕು' ಎಂದು ಒತ್ತಾಯಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರ ಪ್ರಧಾನಿ ನರೇಂದ್ರ ಮೋದಿ ಮತ್ತು ಕೃಷಿ ಸಚಿವ ಶಿವರಾಜ ಸಿಂಗ್ ಚೌಹಾಣ್‌ಗೆ ಪತ್ರ ಬರೆದಿದ್ದಾರೆ.

'ಒಣಮೆಣಸಿನಕಾಯಿಯ ಕನಿಷ್ಠ ಮಧ್ಯಂತರ ಬೆಲೆಯನ್ನು (ಎಂಐಪಿ) ಕ್ವಿಂಟಲ್‌ಗೆ ₹11,781 ರಿಂದ ₹13,500ಕ್ಕೆ ಏರಿಸಬೇಕು. ಒಟ್ಟು ಉತ್ಪಾದನೆಯ ಕನಿಷ್ಠ ಶೇ 75ರಷ್ಟು ಉತ್ಪನ್ನಕ್ಕೆ ಎಂಐಪಿ ಸಿಗಬೇಕು' ಎಂದು ಅವರು ತಿಳಿಸಿದ್ದಾರೆ.

'ಒಣಮೆಣಸಿನಕಾಯಿಯ ಬೆಲೆ ಕೇಂದ್ರದ ದೇಶೀಯ ಮತ್ತು ರಫ್ತು ನೀತಿಗಳ ಮೇಲೆ ಅವಲಂಬಿತವಾಗಿದ್ದು, ಇದು ಮಾರುಕಟ್ಟೆ ಮೇಲೆ ಪ್ರಭಾವ ಬೀರುತ್ತದೆ. ಆದ್ದರಿಂದ, ಬೆಲೆ ಕೊರತೆ ಪಾವತಿಯ ಸಂಪೂರ್ಣ ಮೊತ್ತವನ್ನು ಕೇಂದ್ರವೇ ಭರಿಸಬೇಕು' ಎಂದು ಅವರು ಆಗ್ರಹಿಸಿದ್ದಾರೆ.

'ರಾಜ್ಯದಲ್ಲಿ ಗುಂಟೂರು ಮೆಣಸಿನಕಾಯಿ (ಮಳೆಯಾಶ್ರಿತ) ಉತ್ಪಾದನಾ ಕರ್ನಾಟಕ ವೆಚ್ಚವು ಕ್ವಿಂಟಲ್‌ಗೆ ₹12,675 ಇದೆ. ಆದರೆ, ಸದ್ಯದ ದರ ₹8,300 ಇದೆ. ಇದು ರೈತರಿಗಾದ ನಷ್ಟ ಮಾತ್ರವಲ್ಲ, ಅವರ ಅಳಿವು ಉಳಿವಿನ ಪ್ರಶ್ನೆ ಆಗಿದೆ. ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳ ಸಣ್ಣ ರೈತರು ಮೆಣಸಿನಕಾಯಿ ಬೆಳೆಯನ್ನೇ ಅವಲಂಬಿಸಿದ್ದಾರೆ' ಎಂದು ಅವರು ಒತ್ತಾಯಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಸ್ಪೇಸ್‌ಎಕ್ಸ್ ಜೊತೆ ಏರ್‌ಟೆಲ್ ಒಪ್ಪಂದ

ಮುಂಬೈ (ಎಎಫ್‌ಪಿ): ದೇಶದ ಗ್ರಾಹಕರಿಗೆ ಸ್ಟಾರ್‌ಲಿಂಕ್‌ನ ಉಪಗ್ರಹ ಆಧಾರಿತ ಇಂಟರ್‌ನೆಟ್ ಸೇವೆಯನ್ನು ಒದಗಿಸಲು ಉದ್ಯಮಿ ಇಲಾನ್ ಮಸ್ಕ್ ಒಡೆತನದ ಸ್ಪೇಸ್‌ಎಕ್ಸ್ ಜೊತೆ ಒಪ್ಪಂದಕ್ಕೆ ಸಹಿ ಹಾಕಿರುವುದಾಗಿ ದೇಶದ ದೂರಸಂಪರ್ಕ ಕಂಪನಿ ಭಾರ್ತಿ ಏರ್‌ಟೆಲ್ ಮಂಗಳವಾರ ತಿಳಿಸಿದೆ.

ಭಾರತದಲ್ಲಿ ಸ್ಪೇಸ್‌ಎಕ್ಸ್ ಜೊತೆಗೆ ಮಾಡಲಾಗುತ್ತಿರುವ ಮೊದಲ ಒಪ್ಪಂದ ಇದು. ಭಾರತದಲ್ಲಿ ಸ್ಟಾರ್‌ಲಿಂಕ್ ಅನ್ನು ಮಾರಾಟ ಮಾಡಲು ಸ್ಪೇಸ್‌ಎಕ್ಸ್ ಅನುಮತಿ ಪಡೆದರೆ ಮಾತ್ರ ಒಪ್ಪಂದವು ಅನುಷ್ಠಾನಗೊಳ್ಳಲಿದೆ ಎಂದು ಕಂಪನಿಯು ತಿಳಿಸಿದೆ.

ಉಪಗ್ರಹ ತರಂಗಾಂತರವನ್ನು ಹೇಗೆ ಹಂಚಿಕೆ ಮಾಡಲು ಸಾಧ್ಯ ಎಂಬುದರ ಕುರಿತು ಮಸ್ಕ್ ಮತ್ತು ಮುಕೇಶ್ ಅಂಬಾನಿ ನಡುವೆ ತಿಕ್ಕಾಟ ನಡೆದಿತ್ತು. ಮಸ್ಕ್ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನೂ ವಾಷಿಂಗ್ಟನ್‌ನಲ್ಲಿ ಕಳೆದ ತಿಂಗಳು ಭೇಟಿಯಾಗಿದ್ದರು.

'ಭಾರತದಲ್ಲಿರುವ ಏರ್‌ಟೆಲ್ ಗ್ರಾಹಕರಿಗೆ ಸ್ಟಾರ್‌ಲಿಂಕ್ ಸೇವೆ ನೀಡಲು ಸ್ಪೇಸ್‌ಎಕ್ಸ್‌ನೊಂದಿಗೆ ಕೆಲಸ ಮಾಡಲಾಗುತ್ತಿದೆ. ಈ ಸಹಯೋಗದಿಂದ ಗ್ರಾಹಕರಿಗೆ ವಿಶ್ವದರ್ಜೆಯ ಹೈ-ಸ್ಪೀಡ್ ಬ್ರಾಡ್‌ಬ್ಯಾಂಡ್ ಸೇವೆ ನೀಡಲಾಗುವುದು' ಎಂದು ಕಂಪನಿಯ ಉಪಾಧ್ಯಕ್ಷ ಗೋಪಾಲ್ ವಿಟ್ಟಲ್ ಹೇಳಿದರು.

ಎನ್‌ಎಂಡಿಸಿ-ಕೆಐಒಸಿಎಲ್ ವಿಲೀನ ಇಲ್ಲ: ಕೇಂದ್ರ

ನವದೆಹಲಿ: ರಾಷ್ಟ್ರೀಯ ಖನಿಜ ಅಭಿವೃದ್ಧಿ ನಿಗಮ (ಎನ್‌ಎಂಡಿಸಿ) ಹಾಗೂ ಕುದುರೆಮುಖ ಕಬ್ಬಿಣದ ಅದಿರು ಕಂಪನಿಯನ್ನು ವಿಲೀನ ಮಾಡುವ ಪ್ರಸ್ತಾವ ಇಲ್ಲ ಎಂದು ಕೇಂದ್ರ ಉಕ್ಕು ಖಾತೆ ರಾಜ್ಯ ಸಚಿವ ಭೂಪತಿರಾಜು ಶ್ರೀನಿವಾಸ ವರ್ಮ ಸ್ಪಷ್ಟಪಡಿಸಿದರು.

ಲೋಕಸಭೆಯಲ್ಲಿ ಮಂಗಳವಾರ ಪ್ರಶ್ನೋತ್ತರ ಅವಧಿಯಲ್ಲಿ ದಕ್ಷಿಣ ಕನ್ನಡ ಸಂಸದ ಬ್ರಿಜೇಶ್ ಚೌಟ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಹಣಕಾಸು ಸಚಿವಾಲಯದ ಅಧೀನದಲ್ಲಿರುವ ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆಯು ಖಾಸಗೀಕರಣ ಅಥವಾ ವಿಲೀನದ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತದೆ. ಈ ಎರಡೂ ಸಂಸ್ಥೆಗಳ ವಿಲೀನ ಬಗ್ಗೆ ಪ್ರಸ್ತುತ ಯಾವುದೇ ನಿರ್ಧಾರ ತೆಗೆದುಕೊಂಡಿಲ್ಲ ಎಂದು ತಿಳಿಸಿದೆ' ಎಂದರು. ಈ ಎರಡೂ ಸಂಸ್ಥೆಗಳನ್ನು ವಿಲೀನಗೊಳಿಸಲು ಯೋಜಿಸಲಾಗಿದೆ ಎಂದು ಕೇಂದ್ರ ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ ಈ ಹಿಂದೆ ಹೇಳಿಕೆ ನೀಡಿದ್ದರು.

ಕುಸ್ತಿ ಫೆಡರೇಷನ್ ಅಮಾನತು ವಾಪಸ್

ಕ್ರೀಡಾ ಸಚಿವಾಲಯ ಆದೇಶ: ಕುಸ್ತಿ ಚಟುವಟಿಕೆ ಪುನರಾರಂಭಕ್ಕೆ ಹಾದಿ ಸುಗಮ

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ ಮೇಲೆ 15 ತಿಂಗಳ ಹಿಂದೆ ವಿಧಿಸಿದ್ದ ಅಮಾನತನ್ನು ಕ್ರೀಡಾ ಸಚಿವಾಲಯ ಸೋಮವಾರ ಹಿಂಪಡೆದುಕೊಂಡಿದೆ. ಇದರಿಂದ ಕ್ರೀಡೆಯ ಸುತ್ತ ಹಲವು ತಿಂಗಳಿಂದ ಕವಿದಿದ್ದ ಅನಿಶ್ಚಿತತೆ ಕೊನೆಗೊಂಡಿದೆ.

ಅಮ್ಮಾನ್‌ನಲ್ಲಿ ಮುಂಬರುವ ಏಷ್ಯನ್ ಚಾಂಪಿಯನ್‌ಷಿಪ್‌ಗೆ ಆಯ್ಕೆ ಟ್ರಯಲ್ಸ್ ಸೇರಿದಂತೆ ಕುಸ್ತಿ ಚಟುವಟಿಕೆಗಳ ಪುನರಾರಂಭಕ್ಕೆ ಹಾದಿಯೂ ಸುಗಮಗೊಂಡಿದೆ.

ಫೆಡರೇಷನ್‌ನ ಹೊಸ ಸಮಿತಿಯ ಆಡಳಿತದಲ್ಲಿ ಮತ್ತು ಕಾರ್ಯನಿರ್ವಹಣೆಯಲ್ಲಿ ಲೋಪಗಳುಂಟಾಗಿವೆ ಎಂದು ಕ್ರೀಡಾ ಸಚಿವಾಲಯ 2023ರ ಡಿ. 24ರಂದು ಕುಸ್ತಿ ಫೆಡರೇಷನ್ ಮೇಲೆ ಅಮಾನತು ಹೇರಿತ್ತು. ಫೆಡರೇಷನ್ ಚಟುವಟಿಕೆ ನಡೆಸಿಕೊಂಡು ಹೋಗಲು ಅಡ್‌ಹಾಕ್ ಸಮಿತಿ ರಚಿಸುವಂತೆ ಭಾರತ ಒಲಿಂಪಿಕ್ ಸಂಸ್ಥೆಗೆ ಸೂಚಿಸಿತ್ತು.

ಸಂಜಯ್ ಸಿಂಗ್ ನೇತೃತ್ವದ ಹೊಸ ಸಮಿತಿ ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲಿ ಗೊಂಡಾದ ನಂದಿನಿನಗರದಲ್ಲಿ 15 ವರ್ಷದೊಳಗಿನ ಮತ್ತು 20 ವರ್ಷದೊಳಗಿನವರ ರಾಷ್ಟ್ರೀಯ ಟೂರ್ನಿ ನಡೆಸುವುದಾಗಿ ಘೋಷಿಸಿತ್ತು. ಆದರೆ ಸ್ಥಳದ ಆಯ್ಕೆ ಮತ್ತು ಅವಸರ ಸರ್ಕಾರದ ಆಕ್ರೋಶಕ್ಕೆ ಕಾರಣವಾಗಿತ್ತು. ಗೊಂಡಾ ನಗರವು, ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ಶೋಷಣೆ ನಡೆಸಿದ ಆರೋಪ ಹೊತ್ತಿರುವ ಬಿಜೆಪಿಯ ಮಾಜಿ ಸಂಸದ ಬ್ರಿಜ್‌ಭೂಷಣ್ ಶರಣ್ ಸಿಂಗ್ ಅವರ ಭದ್ರ ನೆಲೆಯಾಗಿದೆ.

ಕ್ರೀಡೆಯ ಮತ್ತು ಅಥ್ಲೀಟ್‌ಗಳ ಹಿತಾಸಕ್ತಿಯನ್ನು ಗಮನದಲ್ಲಿಟ್ಟು ಕೊಂಡು ಅಮಾನತು ಹಿಂಪಡೆಯುವುದಾಗಿ ಸಚಿವಾಲಯವು ಸೋಮವಾರ ಆದೇಶ ಹೊರಡಿಸಿದೆ.

ಫೆಡರೇಷನ್ ತನ್ನ ಕಾರ್ಯನಿರ್ವಹಣೆ ಸುಧಾರಿಸಲು ಕೈಗೊಂಡಿರುವ ಕ್ರಮಗಳ ಬಗ್ಗೆ ತೃಪ್ತಿ ವ್ಯಕ್ತಪಡಿಸಿರುವ ಸಚಿವಾಲಯವು, 2028ರ ಒಲಿಂಪಿಕ್ ಕ್ರೀಡೆಗಳಲ್ಲಿ ಭಾರತದ ಪದಕ ಸಾಧ್ಯತೆ ಹೆಚ್ಚಿಸುವ ಉದ್ದೇಶದಿಂದ ಪೂರ್ಣಪ್ರಮಾಣದಲ್ಲಿ ಫೆಡರೇಷನ್‌ಗೆ ಅಧಿಕಾರ ನೀಡಲು ಮುಂದಾಗಿ, ಅಮಾನತು ಹಿಂಪಡೆಯಿತು.

ಫೆಡರೇಷನ್‌ಗೆ ಕೆಲವು ನಿರ್ದೇಶನ ನೀಡಿದ ಸಚಿವಾಲಯ

ಸಚಿವಾಲಯವು ಫೆಡರೇಷನ್‌ಗೆ ಕೆಲವು ನಿರ್ದೇಶನಗಳನ್ನೂ ನೀಡಿದೆ. ಇದರ ಪ್ರಕಾರ, ಹೊಸ ಪದಾಧಿಕಾರಿಗಳಲ್ಲಿ ಅಧಿಕಾರ ಹಂಚಿಕೆಯಾಗುವಂತೆ ನೋಡಿಕೊಳ್ಳಬೇಕು. ಅಮಾನತಾಗಿರುವ/ ವಜಾಗೊಂಡಿರುವ ಪದಾಧಿಕಾರಿಗಳಿಂದ ಅಂತರ ಕಾಪಾಡಿಕೊಳ್ಳಬೇಕಾಗಿದೆ.

ಈಗಿನ ಪದಾಧಿಕಾರಿಗಳ ಪೈಕಿ ಪ್ರಧಾನ ಕಾರ್ಯದರ್ಶಿ ಪ್ರೇಮಚಂದ್ ಲೋಚಬ್ ಅವರು ಸಂಜಯ್ ಸಿಂಗ್ ಎದುರಾಳಿ ಗುಂಪಿನಲ್ಲಿ ಗುರುತಿಸಿಕೊಂಡವರು. ಸಚಿವಾಲಯದ ಆದೇಶ ಈ ನಿಟ್ಟಿನಲ್ಲಿ ಮಹತ್ವದ್ದಾಗಿದೆ.

ಫೆಡರೇಷನ್‌ನ ಕಾರ್ಯಕಾರಿ ಸಮಿತಿ ಈ ಬಗ್ಗೆ ನಾಲ್ಕು ವಾರಗಳಲ್ಲಿ ಮುಚ್ಚಳಿಕೆ ನೀಡಬೇಕಾಗಿದೆ. ಇದನ್ನು ಉಲ್ಲಂಘಿಸಿದರೆ ಕಾನೂನು ಕ್ರಮಕ್ಕೆ ದಾರಿಯಾಗುತ್ತದೆ ಎಂದೂ ಸಚಿವಾಲಯದ ಆದೇಶದಲ್ಲಿ ಎಚ್ಚರಿಸಲಾಗಿದೆ.

ಅಂತರರಾಷ್ಟ್ರೀಯ ಪಂದ್ಯಾವಳಿಗಳಿಗೆ ಆಯ್ಕೆಯು ನ್ಯಾಯಸಮ್ಮತ ಮತ್ತು ಪಾರದರ್ಶಕ ರೀತಿಯಲ್ಲಿರಬೇಕು. ಯುನೈಟೆಡ್ ವರ್ಲ್ಡ್ ರೆಸ್ಲಿಂಗ್ (ವಿಶ್ವ ಕುಸ್ತಿ ಸಂಸ್ಥೆ) ಕಾಲಕಾಲಕ್ಕೆ ಹೊರಡಿಸಿದ ಸೂಚನೆ ಮತ್ತು ಕ್ರೀಡಾ ಸಂಹಿತೆಗೆ ಅನುಗುಣವಾಗಿರಬೇಕು ಎಂದೂ ತಿಳಿಸಲಾಗಿದೆ.

'ನಾವು ಈಗಾಗಲೇ ಹೊಸ ಕಚೇರಿಗೆ ಸ್ಥಳಾಂತರಗೊಂಡಿದ್ದೇವೆ. ಕಾರ್ಯಕಾರಿ ಸಮಿತಿ ಸಭೆ ಸದ್ಯದಲ್ಲೇ ಕರೆಯಲಿದ್ದೇವೆ. ಆಯ್ಕೆ ಟ್ರಯಲ್ಸ್‌ಗೆ ಸಂಬಂಧಿಸಿ ಅಧಿಸೂಚನೆ ಹೊರಡಿಸುತ್ತೇವೆ. ಈ ಸೂಚನೆ ಅನುಸರಿಸಲು ಸಮಸ್ಯೆಯಾಗದು' ಎಂದು ಸಂಜಯ್ ಸಿಂಗ್ ಹೇಳಿದ್ದಾರೆ.

ಏಷ್ಯನ್ ಕುಸ್ತಿ ಜೋರ್ಡಾನ್‌ನ ರಾಜಧಾನಿ ಅಮ್ಮಾನ್‌ನಲ್ಲಿ ಇದೇ 25ರಿಂದ ನಡೆಯಲಿದೆ.ಅಮಾನತು ಮತ್ತು ನ್ಯಾಯಾಲಯದ ಪ್ರಕರಣಗಳಿಂದಾಗಿ, ಯಾಗ್ರೆಬ್ ಮತ್ತು ಅಲ್ಬೇನಿಯಾದಲ್ಲಿ ನಡೆದಿದ್ದ ರ‍್ಯಾಂಕಿಂಗ್ ಟೂರ್ನಿಗಳಲ್ಲಿ ಭಾರತದ ಪೈಲ್ವಾನರಿಗೆ ಸ್ಪರ್ಧಿಸಲು ಸಾಧ್ಯವಾಗಿರಲಿಲ್ಲ.

ಸರ್ಕಾರಕ್ಕೆ ಧನ್ಯವಾದ: ಸಂಜಯ್



'ಈ ಕ್ರಮ ಕೈಗೊಂಡಿರುವುದಕ್ಕೆ ಸರ್ಕಾರಕ್ಕೆ ಧನ್ಯವಾದ ಸಲ್ಲಿಸುವೆ. ಇದರಿಂದಾಗಿ ಫೆಡರೇಷನ್ ತನ್ನ ಕೆಲಸಗಳನ್ನು ಸುಸೂತ್ರವಾಗಿ ನಡೆಸಲು ಅವಕಾಶವಾಗಲಿದೆ. ಕ್ರೀಡೆಯ ಹಿತಾಸಕ್ತಿಯಿಂದ ಈ ಕ್ರಮ ಅಗತ್ಯವಿತ್ತು. ಸ್ಪರ್ಧೆಗಳಿಲ್ಲದೇ ಕುಸ್ತಿಪಟುಗಳು ತೊಂದರೆ ಎದುರಿಸುತ್ತಿದ್ದರು' ಎಂದು ಭಾರತ ಕುಸ್ತಿ ಫೆಡರೇಷನ್‌ನ ಅಧ್ಯಕ್ಷ ಸಂಜಯ್ ಸಿಂಗ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಐಸಿಸಿ ಚಾಂಪಿಯನ್ಸ್ ಟ್ರೋಫಿ ಗೆದ್ದ ತಂಡ ದುಬೈನಿಂದ ತವರಿಗೆ

ಸದ್ದುಗದ್ದಲವಿಲ್ಲದೇ ಮರಳಿದ ಆಟಗಾರರು



ದುಬೈನಲ್ಲಿ ಚಾಂಪಿಯನ್ಸ್ ಟ್ರೋಫಿ ಗೆದ್ದ ಭಾರತ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ ಅವರು ಸೋಮವಾರ ರಾತ್ರಿ ಮುಂಬೈಗೆ ಬಂದಿದ್ದು, ವಿಮಾನ ನಿಲ್ದಾಣದಲ್ಲಿ ಅಭಿಮಾನಿಗಳತ್ತ ಕೈಬೀಸಿದರು –ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ದುಬೈನಲ್ಲಿ ಭಾನುವಾರ ಚಾಂಪಿಯನ್ಸ್ ಟ್ರೋಫಿ ಗೆದ್ದುಕೊಂಡ ಭಾರತ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ ಸೇರಿದಂತೆ ಬಹುತೇಕ ಆಟಗಾರರು ಸದ್ದುಗದ್ದಲವಿಲ್ಲದೇ ಸೋಮವಾರ ತಡರಾತ್ರಿ ತವರಿಗೆ ಹಿಂತಿರುಗಿದ್ದಾರೆ.

ರೋಹಿತ್ ಶರ್ಮಾ, ಪತ್ನಿ, ಪುತ್ರಿಯೊಂದಿಗೆ ಮುಂಬೈಗೆ ಬಂದಿಳಿದಿದರು. ಅವರ ನಾಯಕತ್ವದಲ್ಲಿ ಭಾರತ ತಂಡ 9 ತಿಂಗಳ ಅವಧಿಯಲ್ಲಿ ಎರಡನೇ ಐಸಿಸಿ ಟ್ರೋಫಿ ಗೆದ್ದುಕೊಂಡಿತ್ತು.

ಮಾರ್ಚ್ 22ರಂದು ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿ ಆರಂಭವಾಗಲಿದ್ದು, ತಂಡವನ್ನು ಕೂಡಿಕೊಳ್ಳುವ ಮೊದಲು ಆಟಗಾರರಿಗೆ ವಾರದ ಕಾಲ ಬಿಡುವು ದೊರೆಯಲಿದೆ.

'ಕುಟುಂಬ ಸದಸ್ಯರ ಜೊತೆ ಬಂದಿದ್ದ ಆಟಗಾರರು ದುಬೈನಿಂದ ಸೋಮವಾರ ನಿರ್ಗಮಿಸಿದ್ದಾರೆ. ಉಳಿದ ಕೆಲವು ಆಟಗಾರರು ಒಂದೆರಡು ದಿನ ಇಲ್ಲಿ ಉಳಿದುಕೊಳ್ಳಲಿದ್ದಾರೆ' ಎಂದು ಬಿಸಿಸಿಐ ಮೂಲವೊಂದು ಪಿಟಿಐಗೆ ತಿಳಿಸಿದೆ.

'ಎರಡು ತಿಂಗಳ ಕಾಲ ನಡೆಯಲಿರುವ ಐಪಿಎಲ್‌ಗೆ ಮೊದಲು ವಿಶ್ರಾಂತಿ ಪಡೆಯಲು ಆಟಗಾರರು ಬಯಸಿದ ಕಾರಣ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಕೂಡ ಆಟಗಾರರಿಗೆ ಯಾವುದೇ ಸನ್ಮಾನ ಸಮಾರಂಭ ಹಮ್ಮಿಕೊಂಡಿಲ್ಲ. ಈ ಹಿಂದೆ, 2024ರ ಮಧ್ಯದಲ್ಲಿ ಬಾರ್ಬಾಡೋಸ್‌ನಲ್ಲಿ ಟಿ20 ವಿಶ್ವಕಪ್ ಗೆದ್ದುಕೊಂಡು ಬಂದ ಭಾರತ ತಂಡದ ಆಟಗಾರರಿಗೆ ಮುಂಬೈನಲ್ಲಿ ಭರ್ಜರಿ ಸ್ವಾಗತ, ಅಭಿನಂದನೆ ಹಮ್ಮಿಕೊಳ್ಳಲಾಗಿತ್ತು. ಆ ತಂಡದ ಆಟಗಾರರು ಪ್ರಧಾನಿ ನರೇಂದ್ರ ಮೋದಿ ಅವರನ್ನೂ ಭೇಟಿ ಮಾಡಿದ್ದರು.

ವಾಪಸಾದ ಗಂಭೀರ್: ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಮತ್ತು ವೇಗದ ಬೌಲರ್ ಹರ್ಷಿತ್ ರಾಣಾ ಅವರು ನವದೆಹಲಿಗೆ ಬಂದಿಳಿದರು.

ಭಾರತ ತಂಡ ದುಬೈ ಕ್ರೀಡಾಂಗಣದಿಂದ ಭಾನುವಾರ ಫೈನಲ್ ಮುಗಿಸಿ ಟೀಮ್ ಹೋಟೆಲ್‌ಗೆ ಮರಳಿದ ಕೆಲವೇ ಹೊತ್ತಿನಲ್ಲಿ ತಾರಾ ಆಟಗಾರ ವಿರಾಟ್ ಕೊಹ್ಲಿ ಅವರು ಪತ್ನಿ ಅನುಷ್ಕಾ ಶರ್ಮಾ ಅವರೊಂದಿಗೆ ಅಂದು ರಾತ್ರಿಯೇ ದುಬೈನಿಂದ ನಿರ್ಗಮಿಸಿದ್ದರು.

ಮಧ್ಯಮ ಕ್ರಮಾಂಕದಲ್ಲಿ ಸ್ಥಿರ ಪ್ರದರ್ಶನ ನೀಡಿದ್ದ ಶ್ರೇಯಸ್ ಅಯ್ಯರ್ ಅವರು ಐಪಿಎಲ್‌ನಲ್ಲಿ ಪಂಜಾಬ್ ಕಿಂಗ್ಸ್ ತಂಡದ ನಾಯಕರಾಗಿದ್ದು, ಇದೇ 16ರಂದು ತಂಡವನ್ನು ಕೂಡಿಕೊಳ್ಳಲಿದ್ದಾರೆ.

ಚಾಂಪಿಯನ್ಸ್ ಟ್ರೋಫಿ ಫೈನಲ್‌ನಲ್ಲಿ ಭಾರತ ನಾಲ್ಕು ವಿಕೆಟ್‌ಗಳಿಂದ ನ್ಯೂಜಿಲೆಂಡ್ ತಂಡವನ್ನು ಸೋಲಿಸಿ ಪ್ರಶಸ್ತಿ ಗೆದ್ದುಕೊಂಡಿತ್ತು. ಟೂರ್ನಿಯಲ್ಲಿ ಅಜೇಯವಾಗುಳಿದಿದ್ದ ಏಕೈಕ ತಂಡವಾಗಿತ್ತು. ಪಾಕಿಸ್ತಾನ ಈ ಟೂರ್ನಿಯ ಆತಿಥ್ಯ ವಹಿಸಿದ್ದರೂ, ಹೈಬ್ರಿಡ್ ಮಾದರಿಯ ಅನುಸಾರ ಭಾರತ ತಂಡ ತನ್ನ ಪಂದ್ಯಗಳನ್ನು ದುಬೈನಲ್ಲಿ ಆಡಿತ್ತು.

ಸೇನ್ ಮುನ್ನಡೆ, ಪ್ರಣಯ್ ನಿರ್ಗಮನ



ಭಾರತದ ಲಕ್ಷ್ಯ ಸೇನ್

ಬರ್ಮಿಂಗ್‌ಹ್ಯಾಮ್ (ಪಿಟಿಐ): ಗೇಮ್ ಹಿನ್ನಡೆಯಿಂದ ಪುನರಾಗಮನ ಮಾಡಿದ ಅನುಭವಿ ಲಕ್ಷ್ಯ ಸೇನ್, ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ಸ್‌ನಲ್ಲಿ ಮಂಗಳವಾರ ಎರಡನೇ ಸುತ್ತನ್ನು ತಲುಪಿದರು. ಆದರೆ ಭಾರತದ ಇನ್ನೊಬ್ಬ ಆಟಗಾರ ಎಚ್.ಎಸ್. ಪ್ರಣಯ್ ಅವರ ಸವಾಲು ಮೊದಲ ಸುತ್ತಿನಲ್ಲೇ ಕೊನೆಗೊಂಡಿತು.

ವಿಶ್ವ ಕ್ರಮಾಂಕದಲ್ಲಿ 15ನೇ ಸ್ಥಾನದಲ್ಲಿರುವ ಲಕ್ಷ್ಯ ಮೊದಲ ಸುತ್ತಿನಲ್ಲಿ 13–21, 21–17, 21–15 ರಿಂದ 37ನೇ ಕ್ರಮಾಂಕದ ಸು ಲಿ ಯಾಂಗ್ (ಚೀನಾ ತೈಪಿ) ಅವರನ್ನು ಹಿಮ್ಮೆಟ್ಟಿಸಿದರು. ಉತ್ತರಾಖಂಡದ ಅಲ್ಮೋರಾದ ಆಟಗಾರನ ಮುಂದಿನ ಎದುರಾಳಿ ಮೂರನೇ ಶ್ರೇಯಾಂಕದ ಜೊನಾಥನ್ ಕ್ರಿಸ್ಟಿ (ಇಂಡೊನೇಷ್ಯಾ).

ಏಷ್ಯನ್ ಗೇಮ್ಸ್ ಕಂಚಿನ ಪದಕ ವಿಜೇತ, 32 ವರ್ಷ ವಯಸ್ಸಿನ ವಿಜೇತ ಪ್ರಣಯ್ ಮೊದಲ ಸುತ್ತಿನಲ್ಲಿ ಫ್ರಾನ್ಸ್‌ನ ಟೊಮಾ ಜೂನಿಯರ್ ಪೊಪೊವ್ ಎದುರು ಲಯ ಕಂಡುಕೊಳ್ಳಲು ಪರದಾಡಿದರು. ಫ್ರಾನ್ಸ್‌ನ ಆಟಗಾರ 21–19, 21–16ರಲ್ಲಿ ಗೆಲ್ಲಲು 53 ನಿಮಿಷ ತೆಗೆದುಕೊಂಡರು.

ಮಿಶ್ರ ಡಬಲ್ಸ್‌ನಲ್ಲಿ ಭಾರತದ ಸತೀಶ್ ಕುಮಾರ್ ಕರುಣಾಕರನ್ ಮತ್ತು ಆದ್ಯಾ ವಾರಿಯತ್ ಜೋಡಿ ಕೂಡ ಬೇಗನೇ ನಿರ್ಗಮಿಸಿತು. ವಿಶ್ವ ಕ್ರಮಾಂಕದಲ್ಲಿ ಏಳನೇ ಸ್ಥಾನದಲ್ಲಿರುವ ಗುವೊ ಷಿನ್ ವಾ– ಚೆನ್ ಫಾಂಗ್ ಹುಯಿ (ಚೀನಾ) 21–6, 21–15 ರಿಂದ ಭಾರತದ ಜೋಡಿಯ ಮೇಲೆ ಜಯಗಳಿಸಿದರು.

ಭಾರತದ ಅಗ್ರ ಆಟಗಾರ್ತಿ ಪಿ.ವಿ. ಸಿಂಧು ಮತ್ತು ಪುರುಷರ ಡಬಲ್ಸ್ ಜೋಡಿಯಾದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಅವರು ಬುಧವಾರ ಅಭಿಯಾನ ಆರಂಭಿಸಲಿದ್ದಾರೆ.

ಅಗ್ರ 10ರಲ್ಲಿ ಭಾರತದ ಪುರುಷರಿಲ್ಲ

ನವದೆಹಲಿ (ಪಿಟಿಐ): ಭಾರತದ ಪ್ರಮುಖ ಆಟಗಾರ ಲಕ್ಷ್ಯ ಸೇನ್ ಮತ್ತು ಡಬಲ್ಸ್‌ನಲ್ಲಿ ದೇಶದ ಅಗ್ರ ಜೋಡಿಯಾದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಅವರು ಮಂಗಳವಾರ ಪ್ರಕಟವಾದ ಬಿಡಬ್ಲ್ಯುಎಫ್ ರ‍್ಯಾಂಕಿಂಗ್‌ನಲ್ಲಿ ಐದು ಸ್ಥಾನಗಳನ್ನು ಹಿಂಬಡ್ತಿ ಪಡೆದಿದ್ದಾರೆ. ಇದರಿಂದಾಗಿ ಪುರುಷರ ವಿಭಾಗದಲ್ಲಿ ವಿಶ್ವದ ಅಗ್ರ 10ರಲ್ಲಿ ಭಾರತದ ಪ್ರಾತಿನಿಧ್ಯ ಇಲ್ಲದಂತಾಗಿದೆ.

ಈ ಹಿಂದೆ ವಿಶ್ವ ಕ್ರಮಾಂಕದಲ್ಲಿ ಒಮ್ಮೆ ಆರನೇ ಸ್ಥಾನಕ್ಕೇರಿದ್ದ ಸಿಂಗಲ್ಸ್ ಆಟಗಾರ ಲಕ್ಷ್ಯ ಪ್ರಸ್ತುತ 15ನೇ ಸ್ಥಾನದಲ್ಲಿದ್ದಾರೆ. ಸಾತ್ವಿಕ್– ಚಿರಾಗ್ ಜೋಡಿ ಕಳೆದ ವಾರದ ಏಳನೇ ಸ್ಥಾನದಿಂದ 12ನೇ ಸ್ಥಾನಕ್ಕೆ ಸರಿದಿದೆ. 2021ರ ನವೆಂಬರ್ ನಂತರ ಮೊದಲ ಬಾರಿ ಅಗ್ರ 10ರಲ್ಲಿ ಭಾರತದ ಆಟಗಾರರು ಕಾಣಿಸಿಕೊಂಡಿಲ್ಲ. ಮಹಿಳಾ ಸಿಂಗಲ್ಸ್‌ನಲ್ಲಿ ಒಲಿಂಪಿಕ್ಸ್‌ನ ಅವಳಿ ಪದಕ ವಿಜೇತೆ ಪಿ.ವಿ.ಸಿಂಧು, ಒಂದು ಸ್ಥಾನ ಕೆಳಕ್ಕೆ ಇಳಿದಿದ್ದು ಈಗ 16ನೇ ಕ್ರಮಾಂಕದಲ್ಲಿದ್ದಾರೆ.

ಆದರೆ ಡಬಲ್ಸ್‌ನಲ್ಲಿ ಟ್ರೀಸಾ ಜೋಳಿ– ಗಾಯತ್ರಿ ಗೋಪಿಚಂದ್ ಜೋಡಿ ಒಂಬತ್ತನೇ ಸ್ಥಾನದಲ್ಲಿದ್ದು, ಅಗ್ರ 10ರ ಒಳಗೆ ಇರುವುದು ಕೊಂಚ ಸಮಾಧಾನ ಮೂಡಿಸಿದೆ.ಮಿಶ್ರ ಡಬಲ್ಸ್‌ನಲ್ಲಿ ತನಿಶಾ ಕ್ರಾಸ್ಟೊ– ಧ್ರುವ್ ಕಪಿಲಾ ಅವರು ಜೀವನಶ್ರೇಷ್ಠ 19ನೇ ಸ್ಥಾನಕ್ಕೇರಿದ್ದಾರೆ.

ಕಳೆದ ವಾರ ಆರ್ಲಿಯನ್ ಮಾಸ್ಟರ್ ಟೂರ್ನಿಯಲ್ಲಿ ಸೆಮಿಫೈನಲ್ ತಲುಪಿದ್ದ ಆಯುಷ್ ಶೆಟ್ಟಿ ಐದು ಸ್ಥಾನ ಬಡ್ತಿ ಪಡೆದಿದ್ದು 43ನೇ ಸ್ಥಾನದಲ್ಲಿದ್ದಾರೆ. ಇದು ಅವರ ಶ್ರೇಷ್ಠ ರ‍್ಯಾಂಕಿಂಗ್ ಆಗಿದೆ.

ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಗ್ರ್ಯಾನ್‌ಪ್ರಿ: ಸ್ಪರ್ಧಿಗಳ ಕೊರತೆ

ದೇಶದ ಪ್ರಮುಖ ಅಥ್ಲೀಟ್‌ಗಳ ಗೈರು

ನವದೆಹಲಿ (ಪಿಟಿಐ): ಭಾರತದ ಸ್ಟಾರ್ ಪ್ಯಾರಾ ಅಥ್ಲೀಟ್‌ಗಳ ಅನುಪಸ್ಥಿತಿಯಲ್ಲಿ ಮೂರು ದಿನಗಳ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಗ್ರ್ಯಾನ್‌ಪ್ರಿ ಕೂಟಕ್ಕೆ ಮಂಗಳವಾರ ಇಲ್ಲಿನ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ಚಾಲನೆ ನೀಡಲಾಯಿತು.

ಭಾರತ ಆತಿಥ್ಯದ ಈ ಕೂಟದಲ್ಲಿ ಜಾವೆಲಿನ್ ಥ್ರೋಪಟು ಸುಮಿತ್ ಆಂಟಿಲ್ ಮತ್ತು ಡಿಸ್ಕಸ್ ಥ್ರೋಪಟು ಯೋಗೇಶ್ ಕಥುನಿಯಾ ಸೇರಿದಂತೆ ದೇಶದ ಪ್ರಮುಖ ಪ್ಯಾರಾ ಅಥ್ಲೀಟ್‌ಗಳ ಗೈರು ಎದ್ದುಕಂಡಿತು.

ಹಲವು ಅಥ್ಲೀಟ್‌ಗಳು ಆರಂಭದಲ್ಲಿ ತಮ್ಮ ಭಾಗವಹಿಸುವಿಕೆಯನ್ನು ದೃಢೀಕರಿಸಿದ್ದರು. ನಂತರ ಬೇರೆ ಬೇರೆ ಕಾರಣಗಳಿಂದ ಸ್ಪರ್ಧೆಯಿಂದ ಹಿಂದೆ ಸರಿದಿದ್ದರಿಂದ ಕೆಲವು ಸ್ಪರ್ಧಾ ವಿಭಾಗಗಳಲ್ಲಿ ಒಬ್ಬ ಅಥ್ಲೀಟ್ ಮಾತ್ರ ಭಾಗವಹಿಸಿದ್ದು ಕಂಡುಬಂತು.

ಪುರುಷರ ಹೈಜಂಪ್ (T42) ಸ್ಪರ್ಧೆಯಲ್ಲಿ ಭಾರತದ ರಾಮಸಿಂಗ್‌ಭಾಯ್ ಗೋಬಿಂದ್‌ಭಾಯ್ ಪಧಿಯಾರ್ ಅವರೊಬ್ಬರೇ ಕಣದಲ್ಲಿದ್ದರು. ಲೋಕೇಶ್ ಮಂತ್ರ, ಶೈಲೇಶ್ ಕುಮಾರ್ ಮತ್ತು ವರುಣ್ ಸಿಂಗ್ ಭಾಟಿ ಅವರು ಸ್ಪರ್ಧೆಯಿಂದ ಹಿಂದೆ ಸರಿದಿದ್ದರು.

ಪುರುಷರ ಜಾವೆಲಿನ್ ಥ್ರೋ (ಎಫ್33, ಎಫ್34) ಸ್ಪರ್ಧೆಯಲ್ಲಿ ಕೇವಲ ಇಬ್ಬರು ಅಥ್ಲೀಟ್‌ಗಳು ಭಾಗವಹಿಸಿದರು. ಉಜ್ಬೇಕಿಸ್ತಾನದ ಓಯ್ಬೆಕ್ ಎಗಮ್ನಜರೋವ್ 18.05 ಮೀಟರ್ ಎಸೆತದೊಂದಿಗೆ ಅಗ್ರಸ್ಥಾನ ಪಡೆದರು. ಭಾರತದ ದೇವಶ್ರೀ ಸಚನ್ (11.34 ಮೀ) ಎರಡನೇ ಸ್ಥಾನ ಪಡೆದರು.

ಪುರುಷರ 100 ಮೀಟರ್ (ಟಿ11, ಟಿ12) ಓಟದಲ್ಲಿ ಬ್ರೆಜಿಲ್‌ನ ಜೋಫರ್ಸನ್ ಮರಿನ್ಹೊ ಡಿ ಒಲಿವೇರಾ 11.17 ಸೆಕೆಂಡುಗಳಲ್ಲಿ ಗುರಿ ತಲುಪಿ ಚಿನ್ನ ಗೆದ್ದರು. ಭಾರತದ ವಿಷ್ಣು (12.39 ಸೆ) ಮತ್ತು ಪ್ರಗದೀಶ್ವರ ರಾಜ ಮೂರ್ತಿ (12.94 ಸೆ) ಕ್ರಮವಾಗಿ ಎರಡನೇ ಮತ್ತು ಮೂರನೇ ಸ್ಥಾನ ಪಡೆದರು. ಈ ವಿಭಾಗದಲ್ಲಿ ಮೂರು ಮಂದಿಯಷ್ಟೇ ಸ್ಪರ್ಧಿಸಿದ್ದರು.

ಸೆಪ್ಟೆಂಬರ್‌ನಲ್ಲಿ ಪ್ಯಾರಾ ಅಥ್ಲೆಟಿಕ್ಸ್ ವಿಶ್ವ ಚಾಂಪಿಯನ್‌ಷಿಪ್‌ಗಳು ನಿಗದಿಯಾಗಿರುವುದರಿಂದ ಭಾರತದ ಸ್ಟಾರ್ ಅಥ್ಲೀಟ್‌ಗಳು ಅಂತರರಾಷ್ಟ್ರೀಯ ವೇಳಾಪಟ್ಟಿಯ ಪ್ರಕಾರ ತರಬೇತಿಯಲ್ಲಿದ್ದಾರೆ ಎಂದು ಭಾರತ ಪ್ಯಾರಾಲಿಂಪಿಕ್ ಸಮಿತಿ ಅಧ್ಯಕ್ಷ ದೇವೇಂದ್ರ ಜಜಾರಿಯಾ ಅವರು ಅಥ್ಲೀಟ್‌ಗಳ ಗೈರಿಗೆ ಸ್ಪಷ್ಟನೆ ನೀಡಿದರು.

ಶುಕ್ರವಾರದವರೆಗೆ ನಡೆಯುವ ಈ ಕೂಟದಲ್ಲಿ 90 ಸ್ಪರ್ಧೆಗಳು ನಡೆಯಲಿವೆ. ಭಾರತದ 145 ಅಥ್ಲೀಟುಗಳ ಜೊತೆ, ಬೇರೆ ದೇಶಗಳ 105 ಸ್ಪರ್ಧಿಗಳು ನೋಂದಣಿ ಮಾಡಿದ್ದಾರೆ.

ಪ್ರೀತಿ ಪಾಲ್‌ಗೆ ಬೆಳ್ಳಿ: ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ಡಬಲ್ ಕಂಚಿನ ಪದಕ ಗೆದ್ದ ಭಾರತ ಪ್ರೀತಿ ಪಾಲ್ (14.85ಸೆ) ಅವರು 100 ಮೀಟರ್ ಓಟದಲ್ಲಿ ಬೆಳ್ಳಿ ಪದಕ ತನ್ನದಾಗಿಸಿಕೊಂಡರು. ಆಸ್ಟ್ರೇಲಿಯಾದ ರಿಯಾನನ್ ಕ್ಲಾರ್ಕ್ (13.14ಸೆ) ಚಿನ್ನ ಮತ್ತು ಜರ್ಮನಿಯ ನಿಕೋಲ್ (15.35ಸೆ) ಕಂಚಿನ ಪದಕ ಗೆದ್ದರು.



ಮಹಿಳೆಯರ 100 ಮೀಟರ್ (ಟಿ 47) ಓಟದಲ್ಲಿ ಚಿನ್ನ ಗೆದ್ದ ಶ್ರೀಲಂಕಾದ ಜನನಿ ವಿಕ್ರಮಸಿಂಘ (ಎಡ) –ಎಎಫ್‌ಪಿ ಚಿತ್ರ

ಟೆನಿಸ್: ಕ್ವಾರ್ಟರ್‌ಗೆ ದೀಪಕ್

ಬೆಂಗಳೂರು: ಕರ್ನಾಟಕದ ದೀಪಕ್ ಎ. ಸಿಆರ್‌ಎಸ್–ಎಐಟಿಎ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಮಂಗಳವಾರ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಟೆನಿಸ್ ಅಡ್ವಾಂಟೇಜ್ ಅಂಗಳದಲ್ಲಿ ನಡೆದ ಪ್ರಿ ಕ್ವಾರ್ಟರ್ ಪಂದ್ಯದಲ್ಲಿ ಕರ್ನಾಟಕದ ದೀಪಕ್ ಎ. 6–2, 6–2ರಿಂದ ತಮ್ಮದೇ ರಾಜ್ಯದ ಗೌತಮ್ ಆರ್. ಅವರನ್ನು ಮಣಿಸಿದರು.

ಇನ್ನೊಂದು ಪಂದ್ಯದಲ್ಲಿ ಐದನೇ ಶ್ರೇಯಾಂಕಿತ ನಿತಿಲನ್ ಕೆ. 3–6, 2–6ರಿಂದ ಕರ್ನಾಟಕದ ಮನ್ನಯ್ ಜೈನ್ ಅವರನ್ನು ಸೋಲಿಸಿದರು.

ಡಿಸ್ಕಸ್ ಥ್ರೋ: ತೇಜಸ್ವಿನಿಗೆ ಕಂಚು



ಬೆಂಗಳೂರು: ಕರ್ನಾಟಕದ ತೇಜಸ್ವಿನಿ ಸಿ. ಅವರು ಪಟ್ನಾದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಯೂತ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಬಾಲಕಿಯರ ಡಿಸ್ಕಸ್ ಥ್ರೋ ಸ್ಪರ್ಧೆಯಲ್ಲಿ ಕಂಚು ಗೆದ್ದರು. 17 ವರ್ಷ ವಯಸ್ಸಿನ ತೇಜಸ್ವಿನಿ ಡಿಸ್ಕಸ್ ಅನ್ನು 37.76 ಮೀಟರ್ ದೂರ ಎಸೆದರು. ರಾಜಸ್ಥಾನದ ಲಕ್ಷಿತಾ ಮಹ್ಲಾವತ್ ಮತ್ತು ಹರಿಯಾಣದ ಓಶಿನ್ ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಗೆದ್ದರು.

ಎರಡು ದಿನಗಳ ಭೇಟಿಗೆ ಮಾರಿಷಸ್ ತಲುಪಿದ ಮೋದಿ

'ಭವ್ಯ ಅಧ್ಯಾಯ ಆರಂಭ'



ಪ್ರಧಾನಿ ಮೋದಿ ಅವರನ್ನು ಮಾರಿಷಸ್‌ನಲ್ಲಿರುವ ಭಾರತೀಯರು ಸ್ವಾಗತಿಸಿದರು ಪಿಟಿಐ ಚಿತ್ರ

ಪೋರ್ಟ್ ಲೂಯಿಸ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಎರಡು ದಿನಗಳ ಭೇಟಿಗಾಗಿ ಮಂಗಳವಾರ ಮಾರಿಷಸ್ ತಲುಪಿದರು. ವಿಮಾನ ನಿಲ್ದಾಣದಲ್ಲಿ ಅವರಿಗೆ ಭವ್ಯ ಸ್ವಾಗತ ನೀಡಲಾಯಿತು. ಬುಧವಾರ (ಮಾ. 12) ನಡೆಯಲಿರುವ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಮೋದಿ ಅವರು ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ.

ಭಾರತೀಯ ಯುದ್ಧ ನೌಕೆಯ ಜೊತೆಗೆ ವಾಯು ಪಡೆಯ ಸ್ಕೈಡೈವಿಂಗ್‌ನ 'ಆಕಾಶ ಗಂಗಾ' ತಂಡವು ಮಾರಿಷಸ್‌ನ ಸ್ವಾತಂತ್ರ್ಯದಿನ ಕಾರ್ಯಕ್ರಮದಲ್ಲಿ ಭಾಗವಹಿಸಲಿವೆ. ಮಾರಿಷಸ್‌ಗೆ ತೆರಳುವ ಮುನ್ನ 'ಎಕ್ಸ್'ನಲ್ಲಿ ಪೋಸ್ಟ್ ಹಂಚಿಕೊಂಡಿದ್ದ ಪ್ರಧಾನಿ, 'ಎರಡೂ ದೇಶಗಳ ದ್ವಿಪಕ್ಷೀಯ ಸಂಬಂಧದಲ್ಲಿ 'ನೂತನ ಮತ್ತು ಭವ್ಯ' ಅಧ್ಯಾಯನವೊಂದು ತೆರೆದುಕೊಳ್ಳಲಿದೆ' ಎಂದಿದ್ದರು.

ಕೌಶಲ ಅಭಿವೃದ್ಧಿ, ವ್ಯಾಪಾರ ಹಾಗೂ ಅಂತರರಾಷ್ಟ್ರೀಯ ಹಣಕಾಸು ಅಪರಾಧ ತಡೆಗಟ್ಟುವ ನಿಟ್ಟಿನಲ್ಲಿ ಹಲವಾರು ಒಪ್ಪಂದಗಳಿಗೆ ಎರಡೂ ದೇಶಗಳ ಪ್ರಮುಖರು ಸಹಿ ಹಾಕಲಿದ್ದಾರೆ ಎನ್ನಲಾಗಿದೆ.

ಭಾರತದ ಹಣಕಾಸಿನ ನೆರವಿನೊಂದಿಗೆ ಆರಂಭಿಸಿದ ಸುಮಾರು 20 ಯೋಜನೆಗಳಿಗೆ ಮೋದಿ ಅವರು ಚಾಲನೆ ನೀಡಲಿದ್ದಾರೆ. ಜೊತೆಗೆ, ನೂತನ ಮೂಲಸೌಕರ್ಯ ಯೋಜನೆಗಳನ್ನೂ ಘೋಷಿಸಲಿದ್ದಾರೆ.

ಮಾರಿಷಸ್ ಪ್ರಧಾನಿ ನವೀನ್‌ಚಂದ್ರ ರಾಮಗೂಲಂ ಅವರೊಂದಿಗೆ ನಾಗರಿಕ ಸೇವಾ ಕಾಲೇಜು ಕಟ್ಟಡವನ್ನು ಉದ್ಘಾಟಿಸಲಿದ್ದಾರೆ. ಈ ವೇಳೆ ಪ್ರಧಾನಿ ಅವರು ಭಾರತೀಯರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಮಾರಿಷಸ್‌ನ ಒಟ್ಟು 12 ಲಕ್ಷ ಜನಸಂಖ್ಯೆಯಲ್ಲಿ ಶೇ 70ರಷ್ಟು ಭಾರತೀಯರೇ ಇದ್ದಾರೆ.

ನೂರಾರು ರೈಲು ಪ್ರಯಾಣಿಕರ ಒತ್ತೆಸೆರೆ

ಒಂದನೇ ಪುಟದಿಂದ...



ರಕ್ಷಣಾ ತಂಡಗಳು ಮತ್ತು ಭದ್ರತಾ ಪಡೆಗಳು ಸ್ಥಳ ತಲುಪಿದ್ದು, ಒತ್ತೆಯಾಳುಗಳ ರಕ್ಷಣೆಗೆ ಕಾರ್ಯಾಚರಣೆ ನಡೆಯುತ್ತಿದೆ. ಸ್ಥಳೀಯ ಆಸ್ಪತ್ರೆಗಳಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಿಸಲಾಗಿದೆ. ಪ್ರಯಾಣಿಕರ ರಕ್ಷಣೆಗೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವಂತೆ ಪ್ರಾಂತೀಯ ಸರ್ಕಾರವು ಅಧಿಕಾರಿಗಳಿಗೆ ನಿರ್ದೇಶನ ನೀಡಿದೆ.

ಪೆಹ್ರೊ ಕುನ್ರಿ ಮತ್ತು ಗಡಲಾರ್ ನಡುವೆ ರೈಲು ಸಂಚರಿಸುತ್ತಿದ್ದಾಗ ಗುಂಡಿನ ದಾಳಿ ನಡೆದಿದೆ ಎಂದು ಬಲೂಚಿಸ್ತಾನ್ ಸರ್ಕಾರದ ವಕ್ತಾರ ಶಾಹಿದ್ ರಿಂಡ್ ತಿಳಿಸಿದ್ದಾರೆ.

'ಒಂದು ವೇಳೆ ಭದ್ರತಾ ಪಡೆಗಳು ಕಾರ್ಯಾಚರಣೆ ನಡೆಸಿದರೆ ಎಲ್ಲ ಒತ್ತೆಯಾಳುಗಳನ್ನು ಹತ್ಯೆ ಮಾಡುವುದಾಗಿ ಬಿಎಲ್‌ಎ ಎಚ್ಚರಿಕೆ ನೀಡಿದೆ' ಎಂದು ಮೂಲಗಳು ಹೇಳಿವೆ.

'ಒಂಬತ್ತು ಬೋಗಿಗಳಿರುವ ರೈಲಿನಲ್ಲಿ 500 ಪ್ರಯಾಣಿಕರಿದ್ದರು. ಸುರಂಗದ ಬಳಿ ಶಸ್ತ್ರಸಜ್ಜಿತ ಉಗ್ರರು ರೈಲು ತಡೆದಿದ್ದಾರೆ. ಈ ರೈಲು ಮಾರ್ಗದಲ್ಲಿ 17 ಸುರಂಗಗಳಿವೆ' ಎಂದು ರೈಲ್ವೆ ನಿಯಂತ್ರಕ ಮುಹಮ್ಮದ್ ಕಾಶಿಫ್ ತಿಳಿಸಿದ್ದಾರೆ.

ಗುಂಡಿನ ದಾಳಿಯಲ್ಲಿ ಚಾಲಕನಿಗೆ ಗಂಭೀರ ಗಾಯಗಳಾಗಿರುವುದನ್ನು ರೈಲ್ವೆ ಅಧಿಕಾರಿಗಳು ದೃಢಪಡಿಸಿದ್ದು, ಸಹಾಯಕ್ಕಾಗಿ ತುರ್ತು ಪರಿಹಾರ ರೈಲನ್ನು ಸ್ಥಳಕ್ಕೆ ಕಳುಹಿಸಿದ್ದಾರೆ.

ಈ ಪ್ರದೇಶದ ರೈಲ್ವೆ ಹಳಿಗಳ ಮೇಲೆ ಈ ಹಿಂದೆಯೂ ಬಲೂಚ್ ಬಂಡುಕೋರರು ಬಾಂಬ್ ದಾಳಿ ನಡೆಸಿದ್ದರು. ಬಲೂಚಿಸ್ತಾನದಲ್ಲಿ ಭಯೋತ್ಪಾದಕ ದಾಳಿಗಳು ಒಂದು ವರ್ಷದಿಂದ ಹೆಚ್ಚಾಗಿವೆ. 2024ರ ನವೆಂಬರ್‌ನಲ್ಲಿ ಕ್ವೆಟ್ಟಾ ರೈಲು ನಿಲ್ದಾಣದಲ್ಲಿ ನಡೆದ ಆತ್ಮಾಹುತಿ ಬಾಂಬ್ ಸ್ಫೋಟದಲ್ಲಿ 26 ಜನರು ಮೃತಪಟ್ಟು, 62 ಜನರು ಗಾಯಗೊಂಡಿದ್ದರು.

80 ಜನರ ಬಿಡುಗಡೆ: ಭದ್ರತಾ ಪಡೆಗಳು ಕಾರ್ಯಾಚರಣೆ ನಡೆಸಿ ಸುಮಾರು 80 ಪ್ರಯಾಣಿಕರನ್ನು ರಕ್ಷಿಸಿದೆ ಎಂದು ಸ್ಥಳೀಯ ಸರ್ಕಾರದ ವಕ್ತಾರರು ತಿಳಿಸಿದ್ದಾರೆ.

ಚಿನ್ನ: ಡಿಜಿಪಿಗೆ ತನಿಖೆಯ ಬಿಸಿ

ಒಂದನೇ ಪುಟದಿಂದ...

ಸಿಐಡಿ ತನಿಖೆಗೂ ಆದೇಶ: ರನ್ಯಾ ರಾವ್ ವಿದೇಶಗಳಿಗೆ ಹೋಗುವಾಗ ಮತ್ತು ವಾಪಸ್ ಬಂದಾಗ ಶಿಷ್ಟಾಚಾರ ನಿಯಮಗಳಡಿ ಸೌಲಭ್ಯ ಒದಗಿಸುವ ಮೂಲಕ ಕರ್ತವ್ಯ ಲೋಪ ಎಸಗಿರುವ ಪೊಲೀಸ್ ಸಿಬ್ಬಂದಿ ವಿರುದ್ಧ ಸಿಐಡಿ ತನಿಖೆಗೆ ಆದೇಶಿಸಲಾಗಿದೆ.

ರನ್ಯಾ ರಾವ್ ವಿಮಾನ ನಿಲ್ದಾಣಕ್ಕೆ ಬಂದಾಗ ಡಿಜಿಪಿ ಪುತ್ರಿಯೆಂದು ಆಕೆಯನ್ನು ಹೊರಗೆ ಕರೆತರಲು ವಿಮಾನ ನಿಲ್ದಾಣ ಪೊಲೀಸ್ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಹಾಗೂ ಅವರನ್ನು ಕಾರಿನಲ್ಲಿ ಕರೆದೊಯ್ಯಲು ಬಂದಿದ್ದ ಬೆಂಗಾವಲು ಪಡೆಯ ಸಿಬ್ಬಂದಿಯನ್ನು ವಶಕ್ಕೆ ಪಡೆದು ಡಿಆರ್‌ಐ ಅಧಿಕಾರಿಗಳು ವಿಚಾರಣೆ ನಡೆಸಿದ್ದರು ಎಂದು ಗೊತ್ತಾಗಿದೆ.

ವಿಮಾನ ನಿಲ್ದಾಣದಲ್ಲಿ ರನ್ಯಾ ಅವರು ಶಿಷ್ಟಾಚಾರ ಸೌಲಭ್ಯದ ದುರ್ಬಳಕೆ ಮಾಡಿಕೊಂಡಿರುವ ಆರೋಪದ ಕುರಿತು ಈಶಾನ್ಯ ವಿಭಾಗದ ಡಿಸಿಪಿ ಸಜಿತ್ ಅವರು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರಿಗೆ ವರದಿ ಸಲ್ಲಿಸಿದ್ದಾರೆ.

'ದುಬೈನಿಂದ ರನ್ಯಾ ಬಂದಿಳಿಯುತ್ತಿದ್ದಂತೆ ಪೊಲೀಸ್ ವಾಹನ ತರುವಂತೆ ಕಾನ್‌ಸ್ಟೆಬಲ್ ಬಸವರಾಜ್‌ಗೆ ಹೇಳಿದ್ದರು. ವಾಹನ ತೆಗೆದುಕೊಂಡು ಬಾರದಿದ್ದರೆ ಅಪ್ಪಾಜಿಗೆ (ತಂದೆ) ಹೇಳುವುದಾಗಿ ಬೆದರಿಕೆ ಹಾಕಿದ್ದರು' ಎಂಬುದನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಡಿಕೆಶಿ, ಪರಮೇಶ್ವರ ಜತೆ ಸಿ.ಎಂ ಚರ್ಚೆ

ಒಂದನೇ ಪುಟದಿಂದ...

ವಿಧಾನಸಭೆಯಲ್ಲಿ ಪ್ರಶ್ನೋತ್ತರ ಕಲಾಪ ನಡೆಯುತ್ತಿತ್ತು. ಗೃಹ ಸಚಿವ ಪರಮೇಶ್ವರ ಸದನದಲ್ಲಿ ಹಾಜರಿದ್ದರು. ಅದೇ ಸಂದರ್ಭದಲ್ಲಿ ಮುಖ್ಯಮಂತ್ರಿಯವರು ವಿಧಾನಸಭೆಯ ಮೊಗಸಾಲೆಯಲ್ಲಿರುವ ತಮ್ಮ ಕಚೇರಿಗೆ ಬಂದರು. ತುರ್ತಾಗಿ ಅಲ್ಲಿಗೆ ಬರುವಂತೆ ಪರಮೇಶ್ವರ ಅವರಿಗೆ ಸಂದೇಶ ಕಳುಹಿಸಿದರು.

ಸದನದಿಂದ ಹೊರ ಹೋದ ಗೃಹ ಸಚಿವರು ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ, ಸುಮಾರು ಹತ್ತು ನಿಮಿಷ ಚರ್ಚೆ ನಡೆಸಿದರು.

'ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ರಾಜಕೀಯ ನಂಟಿನ ಕುರಿತು ತೀವ್ರ ಚರ್ಚೆಯಾಗುತ್ತಿದೆ. ಸರ್ಕಾರದ ಹಂತದಲ್ಲಿ ಆಗಿರಬಹುದಾದ ಲೋಪಗಳ ಬಗ್ಗೆ ಮುಖ್ಯಮಂತ್ರಿಯವರು ಗೃಹ ಸಚಿವರಿಂದ ಮಾಹಿತಿ ಪಡೆದಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಸಿಎಂ– ಡಿಕೆಶಿ ಚರ್ಚೆ: ಮುಖ್ಯಮಂತ್ರಿ ಭೇಟಿ ಮಾಡಿದ ಶಿವಕುಮಾರ್, ಸುಮಾರು ಅರ್ಧ ಗಂಟೆ ರಹಸ್ಯವಾಗಿ ಚರ್ಚೆ ನಡೆಸಿದರು.

ನೆಕ್ಲೇಸ್ ಕೊಟ್ಟ ಪ್ರಭಾವಿ ಯಾರು?

ಒಂದನೇ ಪುಟದಿಂದ...

ತರುಣ್ ನೀಡಿದ ಮಾಹಿತಿ ಆಧರಿಸಿ ಈ ಜಾಲದ ಜೊತೆ ನಂಟು ಹೊಂದಿರುವ ಚಿನ್ನದ ವ್ಯಾಪಾರಿಗಳಿಗೆ ವಿಚಾರಣೆಗೆ ಹಾಜರಾಗುವಂತೆ ತನಿಖಾಧಿಕಾರಿಗಳು ನೋಟಿಸ್ ನೀಡಿದ್ದಾರೆ. ದುಬೈನಿಂದ ಖರೀದಿಸಿ ತಂದ ಚಿನ್ನವನ್ನು ಈ ವ್ಯಾಪಾರಿಗಳು ಖರೀದಿಸುತ್ತಿದ್ದರು.

'ದುಬೈನಿಂದ ಚಿನ್ನ ಖರೀದಿಸಲು ದೊಡ್ಡ ಮೊತ್ತವನ್ನು ತರುಣ್‌ಗೆ ಯಾರು ನೀಡುತ್ತಿದ್ದರು? ಇದರ ಹಿಂದಿರುವ ಉದ್ಯಮಿಗಳು, ಪ್ರಭಾವಿಗಳು ಯಾರು ಎಂಬುದರ ಬಗ್ಗೆ ಮಾಹಿತಿ ಕಲೆ ಹಾಕಲಾಗುತ್ತಿದೆ. ಐಪಿಎಸ್ ಅಧಿಕಾರಿ ರಾಮಚಂದ್ರ ರಾವ್ ಅವರು ರನ್ಯಾ ಅವರ ಮಲತಂದೆ. ಹಾಗಾಗಿ, ಈಕೆಯ ಸ್ನೇಹ ಬಳಸಿಕೊಂಡು ದುಬೈನಿಂದ ಚಿನ್ನ ತರಲಾಗುತ್ತಿತ್ತು ಎಂಬ ಮಾಹಿತಿಯನ್ನು ವಿಚಾರಣೆ ವೇಳೆ ತರುಣ್ ತಿಳಿಸಿದ್ದಾರೆ' ಎಂದು ಮೂಲಗಳು ಹೇಳಿವೆ.

ತರುಣ್ ಅವರ ಬ್ಯಾಂಕ್ ಖಾತೆಗಳ ಪರಿಶೀಲನೆ ನಡೆಸುತ್ತಿದ್ದು, ಅವರ ಮೊಬೈಲ್ ಹಾಗೂ ಲ್ಯಾಪ್‌ಟಾಪ್‌ಗಳಲ್ಲಿ ಮಹತ್ವದ ದಾಖಲೆಗಳು ಲಭ್ಯವಾಗಿವೆ. ಒಂದು ವರ್ಷದಲ್ಲಿ ರನ್ಯಾ 28 ಬಾರಿ ವಿದೇಶ ಪ್ರವಾಸ ಹಾಗೂ 15 ದಿನದಲ್ಲಿ ಐದು ಬಾರಿ ದುಬೈಗೆ ಪ್ರಯಾಣ ಮಾಡಿರುವುದು ಹಾಗೂ ಇಬ್ಬರೂ ದುಬೈನಲ್ಲಿ ಬಳಸುತ್ತಿದ್ದ ಮೊಬೈಲ್ ಸಂಖ್ಯೆಯನ್ನು ಅಧಿಕಾರಿಗಳು ಪತ್ತೆ ಮಾಡಿದ್ದಾರೆ. ರನ್ಯಾ ಅವರ ಬ್ಯಾಂಕ್ ಖಾತೆಗಳನ್ನು ಪರಿಶೀಲಿಸಲಾಗಿದೆ. ವಹಿವಾಟಿಗೆ ಸಂಬಂಧಿಸಿದ ಕೆಲವು ಮಾಹಿತಿ ಕಲೆಹಾಕಲಾಗಿದೆ ಎಂದು ಹೇಳಿವೆ.

ರನ್ಯಾ ಪತಿ ವಿಚಾರಣೆ: ಡಿಆರ್‌ಐ ಅಧಿಕಾರಿಗಳು, ರನ್ಯಾ ಪತಿ ಜತೀನ್ ಹುಕ್ಕೇರಿ ಅವರ ವಿಚಾರಣೆ ನಡೆಸಿ, ಹೇಳಿಕೆ ದಾಖಲಿಸಿಕೊಂಡಿದ್ದಾರೆ. 'ಪತ್ನಿಯ ವಿದೇಶ ಪ್ರವಾಸದ ಬಗ್ಗೆ ಮಾಹಿತಿ ನೀಡಿದ್ದು, ಹಣಕಾಸಿನ ವ್ಯವಹಾರ ಹಾಗೂ ಚಿನ್ನ ಕಳ್ಳಸಾಗಣೆ ಬಗ್ಗೆ ಮಾಹಿತಿ ಇಲ್ಲ' ಎಂದು ಜತೀನ್ ಹೇಳಿರುವುದಾಗಿ ಮೂಲಗಳು ತಿಳಿಸಿವೆ.

ಮದುವೆ ವಿಡಿಯೊ ಪರಿಶೀಲನೆ

ಪ್ರಕರಣದ ತನಿಖೆ ಚುರುಕುಗೊಳಿಸಿರುವ ಸಿಬಿಐ ಅಧಿಕಾರಿಗಳು, ಮದುವೆ ವೇಳೆ ನಟಿಗೆ ದುಬಾರಿ ಉಡುಗೊರೆ ನೀಡಿರುವ ವ್ಯಕ್ತಿಗಳ ಬಗ್ಗೆ ಮಾಹಿತಿಗಾಗಿ ಮದುವೆಯ ವಿಡಿಯೊ ದೃಶ್ಯಾವಳಿಯ ಪರಿಶೀಲನೆ ನಡೆಸುತ್ತಿದ್ದಾರೆ.

ಹಾಗೆಯೇ, ವಿದೇಶದಲ್ಲಿ ಯಾರ ಜತೆ ಹೆಚ್ಚು ಸಂಪರ್ಕ ಹೊಂದಿದ್ದರು ಎಂಬುದನ್ನು ಪತ್ತೆ ಮಾಡಲು ಅಧಿಕಾರಿಗಳು, ರನ್ಯಾ ಹಾಗೂ ತರುಣ್ ಅವರ ಮೊಬೈಲ್ ಕರೆ ವಿವರಗಳ ವಿಶ್ಲೇಷಣೆ ಮಾಡುತ್ತಿದ್ದಾರೆ.

ಲ್ಯಾವೆಲ್ಲೆ ರಸ್ತೆಯಲ್ಲಿರುವ ನಂದವಾಣಿ ಮ್ಯಾನ್ಷನ್ ಅಪಾರ್ಟ್‌ಮೆಂಟ್‌ನಲ್ಲಿರುವ ರನ್ಯಾ ಅವರ ಮನೆಯಲ್ಲಿ ಶೋಧ ನಡೆಸಿದೆ. ಆದರೆ, ಮನೆಯಲ್ಲಿ ಯಾವುದೇ ವಸ್ತುಗಳನ್ನು ಜಪ್ತಿ ಮಾಡಿಲ್ಲ. ರನ್ಯಾ ನಿವಾಸ ಮಾತ್ರವಲ್ಲದೇ, ಅವರು ನಿರ್ದೇಶಕಿಯಾಗಿರುವ ಕಂಪನಿಗೆ ಜಮೀನು ಮಂಜೂರು ಮಾಡಿರುವ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಕಚೇರಿ, ನಟಿಯ ಮದುವೆ ಸಮಾರಂಭ ನಡೆದಿದ್ದ ಹೋಟೆಲ್‌ಗೂ ತೆರಳಿ ಮಾಹಿತಿ ಸಂಗ್ರಹಿಸಿದೆ.

ಸಂಕ್ಷಿಪ್ತ ಸುದ್ದಿ

ಮಹಿಳಾ ಕಬಡ್ಡಿ ತಂಡಕ್ಕೆ ₹67 ಲಕ್ಷ ಬಹುಮಾನ

ನವದೆಹಲಿ (ಪಿಟಿಐ): ಇರಾನ್‌ನ ಟೆಹರಾನ್‌ನಲ್ಲಿ ಹೋದ ವಾರ ಏಷ್ಯನ್ ಕಬಡ್ಡಿ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದ ಭಾರತ ಮಹಿಳಾ ತಂಡಕ್ಕೆ ಕ್ರೀಡಾ ಸಚಿವಾಲಯ ₹67.50 ಲಕ್ಷ ಬಹುಮಾನ ಘೋಷಿಸಿದೆ.

ಶನಿವಾರ ನಡೆದ ಫೈನಲ್‌ನಲ್ಲಿ 32–25 ರಿಂದ ಇರಾನ್ ತಂಡವನ್ನು ಸೋಲಿಸಿದ್ದ ಭಾರತ ತಂಡ ಪ್ರಶಸ್ತಿ ಉಳಿಸಿಕೊಂಡಿತ್ತು. ತಂಡ ಮಂಗಳವಾರ ಹಿಂತಿರುಗಿದ್ದು, ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಅವರು ತಂಡದ ಆಟಗಾರ್ತಿಯರನ್ನು ಸನ್ಮಾನಿಸಿದರು.

ಕಬಡ್ಡಿ ಆಟಗಾರ್ತಿಯರಿಗೆ ಹೆಚ್ಚು ಅವಕಾಶ ಕಲ್ಪಿಸಲು ಪುರುಷರ ಲೀಗ್ (ಪಿಕೆಎಲ್) ಮಾದರಿಯಲ್ಲಿ ಮಹಿಳಾ ಕಬಡ್ಡಿ ಲೀಗ್ ಆರಂಭಿಸುತ್ತೇವೆ. ವಿಕಸಿತ ಭಾರತ ಕಲ್ಪನೆ ಸಾಕಾರಗೊಳ್ಳಲು ಪ್ರಧಾನಿ ಮೋದಿ ಅವರು ಮಹಿಳೆಯರಿಗೂ ಸಮಾನ ಅವಕಾಶ ಕಲ್ಪಿಸಲು ಬಯಸಿ ದ್ದಾರೆ ಎಂದು ಅವರು ಹೇಳಿದರು.

ಪಾಕ್ ಆಟಗಾರರ ಸಂಭಾವನೆಯಲ್ಲಿ ಭಾರಿ ಕಡಿತ

ಕರಾಚಿ (ಪಿಟಿಐ): ಬೆರಗುಹುಟ್ಟಿಸುವ ಬೆಳವಣಿಗೆಯೊಂದರಲ್ಲಿ ಪಾಕಿಸ್ತಾನ ಕ್ರಿಕೆಟ್ ಮಂಡಳಿ ವೆಚ್ಚ ಕಡಿತದ ಕ್ರಮಕ್ಕೆ ಮುಂದಾಗಿದ್ದು, ದೇಶಿಯ ಕ್ರಿಕೆಟ್‌ನಲ್ಲಿ ಆಟಗಾರರ ಪಂದ್ಯ ಸಂಭಾವನೆಯನ್ನು ಗಣನೀಯವಾಗಿ ಕಡಿಮೆ ಮಾಡಲಾಗಿದೆ. ಇದು ದೇಶದ ಅತ್ಯುನ್ನತ ಕ್ರೀಡಾಸಂಸ್ಥೆಯ ಹಣಕಾಸಿನ ಸ್ಥಿತಿಯ ಬಗ್ಗೆ ಪ್ರಶ್ನೆಗಳನ್ನು ಮೂಡಿಸಿದೆ.

ಮುಂಬರುವ ರಾಷ್ಟ್ರೀಯ ಟಿ20 ಚಾಂಪಿಯನ್‌ಷಿಪ್‌ನಲ್ಲಿ ಆಡುವ ಆಟಗಾರರ ಸಂಭಾವನೆಯನ್ನು ಪ್ರತಿ ಪಂದ್ಯಕ್ಕೆ 1,00,000 ರೂಪಾಯಿಗಳಿಂದ 10,000 ರೂ.ಗಳಿಗೆ ಇಳಿಸಲಾಗಿದೆ. ಮೀಸಲು ಆಟಗಾರರ ಸಂಭಾವನೆ 5000 ರೂ.ಗೆ ಇಳಿಯಲಿದೆ. ಈ ಟೂರ್ನಿ ಮಾರ್ಚ್ 14ರಂದು ಆರಂಭವಾಗಲಿದೆ.

ಪಂದ್ಯದ ಸಂಭಾವನೆಯಲ್ಲಿ ಭಾರಿ ಕಡಿತ ಆಗಿರುವುದು ಆಟಗಾರರಲ್ಲಿ ಕಳವಳ ಮೂಡಿಸಿದೆ. ದೇಶಿ ಕ್ರಿಕೆಟ್‌ಗೆ ಮಾಡುತ್ತಿರುವ ವೆಚ್ಚವನ್ನೂ ಗಣನೀಯವಾಗಿ ಕಡಿಮೆ ಮಾಡಲು ಮಂಡಳಿ ಮುಂದಾಗಿದೆ.

ಪಾಕಿಸ್ತಾನ ಕ್ರಿಕೆಟ್ ಮಂಡಳಿಯ ದೇಶಿ ಕ್ರಿಕೆಟ್‌ನ ಮುಖ್ಯಸ್ಥರಾದ ಅಬ್ದುಲ್ಲಾ ಖುರ್ರಂ ನಿಯಾಝಿ ಅವರು ಕೆಲವು ತಿಂಗಳಿಂದ ದೇಶೀಯ ಕ್ರಿಕೆಟ್ ಆಟಗಾರರ 'ಸೌಲಭ್ಯಗಳಿಗೆ ಕತ್ತರಿ ಹಾಕುತ್ತಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಬೆಂಗಳೂರು ಡ್ರೀಮ್ ಯುನೈಟೆಡ್‌ಗೆ ಜಯ

ಬೆಂಗಳೂರು: ಬೆಂಗಳೂರು ಡ್ರೀಮ್ ಯುನೈಟೆಡ್ ಎಫ್‌ಸಿ ಮಂಗಳವಾರ ಬಿಡಿಎಫ್‌ಎ 'ಎ' ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 1–0 ಗೋಲಿನಿಂದ ಸ್ಟ್ರೈಪರ್ಸ್ ತಂಡವನ್ನು ಮಣಿಸಿತು.

ಅಶೋಕ ನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಡ್ರೀಮ್ ತಂಡದ ಜೈ ಹರಿ ಬರ್ಮನ್ (37ನೇ ನಿ.) ಗೋಲು ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ಡಿವೈಇಎಸ್ ಎಫ್‌ಸಿ ತಂಡ 1–1ರಿಂದ ಬೆಂಗಳೂರು ಸಿಟಿ ಎಫ್‌ಸಿ ವಿರುದ್ಧ ಡ್ರಾ ಸಾಧಿಸಿತು. ಡಿವೈಇಎಸ್ ಎಫ್‌ಸಿ ತಂಡದ ಅಜಯ್ ಶಂಕರ್ ಕದಮ್ (38ನೇ ನಿ.) ಗೋಲು ಹೊಡೆದರು. ಬೆಂಗಳೂರು ಸಿಟಿ ತಂಡದ ಪರ ಆಯುಷ್ ಹಿಮಾನ್ಶು ಪಂಚಮಿಯಾ (5ನೇ ನಿ.) ಗೋಲು ಗಳಿಸಿದರು

ಅಗ್ರಸ್ಥಾನದ ನಿರೀಕ್ಷೆಯಲ್ಲಿದ್ದ ಮುಂಬೈ ಇಂಡಿಯನ್ಸ್‌ಗೆ ನಿರಾಸೆ

ಔಪಚಾರಿಕ ಪಂದ್ಯದಲ್ಲಿ ಗೆದ್ದ ಆರ್‌ಸಿಬಿ

ಮುಂಬೈ (ಪಿಟಿಐ): ನಾಯಕಿ ಸ್ಮೃತಿ ಮಂದಾನ ಸೇರಿದಂತೆ ಬ್ಯಾಟರ್‌ಗಳ ಸಂಘಟಿತ ಪ್ರದರ್ಶನದ ನೆರವಿನಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಮಂಗಳವಾರ ಮಹಿಳಾ ಪ್ರೀಮಿಯರ್ ಲೀಗ್‌ನ ಪಂದ್ಯದಲ್ಲಿ 11 ರನ್‌ಗಳಿಂದ ಮುಂಬೈ ಇಂಡಿಯನ್ಸ್ ತಂಡವನ್ನು ಮಣಿಸಿತು.

ಸತತ ಐದು ಪಂದ್ಯಗಳನ್ನು ಸೋತು ಪ್ಲೇ ಆಫ್ ರೇಸ್‌ನಿಂದ ಹೊರಬಿದ್ದಿದ್ದ ಸ್ಮೃತಿ ಮಂದಾನ ಪಡೆಗೆ ಲೀಗ್‌ನ ಈ ಕೊನೆಯ ಪಂದ್ಯ ಔಪಚಾರಿಕವಾಗಿತ್ತು. ಇನ್ನೊಂದೆಡೆ ಮುಂಬೈಗೆ ಈ ಪಂದ್ಯ ಮಹತ್ವದ್ದಾಗಿದ್ದು, ಇಲ್ಲಿ ಗೆದ್ದಿದ್ದರೆ ಅಗ್ರಸ್ಥಾನದೊಡನೆ ಫೈನಲ್‌ಗೆ ನೇರ ಪ್ರವೇಶ ಪಡೆಯುವ ಅವಕಾಶವಿತ್ತು.

ಹೀಗಾಗಿ 10 ಅಂಕ ಗಳಿಸಿ, ಉತ್ತಮ ನೆಟ್ ರನ್‌ರೇಟ್ ಹೊಂದಿದ್ದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಅಗ್ರ ಸ್ಥಾನದೊಂದಿಗೆಫೈನಲ್ ತಲುಪಿತು. ಮುಂಬೈ ತಂಡವು (10 ಅಂಕ) ಪ್ಲೇ ಆಫ್ ಸುತ್ತಿನಲ್ಲಿ ಗುರುವಾರ ಗುಜರಾತ್ ಜೈಂಟ್ಸ್ (8 ಅಂಕ) ವಿರುದ್ಧ ಆಡಬೇಕಾಗಿದೆ.

ಮೊದಲು ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ಆರ್‌ಸಿಬಿ 20 ಓವರ್‌ಗಳಲ್ಲಿ 3 ವಿಕೆಟ್‌ಗೆ 199 ರನ್‌ಗಳ ಸವಾಲಿನ ಮೊತ್ತ ಪೇರಿಸಿ ಮುಂಬೈ ತಂಡವನ್ನು ಒತ್ತಡಕ್ಕೆ ಸಿಲುಕಿಸಿತು. ಗುರಿ ಬೆನ್ನಟ್ಟಿದ ಹರ್ಮನ್‌ಪ್ರೀತ್ ಕೌರ್ ಪಡೆ ಹೋರಾಟ ತೋರಿದರೂ 9 ವಿಕೆಟ್‌ಗೆ 188 ರನ್ ಗಳಿಸಿ ಓವರ್ ಮುಗಿಸಿತು.

ಮುಂಬೈ ಪರ ನಾಟ್ ಶಿವರ್ ಬ್ರಂಟ್ (69;35, 4x9, 6x2) ಹೊರತುಪಡಿಸಿ ಉಳಿದ ಬ್ಯಾಟರ್‌ಗಳು ನಿರಾಸೆ ಮೂಡಿಸಿದರು. ಸ್ನೇಹ ರಾಣಾ (26ಕ್ಕೆ 3) ಮತ್ತು ಕಿಮ್ ಗಾರ್ಥ್ (33ಕ್ಕೆ 2) ಇಂಡಿಯನ್ಸ್‌ಗೆ ಕಡಿವಾಣ ಹಾಕಿದರು.


ಸ್ಮೃತಿ ಮಂದಾನ ಬ್ಯಾಟಿಂಗ್ ಪಿಟಿಐ ಚಿತ್ರ

ಮಂದಾನ ಅರ್ಧಶತಕ: ಕೆಲ ಪಂದ್ಯಗಳಲ್ಲಿ ವಿಫಲರಾದ ಬಳಿಕ ಮಂದಾನ (53, 37ಎ, 4x6, 6x3) ಈ ಪಂದ್ಯದಲ್ಲಿ ಸೊಗಸಾದ ಅರ್ಧಶತಕ ಬಾರಿಸಿದರು.

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ಡೆಲ್ಲಿ	8	5	3	10	+0.396
ಮುಂಬೈ	8	5	3	10	+0.192
ಗುಜರಾತ್	8	4	4	8	+0.228
ಆರ್‌ಸಿಬಿ	8	3	5	6	-0.196
ಯು.ಪಿ	8	3	5	6	-0.624

ಮಹಿಳಾ ಪ್ರೀಮಿಯರ್ ಲೀಗ್

ನಂತರ ಎಲಿಸ್ ಪೆರಿ (ಔಟಾಗದೇ 49;38ಎ, 4x5, 6x1), ರಿಚಾ ಘೋಷ್ (36;22ಎ) ಮತ್ತು ಜಾರ್ಜಿಯಾ ವೇರ್‍ಹ್ಯಾಮ್ (31;10ಎ) ಅವರ ಆಕ್ರಮಣಕಾರಿ ಆಟದ ನೆರವಿನಿಂದ ಕೊನೆಯ ಐದು ಓವರುಗಳಲ್ಲಿ 70 ರನ್‌ಗಳು ಹರಿದುಬಂದವು.

ಸಂಕ್ಷಿಪ್ತ ಸ್ಕೋರು: ರಾಯಲ್ ಚಾಲೆಂಜರ್ಸ್ ಬೆಂಗಳೂರು: 20 ಓವರುಗಳಲ್ಲಿ 3ಕ್ಕೆ 199 (ಸಬ್ಬಿನೇನಿ ಮೇಘನಾ 26, ಸ್ಮೃತಿ ಮಂದಾನ 54, ಎಲಿಸ್ ಪೆರಿ ಔಟಾಗದೇ 49, ರಿಚಾ ಘೋಷ್ 36, ಜಾರ್ಜಿಯಾ ವೇರ್‍ಹ್ಯಾಮ್ ಔಟಾಗದೇ 31; ಹೇಯ್ಲಿ ಮ್ಯಾಥ್ಯೂಸ್ 47ಕ್ಕೆ2) ಮುಂಬೈ ಇಂಡಿಯನ್ಸ್: 20 ಓವರ್‌ಗಳಲ್ಲಿ 9ಕ್ಕೆ 188 (ನಾಟ್ ಶಿವರ್ ಬ್ರಂಟ್ 69, ಸಜೀವನ್ ಸಜನಾ 23; ಕಿಮ್ ಗಾರ್ಥ್ 33ಕ್ಕೆ 2, ಎಲಿಸ್ ಪೆರಿ 53ಕ್ಕೆ 2, ಸ್ನೇಹ ರಾಣಾ 26ಕ್ಕೆ 3). ಪಂದ್ಯದ ಆಟಗಾರ್ತಿ: ಸ್ನೇಹಾ ರಾಣಾ

ಪ್ಲೇ ಆಫ್‌ಗೆ ಮುಂಬೈ ಸಿಟಿ ಎಫ್‌ಸಿ

ಐಎಸ್‌ಎಲ್: ತವರಿನಲ್ಲಿ ಮುಗ್ಗರಿಸಿದ ಬೆಂಗಳೂರು ತಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಂಘಿಕ ಆಟ ಪ್ರದರ್ಶಿಸಿದ ಮುಂಬೈ ಸಿಟಿ ಎಫ್‌ಸಿ ತಂಡವು ಇಂಡಿಯನ್ ಸೂಪರ್ ಲೀಗ್‌ನ ಪಂದ್ಯದಲ್ಲಿ ಮಂಗಳವಾರ ಬೆಂಗಳೂರು ಎಫ್‌ಸಿ ತಂಡವನ್ನು 2–0 ಗೋಲುಗಳಿಂದ ಮಣಿಸಿ ಪ್ಲೇ ಆಫ್‌ಗೆ ಅರ್ಹತೆ ಪಡೆಯಿತು.

ನಗರದ ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಪಂದ್ಯವು ಮುಂಬೈ ತಂಡಕ್ಕೆ ಮಹತ್ವದ್ದಾಗಿತ್ತು. ನಾಕೌಟ್ ಪ್ರವೇಶಕ್ಕೆ ಒಂದು ಅಂಕದ ಕೊರತೆ ಎದುರಿಸುತ್ತಿದ್ದ ತಂಡವು ಈ ಗೆಲುವಿನೊಂದಿಗೆ ಪೂರ್ಣ ಮೂರು ಅಂಕ ಪಡೆಯಿತು. ಈ ಮೂಲಕ ಒಡಿಶಾ ತಂಡವನ್ನು ಹಿಂದಿಕ್ಕಿ ಆರನೇ ಸ್ಥಾನಕ್ಕೆ ಬಡ್ತಿ ಪಡೆಯಿತು.

ಸುನಿಲ್ ಚೆಟ್ರಿ ನಾಯಕತ್ವದ ಬೆಂಗಳೂರು ತಂಡವು ಈಗಾಗಲೇ ಪ್ಲೇ ಆಫ್‌ಗೆ ಅರ್ಹತೆ ಪಡೆದಿದೆ. ಲೀಗ್‌ನ ತಮ್ಮ ಕೊನೆಯ ಪಂದ್ಯವನ್ನು ಜಯಿಸಿ ಅಥವಾ ಡ್ರಾ ಸಾಧಿಸಿ ಮೂರನೇ ಸ್ಥಾನಕ್ಕೇರುವ ಅವಕಾಶವನ್ನು ಕೈಚೆಲ್ಲಿತು. ತವರಿನ ಪ್ರೇಕ್ಷಕರ ಎದುರು ಆತಿಥೇಯ ತಂಡದ ಆಟಗಾರರು ನಿರಾಸೆ ಮೂಡಿಸಿದರು.

ಪಂದ್ಯದ ಎಂಟನೇ ನಿಮಿಷದಲ್ಲೇ ನಾಯಕ ಲಾಲಿಯನ್ಜುವಾಲಾ ಚಾಂಗ್ಟೆ ಅವರು ಮುಂಬೈ ತಂಡಕ್ಕೆ ಮಹತ್ವದ ಮುನ್ನಡೆ ಒದಗಿಸಿದರು. 37ನೇ ನಿಮಿಷದಲ್ಲಿ ಗ್ರೀಸ್‌ನ ನಿಕೋಸ್ ಕರೇಲಿಸ್ ಅವರು ಪೆನಾಲ್ಟಿ ಅವಕಾಶವನ್ನು ಗೋಲಾಗಿ ಪರಿವರ್ತಿಸಿದರು. ವಿರಾಮದ ವೇಳೆಗೆ 2–0 ಮುನ್ನಡೆ ಪಡೆದ ಪ್ರವಾಸಿ ತಂಡವು ಅದೇ ಅಂತರವನ್ನು ಕೊನೆಯವರೆಗೆ ಕಾಯ್ದುಕೊಳ್ಳುವಲ್ಲಿ ಯಶಸ್ವಿಯಾಯಿತು.

ಪಾಯಿಂಟ್ಸ್ ಪಟ್ಟಿಯಲ್ಲಿ ಮೊದಲೆರಡು ಸ್ಥಾನ ಪಡೆದಿರುವ ಹಾಲಿ ಚಾಂಪಿಯನ್ ಮೋಹನ್ ಬಾಗನ್ ಸೂಪರ್ ಜೈಂಟ್ಸ್ (56) ಮತ್ತು ಗೋವಾ ಎಫ್‌ಸಿ (48) ತಂಡಗಳು ನೇರವಾಗಿ ಸೆಮಿಫೈನಲ್‌ಗೆ ಅರ್ಹತೆ ಪಡೆದವು.


ಬೆಂಗಳೂರು ಎಫ್‌ಸಿ ತಂಡದ ಸುರೇಶ್ ಸಿಂಗ್ (ಬಲ) ಮುಂಬೈ ಸಿಟಿ ಎಫ್‌ಸಿಯ ಹ್ಮಿಂಗ್ಥನ್ಮಾವಿಯಾ ಚೆಂಡಿಗಾಗಿ ಸೆಣಸಾಟ ನಡೆಸಿದರು ಚಿತ್ರ: ಜನಾರ್ದನ್ ಬಿ.ಕೆ

ಉಳಿದ ಎರಡು ಸ್ಥಾನಕ್ಕಾಗಿ ಕ್ರಮವಾಗಿ ಮೂರರಿಂದ ಆರನೇ ಸ್ಥಾನ ಪಡೆದಿರುವ ನಾರ್ತ್‌ಈಸ್ಟ್ ಯುನೈಟೆಡ್ (38), ಬೆಂಗಳೂರು ಎಫ್‌ಸಿ (38), ಜೆಮ್‌ಶೆಡ್‌ಪುರ (38) ಮತ್ತು ಮುಂಬೈ ಸಿಟಿ ಎಫ್‌ಸಿ (36) ತಂಡಗಳು ಪ್ಲೇ ಆಫ್ ಸುತ್ತಿನಲ್ಲಿ ಪೈಪೋಟಿ ನಡೆಸಲಿವೆ.